1347			ಪಯಣ ಪ್ರವಾಸ ಕಥನ:	904
1347			ಹನಿ –ಧ್ವನಿ ಕವನ ಸಂಕಲನ:	904
1347			ಸುಹಾಸ ನಗೆಲೇಖನ	904
1347			ದಶರೂಪ (ಕ)ದ ಸುಬ್ಬಣ್ಣ –ವ್ಯಕ್ತಿ ಚಿತ್ರ :	904
1347			ಅರಳು – ಚಿಂತನಗಳ ಸಂಗ್ರಹ – 2018	904
1347			ಪರಿಪೂರ್ಣ ವ್ಯಕ್ತಿತ್ವ	904
1166	Vijayanalini Ramesh (Dr.	ವಿಜಯನಳಿನಿ ರಮೇಶ (ಡಾ), ಶಿರಸಿ	ತಾಳಮದ್ದಲೆ–ಸಂಶೋಧನ ಕೃತಿ	846
1166			ಪಶ್ಚಿಮ ಕರ್ನಾಟಕದ ದೇಸೀ ಸಾಂಸ್ಕೃತಿಕ ಪರಂಪರೆ ವ	846
1166			ಮೌಖಿಕ ಕಲೆಯಲ್ಲಿ ಸಾಹಿತ್ಯ ಸೌಂದರ್ಯ (ಸಂಶೋಧ	846
1166			ಯುಗಧರ್ಮ–ಸಂಶೋಧನ ಲೇಖನ ಸಂಗ್ರಹ	846
28	Vimalananda	ವಿಮಲಾನಂದ	ಕೃಷ್ಣಾರ್ಜುನ ಕಾಳಗ	430
825	Virupaksha Jaddipala(Dr.	ವಿರೂಪಾಕ್ಷ ಜಡ್ಡೀಪಾಲ (ಡಾ.)	ಕೃಷ್ಣಬುಧವಿರಚಿತಮ್ ಅಲಂಕಾರಸರ್ವಸ್ವಮ್	723
825			ಭಾರತೀಯ ಗ್ರಂಥಸಂಪಾದನಶಾಸ್ತ್ರ ಪ್ರವೇಶಿನೀ	723
825			ಮೀಮಾಂಸಾಯಾಂ ಸಾಹಿತ್ಯಶಾಸ್ತ್ರೇ ಚ ಶಬ್ದ ಶಕ್ತಿಃ	723
825			ವಿಚಾರವೀಥಿಕಾ	723
825			Kiratarjuneeya with three Unpublished co	723
825			Nanarthashabdaratnam of Kalidasa with	723
825			Teaching of Sanskrit-An Approach	723
825			ತರ್ಕಶಾಸ್ತ್ರಪ್ರಭಾವಮೀಮಾಂಸಾ	723
825			ವಾಕ್ಯಪದೀಯಸಾಧನಸಮುದ್ದೇಶವಿಮರ್ಶಃ	723
825			ಸಂಸ್ಕೃತವಿಜ್ಞಾನವೈಭವಂ: ಸಂಪುಟ–2	723
825			ಸಂಸ್ಕೃತವಿಜ್ಞಾನವೈಭವಂ: ವಿಶೇಷ ಸಂಪುಟ	723
4	Vishnisharma pandit	ವಿಷ್ಣುಶರ್ಮಾ ಪಂಡಿತ	ಮುಹೂರ್ತ ಮಾಧವೀ ಗ್ರಂಥದ ವ್ಯಾಖ್ಯಾ	419
33	Vishnu Sabhahit	ವಿಷ್ಣು ಸಭಾಹಿತ	ಏಕಾದಶೀ ಪ್ರಸಂಗ	432
33			ಚಂದ್ರಹಾಸ ಚರಿತ್ರ	432
33			ಬಬ್ರುವಾಹನ ಕಾಳಗ	432
33			ಶತಾಸ್ಯ ರಾವಣ ಕಾಳಗ	432
277	Vishwamithra D.S.	ವಿಶ್ವಾಮಿತ್ರ ಡಿ. ಎಸ್.	ಭಾರತೀಯ ಮೀಮಾಂಸೆ................	518
277			ಸ್ವರ್ಣವಲ್ಲಿ ಸಂಸ್ಥಾನ–ವೈದಿಕ ಧರ್ಮ–ಕಿರು ಪರಿಚಯ.	518
824	Vittal M. Awaraguppa	ವಿಠ್ಠಲ ಎಂ. ಅವರಗುಪ್ಪ ಸಿದ್ದಾಪುರ	ಡಂಗುರ–ಕವನಗಳು	722
824			ಹಸಿರು ಹಾಗಲ–ಕವನಗಳು	722
271	Wagale Bhavanishankar I	ವಾಗಲ ಭವಾನಿಶಂಕರ್ ನೀಲಕಂಠ	ಕುಟಿಲ ಕಾರಸ್ಥಾನ	517
271			ತಾರಕಾ	517
271			ಸಂತಾಂಚೇ ಬೋಲ	517
272	Wagale Vittal	ವಾಗಲ ವಿಠ್ಠಲ್ ಮುಂಬೈ	ಅಪರಾಧಿ ಕೋಣ್	517
272			ಕಾಟೇರಿ ಫ್ಲೋರಾ	517
272			ಪೋಲೀಸ್ ಆಣಿ ಸಮಾಜ	517
272			ಲಂಡನ್ ಹತ್ಯಾಕಾಂಡ	517
272			ಶರ್ವಿಲಕಾಂಚ್ಯಾ ಪ್ರೇಮ ಕಥಾ	517
273	Wagh Gajanan	ವಾಘ್ ಗಜಾನನ ಪುಣೆ	ಎರ್ಝುಲೇಲಿ ವಾತ	517
412	Wagh Kamala	ಕಮಲಾ ವಾಗ್ ಪುಣೆ	ಆತಿಚ್ಯಾ ಸುಪಾತೀಲ ಮೋತಿ	568
274	Wagh Mohan	ವಾಘ್ ಮೋಹನ್, ಮುಂಬೈ	ಆವುವಣದಾಟತಾತ	517
274			ಆಸ್ವಣೀರ್ಚೇ ಢಗ	517
275	Wagh Venkatarao	ವಾಘ್ ವೆಂಕಟರಾವ್ ಮುಂಬೈ	ಶೀವಾದರ್ಶ್	518
268	Warty Anand	ವರ್ತಿ ಆನಂದ	ಜಯಗೋಮಾಂತಕ–ಗೋವಾ ಸ್ವಾತಂತ್ರ್ಯ	516
268			ಸಂಶೋಧಕರ ಸವಿಗೀತೆಗಳು–ವಿಜ್ಞಾನಿಗಳ	516
268			ಅಕ್ಷಯ ದಿವೋ	516
268			ಜಾಡೂಜಿಬಾಗ ಆಣಿ ಹೇರ್ ಕಾಣ್ಯೋ	516
268			ಆನಂದ ತರಂಗ	516

No.	Writers(1360)	ಕೃತಿಕಾರರು(1360)	ಪುಸ್ತಕ(8700)	Page
268			ಮಾಝ್ಯಾಕಥಾ	516
267	Warty Ananth Vaman	ವರ್ತೆ ಅನಂತ ವಾಮನ	ಅಲ್ಲಮಿಯಾ ದನವಾಲಾ. ಮರಾಠಿ	515
267			ಅಕರಾವಾ ಗಡಿ.	515
267			ಆಖರಚಾ ಆಘಾತ.	515
267			ಎ ಗುಲಬದನ್	515
267			ಕಟಪುತಲ್ಯಾ.	515
267			ಕಾಮಸೇನಾ	515
267			ಗಡಗಢಾಟ	515
267			ಟಾಲ ಡುಣ್ಯೂ ವಾಂಗಿ ಮಾಂಡು .	515
267			ದಂತಕಥಾ	515
267			ನವಾದೇವ.	515
267			ನಿವಡಕ– ವಿನೋದಿ ಕಥಾ	515
267			ಪತಿವ್ರತಾ.	515
267			ಪರಿಪಾಕ ಭಾಗ –1.	515
267	Warty Ananth Vaman	ವರ್ತೆ ಅನಂತ ವಾಮನ	ಪರಿಪಾಕ ಭಾಗ 2.	515
267			ಪಾವೂಸ್ ಪಾವೂಸ್.	515
267			ಪುನರ್ಜನ್ಮ .	515
267			ಪೋಲಿಸಿ ಖಾಕ್ಯ.	515
267			ಮ.ಚ.ಮಾ.ಟವ.	515
267			ಮಂತ್ರಾಂಚ್ಯ ಮಂತ್ರಿ.	515
267			ಮುಮತಾಜ.	515
267			ರಾತ್ರಿಚ್ಯಾ ರಮ್ಯ ಕಥಾ.	515
267			ರೂಪೇರಿ ಸ್ವಪ್ನ .	515
267			ಸೇನಾ.	515
267			ಸಾಯರಾವಾನ್.	515
267			ಸುಳಚಾ ಸರ್ವಟ್.	515
267			ಅಭಿನಯ ಕಾದಂಬರಿ	515
267			ಉದತ್ಯಾ ಮಾಂಜತ್ಯಾ. ಕಾದಂಬರಿ	515
267			ನವಾಧರ್ಮ.	516
267			ಹೇರಂಭ.	516
267			ಇಡಲ ದೇಸಾ ಸಲೂಚಾ ರಾಮಾ.––ಏಕಾ	516
267			ತೀಸರಿ ಇಚ್ಛಾ.––ಏಕಾಂಕ. ನಾಟಕ	516
267			ರಾಣೀಚಾ ಬಾಗ್. ನಾಟಕ	516
267	Warty Ananth Vaman	ವರ್ತೆ ಅನಂತ ವಾಮನ	ಆಪಲ ಶರೀರ(ಅಂಗ್ರೇಜಿಸ ಅನುವಾದಿತ)	516
267			ತುಮ್ಹೀ ಆಣ ತುಮಚ ಅನ್ನ.	516
267			ಪಿಸಾರಾ––ಲಘು ನಿಬಂಧ.	516
267			ಮರಾಠಿ ಸಾಹಿತ್ಯ ದರ್ಶನ.	516
267			ವಿನೋದ ಏಕ್ ವ್ಯಾಖ್ಯಾನ––ಪ್ರಬಂಧ.	516
267			ವೃದ್ಯಕಾತೀಲ ಮಹಾನ್ ಶೋಧ.(ಅಂಗ್ರೇ	516
267			ಸಾಕ್ಷ ಇತಿಹಾಸಾಚಿ––ಸೋಮನಾಥ ದೇವ	516
267			ಸಾಹಿತ್ಯ ದರ್ಶನ.	516
410	Warty Dr. Urmila	ಡಾ. ಊರ್ಮಿಳಾ ವಾರ್ಟಿ ಮುಂಬೈ	ಆಪಲೇ ಜೀವಣ	568
269	Warty Kashinath	ವರ್ತೆ ಕಾಶಿನಾಥ	ಅಭಂಗ ಹರಿಕೀರ್ತನ	516
269			ಶ್ರೀಸ್ವಾಧ್ಯಾಯ ಗೀತಾ	516
269			ಹಿಂದಿ ಮುಜೂರಾಂಚಿ	516
269			A Study of Gandhian Education	516
269			Geeta-A way of Life	517
269			Meditation	517
269			Shrikrishna to Ramakrishna-Philosophy	517
269			Shri Rana to Ramakrishna-Philosophy	517
269			Under the Great Moghuls-History	517

No.	Writers(1360)	ಕೃತಿಕಾರರು(1360)	ಪುಸ್ತಕ(8700)	Page
269			Under the Maple Tree	517
270	Warty Shantaram	ವರ್ತಿ ಶಾಂತರಾಂ	Sister India-Education	517
270			What's Wrong with Bombay University	517
258	Yaaji Gajanana	ಯಾಜಿ ಗಜಾನನ, ಮುಂಬೈ	ನನಪು ನನಹು	512
259	Yaaji Ganesh Rama	ಯಾಜಿ ಗಣೇಶ ರಾಮ, ಇಡಗುಂಜಿ	ಕುಪ್ಪ ಭಟ್ಟನ ಯಾತ್ರೆ–ಕಥೆ................	512
259			ನಂದಾದೀಪ–ಕವನ ಸಂಕಲನ................	512
259			ಭಾವತರಂಗ–ಕವನ ಸಂಕಲನ................	512
808	Yallapura Krishna Sharm	ಯಲ್ಲಾಪುರ ಕೃಷ್ಣ ಶರ್ಮಾ, ಬೆಂಗಳೂ	ಅಷ್ಟೋತ್ತರ ಶತನಾಮಾವಲಿಃ (ಸಂಕಲಿತ)	715
808			ಅಲಂಕಾರಾಂತರ್ಭಾವವಾದ–ವಿಮರ್ಶೆ	715
808			ಋತುಶಾಂತಿಕತೃತ್ವಾಧಿಕಾರ ಜಿಜ್ಞಾಸೆ (ವಿದ್ವದಭಿಪ್ರಾಯ	715
808			ಋತುಶಾಂತ್ಯನುಷ್ಠಾನ–(ವಿದ್ವದಭಿಪ್ರಾಯ ಸಂಗ್ರಹ)	715
808			ಎರಡು ಹಕ್ಕಿಗಳು–ಅನುವಾದಿತ ಕಾದಂಬರಿ	715
808			ಕವಿರಾಜಮಾರ್ಗನ ಧ್ವನಿಕಂದ–ಧ್ವನಿಯೆಂಬುದಳಂಕಾರ	715
808			ಕವಿರಾಜ ಮಾರ್ಗದ ಧ್ವನಿಯೆಂಬುದಳಂಕಾರಂ	716
808			ಚಾತುರ್ವರ್ಣ್ಯ ಸಮೀಕ್ಷಾ–ಸಾನುವಾದ	716
808			ಚಿಕ್ಕವರಿಗೆ ಚೊಕ್ಕಕತೆಗಳು	716
808			ದೇವಪೂಜಾ ಉಪಚಾರ ಶ್ಲೋಕ ಮಂತ್ರ ಸಂಕಲನ	716
808			ಪಂಚಾಯತನ ಪೂಜಾ ಪ್ರಯೋಗ (ಪದಾರ್ಥಾನುಸ	716
808			ಶ್ರೀ ಶಿವಪೂಜಾ ಪ್ರಯೋಗಃ	716
808			ಸಂಕ್ಷಿಪ್ತ ಸಂಧ್ಯಾವಂದನೆ ದೇವರ ಪೂಜೆ	716
808			ಸೂರ್ಯ ಪೂಜಾ ಪ್ರಯೋಗಃ	716
808			ಸ್ತುತಿಕುಸುಮಾಂಜಲಿಃ (ಸ್ತೋತ್ರ ಸಂಕಲನ)	716
808			ಹವ್ಯಾಸದ ಬರಹಗಳು	716
260	Yardi Madhukar Mumbai	ಯರ್ಡಿ ಮಧುಕರ ಮುಂಬೈ	ಸುರಸ ಜ್ಞಾನೇಶ್ವರಿ	512
260			Bhagavadgita	512
260			Epilogue of Mahabharata	512
260			Epilogue of Ramayana	512
260			Jnaneshvari (International Edition 2011/	512
53	Yogindra	ಯೋಗೀಂದ್ರ ಪರಮಾನಂದ	ಯೋಗೀಂದ್ರ ಪರಮಾನಂದರ ೨೮ ಭಜ	439
53			ಶ್ರೀ ಪರಮಾನಂದ ಸದ್ಗುರುಗಳ ಸಂಕ್ಷಿಪ್ತ	439
53			ಯೋಗೀಂದ್ರ ಪರಮಾನಂದ	439
53			ಯೋಗೀಂದ್ರ ಪರಮಾನಂದ ಚರಿತ	439

ಉತ್ತರ ಕನ್ನಡ ಜಿಲ್ಲಾ

ಗ್ರಂಥಕಾರ–ಕೃತಿಕೋಶ

(ಸಂಶೋಧನ ಕೃತಿ)

(ಪ್ರಾರಂಭದಿಂದ 2015 ಡಿಸೆಂಬರ ತನಕ)

ನಾರಾಯಣ ಶಾನಭಾಗ

(ಕೃಷ್ಣಜ ವಾಲಗಳ್ಳಿ)

ಅರ್ಪಣೆ:

ಜಿಲ್ಲೆಯ ಸಾಹಿತ್ಯ ಕಣಜಕ್ಕೆ

ಕಾಳು ಸೇರಿಸಿದ ಜ್ಞಾತ–ಅಜ್ಞಾತ

ಗ್ರಂಥಕಾರರಿಗೆ ಸವಿನಯ ಅರ್ಪಣೆ

ಸರಸ್ವತಿ ಪ್ರಕಾಶನ

ಕರ್ಕಿ, ಹೊನ್ನಾವರ

'ಉತ್ತರಕನ್ನಡ ಜಿಲ್ಲಾ ಗ್ರಂಥಕಾರ ಕೃತಿಕೋಶ': ಸಂಶೋಧನ ಕೃತಿ. ಲೇಖಕ: ನಾರಾಯಣ ಶಾನಭಾಗ (ಕೃಷ್ಣಜ ವಾಲಗಳ್ಳಿ), ಚರವಾಣಿ: 9449694666

ಹಕ್ಕು : ಸರಸ್ವತಿ ಪ್ರಕಾಶನ

ಬೆರಳಚ್ಚು : ರಂಜನಾ ಎಸ್. ಕಂಚಿ, ಬೆಂಗಳೂರು.

ಮುಖಪುಟ : ಮೋನಪ್ಪ, ಬೆಂಗಳೂರು.

ಪ್ರಕಾಶಕರು : **ಸರಸ್ವತಿ ಪ್ರಕಾಶನ,** ಕರ್ಕಿ, ಹೊನ್ನಾವರ
ದೂರವಾಣಿ: (08387) 236398, 8762152398

ಮುದ್ರಣ : ಸ್ಟ್ಯಾಂಡರ್ಡ್ ಪ್ರಿಂಟರ್ಸ್,
ಶಂಕರಪುರಂ, ಬೆಂಗಳೂರು.

ವರ್ಷ : 2016

ಪುಟ : 560

ಬೆಲೆ : ` **400/-**

Uttara Kannada Jilla Granthakara Kritikosha:
(A Research Documentation)
Author :**Narayan Shanbhag,**
#32B, Classic Orchards, Behind Meenakshi Temple,
Bannerghatta Road, Bengaluru-560 076 Mobile: **9449694666**

Rights :Publisher

Publisher :**Saraswathi Prakashana,**
Karki, Honnavar, Phone: **(08387) 236398, 8762152398**
Year :2016

Pages :560

Price : ` **400/-**

ಪ್ರಕಾಶಕರ ನುಡಿ

ಬೆಂಗಳೂರಲ್ಲಿ ಕುಂತು 'ಹವ್ಯಕ' ಸಮಾಜದ ಸಾಂಸ್ಕೃತಿಕ ಪರಂಪರೆ, ಹೋರಾಟದ ಹಾದಿಗಳನ್ನು ಸತತ ಅಧ್ಯಯನ, ಗ್ರಂಥಗಳ ದಾಖಲೆ ಸಂಗ್ರಹಗಳ ಮೂಲಕ ಸಾಕ್ಷಿ ಸಮೇತ ಜನರಿಗೆ ಓದಲು ತೆರೆದಿಟ್ಟು; 'ಶ್ರೀ ಅಖಿಲ ಹವ್ಯಕ ಮಹಾಸಭೆಯ' ಹವ್ಯಕ ಅಧ್ಯಯನ ಕೇಂದ್ರದ ಮೂಲಕ ನಾಡಿನಲ್ಲಿ ಮನೆಮಾತಾದ ಕೇಂದ್ರದ ಸ್ಥಾಪಕ ಪ್ರಧಾನ ನಿರ್ದೇಶಕ ನಾರಾಯಣ ಶಾನಭಾಗ ವಾಲಗಳ್ಳಿಯವರು, ಇದೀಗ ತಾವು ಜನಿಸಿದ ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರಾರಂಭದಿಂದ ಸುಮಾರು ಹತ್ತು ಶತಮಾನಗಳ ಅವಧಿಯ ಅಂದರೆ ಡಿಸೆಂಬರ್ 2015ರವರೆಗಿನ ವಿವರ ಸಂಗ್ರಹಿಸಿ 'ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರ-ಕೃತಿಕೋಶ'ವನ್ನು ಸಿದ್ಧಪಡಿಸಿಟ್ಟಿದ್ದಾರೆ. ಈ ಕೃತಿಯನ್ನು ಹೊರತರಬೇಕೆಂಬ ಹಂಬಲದಲ್ಲಿರುವ ಅವರಿಗೆ ನಮ್ಮ ಪ್ರಕಾಶನ ಬೆಂಬಲ ಸೂಚಿಸಿ ಕೃತಿ ಪ್ರಕಟಣೆ ಮಾಡಿ ಅವರ ಐತಿಹಾಸಿಕ ಸಾಹಸಕ್ಕೆ ಹೆಗಲುಕೊಡಲು ತುಂಬ ಹೆಮ್ಮೆಪಡುತ್ತದೆ. ಜಿಲ್ಲೆಯ ಲೇಖಕರು ಪರಸ್ಪರ ಗುರುತಿಸಿಕೊಂಡು ತಮ್ಮ ಹೆಜ್ಜೆ ಗುರುತು ನೋಡಿಕೊಳ್ಳಲು ಒಂದು ಸುಂದರ ನಿಲುವುಗನ್ನಡಿಯಂತೆ, ಮೈಲಿಗಲ್ಲಿನಂತೆ ಈ ಪುಸ್ತಕ ಪ್ರಕಟವಾಗುತ್ತಿದೆ.

ಈ ಹಿಂದೆ ಕಾಸರಕೋಡಿನ ಜನತಾ ವಿದ್ಯಾಲಯದ ಶಿಕ್ಷಕ ಎನ್.ಕೆ. ಹೆಗಡೆಯವರು ಉತ್ತರ ಕನ್ನಡದ ಸುಮಾರು 200 ಕೃತಿಕಾರರ ಮಾಹಿತಿ ಸಂಗ್ರಹಿಸಿ ಕೆಲವರ ಭಾವಚಿತ್ರ ಸಹಿತ 'ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು' ಕೃತಿಯನ್ನು 1969 ರಲ್ಲಿ ಪ್ರಕಟಿಸಿ ಈ ಕೆಲಸಕ್ಕೆ ನಾಂದಿ ಹಾಡಿದ್ದರು. ಇದೀಗ ಅವರಿಗಿಂತ ವ್ಯಾಪಕ ಅಧ್ಯಯನ ಮಾಡಿದ ನಾರಾಯಣ ಶಾನಭಾಗ (ಕೃಷ್ಣಜ ವಾಲಗಳ್ಳಿ) ಇವರು ಜಿಲ್ಲೆಯ ಎಲ್ಲ ಸಮಾಜದ ಲೇಖಕ, ಬಂಧು-ಭಗಿನಿಯರ ವ್ಯಕ್ತಿ ಮಾಹಿತಿ ಸಂಗ್ರಹಮಾಡಿ, ಕಾಲಾನುಕ್ರಮದಲ್ಲಿ ಜೋಡಿಸಿ 'ಉತ್ತರ ಕನ್ನಡ ಜಿಲ್ಲಾ ಕೃತಿಕಾರ ಕೃತಿಕೋಶ' ರಚಿಸಿ, ಅನುಪಮ ಕೆಲಸಮಾಡಿ ನಾಡಿಗೆ ಮಾದರಿಯಾಗಿದ್ದಾರೆ.

ಒಂದು ವಿಶ್ವವಿದ್ಯಾಲಯ, ಅಕಾಡೆಮಿ ಅಥವಾ ಸಾಹಿತ್ಯ ಪರಿಷತ್ ಘಟಕ ಮಾಡುವಂಥ ಕೆಲಸವನ್ನು ಏಕಾಂಗಿಯಾಗಿ, ಸ್ವಂತ ಶ್ರಮದಿಂದ ಅಚ್ಚುಕಟ್ಟಾಗಿ ಸಿದ್ಧಪಡಿಸಿದ ಈ ಕೃತಿಯನ್ನು ಪ್ರಕಟಣೆಗಾಗಿ ನಮ್ಮ ಕೈಗಿತ್ತ ಕರ್ನಾಟಕ ವಿದ್ಯುತ್ ನಿಗಮದ ನಿವೃತ್ತ ಕಾರ್ಯಕಾರೀ ಇಂಜಿನಿಯರ್ ನಾರಾಯಣ ಶಾನಭಾಗರಿಗೆ ಕೃತಜ್ಞತೆ ಸಲ್ಲಿಸುತ್ತಾ, ಅಭಿಮಾನದಿಂದ ಈ ಗ್ರಂಥವನ್ನು ಓದುಗರ ಕೈಗಿಡುತ್ತಿದ್ದೇನೆ. ಇಂಥ ಅತ್ಯುಪಯುಕ್ತ ಗ್ರಂಥವನ್ನು ಉತ್ತರ ಕನ್ನಡದವರಷ್ಟೇ ಅಲ್ಲ, ಇತರರೂ ಕೊಂಡು ಓದಿ ಅನುಕರಿಸುವಂತಾಗಲಿ. ಪ್ರಕಟಣಾ ಕ್ಷೇತ್ರದಲ್ಲಿ ಇದೊಂದು ವೈಜ್ಞಾನಿಕ ಮಾದರಿಯ ಗ್ರಂಥ. ಕರ್ನಾಟಕದ ಇತರಜಿಲ್ಲೆಯವರೂ ಕೂಡ ತಮ್ಮ ಜಿಲ್ಲೆಯ ಗ್ರಂಥಕಾರರ ಮತ್ತು ಕೃತಿಗಳನ್ನು ಪರಿಚಯಿಸುವಂತಾದರೆ, ಅವೆಲ್ಲ ಸೇರಿ ಸಮಗ್ರ ಕನ್ನಡ ಸಾಹಿತ್ಯ ಕೋಶಕ್ಕೆ ಹಾಗು ಸಾಹಿತ್ಯ ಚರಿತ್ರೆಗೆ ಪೂರಕ ಗ್ರಂಥಗಳಾಗುವಲ್ಲಿ ಸಂಶಯವಿಲ್ಲ.

– ಕೃಷ್ಣಮೂರ್ತಿ ಹೆಬ್ಬಾರ
ಸರಸ್ವತಿ ಪ್ರಕಾಶನ,
ಕರ್ಕಿ, ಹೊನ್ನಾವರ

ಗ್ರಂಥಕರ್ತನ ಅರಿಕೆ

ಸುಂದರವಾದ ಕನಸುಗಳನ್ನು ಕಾಣುವುದು ಉತ್ತಮ ಆರೋಗ್ಯದ ಲಕ್ಷಣ. ಕನಸುಗಳ ಸಾಕಾರಕ್ಕಾಗಿ ನಿರಂತರ ಶ್ರಮಿಸುವುದು ಜೀವಂತಿಕೆಯ ಲಕ್ಷಣ. ಸಮುದಾಯದ ಅಭಿವೃದ್ಧಿಯ ಕನಸು ಕಾಣುವ, ಅದಕ್ಕಾಗಿ ಸಮಯದಾನ ಮಾಡುವ ವ್ಯಕ್ತಿಗಳಿರುವ ಸಮಾಜ ಪ್ರಗತಿ ಸಾಧಿಸುವದರಲ್ಲಿ ಸಂಶಯವಿಲ್ಲ ಎಂಬುದು ಅನುಭವಿಗಳ ಅಭಿಪ್ರಾಯ.

* * * * *

ಬೆಂಗಳೂರಿನ ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರದ ಪ್ರಧಾನ ನಿರ್ದೇಶಕತ್ವದ ಜವಾಬ್ದಾರಿ ಹೊತ್ತ ಅವಧಿ (2003-2013)ಯಲ್ಲಿ ಹವ್ಯಕ ಸಮಾಜ ಕುರಿತ ವ್ಯಾಪಕವಾದ ಅಧ್ಯಯನದ ಫಲವಾಗಿ ಸಮರ್ಥರಿಂದ ಬರೆಯಿಸಲ್ಪಟ್ಟ 22 ಪುಸ್ತಕಗಳನ್ನು ಪ್ರಕಟಿಸಲು ಸಾಧ್ಯವಾಯಿತು. ಅದರಲ್ಲಿ 2011ರಲ್ಲಿ ಪ್ರಕಟವಾದ 'ಹವ್ಯಕ ಗ್ರಂಥಕಾರ ಕೃತಿದರ್ಪಣ' ಎಂಬ 512 ಪುಟಗಳ ಕೃತಿ ಗಮನಾರ್ಹವಾಗಿದೆ. ಇದರಲ್ಲಿ ಹವ್ಯಕರ ಪ್ರಮುಖ ನೆಲೆಗಳಾದ ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಕಾಸರಗೋಡು, ಕೊಡಗು ಜಿಲ್ಲಾ ಮೂಲದ ಮತ್ತು ಅಲ್ಲಿಂದ ಕಾರಣಾಂತರಗಳಿಂದ ಹೊರಗೆ ಹೋಗಿ ದೇಶ ವಿದೇಶಗಳಲ್ಲಿಯೂ ನೆಲೆಸಿರುವ ಸಮಗ್ರ ಹವ್ಯಕ ಸಮಾಜದಲ್ಲಿ ಪ್ರಾರಂಭದಿಂದ 2010ರ ಕಾಲಾವಧಿಯಲ್ಲಿ ಗ್ರಂಥಕಾರ ಎಂದು ಗುರುತಿಸಿಕೊಂಡ ಸು. 1290 ಗ್ರಂಥಕಾರ ಮತ್ತು ಸು. 6800 ಕೃತಿಗಳ ವ್ಯವಸ್ಥಿತ ದಾಖಲೆ ಇದೆ. ಆರೇಳು ವರ್ಷಗಳ ಸುದೀರ್ಘ ಕ್ಷೇತ್ರಕಾರ್ಯಾವಧಿಯಲ್ಲಿ ಪ್ರಾಯೋಗಿಕ ಮತ್ತು ಅಧ್ಯಯನಕ್ಕೆ ಪೂರಕವಾದ ವರ್ತಮಾನ ಹವ್ಯಕ ಲೇಖಕರ ದೂರವಾಣಿ ಕೈಪಿಡಿ-2004, ಕೀರ್ತಿಶೇಷ ಹವ್ಯಕ ಗ್ರಂಥಕಾರ ಕೃತಿ ಸೂಚಿ-2005, ಹವ್ಯಕ ಮಹಿಳಾ ಸಾಹಿತ್ಯ ದರ್ಶಿನಿ-2007, ಹವ್ಯಕ ರಚಿತ ಕಥೆ, ನಾಟಕ ಮತ್ತು ಮಕ್ಕಳ ಸಾಹಿತ್ಯ ಕೈಪಿಡಿ-2007 ಮತ್ತು ಹವ್ಯಕ ಯಕ್ಷಗಾನ ಕವಿಕಾವ್ಯಸೂಚಿ-2008 ಕೃತಿಗಳನ್ನು ಪ್ರಕಟಿಸಲಾಯಿತು. ಈ ಕೃತಿಗಳಲ್ಲಿ ಕಂಡುಬಂದ ಲೋಪ-ದೋಷಗಳನ್ನು ಆಸಕ್ತ ಸಹೃದಯರು ತಿಳಿಸುತ್ತ ಬಂದಿದ್ದರಿಂದ ಈ ಮಾಲಿಕೆಯಲ್ಲಿ ಕೊನೆಯ ಕೃತಿಯಾದ ಹವ್ಯಕ ಗ್ರಂಥಕಾರ ಕೃತಿ ದರ್ಪಣ-2011 ಕೃತಿಯಲ್ಲಿ ಹೆಚ್ಚು ನಿಖರವಾದ ಮಾಹಿತಿ ದಾಖಲಿಸಲು ಸಾಧ್ಯವಾಯಿತು. ಈ ಕೃತಿ ರಾಜಾರಾಮ ಮೋಹನರಾಯ ಗ್ರಂಥ ವಿತರಣಾ ಯೋಜನೆಯಲ್ಲಿ ಆಯ್ಕೆಗೆ ಭಾಜನವಾಗಿರುವುದು ಉಲ್ಲೇಖನೀಯ. ಈ ಕೃತಿ ರಚನೆಗಾಗಿ ನನಗೆ ಸ್ಫೂರ್ತಿ ನೀಡಿದ ಕೃತಿಯಾದ 1969ರಲ್ಲಿ ಪ್ರಕಟವಾದ ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರರು ಕೃತಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಸಹಜವಾದ ಕುತೂಹಲದಿಂದ ಹವ್ಯಕ ಗ್ರಂಥಕಾರ ಕೃತಿ ದರ್ಪಣದಲ್ಲಿ ದಾಖಲಾದ ಉ.ಕ. ಜಿಲ್ಲೆಯ ಹವ್ಯಕ ಗ್ರಂಥಕಾರರನ್ನು ಪ್ರತ್ಯೇಕಿಸಿ ನೋಡಿದಾಗ ಆ ಸಂಖ್ಯೆ ಸು.620ರಷ್ಟು ಇದ್ದುದನ್ನು ಕಂಡಾಗ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನವನಾದ ನನಗೆ ಜಿಲ್ಲೆಯ ಹವ್ಯಕ ಸಮುದಾಯದ ಬಗ್ಗೆ ವಿಶೇಷ ಅಭಿಮಾನ ಮೂಡಿಬಂದಿತು. ಜಿಲ್ಲೆಯ ಜನಸಂಖ್ಯಾಮಾನದಲ್ಲಿ ಇಲ್ಲಿನ ಹವ್ಯಕ ಸಮುದಾಯ ಚಿಕ್ಕದು. ಜನಸಂಖ್ಯೆ ಸುಮಾರು ಒಂದು ಲಕ್ಷ ಮಾತ್ರ. ಆದರೆ ಈ ಸಮಾಜದ ಸಾರಸ್ವತ ಶ್ರೀಮಂತಿಕೆ ಬಗ್ಗೆ ಅಭಿಮಾನ ಇಮ್ಮಡಿಸಿತು.

ಜಿಲ್ಲೆಯ ಎಲ್ಲಾ ಸಮುದಾಯಗಳ ಗ್ರಂಥಕಾರ ಮತ್ತು ಕೃತಿಗಳ ವಿವರಗಳನ್ನು ಸಂಗ್ರಹಿಸಿ ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರ ಕೃತಿಕೋಶ ರಚಿಸುವ ಆಸೆ ಮೂಡಿತು. ಈ ವಿಷಯವನ್ನು ಜಿಲ್ಲೆಯ ಕೆಲವು ಗಣ್ಯ ಗ್ರಂಥಕಾರರೊಂದಿಗೆ ಚರ್ಚಿಸಿದಾಗ ತುಂಬ ಪ್ರೋತ್ಸಾಹ ವ್ಯಕ್ತಪಡಿಸಿದರು. 2013ರಲ್ಲಿ ನನ್ನ ವೈಯಕ್ತಿಕ ಕಾರಣಗಳಿಂದಾಗಿ ಹವ್ಯಕ ಅಧ್ಯಯನ ಕೇಂದ್ರದ ಜವಾಬ್ದಾರಿಯಿಂದ ಮುಕ್ತನಾದ ನಂತರ ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರ ಕೃತಿಕೋಶ ರಚನೆಗಾಗಿ ಮಾಹಿತಿ ಸಂಗ್ರಹಕ್ಕೆ ಪ್ರವೃತ್ತನಾದೆ.

ಕತೆ, ಕಾದಂಬರಿ, ಕಾವ್ಯಗಳಂತಹ ಕೃತಿಗಳನ್ನು ರಚಿಸಲು ಅಶಕ್ತನಾದ ನನಗೆ ಗ್ರಂಥಕಾರ-ಕೃತಿಕೋಶದಂತಹ ರಚನಾತ್ಮಕ ಕೃತಿಯ ಮೂಲಕವಾದರೂ ಸಾಹಿತ್ಯ, ಸಾಹಿತಿ, ನಾಡು-ನುಡಿಯ ಸೇವೆ ಸಲ್ಲಿಸಲು ಅವಕಾಶ ದೊರೆತುದು ನನ್ನ ಸೌಭಾಗ್ಯವೆಂದುಕೊಂಡೆ.

ಮೊದಲ ಹೆಜ್ಜೆಯಲ್ಲಿ ಜಿಲ್ಲಾ ಗ್ರಂಥಕಾರರ ಕುರಿತ ಗ್ರಂಥ ಯಾ ಲೇಖನಗಳ ಹುಡುಕಾಟ ಪರಿಶೀಲನೆ ಕೈಗೆತ್ತಿಕೊಂಡೆ. ಕೆಳಗಿನ ಆಕರಸೂಚಿಗಳು ಉಪಯುಕ್ತವೆನಿಸಿದುವು.

1. **ಕನ್ನಡ ಗ್ರಂಥಸೂಚಿ-ಸಂಪುಟಗಳು**: ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥ ಸೂಚಿ-ಸಂಪಾದಕ ಸಮಿತಿಯು 1971 ರಿಂದ 2003ರ ವರೆಗಿನ ಒಟ್ಟಾರೆ 32 ವರ್ಷಗಳ (ಸುದೀರ್ಘ) ಅವಧಿಯಲ್ಲಿ ತನ್ನ ಸಮೀಕ್ಷಾ/ಅಧ್ಯಯನ/ಪರಿಶೀಲನಾ ಕಾರ್ಯಕ್ಷೇತ್ರದಲ್ಲಿ ಲಭ್ಯವಾದ ಮಾಹಿತಿಗಳ ಆಧಾರದಲ್ಲಿ ಕ್ರಿ.ಶ. 1817ರಲ್ಲಿ ಮುದ್ರಣಗೊಂಡ ಮೊದಲನೇ ಪುಸ್ತಕದಿಂದ 1980ರ ತನಕ ಪ್ರಕಟವಾದ ಸಾವಿರಾರು ಪುಸ್ತಕಗಳ ವಿವರಗಳನ್ನು ದಾಖಲೀಕರಣಗೊಳಿಸಿದೆ. ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟವಾದ 13 ಸಂಪುಟಗಳ ಡೆಮಿ 1/4 ಅಳತೆಯ 4660 ಪುಟಗಳಲ್ಲಿ 42040 ಪುಸ್ತಕಗಳ ಸಂಕ್ಷಿಪ್ತ ವಿವರ ಲಭ್ಯ. [ಪ್ರತಿಯೊಂದು ಪುಸ್ತಕದ ವಿವರ ನೀಡುವಾಗ ಗ್ರಂಥಕಾರನ ಹೆಸರು, ಪುಸ್ತಕದ ಶೀರ್ಷಿಕೆ, ಪ್ರಕಾರ, ಪ್ರಕಟಣೆ ವರ್ಷ, ಪುಟ ಸಂಖ್ಯೆ, ಬೆಲೆ, ಪುಸ್ತಕದ ಅಳತೆ, ಬೈಂಡಿಂಗ್ ಸ್ವರೂಪ, ಪ್ರಕಾಶಕರ ಹೆಸರು ಮತ್ತು ಒಂದು ವಾಕ್ಯದಲ್ಲಿ ಪುಸ್ತಕದಲ್ಲಿರುವ ವಿಷಯದ ಸಾರಾಂಶ ಅಲ್ಲದೇ ದಾಖಲಿತ ಪುಸ್ತಕದ ಪ್ರತಿಯನ್ನು ಯಾವ ಗ್ರಂಥಾಲಯದಲ್ಲಿ ಕಾಣಲಾಗಿತ್ತು ಇತ್ಯಾದಿ ಮಾಹಿತಿಗಳನ್ನು ನೀಡುವ ಅಪೂರ್ವ ಕೋಶಗಳಿವು. ಪ್ರತಿ ಸಂಪುಟದ ಕೊನೆಯಲ್ಲಿ ಅಕಾರಾದಿಯಾಗಿ ಪ್ರತ್ಯೇಕ ಗ್ರಂಥಕಾರರ ಯಾದಿ, ಗ್ರಂಥಗಳ ಯಾದಿಯನ್ನೂ ನೀಡಲಾಗಿದ್ದು Quick Reference ಗೆ ತುಂಬ ಅನುಕೂಲಕರವಾಗಿದೆ.] ಈ ಸಂಖ್ಯೆ 163 ವರ್ಷಗಳ ಅವಧಿಯಲ್ಲಿ ಪ್ರಕಟಗೊಂಡ ಪುಸ್ತಕಗಳ ಭಾಗಶಃ ಸಂಖ್ಯೆ ಮಾತ್ರ ಎಂಬುದನ್ನು ಓದುಗರು ಗಮನಿಸುವದು.

ಈ ಸಂಪುಟಗಳಿಂದ ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ 1000ಕ್ಕೂ ಮಿಕ್ಕ ಕೃತಿಗಳ ವಿವರ ಲಭ್ಯವಾಗಿದ್ದು ಅವುಗಳ ವಿವರಗಳು ಪ್ರಸಕ್ತ ಸಮೀಕ್ಷೆ/ದಾಖಲಾತಿಯಲ್ಲಿ ಅಡಕಗೊಂಡಿವೆ.

2. **ಉತ್ತರ ಕನ್ನಡದ ಬರಹಗಾರರು**: ಕಾರವಾರದಲ್ಲಿ 1931ರಲ್ಲಿ ನಡೆದ 17ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟವಾದ ಹನುಮಂತರಾವ್ ಮಾಂಜರೇಕರ ಇವರ 20 ಪುಟಗಳ ಕೃತಿಯಲ್ಲಿ 60 ಗ್ರಂಥಕಾರರ ಸಂಕ್ಷಿಪ್ತ ಮಾಹಿತಿ ಇದೆ.

3. **ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು**: ಕಾಸರಗೋಡಿನ ಜನತಾ ವಿದ್ಯಾಲಯದ ಶಿಕ್ಷಕದ್ವಯರಾದ ಎನ್.ಕೆ. ಹೆಗಡೆ ಮತ್ತು ಆಯ್.ಎಸ್.ಭಟ್ಟ ಇವರಿಂದ 1969ರಲ್ಲಿ ಪ್ರಕಟವಾದ

550 ಪುಟಗಳ ಈ ಕೃತಿಯಲ್ಲಿ 200 ಜನ ಗ್ರಂಥಕಾರರ ಮತ್ತು ಕೃತಿಗಳ ಸಂಕ್ಷಿಪ್ತ ಮಾಹಿತಿ ಲಭ್ಯ.

4. ಹಳೆಬೇರು ಹೊಸ ಚಿಗುರು: ಕನ್ನಡ ಸಾಹಿತ್ಯ ಪರಿಷತ್ತಿನ ಅಂಕೋಲಾ ತಾಲೂಕು ಘಟಕವು 2006ರಲ್ಲಿ ಪ್ರಕಟಿಸಿದ 72 ಪುಟಗಳ ಈ ಕೃತಿಯಲ್ಲಿ 47 ಗ್ರಂಥಕಾರರ ಮತ್ತು ಕೃತಿಗಳ ಸಂಕ್ಷಿಪ್ತ ಮಾಹಿತಿ ಲಭ್ಯ.

5. ಲೇಖನ ರೂಪದ 2 ದೀರ್ಘ ಬರಹಗಳಲ್ಲಿ ಅಂಕೋಲಾ ತಾಲೂಕಿನ ಕೆಲವು ಗ್ರಂಥಕಾರ ಕೃತಿಗಳ ಪರಿಚಯವಿದೆ. (1) ಅಂಕೋಲಾ ಕರ್ನಾಟಕ ಸಂಘದ ವಜ್ರಮಹೋತ್ಸವ ಸ್ಮರಣ ಸಂಚಿಕೆ 'ವಜ್ರಕಲಶ-2012' ದಲ್ಲಿ 82 ಗ್ರಂಥಕಾರ-ಕೃತಿಗಳ ಸಂಕ್ಷಿಪ್ತ ಮಾಹಿತಿ ಇದೆ. (2) 2000ದಲ್ಲಿ ಪ್ರಕಟವಾದ ಅಂಕೋಲೆ ಎಂಬ ಕೃತಿಯಲ್ಲಿ ಶ್ರೀ ವಿಷ್ಣು ನಾಯ್ಕರ 'ಅಂಕೋಲೆಯ ಸಾಹಿತ್ಯ ಸಮೃದ್ಧಿ' ಎಂಬ 34 ಪುಟಗಳ ಸುದೀರ್ಘ ಲೇಖನದಲ್ಲಿ ಸು. 57 ಗ್ರಂಥಕಾರ-ಕೃತಿಗಳ ಸಂಕ್ಷಿಪ್ತ ವಿವರಗಳಿವೆ.

6. ಜಿಲ್ಲಾ ಮತ್ತು ತಾಲೂಕಾ ಸಮ್ಮೇಳನಾಧ್ಯಕ್ಷೀಯ ಭಾಷಣಗಳು: ಕನ್ನಡ ಸಾಹಿತ್ಯ ಪರಿಷತ್ತಿನ ಉತ್ತರ ಕನ್ನಡ ಜಿಲ್ಲಾ ಘಟಕವು 1972 ರಿಂದ 2014ರ ತನಕ 18 ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನೇರ್ಪಡಿಸಿದೆ. 2005-13ರ ಅವಧಿಯ ಒಟ್ಟು 6 ಸಾಹಿತ್ಯ ಸಮ್ಮೇಳನಗಳ ಸಮ್ಮೇಳನಾಧ್ಯಕ್ಷೀಯ ಭಾಷಣಗಳ ಸಂಕಲನವನ್ನು ಜಿಲ್ಲಾ ಘಟಕವು 2013ರಲ್ಲಿ ಪ್ರಕಟಿಸಿರುವದು ಪ್ರಶಂಸನೀಯ. 2007ರಲ್ಲಿ ನಡೆದ 13ನೇ ಸಮ್ಮೇಳನಾಧ್ಯಕ್ಷರಾದ ಶ್ರೀ ವಿಷ್ಣು ನಾಯ್ಕರು ತಮ್ಮ ಭಾಷಣದಲ್ಲಿ 1969ರಲ್ಲಿ ಪ್ರಕಟವಾದ 'ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರರು' ಕೃತಿ ಸ್ಮರಿಸುತ್ತ ಅದರ ನಂತರದ ವರ್ಷಗಳಲ್ಲಿ ಸಾಹಿತ್ಯ ಕೃಷಿಗೈದ ಗ್ರಂಥಕಾರರನ್ನೊಳಗೊಂಡಂತೆ ಜಿಲ್ಲಾ ಸಾಹಿತ್ಯ ಚರಿತ್ರೆ ರಚನೆಯಾಗಬೇಕಾದ ಅಗತ್ಯತೆಯನ್ನು ಪ್ರತಿಪಾದಿಸಿದ್ದಾರೆ. 2008ರಲ್ಲಿ ನಡೆದ 14ನೇ ಸಮ್ಮೇಳನಾಧ್ಯಕ್ಷರಾದ ಶ್ರೀ ನಾ. ಸು. ಭರತನಹಳ್ಳಿಯವರು ತಮ್ಮ ಭಾಷಣದಲ್ಲಿ ಜಿಲ್ಲೆಯ ಬರಹಗಾರರಲ್ಲಿ ಕನಿಷ್ಟ ಒಂದು ಪುಸ್ತಕವನ್ನು ಪ್ರಕಟಣೆಗೊಳಿಸಿಕೊಂಡಿರುವವರನ್ನು ಮಾನದಂಡವಾಗಿರಿಸಿಕೊಂಡು 42 ಕೀರ್ತಿಶೇಷ ಹಾಗೂ ಸು. 200ಕ್ಕೂ ಮಿಕ್ಕ ವರ್ತಮಾನ ಗ್ರಂಥಕಾರರ ಹೆಸರುಗಳನ್ನು ಉಲ್ಲೇಖಿಸುತ್ತ ಮುಂದಿನ ದಿನಗಳಲ್ಲಿ ಇಂಥ ಕೃತಿಕಾರ ಮಾಹಿತಿ ಪುಸ್ತಕ ಸಿದ್ಧಗೊಳಿಸುವ ಪ್ರಯತ್ನ ನಡೆಯಲಿ ಎಂದಿದ್ದಾರೆ.

ಜಿಲ್ಲೆಯ ತಾಲೂಕುಗಳಲ್ಲಿ ಹಲವಾರು ತಾಲೂಕಾ ಸಾಹಿತ್ಯ ಸಮ್ಮೇಳನಗಳಾಗಿವೆ. 2005-13ರ ಅವಧಿಯಲ್ಲಿ ನಡೆದ ಒಟ್ಟು 26 ಸಮ್ಮೇಳನಗಳ ಸಮ್ಮೇಳನಾಧ್ಯಕ್ಷೀಯ ಭಾಷಣಗಳ ಸಂಕಲನ ಕೃತಿಯನ್ನು ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಘಟಕವು 2014ರಲ್ಲಿ ಪ್ರಕಟಿಸಿದ್ದು ಪ್ರಶಂಸಾರ್ಹ. ಸಾಂಪ್ರದಾಯಿಕವೆಂಬಂತೆ ಎಲ್ಲಾ ಭಾಷಣಗಳಲ್ಲಿಯೂ ಅಲ್ಲಲ್ಲಿ ಆಯಾ ತಾಲೂಕಿನ ಗ್ರಂಥಕಾರರ ಕೆಲವು ಹೆಸರುಗಳು ಉಲ್ಲೇಖಗೊಂಡಿವೆ.

ವರ್ತಮಾನ ಹಾಗೂ ಕೀರ್ತಿಶೇಷ ಗ್ರಂಥಕಾರರ ಮಾಹಿತಿ ಸಂಗ್ರಹಕ್ಕಾಗಿ ನಿಗದಿತ ಪಾರ್ಮು ರೂಪಿಸಿಕೊಂಡು ವಿನಂತಿ ಪತ್ರಸಹಿತ ಕಾರ್ಯಪ್ರವೃತ್ತನಾದೆ. ವರ್ತಮಾನ ಲೇಖಕರ ಸಂಪರ್ಕ ವಿಳಾಸ ಮತ್ತು ಕೀರ್ತಿಶೇಷರ ಮಾಹಿತಿ ನೀಡಬಲ್ಲವರ ಸಂಪರ್ಕ ವಿಳಾಸಗಳನ್ನು ಪಯತ್ನಪಟ್ಟು ಸಂಗ್ರಹಿಸಲಾಯಿತು.

ಲಭ್ಯ ವಿಳಾಸಗಳಿಗೆ ವಿನಂತಿ ಪತ್ರ ಸಹಿತ ಪಾರ್ಮಗಳನ್ನು ಕಳಿಸಿ ತುಂಬಿ ಹಿಂತಿರುಗಿ ಕಳುಹಿಸುವಂತೆ ವಿನಂತಿಸಲಾಯಿತು. ಕೃತಿಕೋಶ ರಚನೆಗಾಗಿ ಪರಿಚಯ ಕಳುಹಿಸುವಂತೆ ಕೋರಿ ಸ್ಥಳೀಯ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಲಾಯಿತು. ಕೆಲವರು ಕೂಡಲೇ

ಉತ್ತರಿಸಿದರು. ಹಲವರಿಗೆ ಕೆಲವು ನೆನಪೋಲೆ ಬರೆಯಬೇಕಾಯಿತು. ಒಟ್ಟಾರೆ ಸು. ಎರಡು ವರ್ಷಗಳ ಪ್ರಯತ್ನದಿಂದಾಗಿ ಜಿಲ್ಲೆಯ ಎಲ್ಲ ಸಮುದಾಯಗಳ 1284 ಗ್ರಂಥಕಾರರ ಮಾಹಿತಿ ಸಂಗ್ರಹ ಪ್ರಯತ್ನದಲ್ಲಿ 420 ಕೀರ್ತಿಶೇಷ ಮತ್ತು 794 ವರ್ತಮಾನ ಗ್ರಂಥಕಾರರ ಅವಶ್ಯಕ ವಿವರ ಲಭ್ಯವಾಗಿದ್ದು 70 ಗ್ರಂಥಕಾರರ ಅಪೂರ್ಣ ವಿವರ ಮಾತ್ರ ಲಭ್ಯವಾಗಿದೆ.

ಸಿದ್ದಾಪುರದ ಪದವಿ ಕಾಲೇಜಿನ ಉತ್ತರ ಕನ್ನಡ ಜಿಲ್ಲಾ ಗ್ರಂಥಸಂಗ್ರಹದಲ್ಲಿ ಉತ್ತರ ಕನ್ನಡದ ಗ್ರಂಥಕಾರರ ಅನೇಕ ಶೀರ್ಷಿಕೆಗಳಿವೆಯೆಂದು ತಿಳಿದುಬಂದಿದೆ. ಈ ಗ್ರಂಥಕಾರರನ್ನು ಪ್ರಸಕ್ತ ಕ್ಷೇತ್ರ ಕಾರ್ಯಕ್ಕೊಳಪಡಿಸಲು ಪ್ರಯತ್ನಿಸಲಾಗಿದೆ.

* * * * *

ಈ ಹಿನ್ನೆಲೆಯಲ್ಲಿ ಈ ಹಿಂದೆಯೇ ನನಗಾದ ಕೆಲವು ಅನುಭವಗಳನ್ನು ದಾಖಲಿಸುವುದು ಸೂಕ್ತವೆಂದು ಭಾವಿಸುತ್ತೇನೆ.

ಅಧ್ಯಯನ ಕೇಂದ್ರವು 2005ರಲ್ಲಿ 'ಕೀರ್ತಿಶೇಷ ಹವ್ಯಕ ಗ್ರಂಥಕಾರ ಕೃತಿಸೂಚಿ' ಪ್ರಕಟಿಸಿದಾಗ ಅದರ ಪ್ರತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಚಂಪಾರವರಿಗೆ ನೀಡುವ ಸಲುವಾಗಿ ಮಿತ್ರನೊಂದಿಗೆ ಹೋಗಿದ್ದೆ. ಕೃತಿಯನ್ನು ಗಮನಿಸಿದ ಅಧ್ಯಕ್ಷರು ಕೇವಲ ಹವ್ಯಕ ಸಮುದಾಯವನ್ನು ಮಾತ್ರ ಪರಿಗಣಿಸಿದ್ದೀರಿ ಎಂದು ಆಕ್ಷೇಪಿಸಿದರು. ಆಗ 'ನೋಡಿ ಸಾರ್, ಪ್ರತಿಯೊಬ್ಬ ವ್ಯಕ್ತಿಯೂ ಸ್ವಸಮಾಜಾಭಿಮಾನಿ ಯಾಗಿರಬೇಕು. ಪ್ರತಿಯೊಂದು ಸಮುದಾಯದವರಿಂದಲೂ ಇಂಥ ಕೃತಿಗಳ ಸಂಕಲನ ಸಾಧ್ಯವಾದಲ್ಲಿ ಅವೆಲ್ಲವೂ ಸಮಗ್ರ ಸಾಹಿತ್ಯ ಚರಿತ್ರೆಗೆ ಆಕರ ಸಾಹಿತ್ಯವಾಗುತ್ತವೆ. ತನ್ನ ಸಮಾಜದ ಕೆಲಸವನ್ನು ಇನ್ನಾರೋ ಮಾಡಿದಾಗ ಅದರಲ್ಲಿ ದೋಷ ಹುಡುಕುವದಕ್ಕಿಂತ ತಾನೇ ಮಾಡುವುದು ಉತ್ತಮವಲ್ಲವೇ?" ಎಂದಾಗ ಅವರಿಗೂ ಇದು ಸರಿಯೆನಿಸಿ ಮುಂದಿನ ಕೆಲಸಕ್ಕೆ ಶುಭ ಹಾರೈಸಿದ್ದು ಸಂತಸ ತಂದಿತು.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಉತ್ತರ ಕನ್ನಡದ ಅಂಕೋಲಾ ಮತ್ತು ಸಿದ್ದಾಪುರ ತಾಲೂಕುಗಳಲ್ಲಿನ ಹೋರಾಟ ರಾಷ್ಟ್ರಮಟ್ಟದ ನಾಯಕರ ಗಮನ ಸೆಳೆದಿತ್ತು. ಸಿದ್ದಾಪುರ ತಾಲೂಕಿನ ಹೋರಾಟಗಾರರಲ್ಲಿ ಬಹುಸಂಖ್ಯಾತರು ಹವ್ಯಕರು. ಅವರಲ್ಲನೇಕರ ಆಸ್ತಿಪಾಸ್ತಿಗಳು ಜಪ್ತಾಗಿ ಹೋಗಿ ನಿರ್ವಸಿತರೂ ನಿರ್ಗತಿಕರೂ ಆಗಿದ್ದರು. ಹವ್ಯಕ ಅಧ್ಯಯನ ಕೇಂದ್ರವು ಸ್ವಾತಂತ್ರ್ಯ ಸಮರದಲ್ಲಿ ಹವ್ಯಕರ ಪಾತ್ರ ಕುರಿತ ಕೃತಿರಚನೆಗಾಗಿ ಹವ್ಯಕ ಸ್ವಾತಂತ್ರ್ಯ ಹೋರಾಟಗಾರರ ಮಾಹಿತಿ ನೀಡುವಂತೆ ಕೋರಿ ಉತ್ತರ ಕನ್ನಡದ ಕರಾವಳಿಯ ವಾರ ಪತ್ರಿಕೆಯಲ್ಲಿ ವಿನಂತಿ ಪ್ರಕಟಿಸಿತ್ತು. ಇದಾದ 15 ದಿನಗಳಲ್ಲಿ ಜಿಲ್ಲೆಯ ಘಟ್ಟದ ಮೇಲಿನ ವಾರಪತ್ರಿಕೆಯೊಂದರಲ್ಲಿ ಸಾಹಿತಿಯೂ ಮಾಧ್ಯಮ ಮಿತ್ರರೂ ಆದ ಮಹನೀಯರೊಬ್ಬರಿಂದ ತೀವ್ರವಾದ ಆಕ್ಷೇಪ ಪ್ರಕಟವಾಗಿತ್ತು. ಸ್ವಾತಂತ್ರ್ಯ ಹೋರಾಟ ಜಾತಿ-ಮತ-ಧರ್ಮಗಳನ್ನು ಮೀರಿದ ಹೋರಾಟ. ಹವ್ಯಕ ಸಮಾಜದವರು ಇದರಲ್ಲಿ ಜಾತೀಯತೆ ತರುತ್ತಿದ್ದಾರೆ. ಹವ್ಯಕ ಸ್ವಾತಂತ್ರ್ಯ ಹೋರಾಟಗಾರರು ಇದಕ್ಕೆ ಸಹಕರಿಸಬಾರದು. ಎಂಬುದು ಆಕ್ಷೇಪದ ತಿರುಳಾಗಿತ್ತು. ಇದಕ್ಕೆ ಉತ್ತರವಾಗಿ ಇದರಲ್ಲಿ ಜಾತೀಯತೆಯ ಪ್ರಶ್ನೆಯಿಲ್ಲ. ಸಮಾಜವೊಂದರ ಸಾಂಘಿಕ/ಸಾಮಾಜಿಕ ಚಟುವಟಿಕೆಯ ಅಂಗವಾಗಿ ಮಾತ್ರ ಈ ಮಾಹಿತಿ ಸಂಗ್ರಹ/ಪ್ರಕಟಣೆ ಯೋಜಿಸಲಾಗಿದೆ. ಇಂಥ ಕೃತಿ ಜಿಲ್ಲೆಯ ಸ್ವಾತಂತ್ರ ಹೋರಾಟದ ಚರಿತ್ರೆಗೆ ಪೂರಕವಾದುದು. ಇಂತಹ ರಚನಾತ್ಮಕ ಐತಿಹಾಸಿಕ ದಾಖಲೀಕರಣವನ್ನು ಆಕ್ಷೇಪಿಸುವ

ಪ್ರವೃತ್ತಿ ಸರಿಯೆನಿಸಲಾರದು ಎಂಬ ಆಶಯದ ಪ್ರಕಟಣೆಯ ಕರಡು ಪ್ರತಿಯನ್ನು ಸಂಘದ ಅಧ್ಯಕ್ಷರೊಂದಿಗೆ ಚರ್ಚಿಸಲಾಯಿತು. ಅವರು ಇಂಥಹ ಆಕ್ಷೇಪಗಳನ್ನು ಅಲಕ್ಷಿಸಿ ಮುಂದುವರಿಯುವಂತೆ ಸಲಹೆ ನೀಡಿದರು. ಸುದೀರ್ಘ ಪ್ರಯತ್ನದ ನಂತರ 2009ರಲ್ಲಿ 'ಸ್ವಾತಂತ್ರ್ಯ ಸಮರ ಸಾವಿರದ ಹವ್ಯಕರು' ಕೃತಿ ಪ್ರಕಟಿಸಲಾಯಿತು. ಕೃತಿಯಲ್ಲಿ ದಾಖಲಾದ ಸು. 1200 ಜನ ಹವ್ಯಕ ಸ್ವಾತಂತ್ರ್ಯ ಹೋರಾಟಗಾರರಲ್ಲಿ 800 ಜನ ಸಿದ್ದಾಪುರ ತಾಲೂಕಿನವರು. ಅದರಲ್ಲೂ 200 ಮಹಿಳೆಯರು. ಕೃತಿಯ 300 ಪ್ರತಿಗಳನ್ನು ಪೂರೈಸುವಂತೆ ರಾಜಾರಾಮ ಮೋಹನರಾಯ ಗ್ರಂಥವಿತರಣಾ ಯೋಜನೆಯವರು ಪ್ರಕಾಶಕರಾದ ಹವ್ಯಕ ಅಧ್ಯಯನ ಕೇಂದ್ರವನ್ನು ಕೋರಿದಾಗ ಸಂತಸ ಇಮ್ಮಡಿಸಿತು.

ಪ್ರಸಕ್ತ ಕೋಶದಲ್ಲಿ ದಾಖಲಿಸಿರುವ ಮಾಹಿತಿಗಳು ಸ್ವತಃ ಗ್ರಂಥಕರ್ತರು ಅಥವಾ ಕೀರ್ತಿಶೇಷ ಗ್ರಂಥಕರ್ತರ ವಂಶಜ/ನಿಕಟವರ್ತಿ/ಅಭಿಮಾನಿಗಳು ತುಂಬಿ ಕಳಿಸಿದ ಫಾರ್ಮುಗಳಲ್ಲಿರುವ ವಿವರಗಳನ್ನವಲಂಬಿಸಿದೆ. ಆದರೂ ಸಂಗ್ರಹ, ಕ್ರೋಢೀಕರಣ, ಮರುದಾಖಲಾತಿಗಳ ಸಂದರ್ಭದಲ್ಲಿ ಲೋಪ-ದೋಷಗಳು ನುಸುಳುರುವ ಸಾಧ್ಯತೆಯನ್ನು ಪೂರ್ತಿ ತಳ್ಳಿಹಾಕಲು ಸಾಧ್ಯವಿಲ್ಲ. ಹಾಗಾಗಿ ಕೋಶವನ್ನು ಓದುಗರು ಸೂಕ್ತ ಪರಿಪ್ರೇಕ್ಷೆಯಲ್ಲಿ ಗಮನಿಸಿ, ಲೋಪದೋಷಗಳು ಕಂಡುಬಂದಲ್ಲಿ ದಯಮಾಡಿ ಗ್ರಂಥಕರ್ತನಿಗೆ ಪತ್ರಮುಖೇನ ತಿಳಿಸಬೇಕಾಗಿ ನಮ್ರ ವಿನಂತಿ.

ಪ್ರಸಕ್ತ ಕೃತಿಯ 2ನೇ ಅಧ್ಯಾಯದಲ್ಲಿ ಪ್ರಾರಂಭದಿಂದ ಕ್ರಿ.ಶ. 1900ರ ವರೆಗಿನ ಜಿಲ್ಲೆಯ ಎಲ್ಲಾ ಸಮುದಾಯಗಳ ಗ್ರಂಥಕಾರರ ಲಭ್ಯ ವಿವರಗಳನ್ನು ನೀಡಲಾಗಿದೆ. ಅಧ್ಯಾಯ 3 ಮತ್ತು 4ರಲ್ಲಿ ಕ್ರಿ.ಶ. 1900 ರಿಂದ ಡಿಸೆಂಬರ 2015ರ ಅವಧಿಯ ಕೀರ್ತಿಶೇಷ ಹಾಗೂ ವರ್ತಮಾನ ಗ್ರಂಥಕಾರರ ವಿವರಗಳನ್ನು ನೀಡಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಉತ್ತರಕನ್ನಡ ಜಿಲ್ಲಾ ಮತ್ತು ತಾಲೂಕು ಘಟಕಗಳ ಸಂಕ್ಷಿಪ್ತ ಮಾಹಿತಿ; ಜಿಲ್ಲೆಯಲ್ಲಿ ನಡೆದ ತಾಲೂಕಾ, ಜಿಲ್ಲಾ ಮತ್ತು ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಸಂಕ್ಷಿಪ್ತ ಯಾದಿ; ಜಿಲ್ಲೆಯ ಕರ್ನಾಟಕ ಸಂಘಗಳು, ಚುಟುಕು ಸಾಹಿತ್ಯ ಪರಿಷತ್ ಘಟಕಗಳು, ಕೊಂಕಣಿ ಸಾಹಿತ್ಯ ಚಟುವಟಿಕೆಗಳು ಇತ್ಯಾದಿಗಳ ಸಂಕ್ಷಿಪ್ತ ಮಾಹಿತಿಗಳನ್ನು 3, 4, 5, 6 ಮತ್ತು 7ನೇ ಅನುಬಂಧಗಳಲ್ಲಿ ನೀಡಲಾಗಿದೆ. ಇದರಿಂದ ಈವರೆಗೆ ಸಂಗ್ರಹರೂಪದಲ್ಲಿ ಅಲಭ್ಯವಾಗಿದ್ದ ಮಾಹಿತಿಗಳನ್ನು ಒತ್ತಟ್ಟಿಗೆ ತರುವ ಪ್ರಯತ್ನ ಮಾಡಲಾಗಿದೆ. ಇವೆಲ್ಲವೂ ಗ್ರಂಥಕಾರ ಕೃತಿಕೋಶವನ್ನು ಹೆಚ್ಚು ಉಪಯುಕ್ತವನ್ನಾಗಿಸುತ್ತವೆಯೆಂದು ನಂಬಲಾಗಿದೆ.

ಗ್ರಂಥಕಾರ ಕೃತಿಕೋಶ: ಆಕ್ಷೇಪ-ಸಮಾಧಾನ

ಗ್ರಂಥಕರ್ತರಿಂದ ಮಾಹಿತಿ ಸಂಗ್ರಹ ಮಾಡುವಾಗ ಯೋಜನೆ ಕುರಿತು ಅವರ ಅಭಿಪ್ರಾಯ ಕೋರಲಾಗಿತ್ತು. ಹೆಚ್ಚಿನವರು ಪ್ರಶಂಸೆಯೊಂದಿಗೆ ಸಹಾಯ ಹಸ್ತನೀಡಿದ್ದಾರೆ. ಕೆಲವರಿಂದ ಸೂಚನೆಗಳು ಬಂದಿವೆ. ಬೆರಳೆಣಿಕೆಯಷ್ಟು ಗ್ರಂಥಕಾರರು ಸೂಚನೆ ಆಕ್ಷೇಪ ವಕ್ಯಕ್ತಪಡಿಸಿದ್ದಾರೆ. ಅವುಗಳನ್ನು ಕೆಳಗಿನಂತೆ ಕ್ರೋಢೀಕರಿಸಿ ಸಮಜಾಯಿಷಿ ನೀಡಲು ಪ್ರಯತ್ನಿಸಲಾಗಿದೆ.

ಸೂಚನೆಗಳು : (1) ಗ್ರಂಥದ ಕನಿಷ್ಟ ಪುಟ ಸಂಖ್ಯೆ ನಿಗದಿಯಾಗಲಿ. (2) ಮೌಲಿಕ ಗ್ರಂಥಗಳು ಮಾತ್ರ ದಾಖಲಾರ್ಹ. (3) ಕೃತಿ/ಗ್ರಂಥದ ಪುಟಸಂಖ್ಯೆ ಬೇಕಾಗಿಲ್ಲ.

ಈ ಸೂಚನೆಗಳನ್ನು ಪರಿಶೀಲಿಸಿದೆ. ಸದ್ಯಕ್ಕೆ ಲಭ್ಯವಾದ ಮಾಹಿತಿ ಕೋಶ, ಸಾಹಿತ್ಯ ಕೋಶ, ಗ್ರಂಥಕಾರರ ಚರಿತ್ರ ಕೋಶ, ಕನ್ನಡ ಗ್ರಂಥಸೂಚಿ ಮುಂತಾದವುಗಳ ರೂಪ–ರೇಷೆಗಳನ್ನು ಗಮನಿಸಿದಾಗ ಕೆಳಗಿನಂತೆ ಕಂಡುಬಂದಿದೆ.

ಗ್ರಂಥ ಗಾತ್ರ, ಮೌಲ್ಯ :

ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿದ ಕನ್ನಡ ಗ್ರಂಥಸೂಚಿಯ 13 ಸಂಪುಟಗಳು ಆಚಾರ್ಯ ಕೃತಿಗಳು. ಕನ್ನಡ ಗ್ರಂಥ ಪ್ರಕಟಣೆಯ ಪ್ರಾರಂಭ ವರ್ಷವನ್ನು ಕ್ರಿ.ಶ. 1817 ಎಂದು ಗುರುತಿಸಿ ಅಲ್ಲಿಂದ 1980–ಅಂದರೆ ಒಟ್ಟು 163 ವರ್ಷಗಳ ಕಾಲಾವಧಿಯಲ್ಲಿ ಪ್ರಕಟಗೊಂಡ ಕನ್ನಡ ಗ್ರಂಥಗಳ ಕುರಿತ ಲಭ್ಯ ವಿವರಗಳನ್ನು ಈ ಸಂಪುಟಗಳಲ್ಲಿ ದಾಖಲಿಸಿದೆ. ದಾಖಲಿತ ಗ್ರಂಥಗಳ ಸಂಖ್ಯೆ 42040. ಇವುಗಳಲ್ಲಿ ಗ್ರಂಥದ ಗಾತ್ರ, ಸಂಖ್ಯೆ, ಮೌಲ್ಯಗಳನ್ನು ಮಾನದಂಡವಾಗಿ ಪರಿಗಣಿಸಲಾಗಿಲ್ಲ. ಕೆಳಗಿನ ಉದಾಹರಣೆಗಳು ಗಮನಾರ್ಹ.

1. ನರಪಿಂಗಲೀ ಶಕುನವು–ಸಂಪಾದಕ : ತೋವಿನಕೆರೆ ರಾಯಣ್ಣ, **ಪ್ರಕಟಣೆ ವರ್ಷ 1887, ಪುಟ 8 [ನೋಡಿ ಸಂಪುಟ–2, ಪುಟ 64, ಕ್ರಮಸಂಖ್ಯೆ 434]**

2. ಕಾಲಜ್ಞಾನ–ಸಂಪಾದಕ : ಗದಿಗೆಯ್ಯಾ ಸ್ವಾಮಿ ಸೀಮೆಮಠ, **ಪ್ರಕಟಣೆ ವರ್ಷ 1944, ಪುಟ 8 [ನೋಡಿ ಸಂಪುಟ–2, ಪುಟ 66, ಕ್ರಮಸಂಖ್ಯೆ 466]**

3. ಸಪ್ತಶ್ಲೋಕೀ ಭಗವದ್ಗೀತಾ–ಸಂಪಾದಕ : ಜೋಶಿ ಶಂಕರ ಭಟ್ಟ, **ಪ್ರಕಟಣೆ ವರ್ಷ 1956, ಪುಟ 6 [ನೋಡಿ ಸಂಪುಟ–2, ಪುಟ 428, ಕ್ರಮಸಂಖ್ಯೆ 4555]**

ಗ್ರಂಥದ ಮೌಲ್ಯ, ಪುಟ ಸಂಖ್ಯೆ : ಯಾವುದೇ ಗ್ರಂಥವೊಂದರ ರಚನೆಯ ಹಿಂದೆ ಗ್ರಂಥಕಾರರ ಅಭ್ಯಾಸ, ಅನುಭವಗಳ ಆಳ–ವಿಸ್ತಾರ, ವೈವಿಧ್ಯಗಳಲ್ಲದೇ ಸಮಯ, ಶ್ರಮಗಳ ದೇಣಿಗೆಯೂ ಗಮನಾರ್ಹ. ಪುಟ ಸಂಖ್ಯೆ ನಮೂದನೆ ಇದನ್ನು ಲಕ್ಷಿಸಿದೆ.

ಭವಿಷ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಚರಿತ್ರೆ ರಚಿಸುವ, ಜಿಲ್ಲೆಯ ಸಾಹಿತ್ಯದ ವಿವಿಧ ಮುಖಗಳ ಅಧ್ಯಯನಾಕಾಂಕ್ಷಿಗಳಿಗೆ ಈ ಕೃತಿಕೋಶವು ಕೈದೀವಿಗೆಯಂತೆ ಸಹಾಯಕವಾದಲ್ಲಿ ಕೃತಿಕಾರನ ಶ್ರಮ ಸಾರ್ಥಕ.

ನಾರಾಯಣ ಶಾನಭಾಗ
(ಕೃಷ್ಣಜ ವಾಲಗಳ್ಳಿ)
ಸಾಹಿತಿ, ಸಾಹಿತ್ಯ ಸೇವಕ.

ಕೃತಜ್ಞತೆಗಳು

ಮಾನ್ಯರಾದ ಶ್ರೀ ವಿಷ್ಣುನಾಯ್ಕ ಅಂಕೋಲಾ, ಶ್ರೀ ಶಾಂತಾರಾಮ ನಾಯಕ ಹಿಚ್ಕಡ, ಶ್ರೀ ಮೋಹನ ಹಬ್ಬು ಅಂಕೋಲಾ, ಶ್ರೀ ಪ್ರೇಮಾನಂದ ಅಂಕೋಲಾ, ಶ್ರೀ ನಾ.ಸು. ಭರತನಹಳ್ಳಿ ಯಲ್ಲಾಪುರ, ಶ್ರೀ ಅರುಣ ಉಭಯಕರ ಮಲ್ಲಾಪುರ, ಡಾ. ವಿ.ಎಸ್. ಸೋಂದೆ ಶಿರಸಿ, ಶ್ರೀ ಜಿ.ಜಿ. ಹೆಗಡೆ ಬಾಳಗೋಡ ಸಿದ್ದಾಪುರ, ಶ್ರೀ ಎಂ.ಪಿ. ನಾಯ್ಕ ಕುಮಟಾ, ಶ್ರೀ ಡಿ.ಎನ್. ನಾಡಕರ್ಣಿ ಮುಂಬಯಿ, ಶ್ರೀ ವಿಠ್ಠಲರಾಯ ಭಟ್ಟ ಮುಂಬಯಿ ಮುಂತಾದ ಮಾಹಿತಿ ಸಂಪನ್ಮೂಲ ವ್ಯಕ್ತಿಗಳ ಸಹಕಾರಕ್ಕೆ,

ಉಪರೋಕ್ತ ಸಂಪನ್ಮೂಲ ಮಹನೀಯರ ಹೊರತಾಗಿ ಮಾಹಿತಿ ಸಂಗ್ರಹ ಪ್ರಕ್ರಿಯೆಯಲ್ಲಿ ನೆರವಾದ ಶ್ರೀಯುತರಾದ ಶಾ.ಮಂ. ಕೃಷ್ಣರಾವ್, ಆರ್.ಎಸ್. ಹಬ್ಬು, ನಾಗಪತಿ ಹೆಗಡೆ, ಡಾ. ನಾರಾಯಣ ಮಧ್ಯಸ್ಥ, ಜನಾರ್ದನ ನಾಯಕ, ಸಮಾಜಮುಖಿ ಕನ್ನೇಶ, ಶಶಿಕಾಂತ ಶೆಟ್ಟಿ, ಬಿ. ಹೊನ್ನಪ್ಪ ಭಾವಿಕೇರಿ, ಮಾಸ್ಕೇರಿ ಎಂ.ಕೆ. ನಾಯಕ, ಎಂ.ಆರ್. ಮಾನ್ವಿ, ಕೃಷ್ಣಮೂರ್ತಿ ಹೆಬ್ಬಾರ, ದತ್ತಗುರು ಕಂಠಿ, ಮೋಹನ ಭಟ್ಟ ಮತ್ತು ಶ್ರೀಮತಿಯರಾದ ಭಾಗೀರಥಿ ಹೆಗಡೆ, ಜಯಶ್ರೀ ನಾಯಕ ಮುಂತಾದ ಅನೇಕರಿಗೆ,

ಮಾಹಿತಿ ಪತ್ರಗಳನ್ನು ತುಂಬಿ ಕಳಿಸಿದ ಎಲ್ಲಾ ಗ್ರಂಥಕರ್ತರಿಗೆ, ಬೆರಳಚ್ಚುಗಾರ್ತಿ ರಂಜನಾ ಎಸ್.ಕಂಚಿ ಇವರಿಗೆ, ಮುಖಪುಟ ರಚನಾಕಾರ ಶ್ರೀ ಮೋನಪ್ಪ ಇವರಿಗೆ,

ಮುನ್ನುಡಿಯ ಕಲಶವಿಟ್ಟು ಶುಭ ಹಾರೈಸಿದ ಸಹೃದಯಿ ಡಾ.ಎನ್.ಆರ್. ನಾಯಕರಿಗೆ, ಕೃತಿ ಕುರಿತು ತಮ್ಮ ಅಭಿಪ್ರಾಯ/ಅನಿಸಿಕೆಗಳನ್ನು ನೀಡಿ ಪ್ರೋತ್ಸಾಹಿಸಿದ ಹಿರಿಯ ಸಾಹಿತಿಗಳಾದ ಡಾ. ಬಿ.ಎ. ಸನದಿ, ಕುಮಟಾ, ನಾ.ಸು. ಭರತನಹಳ್ಳಿ ಯಲ್ಲಾಪುರ, ಶಾಂತಾರಾಮ ನಾಯಕ ಅಂಕೋಲಾ, ರೋಹಿದಾಸ ನಾಯಕ ಕುಮಟಾ, ಡಾ.ಜಿ.ಎಂ. ಹೆಗಡೆ ಧಾರವಾಡ, ಶಾ.ಮಂ. ಕೃಷ್ಣರಾಯ ಬೆಂಗಳೂರು ಹಾಗೂ ಡಾ. ಜ್ಯೋತ್ಸ್ನಾ ಕಾಮತ ಬೆಂಗಳೂರು ಇವರಿಗೆ,

ಉತ್ತರ ಕನ್ನಡ ಜಿಲ್ಲೆಯ ಪತ್ರಿಕಾರಂಗದಲ್ಲಿ 1947ರಿಂದ ಸತತವಾಗಿ ಪ್ರಕಟಗೊಳ್ಳುತ್ತ ಬಂದಿರುವ 'ನಾಗರಿಕ ಪತ್ರಿಕೆ'ಗೆ ಕಳೆದ 30 ವರ್ಷಗಳಿಂದಲೂ ಸಂಪಾದಕ, ಪ್ರಕಾಶಕರಾಗಿ ಮುನ್ನಡೆಸುತ್ತಿರುವ ನೇರ ನಡೆನುಡಿಯ ದಿಟ್ಟ ಪತ್ರಕರ್ತ ಕೃಷ್ಣಮೂರ್ತಿ ಹೆಬ್ಬಾರ ಇವರ ನೇತೃತ್ವದ 'ಸರಸ್ವತಿ ಪ್ರಕಾಶನ'ಕ್ಕೆ,

ಸಕಾಲದಲ್ಲಿ ಅಚ್ಚುಕಟ್ಟಾಗಿ ಮುದ್ರಣ ಮಾಡಿಕೊಟ್ಟ ಬೆಂಗಳೂರಿನ 'ಸ್ಟ್ಯಾಂಡರ್ಡ್ ಪ್ರಿಂಟರ್ಸ್' ಇವರಿಗೆ,

ಕೃತಿ ಪ್ರಕಟಣೆಗೆ ಸಹಾಯಧನ ನೀಡಿ ಪ್ರೋತ್ಸಾಹಿಸಿದ ಸಹೃದಯೀ ಸಂಸ್ಥೆ ಮತ್ತು ಬಂಧುಗಳಿಗೆ ಹಾಗೂ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಲ್ಲಿ ಸಹಾಯ, ಸಹಕಾರ ನೀಡಿದ ಅನೇಕ ಹಿತೈಷಿಗಳಿಗೆ

ಸಾದರ ಸವಿನಯ ಹೃತ್ಪೂರ್ವಕ ಕೃತಜ್ಞತೆಗಳು.

ನಾರಾಯಣ ಶಾನಭಾಗ
(ಕೃಷ್ಣಜ ವಾಲಗಳ್ಳಿ)
ಸಾಹಿತಿ, ಸಾಹಿತ್ಯ ಸೇವಕ

ಮುನ್ನುಡಿ

‘ಉ.ಕ. ಜಿಲ್ಲಾ ಗ್ರಂಥಕಾರ ಕೃತಿಕೋಶ’ವನ್ನು ಸಂಪಾದನೆ ಮಾಡುವ ಕೆಲಸ, ಸ್ವಾನುಭವ ಕೇಂದ್ರಿತವಾದ ಕಾವ್ಯ, ಕಥೆ, ಕಾದಂಬರಿ ಬರೆದಂತಲ್ಲ. ಅದು ವ್ಯಕ್ತಿ ಅನುಭವ ದಾಖಲೆಯಲ್ಲದ ಪ್ರಯುಕ್ತ, ಈ ಕಾರ್ಯಕ್ಕೆ ತೊಡಗುವ ಸಂಪಾದನಕಾರ ಸಹೃದಯಿ ಓದುಗರ, ಪರಿಣತ ವಿಮರ್ಶಕರ ನೆರವಿಗಾಗಿ ಕೈಚಾಚಬೇಕಾಗುತ್ತದೆ. ಗ್ರಂಥಕಾರರ ವಂಶಜರ ನಿಕಟವರ್ತಿಗಳನ್ನು ಅಭಿಮಾನಿಗಳನ್ನು ಕೇಳಿ ವಿವರಗಳನ್ನು ಪಡೆಯಬೇಕಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಗ್ರಂಥಕಾರರು ಸ್ವವಿವರಗಳನ್ನು ಹೇಳಿಕೊಳ್ಳಲು ನಾಚಿಕೆಪಟ್ಟೊ, ತಾವು ಪ್ರಚಾರಪ್ರಿಯರಲ್ಲವೆಂದು ತೋರಿಸಿಕೊಳ್ಳಲೊ ಸಂಪಾದಕರಿಗೆ ಬೇಕಾದ ಅವಶ್ಯಕ ಮಾಹಿತಿಗಳನ್ನು ನೀಡುವಲ್ಲಿ ಹೆಚ್ಚಿನ ಆಸಕ್ತಿ ತೋರುವುದಿಲ್ಲ. ಕೆಲವರು ಸ್ವವಿವರಗಳನ್ನು ನೀಡಲು ಆಸಕ್ತರಾದಂತೆ ಇನ್ನೊಬ್ಬರ ವಿವರ ನೀಡಲು ನಿರಾಸಕ್ತರಾಗುತ್ತಾರೆ. ಕೆಲವರು ಅವಸರದಿಂದಲೋ ಅವಜ್ಞೆಯಿಂದಲೋ ತಪ್ಪು ಮಾಹಿತಿ ನೀಡುವುದೂ ಉಂಟು. ಹೀಗಾದಲ್ಲಿ ಸಂಪಾದನಾ ಕಾರ್ಯ ತನ್ನ ಸಮಗ್ರತೆಯನ್ನು ಕಳೆದುಕೊಂಡೊ, ತಪ್ಪು ಮಾಹಿತಿ ತುಂಬಿಕೊಂಡೊ ಸೊರಗಬೇಕಾಗುತ್ತದೆ. ಅದಕ್ಕಾಗಿ ಸಂಪಾದನಾಕಾರ ತುಂಬಾ ಎಚ್ಚರವಹಿಸಬೇಕಾಗುತ್ತದೆ. ಸಂಪಾದನಾಕಾರ್ಯ ಏಕವ್ಯಕ್ತಿ ಕೇಂದ್ರಿತವಾದ ಕೆಲಸವಲ್ಲ. ಅದು ಸಮೂಹ ಸಹಕಾರವನ್ನು ಬೇಡುತ್ತದೆ. ಸಮೂಹ ಸಹಕಾರ ಉತ್ತಮವಾದಷ್ಟೂ ಸಂಪಾದನಾ ಕಾರ್ಯ ಮಜಭೂತಾಗುತ್ತದೆ.

ಶ್ರೀ ನಾರಾಯಣ ಶಾನಭಾಗರು ಹವ್ಯಕ ಅಧ್ಯಯನ ಕೇಂದ್ರದ ಸ್ಥಾಪಕ ಪ್ರಧಾನ ನಿರ್ದೇಶಕ ಹುದ್ದೆಯಲ್ಲಿ ಹತ್ತು ವರ್ಷ ಪರ್ಯಂತವಿದ್ದು, ಆ ಹುದ್ದೆಗೊಂದು ವಜನು ತಂದುಕೊಟ್ಟವರು. ತಮ್ಮ ಸಾರ್ಥಕ ಕಾರ್ಯ ನಿರ್ವಹಣೆಯಿಂದ ಸಮಾಜದ ಗಮನ ಸೆಳೆದ ಅಧ್ಯಯನಾಸಕ್ತರು ಮತ್ತು ಅಧ್ಯಯನ ಶಿಸ್ತುಳ್ಳವರು, ಹಿಡಿದ ಕೆಲಸವನ್ನು ಪಟ್ಟು ಬಿಡದೆ ಮುಗಿಸುವ ಛಲಗಾರರು. ವರ್ತಮಾನದಲ್ಲಿ ಅವರು ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ ಕೃತಿಕೋಶದ ಸುಂದರ ಕನಸು ಕಂಡವರು. ಕಂಡ ಕನಸು ಈಗ ನನಸಾಗಿ ಸಾಕಾರಗೊಳಿಸಿ ಸುಂದರ ಚೌಕಟ್ಟಿನಲ್ಲಳವಡಿಸಿ ಕನ್ನಡ ಸುಮನಸುಗಳ ಮುಂದಿಡುವ ಸ್ತುತ್ಯಕಾರ್ಯ ಮಾಡುತ್ತಿದ್ದಾರೆ.

ಅಧ್ಯಯನ ಶಿಸ್ತುಳ್ಳ ಶಾನಭಾಗರು ಈ ಹಿಂದೆಯೇ ಹವ್ಯಕ ಸಮುದಾಯದ 2010ರ ಕಾಲಾವಧಿಯ ಒಳಗಿನ ‘ಹವ್ಯಕ ಗ್ರಂಥಕಾರ ಕೃತಿ ದರ್ಪಣ’ವನ್ನು 2011ರಲ್ಲಿ ನೀಡಿ ಸಮಾಜ ಬಾಂಧವರ ಶ್ಲಾಘನೆಗೆ ಭಾಜನರಾದವರು. ‘ಹವ್ಯಕ ಗ್ರಂಥಕಾರ ಕೃತಿ ದರ್ಪಣ’ದಲ್ಲಿ ಸುಮಾರು 1290 ಹವ್ಯಕ ಗ್ರಂಥಕಾರರ ಸುಮಾರು 6800 ಕೃತಿಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ದಾಖಲಿಸಲಾಗಿದೆ. ಶಾನಭಾಗರು ಈ ಗ್ರಂಥ ರಚನೆಯಲ್ಲಿ, ಅವರೇ ಈ ಮೊದಲು ರಚಿಸಿ, ಪ್ರಕಟಿಸಲಾದ ಕೀರ್ತಿಶೇಷ ಹವ್ಯಕ ಗ್ರಂಥಕಾರರ ಸೂಚಿ (2005) ಹವ್ಯಕ ಮಹಿಳಾ ಸಾಹಿತ್ಯ ದರ್ಶಿನಿ (2007) ಹವ್ಯಕ ರಚಿತ ಕಥೆ, ನಾಟಕ ಮತ್ತು ಮಕ್ಕಳ ಸಾಹಿತ್ಯ ಕೈಪಿಡಿ (2007) ಹವ್ಯಕ ಯಕ್ಷಗಾನ ಕವಿ ಕಾವ್ಯ ಸೂಚಿ (2008) ಈ ಮುಂತಾದ ಆಕರ ಮೂಲಗಳನ್ನು ಪರಿಶೀಲಿಸಿ ಅವುಗಳಲ್ಲಿಯ ಗುಣದೋಷಗಳನ್ನು ಸಾಕ್ಷಿ ಪ್ರಜ್ಞೆಯಿಂದ ಪರಿಶೀಲಿಸಿ ‘ಹವ್ಯಕ ಗ್ರಂಥಕಾರ ಕೃತಿ ದರ್ಪಣ’ವನ್ನು ನಿಖರ ಮಾಹಿತಿಯೊಡನೆ ವ್ಯವಸ್ಥಿತವಾಗಿ 2011ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಗೆ ಹಾಗೂ ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ ಕೃತಿಕೋಶಕ್ಕೆ ನೈಜ ಸ್ಫೂರ್ತಿ ನೀಡಿದ್ದು ದಿ.ಎನ್.ಕೆ. ಹೆಗಡೆಯವರ ‘ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರರು.’ ಎಂದು ಅವರೇ ದಾಖಲಿಸಿದ್ದಾರೆ.

ದಿ.ಎನ್.ಕೆ. ಹೆಗಡೆಯವರು 1969ರಲ್ಲಿ ಶ್ರಮಪಟ್ಟು ಉತ್ತರ ಕನ್ನಡ ಜಿಲ್ಲೆಯ ಎಲ್ಲ ಸಮುದಾಯದ ಸು. 200 ಗ್ರಂಥಕರ್ತರ ಮಾಹಿತಿಯನ್ನು 550 ಪುಟ ಪರಿಮಿತಿಯಲ್ಲಿ ವಿಸ್ತೃತವಾಗಿಯೇ ನೀಡಿದ್ದರು. ಆದರೆ ಆ ಕಾಲ ಗತಿಸಿ ಇಂದಿಗೆ 46 ವರ್ಷ ಗತಿಸಿದೆ. ಈ ಸುದೀರ್ಘ ಕಾಲಘಟ್ಟದಲ್ಲಿ ಉತ್ತರ ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಸಾಕಷ್ಟು ನೀರು ಹರಿದಿದೆ. ನೂರಾರು ಗ್ರಂಥಕಾರರು ಈ ಅವಧಿಯಲ್ಲಿ ಸಾವಿರಾರು ಗ್ರಂಥ ರಚನೆ ಮಾಡಿ ಜಿಲ್ಲೆಯ ಸಾಹಿತ್ಯ ಸಮೃದ್ಧಿಗೆ ಕಾರಣರಾಗಿದ್ದಾರೆ. ಇವರೆಲ್ಲರ ದಾಖಲೀಕರಣ ಮಾಡಿ, ಒಂದೆಡೆ ಕಟ್ಟಿಕೊಡುವ ಕಾರ್ಯ ತುರ್ತಾಗಿ ಆಗಬೇಕಿತ್ತು. ಈ ದಿಶೆಯಲ್ಲಿ ಕೆಲವರು ಜಾತಿ ಹಾಗೂ ಪ್ರಾದೇಶಿಕ ನೆಲೆಯಲ್ಲಿ ಆಂಶಿಕವಾಗಿ ಪ್ರಯತ್ನಿಸಿದರೂ, ಇಡೀ ಜಿಲ್ಲೆಯ ಎಲ್ಲ ಸಮುದಾಯದ ಗ್ರಂಥಕಾರರ ಸಮಗ್ರ ದಾಖಲೀಕರಣವಾಗಿರಲಿಲ್ಲ. ತುರ್ತಾಗಿ ಆಗಲೇಬೇಕಾಗಿದ್ದ ಈ ದಾಖಲೀಕರಣ ಕೊರತೆಯನ್ನು ಶ್ರೀ ನಾರಾಯಣ ಶಾನಭಾಗರು ವಿವಿಧ ಆಕರ ಮೂಲಗಳನ್ನು ಪರಿಶೋಧಿಸಿ ಅವುಗಳ ನೆರವಿನಿಂದ ತುಂಬಲು ಪಟ್ಟು ಹಿಡಿದು ಪ್ರಯತ್ನಿಸಿ, ಅದರಲ್ಲಿ ಯಶಸ್ಸನ್ನು ಕೂಡ ಪಡೆದಿದ್ದಾರೆ. ಇದರಿಂದಾಗಿ ಉತ್ತರ ಕನ್ನಡ ಜಿಲ್ಲೆಯ ಎಲ್ಲ ಕೃತಿಕಾರರ ಹಾಗೂ ಅವರ ಕೃತಿ ವಿವರಗಳನ್ನೊಳಗೊಂಡ ಆಕರ ಗ್ರಂಥವೊಂದು ಇಂದಿನ ಹಾಗೂ ಮುಂದಿನ ತಲೆಮಾರುಗಳಿಗೆ ಲಭ್ಯವಾದಂತಾಗಿದೆ. ಇಂಥ ಸಾಹಸಯುಕ್ತ ಕೆಲಸವನ್ನು ಪೂರೈಸಿದ ಶ್ರೀ ನಾರಾಯಣ ಶಾನಭಾಗರು ಸ್ತುತ್ಯಾರ್ಹರು.

ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ ಕೃತಿಕೋಶವು, ಗ್ರಂಥಕಾರರು ರಚಿಸಿದ ಸಾಹಿತ್ಯಕ ಕೃತಿಗಳಿಗೆ ಮಾತ್ರ ಸೀಮಿತವಾಗಿರದೆ, ಇತಿಹಾಸ, ಪುರಾಣ ತತ್ತ್ವಜ್ಞಾನ, ವಿಜ್ಞಾನ ಜ್ಯೋತಿಷ್ಯ, ವೈದ್ಯ, ಪಂಚಾಂಗ, ನಿಘಂಟು, ಪ್ರಕೃತಿ ಪರಿಸರ ಹೀಗೆ ಹಲವು ಶಾಸ್ತ್ರ ಹಾಗೂ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ವಿಷಯವನ್ನೊಳಗೊಂಡ ಎಲ್ಲ ಗ್ರಂಥಗಳ ವಿವರಗಳನ್ನೊಳಗೊಂಡಿದೆ. ಜೊತೆಗೆ ಗ್ರಂಥಕರ್ತರ ಜನ್ಮಸ್ಥಳ, ಬದುಕಿದ ಕಾಲಮಾನ, ಗ್ರಂಥಕರ್ತರಿಗೆ ಸಂದ ಗೌರವ, ಪ್ರಶಸ್ತಿ, ಅವರು ಸಾಮಾಜಿಕ ಶೈಕ್ಷಣಿಕ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಘಟನೆಗಳಲ್ಲಿ ಅಲಂಕರಿಸಿದ ಸ್ಥಾನಮಾನಗಳು, ಕಟ್ಟಿದ ಸಂಘ ಸಂಸ್ಥೆಗಳು ಹೀಗೆ ಗ್ರಂಥಕಾರರ ಸಾಧನಾ ಪಥದ ಹೆಜ್ಜೆ ಗುರುತುಗಳನ್ನು ಇಲ್ಲಿ ನೀಡಲಾಗಿದೆ.

ಅರಿಕೆಯಲ್ಲಿ ಸಂಪಾದನಾಕಾರರು ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ ಕೃತಿಕೋಶ ಸಿದ್ಧಪಡಿಸುವಲ್ಲಿ ತಾವು ಪಟ್ಟ ಪರಿಶ್ರಮ, ಎದುರಿಸಿದ ಸಮಸ್ಯೆಗಳ ಇತಿಹಾಸ ದಾಖಲಿಸಿ, ಸಂಪಾದನಾಕಾರ್ಯವೆಷ್ಟು ಶ್ರಮದಾಯಕ ಹಾಗೂ ತೊಡಕಿನದು ಎನ್ನುವ ಅರಿವನ್ನು ಯುವ ಪೀಳಿಗೆಗೆ ಮುಟ್ಟಿಸುತ್ತಾರೆ. ಸಂಪಾದನಾಕಾರ ಯಾವುದೇ ಬಗೆಯ ವಿಭಜನಾಕ್ರಮವನ್ನು ಅನುಸರಿಸಿದರೂ ಎಲ್ಲರಿಗೂ ತೃಪ್ತಿಯಾಗುವ ಪರಿಪೂರ್ಣತೆಯ ಸೀಮಾರೇಖೆಯನ್ನು ಮುಟ್ಟುವುದು ಕಷ್ಟಸಾಧ್ಯ. ಯಾರು ಒಪ್ಪಲಿ ಇಲ್ಲವೆ ಬಿಡಲಿ ಅಭ್ಯಾಸದ ಅನುಕೂಲಕ್ಕಾಗಿ ಯಾವುದೋ ಒಂದು ಬಗೆಯ ವಿಭಜನಾಕ್ರಮವನ್ನು ಅನುಸರಿಸಬೇಕಾಗುತ್ತದೆ. ನಾರಾಯಣ ಶಾನಭಾಗರು ಆ ಕ್ರಮವನ್ನನುಸರಿಸಿಯೇ ಹೆಜ್ಜೆಯಿಟ್ಟಿದ್ದಾರೆ. ಒಪ್ಪುವುದು ಬಿಡುವುದು ಅವರವರ ಸ್ವಂತಿಕೆಗೆ ಬಿಟ್ಟ ವಿಷಯ.

ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರ ಕೃತಿಕೋಶವನ್ನು ಸಂಪಾದಕ ನಾರಾಯಣ ಶಾನಭಾಗ ಅವರು ಆಯ್ದು ಅಧ್ಯಾಯಗಳಲ್ಲಿ ವಿಭಜಿಸಿಕೊಂಡಿದ್ದಾರೆ. ಮೊದಲನೆಯ ಅಧ್ಯಾಯ ಪ್ರಸ್ತಾವನೆಯಲ್ಲಿ ದಿ. ಎನ್.ಕೆ. ಹೆಗಡೆಯವರು 1969ರಲ್ಲಿ ಪ್ರಕಟಿಸಿದ 'ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರರು' ಕೃತಿಯೇ ಕರ್ನಾಟಕದಲ್ಲಿ ಜಿಲ್ಲಾವಾರು ಬಂದ ಗ್ರಂಥಕಾರರ ಪ್ರಥಮಕೋಶವೆಂದು ಅಭಿಮಾನದಿಂದ ಹೇಳಿ, ಆ ಗ್ರಂಥದ ಚಾರಿತ್ರಿಕ ಮಹತ್ವವನ್ನು ಎತ್ತಿ

ಹಿಡಿಯುತ್ತಾರೆ. ಕರ್ನಾಟಕದಲ್ಲಿ ಇನ್ನೂವರೆಗೂ, ನಾಡಿನ ಗ್ರಂಥಕಾರರ ಕೃತಿಕೋಶ ಬಾರದಿರುವ ಬಗ್ಗೆ ಅಲವತ್ತುಕೊಂಡು ಅಂಥ ಕೋಶವೊಂದರ ರಚನೆಗೆ ಆಗ್ರಹಿಸುತ್ತಾರೆ. ಶತಮಾನೋತ್ಸವವನ್ನು ಆಚರಿಸುತ್ತಿರುವ ನಾಡಿನ ಪ್ರತಿಷ್ಟಿತ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಇಂಥ ಸಾಹಸಪೂರ್ಣ ರಚನಾತ್ಮಕ ಕಾರ್ಯ ಪ್ರವೃತ್ತವಾಗಲು ಸೂಕ್ತ ಸಲಹೆಯನ್ನೂ ಮಾಡುತ್ತಾರೆ. ತಾವು ಪ್ರಸ್ತುತಪಡಿಸುವ ಉತ್ತರ ಕನ್ನಡ ಗ್ರಂಥಕಾರರ ಕೃತಿಕೋಶದಲ್ಲಿ ಅಳವಡಿಸಿದ ಗ್ರಂಥಕರ್ತರ ಆಯ್ಕೆಯಲ್ಲಿ ಅನುಸರಿಸಿದ ಮಾನದಂಡ ಯಾವುದೆನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ಎರಡನೆಯ ಅಧ್ಯಾಯದಲ್ಲಿ ಸಾಹಿತ್ಯ ರಚನೆಯ ಕಾಲಘಟ್ಟವನ್ನು ಪ್ರಸ್ತಾಪ ಮಾಡಿ, 1900ರ ಪೂರ್ವದ ಗ್ರಂಥಕಾರರನ್ನು ಪ್ರಾಚೀನರೆಂದು ಕರೆದು ಅಂಥ 57 ಗ್ರಂಥಕಾರರನ್ನು ಗುರುತಿಸುತ್ತಾರೆ; ಇವರಲ್ಲಿ ಕೇವಲ ಇಬ್ಬರು ಮಾತ್ರ ಗ್ರಂಥಕರ್ತೆಯರು. ಅನಂತರ ಅವಶ್ಯಕ ಮಾಹಿತಿ ದೊರಕದ 10 ಗ್ರಂಥಕಾರರನ್ನು ದಾಖಲಿಸುತ್ತಾರೆ. ಮೂರನೆಯ ಅಧ್ಯಾಯದಲ್ಲಿ 1900 ರಿಂದ 2015ರ ಕಾಲಖಂಡದಲ್ಲಿ ಬರುವ 363 ಕೀರ್ತಿಶೇಷ ಗ್ರಂಥಕರ್ತರ ವಿವರಗಳಲ್ಲಿ 22 ಮಂದಿ ಗ್ರಂಥಕರ್ತೆಯರಿದ್ದಾರೆ. ನಾಲ್ಕನೆಯ ಅಧ್ಯಾಯದಲ್ಲಿ ಆಧುನಿಕ ಕಾಲದಲ್ಲಿ ಸದ್ಯ ಜೀವಿಸುತ್ತಿರುವ 622 ಗ್ರಂಥಕರ್ತರು ಹಾಗೂ 172 ಗ್ರಂಥಕರ್ತೆಯರಿದ್ದಾರೆ. ಒಟ್ಟಾರೆ ಪ್ರಾರಂಭದಿಂದ 2015ನೇ ಇಸ್ವಿಯ ಕೊನೆಯ ತನಕದ ಅವಧಿಯ 1283 ಗ್ರಂಥಕರ್ತರು ಮತ್ತು ಅವರ 7352 ಕೃತಿಗಳನ್ನು ದಾಖಲಿಸಿ ಉತ್ತರ ಕನ್ನಡ ಜಿಲ್ಲೆ ಸಾಹಿತ್ಯ ಸಂಪತ್ತನ್ನು ಪರಿಚಯಿಸಿದ್ದಾರೆ. 'ಗ್ರಂಥಕಾರ ಕೃತಿಕೋಶ'ದ ಕೊನೆಯಲ್ಲಿ ಎಂಟು ಅನುಬಂಧಗಳಿವೆ. ಅಲ್ಲಿ ಆಗಂತುಕ ಪರಸ್ಥಳೀಯ ಗ್ರಂಥಕಾರರನ್ನು, ಅವಶ್ಯಕ ಮಾಹಿತಿ ಲಭ್ಯವಾಗದ ಗ್ರಂಥಕಾರರನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಉತ್ತರ ಕನ್ನಡ ಜಿಲ್ಲಾ ಘಟಕ ಹಾಗೂ ತಾಲೂಕಾ ಘಟಕಗಳನ್ನು, ಜಿಲ್ಲೆಯಲ್ಲಿ ಇದುವರೆಗೆ ನಡೆದ ಸಾಹಿತ್ಯ ಸಮ್ಮೇಳನಗಳನ್ನು, ಅಸ್ತಿತ್ವ ಪಡೆದ ಕರ್ನಾಟಕ ಸಂಘಗಳನ್ನು, ಜಿಲ್ಲೆಯಲ್ಲಿಯ ಚುಟುಕು ಸಾಹಿತ್ಯ ಮತ್ತು ಕೊಂಕಣಿ ಸಾಹಿತ್ಯ ಚಟುವಟಿಕೆಗಳನ್ನು ಹಾಗೂ ಇನ್ನಿತರ ಕೆಲವು ಮಾಹಿತಿಗಳನ್ನು ದಾಖಲಿಸಿ 'ಉ.ಕ. ಜಿಲ್ಲೆಯ ಗ್ರಂಥಕಾರ ಕೃತಿಕೋಶ'ವನ್ನು ಸಂಪನ್ನವಾಗಿಸುತ್ತಾರೆ.

ಒಟ್ಟಿನಲ್ಲಿ ಶ್ರೀ ನಾರಾಯಣ ಶಾನಭಾಗರು ಕನ್ನಡಿಗರಿಗೆ ಅದರಲ್ಲೂ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯ ಅಧ್ಯಯನಾಸಕ್ತರಿಗೆ ಅತ್ಯುಪಯುಕ್ತವಾದ ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ ಕೃತಿಕೋಶವೊಂದನ್ನು ಒದಗಿಸಿದ್ದಾರೆ. ಈ ಕೋಶ ಸಿದ್ಧಪಡಿಸುವಿಕೆಗೆ ಅವರು ಈ ಹಿಂದೆ ರಚಿಸಿದ ಹವ್ಯಕ ಗ್ರಂಥಕಾರ ಕೃತಿ ದರ್ಪಣ ಅನುಭವ ದ್ರವ್ಯವೂ ಸಾಕಷ್ಟು ನೆರವು ನೀಡಿದೆ. ಕನ್ನಡ ಸಹೃದಯ ಓದುಗರು ಶಾನಭಾಗರ ಈ ಅಮೂಲ್ಯ ಗ್ರಂಥವನ್ನು ತೆರೆದ ಹೃದಯದಿಂದ ಸ್ವಾಗತಿಸುವರೆಂದು ಭಾವಿಸುತ್ತೇನೆ. ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ ಕೃತಿಕೋಶ ಸಿದ್ಧಪಡಿಸಿ, ಗ್ರಂಥಾಧ್ಯಯನಾಸಕ್ತ ಉತ್ತರ ಕನ್ನಡ ಸುಮನಸ್ಸುಗಳ ವರ್ತಮಾನದ ತುರ್ತನ್ನು ಪೂರೈಸಿದ್ದಕ್ಕಾಗಿ ಶ್ರೀ ನಾರಾಯಣ ಶಾನಭಾಗರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಡಾ. ಎನ್.ಆರ್. ನಾಯಕ
ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ

ಹೊನ್ನಾವರ

ಒಂಟಿಗೈ ಸಾಹಸಕ್ಕಾಗಿ ಧನ್ಯವಾದಗಳು

"ಆಧುನಿಕ ಕನ್ನಡ ಸಾಹಿತ್ಯದ ಯಾವುದೇ ಒಂದು ಜಿಲ್ಲೆಯ ಲೇಖಕರ ಸಾಧನೆಗಳ ಪರಿಚಯ ಮಾಡಿಕೊಡುವವರಿಗೆ ಎದುರಾಗುವ ಆರಂಭದ ತೊಡಕೇ ನಮ್ಮ ಜಿಲ್ಲೆಗೂ ಇದೆ. ಉತ್ತರ ಕನ್ನಡ ಜಿಲ್ಲೆಗೇ ಸೀಮಿತವಾಗಿ, ಒಂದು ಅಧ್ಯಯನಯೋಗ್ಯವಾದ 'ಜಿಲ್ಲಾ ಕನ್ನಡ ಸಾಹಿತ್ಯ ಚರಿತ್ರೆ'ಯ ಅಗತ್ಯ ಇದೆ" ಎಂದು ಭಟ್ಕಳದಲ್ಲಿ 2007ರ ಮೇ ತಿಂಗಳಲ್ಲಿ ಸೇರಿದ ಉ.ಕ. ಜಿಲ್ಲಾ 13ನೆಯ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಈ ಜಿಲ್ಲೆಯ ಹಿರಿಯ ಕವಿ-ಪ್ರಕಾಶಕ-ಶಿಕ್ಷಣತಜ್ಞ-ಪತ್ರಿಕೋದ್ಯಮಿ ಶ್ರೀ ವಿಷ್ಣು ನಾಯ್ಕ ಅವರು ತುಂಬ ಕಳಕಳಿಯಿಂದ ಹೇಳಿದ್ದಲ್ಲದೆ, ಈ ಹಿಂದೆ 1969ರಲ್ಲಿ ಇಂಥದೊಂದು ಪ್ರಯತ್ನ ನಡೆದುದನ್ನೂ ಎತ್ತಿ ತೋರಿಸಿ, 21ನೆಯ ಶತಮಾನದ ಹೊಸ ಬೆಳೆಯನ್ನೂ ದಾಖಲಿಸುವಂಥ ಸಮಗ್ರ ಸಾಹಿತ್ಯ ಚರಿತ್ರೆಯೊಂದು ರೂಪುಗೊಳ್ಳಬೇಕೆಂದು ಹಾರೈಸಿದ್ದು ತುಂಬ ಮನನೀಯ ಮಾತೆಂದು ನನಗೆನಿಸಿತ್ತು. ಅದೊಂದು ಸರ್ವಗ್ರಾಹ್ಯ ಮಾತೇ ಹೌದು. ಅಂಥ ಚರಿತ್ರೆಯಲ್ಲಿ ಕಾಣಿಸಿಕೊಳ್ಳಬೇಕಾದ ಮೂರು ಬಗೆಯ ಲೇಖಕರ ಬಗೆಗೂ ಅವರು ಸೂಕ್ಷ್ಮ ಸೂಚನೆಯನ್ನೂ ಮಾಡಿದ್ದರು. ಈಗ, ಕುಮಟಾ ಪಟ್ಟಣದ ಪಕ್ಕದ ವಾಲಗಳ್ಳಿಯಲ್ಲಿ ಹುಟ್ಟಿ ಬೆಳೆದು, ವೃತ್ತಿಯಿಂದ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿ ಬೆಂಗಳೂರಿನಲ್ಲೇ ಮನೆ ಮಾಡಿಕೊಂಡಿರುವ ಶ್ರೀ ನಾರಾಯಣ ಶಾನಭಾಗ ಅವರು ಉತ್ತರ ಕನ್ನಡ ಜಿಲ್ಲೆಯ 'ಸಮಗ್ರ ಸಾಹಿತ್ಯ ಚರಿತ್ರೆ' ಎಂದು ಹೇಳಲಾಗದಿದ್ದರೂ, 9ನೆಯ ಶತಮಾನದಿಂದ ಮೊದಲ್ಗೊಂಡು ಇಲ್ಲಿಯವರೆಗಿನ ಕನ್ನಡ, ಸಂಸ್ಕೃತ, ಮರಾಠಿ, ಕೊಂಕಣಿ ಭಾಷೆಗಳ ಸಮಸ್ತ ಕವಿ-ಲೇಖಕರ ಚರಿತ್ರೆಗೆ ಅಗತ್ಯವಿರುವ ಮಹತ್ವದ ವಿವರಗಳನ್ನೆಲ್ಲ ಸಂಕಲಿಸಿ ಗ್ರಂಥರೂಪದಲ್ಲಿ ಪ್ರಕಟಿಸುವ ಒಂಟಿಗೈ ಸಾಹಸಕ್ಕೆ ಇಳಿದ ಸಂಗತಿ ಆಶ್ಚರ್ಯಜನಕವೂ ಅಭಿಮಾನಾಸ್ಪದವೂ ಆಗಿದೆ! 2003-2013ರ ಅವಧಿಯಲ್ಲಿ ಅವರು ಬೆಂಗಳೂರಿನ ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರದ ಪ್ರಧಾನ ನಿರ್ದೇಶಕರಾಗಿದ್ದ ಅವಧಿಯಲ್ಲಿ ಸಮರ್ಥರಿಂದ ಬರೆಯಿಸಲ್ಪಟ್ಟ 22 ಪುಸ್ತಕಗಳು ಪ್ರಕಟಗೊಂಡಿವೆ. ಅದರಲ್ಲಿ ಅವರೇ ರಚಿಸಿದ 512 ಪುಟಗಳ ಹವ್ಯಕ ಗ್ರಂಥಕಾರ ಕೃತಿದರ್ಪಣದಲ್ಲಿ ಪ್ರಾರಂಭದಿಂದ 2010ರ ಅವಧಿಯ ಸುದೀರ್ಘ ಕಾಲಾವಧಿಯಲ್ಲಿ ಸಮಗ್ರ ಹವ್ಯಕ ಸಮಾಜದ ಸು.1290 ಗ್ರಂಥಕಾರರ ಸು. 6800 ಕೃತಿಗಳ ವ್ಯವಸ್ಥಿತ ದಾಖಲೆ ಇದೆ. ಹವ್ಯಕ ಸಮಾಜಕ್ಕೆ ಸಂಬಂಧಿಸಿದಂತೆ ಇಂತಹ ಮಹತ್ವದ ಗ್ರಂಥವನ್ನು ಪ್ರಕಟಿಸಿದ ಅನುಭವದ ಹಿನ್ನೆಲೆಯಲ್ಲಿ ಅವರು ಈ ಸಾಹಸಕ್ಕೆ ಕೈ ಹಾಕಿದ್ದೊಂದು ವಿಶೇಷ ಸಂಗತಿಯೇ. 1969ರಲ್ಲಿ ಪ್ರಕಟವಾದ ಉತ್ತರ ಕನ್ನಡ ಜಿಲ್ಲೆಯ ಗ್ರಂಥಸೂಚಿಯೇ ತಮಗೆ ಸ್ಫೂರ್ತಿ ನೀಡಿದ್ದೆಂದು ಶ್ರೀ ಶಾನಭಾಗ ಅವರು ತಮ್ಮ 'ಗ್ರಂಥಕರ್ತನ ಅರಿಕೆ'ಯಲ್ಲಿ ಹೇಳಿಕೊಂಡದ್ದೂ ಮಹತ್ವದ ಸಂಗತಿಯೇ ಹೌದು.

ಶ್ರೀ ನಾರಾಯಣ ಶಾನಭಾಗ ಅವರು ತಮ್ಮ ಕೃತಿಸೂಚಿಯಲ್ಲಿ ಸೇರಿಸಿದ ಕವಿ-ಕವಯಿತ್ರಿ-ಲೇಖಕರ ವಿಂಗಡನೆಯೂ ಕುತೂಹಲಕಾರಿಯಾಗಿದ್ದು, ಆಯಾ ಕವಿ-ಲೇಖಕರ ಬಗೆಗೆ ಹೆಚ್ಚಿನ ಅಧ್ಯಯನ/ಸಂಶೋಧನೆ ಕೈಕೊಳ್ಳುವವರಿಗೆ ತುಂಬಾ ಅನುಕೂಲಕರವೂ ಆಗಿದೆ. ನಮಗೆ ಮೊದಲೇ ತಿಳಿದಿರುವ ಮೂರು ಪ್ರಮುಖ ಬಗೆಗಳ ಹೊರತಾಗಿ, ಹೊರಜಿಲ್ಲೆಗಳಿಂದ ಈ ಜಿಲ್ಲೆಗೆ ದತ್ತು ಬಂದ ಬರಹಗಾರರನ್ನೂ, ಮಹಿಳೆಯರಲ್ಲಿ

ಮದುವೆಯಾಗಿ ಈ ಜಿಲ್ಲೆಗೆ ಬಂದವರನ್ನೂ ಈ ಜಿಲ್ಲೆಯವರೆಂದೇ ಪರಿಗಣಿಸಿರುವದು ಮತ್ತು ಕಾರಣಾಂತರಗಳಿಂದಾಗಿ ಪರಜಿಲ್ಲೆಗಳಿಂದ ಈ ಜಿಲ್ಲೆಗೆ ಬಂದು ಸಾಹಿತ್ಯ ಕೃಷಿಗೈದವರನ್ನು ಆಗಂತುಕ ಗ್ರಂಥಕಾರರೆಂದು ಪರಿಗಣಿಸಿರುವದು ಸೂಕ್ತವೇ ಆಗಿದೆ. ಅಭ್ಯಾಸಾನುಕೂಲತೆಗಾಗಿ ಮಾಡಿಕೊಂಡ ಈ ವರ್ಗೀಕರಣದ ಮಾತು ಹಾಗಿರಲಿ, ಪ್ರಾಚೀನ ಕಾಲದಿಂದ ಈ ಶತಮಾನದವರೆಗಿನ ವಿವಿಧ ಕಾಲಖಂಡಗಳಿಗೆ ಸಂಬಂಧಿಸಿದಂತೆ, ಹಿರಿಕಿರಿಯ ಬರಹಗಾರರ ಕೌಟುಂಬಿಕ ವಿವರ, ಸಾಹಿತ್ಯಸಾಧನೆ, ಅವರ ಗ್ರಂಥಗಳು ಪ್ರಕಟವಾದ ವರ್ಷ, ಪುಟಸಂಖ್ಯೆ, ದೊರೆತ ಪ್ರಶಸ್ತಿ-ಪುರಸ್ಕಾರ, ಇತ್ಯಾದಿ ಇತ್ಯಾದಿ ವಿವರಗಳನ್ನು ಸಂಕಲನ ಮಾಡಿ ಬಲು ತಾಳ್ಮೆಯಿಂದ ಆ ಎಲ್ಲ ವಿವರಗಳನ್ನೂ ಸುಲಭಗ್ರಾಹ್ಯವಾಗುವಂತೆ ಜೋಡಿಸಿ ಕೊಟ್ಟದ್ದು ಬಹಳೇ ಉಪಯುಕ್ತ ಕೆಲಸ ಮಾಡಿದಂತಾಗಿದೆ. ಅಷ್ಟೇ ಅಲ್ಲ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಪ್ರವೃತ್ತವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಘಟಕಗಳ ಸಂಕ್ಷಿಪ್ತ ಮಾಹಿತಿಯನ್ನೂ ಇಲ್ಲಿ ದಾಖಲಿಸಿದ್ದಾರೆ. ಹೀಗೆ, ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಮೃದ್ಧಿಗೆ ಈ ಎಲ್ಲ ಸೃಜನಶೀಲ ಮನಸ್ಸುಗಳು ಸಾಂಸ್ಥಿಕವಾಗಿ ಹಾಗೂ ವೈಯಕ್ತಿಕವಾಗಿ ನೀಡಿರುವ/ನೀಡುತ್ತಿರುವ ಅಪಾರ ಕಾಣಿಕೆಯ ಕೈಗನ್ನಡಿಯೊಂದನ್ನು ಒದಗಿಸಿದ ಶ್ರೀ ನಾರಾಯಣ ಶಾನಭಾಗ ಅವರಿಗೆ ನನ್ನ ಹಾರ್ದಿಕ ಧನ್ಯವಾದಗಳು.

ಡಾ. ಬಿ.ಎ. ಸನದಿ
ಕುಮಟಾ

ಗ್ರಂಥಕೋಶ ಸಾಹಿತ್ಯ ಚರಿತ್ರೆ ನಂಟು ಭಾರತೀಯ ಭಾಷೆಗಳಲ್ಲಿ ಸಂಸ್ಕೃತ ಮತ್ತು ತಮಿಳಿನ ನಂತರ ಕನ್ನಡವೇ ಅತ್ಯಂತ ಪ್ರಾಚೀನ ಮತ್ತು ಸಾಹಿತ್ಯ ಸಮೃದ್ಧ ಭಾಷೆ. ಒಂದು ಸಾವಿರ ವರ್ಷಕ್ಕಿಂತಲೂ ಹೆಚ್ಚಿನ ಇತಿಹಾಸವುಳ್ಳದ್ದು. ಯಾವುದೇ ದೇಶದ ಅಂತರಾತ್ಮ ವಿಶೇಷವಾಗಿ ಅಭಿವ್ಯಕ್ತವಾಗುವುದು ಅಲ್ಲಿನ ಸಾಹಿತ್ಯದಿಂದ. ಯಾವುದೇ ಭಾಷೆಯ ಸಾಹಿತ್ಯ ಚರಿತ್ರೆಗೆ ಆಧಾರವೇ ಆ ಭಾಷೆಯಲ್ಲಿ ಕಾಲ-ಕಾಲಕ್ಕೆ ರಚನೆಯಾದ ಗ್ರಂಥಗಳು. ಇಂಥ ಒಂದು ಗ್ರಂಥ ಸಮುದಾಯದ ಚರಿತ್ರೆಯ ಸೂಕ್ತ ನಿರೂಪಣೆಯೇ ಸಾಹಿತ್ಯ ಚರಿತ್ರೆ. ಸಾಹಿತ್ಯ ಚರಿತ್ರೆಕಾರನ ಆದ್ಯ ಕರ್ತವ್ಯ ತಾನು ಆಯ್ದುಕೊಂಡ ಕಾಲ, ದೇಶದ ಸಾಹಿತ್ಯದ ಕೃತಿಗಳನ್ನು ಕಂಡುಹಿಡಿದು. ಅಧ್ಯಯನ ಮಾಡುವುದು. ಆತ ಎಷ್ಟೇ ದೊಡ್ಡ ವಿದ್ವಾಂಸನಾಗಿದ್ದರೂ ತನಗೆ ದೊರೆತಷ್ಟು ಮಾಹಿತಿಯನ್ನು ಅವಲಂಬಿಸಿರುವುದರಿಂದ ಮಾಹಿತಿ ಕೊರತೆಯಿದ್ದಷ್ಟು ಕೊರತೆ ಚರಿತ್ರೆಯಲ್ಲುಂಟಾಗುವುದು ಸಹಜ. ದೊರೆತಷ್ಟು ಗ್ರಂಥಗಳಿಂದಲೇ ಸಾಹಿತ್ಯ ಚರಿತ್ರೆಯ ಶ್ರೀಮಂತಿಕೆಯನ್ನು ಎತ್ತಿ ತೋರಿಸಬೇಕಾಗುತ್ತದೆ. ಗ್ರಂಥಕಾರ ಮತ್ತು ಗ್ರಂಥ ಸಮುದಾಯದ ಪರಿಚಯ ಮಾಡಿಕೊಡುವುದೇ ಗ್ರಂಥಕಾರ ಕೃತಿಕೋಶ. ಇಂಥ ಕೋಶಗಳು ಕೈದೀವಿಗೆಯಿದ್ದಂತೆ. ಇವು ಸಾಹಿತ್ಯದ ಬೆಳವಣಿಗೆ ಕ್ರಮವನ್ನು ಗ್ರಹಿಸಲೂ ಸಹಾಯ ಮಾಡುತ್ತವೆ.

ಬಿ.ಎಸ್. ಸ್ವಾಮಿ

"ಪುಸ್ತಕಕ್ಕಾಗಿ ನಾನು ನರಕಕ್ಕೆ ಹೋಗಲೂ ಸಿದ್ಧ.
ಪುಸ್ತಕ ಇರುವಲ್ಲಿಯೇ ನಾನು ಸ್ವರ್ಗವನ್ನು ಕಾಣುತ್ತೇನೆ."

-ಬಾಲಗಂಗಾಧರ ತಿಲಕ

ಉತ್ತರ ಕನ್ನಡ ಜಿಲ್ಲೆಯ
ಸಾಹಿತ್ಯಚರಿತ್ರಕಾರರಿಗೊಂದು ಕೈದೀವಿಗೆ

ಶ್ರೀಯುತ ನಾರಾಯಣ ಶಾನಭಾಗರು ಜಿಲ್ಲೆಯಲ್ಲಿ ಹುದುಗಿಕೊಂಡಿರುವ ಸಾಹಿತ್ಯದ ಅಪಾರ ಸಂಪತ್ತಿನ ಖನಿಯನ್ನು ಮೇಲೆತ್ತಿ ತೋರಿಸಿರುವ ಈ ಗ್ರಂಥವು ಅಗಾಧವಾದ ಒಂದು ಸಾಹಸ ಕೃತಿಯಾಗಿದೆ. ಇದರ ಹಿಂದಿರುವ ಪ್ರಿಯ ಶಾನಭಾಗರ ಸಂಶೋಧನಾ ಕ್ರಿಯೆಯು ಸಾಮಾನ್ಯದ್ದಲ್ಲ. ಗತಕಾಲಕ್ಕೂ ಆದಿಯ ತಲಕ್ಕೂ ತಲ್ಪಿ ಉತ್ಖನನಗೊಳಿಸಿ ಮೇಲಟ್ಟಿ ಅದ್ಭುತವೆಂದೆನಿಸುವ ಒಂದು ಸಾಹಸ ಕ್ರಿಯೆಯಾಗಿದೆ.

ಉ.ಕ. ಜಿಲ್ಲೆಯಲ್ಲಿ ಅಪಾರ ಸಂಖ್ಯೆಯಲ್ಲಿ ಸಾಹಿತ್ಯ ಕೊಡುಗೆ ನೀಡಿದವರು ಆಗಾಗಲೇ ವಿಸ್ಮೃತಿಗೊಳಗಾಗಿದ್ದರು. ಕಾಲಾಂತರದಲ್ಲಿ ಅದು ಕರಗಿ ಮಣ್ಣಾಗಬಹುದಿತ್ತು. ಇಂಥದೊಂದು ದಾಖಲೆಯನ್ನು ರಚಿಸುವ ಕಾರ್ಯವನ್ನು ಸಾಹಿತ್ಯ ಪರಿಷತ್‌ನಂಥ ಸಂಸ್ಥೆಯಾಗಲೀ ಇನ್ನಾರೇ ಆಗಲಿ ಕೈಗೆತ್ತಿಕೊಳ್ಳಬೇಕೆಂದು ಸಿದ್ದಾಪುರದಲ್ಲಿ ಜರುಗಿದ್ದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷನಾಗಿ ನಾನೊಂದು ಧ್ವನಿ ಎತ್ತಿ ಬಿಟ್ಟಿದ್ದೆ. ಬೇರೆ ಯಾರಿಗೋ ಏಕೆ ಹೇಳುವುದು? ನಾನೇ ಮಾಡಬಹುದಲ್ಲವೇ ಎಂದುಕೊಂಡು ಕೊಂಚ ಉಪಕ್ರಮಿಸಿದ್ದೆ ಕೂಡ. ಆದರೆ ಮೊದಲ ಹೆಜ್ಜೆಯಲ್ಲೇ ದೊರೆತ ಅನುಭವದಿಂದ ಇದು ಸಾಮಾನ್ಯ ಪ್ರಯತ್ನದಿಂದ ದಕ್ಕುವ ಕೆಲಸವಲ್ಲವೆಂದು ಅಷ್ಟಕ್ಕೇ ಕೈಬಿಟ್ಟಿದ್ದೆ. ಆದರೆ ಆ ಸಾಹಸಕ್ಕೆ ನಾರಾಯಣ ಶಾನಭಾಗರು ಇಳಿದೇ ಬಿಟ್ಟರು. ಶ್ರೀಯುತರಿಗೆ ಇಂಥ ಸಂಶೋಧನಾ ಕಾರ್ಯಕ್ಕೆ ಬೇಕಾದ ತಾಳ್ಮೆ, ಸಾತತ್ಯತೆ, ಜಿಗುಟು ಹಿಡಿದು ಕೊನೆಗೊಳಿಸುವ ಕಾರ್ಯ ವಿಧಾನ ಎಲ್ಲ ಕರಗತವಾಗಿವೆ. ಅದು ಅವರಿಗೆ ಪ್ರಿಯ ವಿಷಯವಾಗಿರುವುದೂ ಸುಸ್ಪಷ್ಟ. ಉ.ಕ. ಜಿಲ್ಲಾ ಗ್ರಂಥಕಾರ ಕೃತಿಕೋಶ ಎಂಬ ಈ ಗ್ರಂಥವು ಅವರ ಈ ದಿಸೆಯ ಸಂಶೋಧನೆಯ ಕಾರ್ಯಪಥದ ಮುಂದುವರಿದ ಭಾಗ. ನಿಜಕ್ಕೂ ಇದೊಂದು ಜಿಲ್ಲೆಯ ಸಾಹಿತ್ಯಕ್ಷೇತ್ರಕ್ಕೆ ಲಭಿಸಿದ ಒಂದು ಅನನ್ಯ ಗ್ರಂಥ. ಅತ್ಯಾವಶ್ಯಕ ಕೊಡುಗೆ. ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಚರಿತ್ರಕಾರರಿಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಅಥವಾ ಖ್ಯಾತ ಸಾಹಿತಿಗಳ ಬದುಕು–ಬರಹ ಕುರಿತು ವಿಶೇಷ ಅಧ್ಯಯನ ಅಥವಾ ಪಿಎಚ್.ಡಿ. ಮಾಡುವವರಿಗೆ ಇದೊಂದು ಕೈದೀವಿಗೆ. ತಮ್ಮನ್ನು ಕೇವಲ ಸಾಹಿತಿ, ಸಾಹಿತ್ಯ ಸೇವಕನೆಂದು ಗುರುತಿಸಿಕೊಳ್ಳುತ್ತಲೇ ಜಿಲ್ಲಾ ಸಾಹಿತ್ಯಾಭ್ಯಾಸಿಗಳಿಗೊಂದು ದೀಪಸ್ತಂಭರೂಪೀ ಆಕರಗ್ರಂಥವನ್ನು ನೀಡಿದ ಕೃತಿಕಾರ ನಾರಾಯಣ ಶಾನಭಾಗ ವಾಲಗಳ್ಳಿ ಅವರಿಗೆ ಈ ಜಿಲ್ಲೆಯ ಎಲ್ಲ ಕನ್ನಡ ಸಾಹಿತ್ಯ ಪರಿಚಾರಕರೂ ಚಿರಋಣಿಗಳಾಗಿರಬೇಕು. ನಾನಂತೂ ಶಬ್ದವಿರದ ಭಾವದಿಂದ ಅಭಿನಂದನೆ ಹೇಳುವೆ.

ನಾ.ಸು. ಭರತನಹಳ್ಳಿ
ಕನ್ನಡ ಸಾಹಿತಿ

ಅಭಿನಂದನಾರ್ಹ ಕಾರ್ಯ

ಶ್ರೀ ನಾರಾಯಣ ಶಾನಭಾಗರ 'ಉ.ಕ. ಜಿಲ್ಲಾ ಗ್ರಂಥಕಾರ ಕೃತಿಕೋಶ' ಸೃಜನೇತರ ಸಾಹಿತ್ಯ ಪ್ರಕಾರದಲ್ಲಿ ಒಂದು ಗಮನಾರ್ಹವಾದ ಮೌಲಿಕ ಕೃತಿಯಾಗಿದೆ. ಭವಿಷ್ಯದಲ್ಲಿ ಉ.ಕ. ಜಿಲ್ಲೆಯ ಸಾಹಿತ್ಯ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಲು ಹಾಗೂ ನಿರ್ಮಾಣ ಮಾಡಲು ಈ ಕೃತಿ ಒಂದು ಮಾದರಿಯಾಗಿ ಪೂರಕ ಹಾಗೂ ಆಕರ ಗ್ರಂಥವಾಗಿದೆ.

ಶ್ರೀ ನಾರಾಯಣ ಶಾನಭಾಗರು ವೃತ್ತಿಯಿಂದ ಎಂಜಿನಿಯರರು. ಪ್ರವೃತ್ತಿಯಿಂದ ಸಾಹಿತ್ಯ ಪ್ರಿಯರು. ನಿವೃತ್ತಿಯ ನಂತರ ಸಾಹಿತ್ಯದಲ್ಲಿ ಒಲವು, ಆಸಕ್ತಿಯನ್ನು ಆಹ್ವಾನಿಸಿಕೊಂಡು ಕನ್ನಡ ನುಡಿಸೇವಕರಾಗಿ ತಮ್ಮನ್ನು ಸಮರ್ಪಿಸಿಕೊಂಡು ಜಿಲ್ಲೆಯ ಸಾಹಿತ್ಯ ವಲಯದಲ್ಲಿ ಗೌರವದಿಂದ ಗುರುತಿಸಿಕೊಂಡಿರುವವರು.

ದಿ. ಎನ್.ಕೆ. ಹೆಗಡೆಯವರ (೧೯೬೯ರಲ್ಲಿ ಪ್ರಕಟ) 'ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರರು' ಕೃತಿ ಇವರಿಗೆ ಸ್ಫೂರ್ತಿ ಮತ್ತು ಪ್ರೇರಣೆ. ಆ ಪ್ರೇರಣೆಯಿಂದ ಮೂಡಿಬಂದದ್ದು ಬೃಹತ್ ಅನನ್ಯ ಕೃತಿ 'ಹವ್ಯಕ ಗ್ರಂಥಕಾರ ಕೃತಿ ದರ್ಪಣ'. ಸೃಜನೇತರ ಸಾಹಿತ್ಯದಲ್ಲಿ ಇದೊಂದು ಮಾಸ್ಟರ್ ಪೀಸ್. ಈ ಕೃತಿಯನ್ನು ರಚಿಸುವ ಮೂಲಕ ತಮ್ಮ ಮಾತೃ ಸಮಾಜದ ಋಣವನ್ನು ತೀರಿಸಲು ಹಂಬಲಿಸಿದರೆ, 'ಉ.ಕ. ಜಿಲ್ಲಾ ಗ್ರಂಥಕಾರರ ಕೃತಿಕೋಶ' ರಚಿಸುವ ಮೂಲಕ ಜಿಲ್ಲೆಯ ಸಾಹಿತ್ಯ-ಸಾಂಸ್ಕೃತಿಕ ಸಮುದಾಯದ ಋಣವನ್ನು ಸಂದಾಯ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಉ.ಕ. ಜಿಲ್ಲೆಯ ಸಾಹಿತ್ಯ ಲೋಕದ ಹಿರಿಮೆ ಗರಿಮೆಗಳನ್ನು ತುಂಬಾ ಅಭಿಮಾನದಿಂದ ಪರಿಚಯಿಸಿ ಧನ್ಯರಾಗಿದ್ದಾರೆ.

ಗ್ರಂಥಕಾರರ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಶ್ರೀ ನಾರಾಯಣ ಶಾನಭಾಗರ ಆಸಕ್ತಿ, ಉತ್ಸಾಹ, ತಾಳ್ಮೆ, ಶ್ರದ್ಧೆ, ಶಿಸ್ತು, ಬದ್ಧತೆ, ಅವಿರತ ಪ್ರಯತ್ನಶೀಲತೆ ಅನುಕರಣೀಯವಾದುದು. ಅದು ಅವರಿಗೇ ಮೀಸಲಾದುದು. ನಿಂತಲ್ಲಿ ಕುಂತಲ್ಲಿ ಹೋದಲ್ಲಿ, ಬಂದಲ್ಲಿ ಮಾಹಿತಿ ಸಂಗ್ರಹದ ಚಿಂತನೆ ತನ್ಮಯತೆ, ನಕ್ಷತ್ರಕನ ಹಾಗೆ ಶನಿಯ ಹಾಗೆ ಕಾಡಿ, ಪೀಡಿಸಿ ಬೇಡಿ ಪಟ್ಟು ಹಿಡಿದು ಮಾಹಿತಿ ಸಂಗ್ರಹಿಸಿದ್ದಾರೆ. ಅವರ ಅಪಾರ ತಾಳ್ಮೆಗೊಂದು ದೊಡ್ಡ ನಮಸ್ಕಾರ. ನನಗೊಬ್ಬನಿಗೇ ಬರೆದ ಪತ್ರಗಳ ಸಂಖ್ಯೆ ೨೫ಕ್ಕಿಂತ ಹೆಚ್ಚು. ದೂರವಾಣಿ ಕರೆಗಳ ಸಂಖ್ಯೆ ನೂರಾರು ಗಡಿ ದಾಟಿದೆ.

ತ್ರಿವಿಕ್ರಮನಂತೆ ಛಲ ಹಿಡಿದು 'ಉ.ಕ. ಜಿಲ್ಲಾ ಗ್ರಂಥಕಾರರ ಕೃತಿ ಕೋಶ' ರಚಿಸಿ ಅಭಿನಂದನೆಗೆ ಪಾತ್ರರಾಗಿರುವರು.

ಅದಮ್ಯ ಉತ್ಸಾಹದ ಚೈತನ್ಯ ಶೀಲ ವ್ಯಕ್ತಿತ್ವವನ್ನು ಅವರ ಸಾಧನೆಯನ್ನು ಕಂಡು ತಲೆ ಗೌರವದಿಂದ ಬಾಗುತ್ತದೆ.

ಇಂಥ ಅನೇಕ ಕೃತಿಗಳು ರಚಿತವಾಗಿ ಕನ್ನಡ ತಾಯಿಯ ಘನತೆ ಗೌರವ ಹೆಚ್ಚುವಂತಾಗಲಿ ಎಂದು ಹಾರೈಸುವೆನು.

ಅಭಿನಂದನೆಗಳೊಂದಿಗೆ,

ಹಿಚಕಡ, ಅಂಕೋಲಾ **ಶಾಂತಾರಾಮ ನಾಯಕ**

ಜಿಲ್ಲೆಯ ಸಾಹಿತ್ಯಕ್ಕೊಂದು ಆಕರಗ್ರಂಥ

ಶ್ರೀ ನಾರಾಯಣ ಶಾನಭಾಗರು ಉತ್ತರ ಕನ್ನಡ ಜಿಲ್ಲೆಯ ಬರಹಗಾರರ ಮಾಹಿತಿ ಕುರಿತು ತರಲು ಇಚ್ಛಿಸುತ್ತಿರುವ ಗ್ರಂಥಕ್ಕೆ ಮಾಹಿತಿ ಸಂಗ್ರಹಿಸಲು ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ಕೆಲವು ಮಾಹಿತಿಗಾಗಿ ಅವರು ಛಲಬಿಡದ ತ್ರಿವಿಕ್ರಮರೇ ಆದರು. ಇಂತಹ ಪ್ರಯತ್ನ ಈ ಹಿಂದೆ ಕೆಲವರು ಮಾಡಿದ್ದರಾದರೂ ಸಂಪೂರ್ಣ ಯಶಸ್ಸು ಅವರಿಗೆ ಸಿಗಲಿಲ್ಲ. ಇಂತಹ ಸಮಗ್ರ ಮಾಹಿತಿ ಇರುವ ಗ್ರಂಥದ ಅವಶ್ಯಕತೆ ಎಂದಿಗೂ ಇದೆ. ಭವಿಷ್ಯದಲ್ಲಿ ಇದೊಂದು ಆಕರ ಗ್ರಂಥವೇ ಆಗಬಹುದು.

ನಾರಾಯಣ ಶಾನಭಾಗರ ವ್ಯಕ್ತಿತ್ವವೇ ಅಂತಹದು. ಅವರ ಸಹನೆ, ಶಿಸ್ತುಬದ್ಧ ಬದುಕು ಅವರ ಕಾರ್ಯ ತತ್ಪರತೆಗೆ ಸಾಕ್ಷಿ. ತೆರೆಮರೆಯ ಮಾರ್ಗದರ್ಶಿ ಅವರೆಂಬುದನ್ನು ನಾನು ಹಲವರಿಂದ ಕೇಳಿ ಅರಿತಿದ್ದೇನೆ. ಅವರು ಬೆಂಬಿಡದೆ ನಮ್ಮನ್ನು ಸಂಪರ್ಕಿಸಿದಾಗಲೂ ಅವರಿಗೆ ನೀಡಬೇಕಾದ ಸಹಕಾರವನ್ನು ಆಲಸ್ಯತನದಿಂದ ಕೆಲವರು ನೀಡಲಿಲ್ಲ. ಆದರೆ ನಿರಂತರ ಸಂಪರ್ಕದಿಂದ ಸಂಗ್ರಹಿಸಿದ ಮಾಹಿತಿಗಳನ್ನು ಅವರು ಬರಹಗಾರರ ಉಪಯೋಗಕೆ ಒದಗಿಸುತ್ತಿದ್ದಾರೆ. ಉತ್ತರ ಕನ್ನಡದ ಸಾಹಿತ್ಯಲೋಕ ಮತ್ತು ಸಾಹಿತಿಗಳು, ಬರಹಗಾರರು ಅವರಿಗೆ ಉಪಕೃತರಾಗಬೇಕು.

ಉತ್ತರ ಕನ್ನಡ ಜಿಲ್ಲೆಯ ಬರಹಗಾರರಿಗೆ ತಮ್ಮ ಕುರಿತು ಬರೆದುಕೊಳ್ಳುವುದಕ್ಕೂ ಉಪೇಕ್ಷೆ. ಜಿಲ್ಲೆಯಿಂದ ಹೊರಗೆ ಹೋದ ಅನೇಕ ಸಾಹಿತಿಗಳು ತಮ್ಮ ಜಿಲ್ಲೆಯ ಕುರಿತು ತಿಳಿದುಕೊಳ್ಳುವ ತವಕದಲ್ಲಿರುತ್ತಾರೆ. ತಮ್ಮ ಜಿಲ್ಲೆಯ ಸಾಹಿತ್ಯದ ಬೆಳವಣಿಗೆಯ ಕುರಿತು, ಕೃತಿಗಳ ಕುರಿತು ಸಮ್ಮೇಳನಗಳ ಕುರಿತು ಅರಿತುಕೊಳ್ಳುತ್ತಾರೆ. ಜಿಲ್ಲೆಯ ಹೊರಗೇ ಉಳಿದು ಸಾಹಿತ್ಯ ರಚಿಸಿದರೂ ಉ.ಕ. ಜಿಲ್ಲೆಯ ಮಣ್ಣಿನ ವಾಸನೆ ಹೊಂದಿದವರಾಗಿರುತ್ತಾರೆ. ಆದರೆ ಜಿಲ್ಲೆಯಲ್ಲಿ ಇದ್ದವರಿಗದು ಹಿತ್ತಲ ಮದ್ದಲ್ಲ. ಇತರ ಜಿಲ್ಲೆಗಳವರು ತಮ್ಮನ್ನು ಇತರರು ಗುರುತಿಸಲು ಇಲ್ಲದ ಸಾಹಸ ಮಾಡುತ್ತಾರೆ. ಆದರೆ ಇಲ್ಲಿಯವರ ನಿರ್ಲಿಪ್ತ ಧೋರಣೆ ನನಗೇ ಆಶ್ಚರ್ಯ ತಂದಿದೆ. ನಾನು ಜಿಲ್ಲೆಯಿಂದ ಮೂವತ್ತು ವರ್ಷಗಳಷ್ಟು ಹೊರಗಿದ್ದು ಕಳೆದ ಹನ್ನೆರಡು ವರ್ಷಗಳಿಂದ ಇಲ್ಲಿಯ ಸಾಹಿತ್ಯ ಲೋಕದ ಜೊತೆ ಹೆಣಗಾಡಿದ್ದೇನೆ. ಪಲ್ಲಕ್ಕಿ ಹೊರುವವನ ಕೆಲಸ ನನ್ನದಾಗಿದೆ. ಅನೇಕರು ಅದನ್ನೇ ಬಯಸುವದೂ ನನ್ನ ಅರಿವಿಗೆ ಬಂದಿದೆ.

ಇತ್ತೀಚೆಗೆ ಅದು ಸಂಚಲನಗೊಂಡಿದೆ. 'ನಾರಾಯಣ ಶಾನಭಾಗರ' ಸಾಧನೆ ಈ ಸಂಚಲನಕ್ಕೆ ವೇಗ ಹೆಚ್ಚಿಸಬಹುದೆಂದು ನಾನು ಆಶಾವಾದಿಯಾಗಿದ್ದೇನೆ. ಈ ಗ್ರಂಥ ಉ.ಕ. ಜಿಲ್ಲೆಯ ಸಾಹಿತ್ಯ ಇತಿಹಾಸದಲ್ಲಿ ಹೊಸ ಮೈಲುಗಲ್ಲಾಗಲಿ. ನಾವೆಲ್ಲರೂ ಅವರ ಪರಿಶ್ರಮದಲ್ಲಿ ಪಾಲ್ಗೊಳ್ಳೋಣ ಎಂಬ ಹಾರೈಕೆಯೊಂದಿಗೆ.

ಕುಮಟಾ

ರೋಹಿದಾಸ ನಾಯಕ
ನಿಕಟಪೂರ್ವ ಅಧ್ಯಕ್ಷರು
ಉ.ಕ. ಜಿಲ್ಲಾ ಕ.ಸಾ.ಪ.

ಬಹುಮುಖೀ ನೆಲೆಯ ಕೃತಿಸಂಸ್ಕೃತಿಯ ಆಕರಕೋಶ

ನಾರಾಯಣ ಶಾನಭಾಗರ 'ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರ ಕೃತಿಕೋಶ' ಒಂದು ಅಪೂರ್ವವಾದ ಗ್ರಂಥವಾಗಿದೆ. ಕನ್ನಡದಲ್ಲಿ ಬಂದ ಆಕರಸಾಹಿತ್ಯಕ್ಕೆ ಈ ಕೃತಿಕೋಶ ಸೇರುತ್ತದೆ. ಆಕರಗಳಿಲ್ಲದೆ ಇತಿಹಾಸವಿಲ್ಲ (No Source No History). ಇತಿಹಾಸದ ಪುನರ್ರಚನೆಗೆ ಆಕರಸೂಚಿಗಳು ಮುಖ್ಯ ಸಾಮಗ್ರಿಯಾಗುತ್ತವೆ. ಉತ್ತರ ಕನ್ನಡದ ಸಾಂಸ್ಕೃತಿಕ ಇತಿಹಾಸ ಬರೆಯುವವರಿಗೆ ಈ ಕೃತಿಕೋಶ ತುಂಬ ಉಪಯುಕ್ತವಾಗುತ್ತದೆ. ಇಂತಹ ಬೃಹತ್ ಕೃತಿಕೋಶವನ್ನು ನಾರಾಯಣ ಶಾನಭಾಗರು ಅಪಾರ ಶ್ರಮಶ್ರದ್ಧೆಯಿಂದ ಸಿದ್ಧಪಡಿಸಿದ್ದಾರೆ. ಅವರ ವಿದ್ವತ್ ಪ್ರೀತಿ, ಕಾರ್ಯತತ್ಪರತೆ ಅಸಾಧಾರಣವಾದದ್ದು. ಉತ್ತರ ಕನ್ನಡದ ಕವಿಲೇಖಕರನ್ನು ಸಂಪರ್ಕಿಸಿ ವಿಪುಲ ಮಾಹಿತಿಯನ್ನು ಸಂಗ್ರಹಿಸಿ ಕೃತಿಸೂಚಿ ಸಿದ್ಧಪಡಿಸಿರುವದರಿಂದ ಇದಕ್ಕೆ ಅಧಿಕೃತತೆ ಪ್ರಾಪ್ತವಾಗಿದೆ. ನಮ್ಮ ಸ್ಮೃತಿಪಟಲದಿಂದ ಕಣ್ಮರೆಯಾದ ಕೃತಿಗಳನ್ನು ಅವರು ನೆನಪಿಗೆ ತಂದುಕೊಟ್ಟಿದ್ದಾರೆ. ಈಗಾಗಲೇ ಪ್ರಕಟವಾದ 'ಕನ್ನಡ ಗ್ರಂಥಸೂಚಿ', 'ಉತ್ತರಕನ್ನಡ ಜಿಲ್ಲಾ ಗ್ರಂಥಕಾರರು' ಮೊದಲಾದ ಗ್ರಂಥಗಳಿಂದಲೂ ಕ್ಷೇತ್ರಕಾರ್ಯದ ಮೂಲಕವೂ ವಿಪುಲ ಆಕರಗಳನ್ನು ಸಂಗ್ರಹಿಸಿದ್ದಾರೆ. ಆದ್ದರಿಂದ ಇದು ಸಾಮಗ್ರಿ ಸಂಗ್ರಹ ಸಂಶೋಧನೆ (Data Collection Research) ಯಾಗಿ ಸಂಶೋಧಕರಿಗೆ ಆಕರಕೈಪಿಡಿಯಾಗಿದೆ. ಉತ್ತರ ಕನ್ನಡದ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ನಾಡು-ನುಡಿಯ ಅಧ್ಯಯನಕ್ಕೆ ಯಾವಯಾವ ಕೃತಿಸಂಪದ ಸಾಮಾಗ್ರಿಯಾಗಬಲ್ಲುದೆಂಬುದಕ್ಕೆ ಈ ಕೃತಿಕೋಶ ಮಾರ್ಗದರ್ಶಿಯಾಗಿದೆ.

ಕನ್ನಡಿಗರಾದ ನಾವು ಇತಿಹಾಸ ಪ್ರಜ್ಞೆಯನ್ನು ಕಳೆದುಕೊಂಡಿದ್ದೇವೆ. 'ನಾಯಕನನನ್ಯನಾಗೆ ಕೃತಿ ವಿಶ್ರುತಮಪ್ಪುದು' ಎಂದು ನಾಗಚಂದ್ರ ಹೇಳಿದ. ಆದರೆ ನಾವು ಕೃತಿಸಂಪದವನ್ನು ಮರೆತಿದ್ದೇವೆ. ಇದರಿಂದ ಸಾಹಿತ್ಯ ಚರಿತ್ರೆಯಲ್ಲಿ ಕವಿಯ ಜೀವನ ವಿವರಗಳು, ಕೃತಿ, ಕಾಲ ಇತಿವೃತ್ತಗಳು ಸರಿಯಾಗಿ ದಾಖಲಾಗದೆ ಸತ್ಯಸಂಗತಿ ಕಣ್ಮರೆಯಾಗಿದೆ. ಸಾಹಿತ್ಯ ಚರಿತ್ರೆ ಬರೆಯುವವರು ಲೇಖಕರ ನಿರ್ದಿಷ್ಟವಾದ ಕೃತಿಗಳನ್ನು ದಾಖಲೆಯಾಗಿ ನಮೂದಿಸಿ ದಾಖಲೆ ಆಧಾರಿತ ಸಂಶೋಧನೆ (Data Based Research) ಕೈಕೊಳ್ಳಲು ಈ ಕೃತಿಸೂಚಿ ಸಹಾಯಕವಾಗುತ್ತದೆ. ನಾರಾಯಣ ಶಾನಭಾಗರು ಲೇಖಕರ ಇತಿವೃತ್ತಗಳನ್ನು ದಾಖಲಿಸಿಕೊಟ್ಟಿರುವದು ತುಂಬ ಅರ್ಥಪೂರ್ಣ ಕಾಯಕವಾಗಿದೆ.

ಸೃಜನ ಮತ್ತು ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿ ನಿರ್ದಿಷ್ಟವಾದ ವಸ್ತು, ವಿಷಯವನ್ನಾಧರಿಸಿ ಸಂಶೋಧನೆ ನಡೆಸುವವರಿಗೆ ಈ ಕೃತಿಕೋಶ ಸಹಾಯಕವಾಗುತ್ತದೆ. ಉತ್ತರ ಕನ್ನಡದ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಈವರೆಗೆ ಬಂದ ಪ್ರಸಂಗಸಾಹಿತ್ಯ, ಯಕ್ಷಗಾನ ರಂಗಭೂಮಿಯ ಸಂಶೋಧನ ಕೃತಿಲೋಕ ಉಪಲಬ್ಧವಾಗುತ್ತಿದ್ದು, ಅವುಗಳನ್ನು ಅವಲಂಬಿಸಿ ಆಕರನಿರ್ಮಾಣ ಸಂಶೋಧನೆ(Source Building Research) ಕೈಕೊಳ್ಳುವವರಿಗೂ ಇದು ನೆರವಾಗುತ್ತದೆ.

ಪ್ರತಿಯೊಂದು ಜಿಲ್ಲೆಯೂ ತನ್ನ ಪರಂಪರೆಯನ್ನು ತನ್ನ ಸಾಹಿತ್ಯ ಕೃತಿಪರಂಪರೆಯಲ್ಲಿ ಅವಲೋಕಿಸುತ್ತದೆ. ನಾರಾಯಣ ಶಾನಭಾಗರ ಕೃತಿಕೋಶ ಉತ್ತರ ಕನ್ನಡದ ಸಾಹಿತ್ಯ, ಸಂಸ್ಕೃತಿಯ ಕೃತಿಕೋಶವಾಗಿ ಮಾತ್ರ ಉಳಿಯದೆ ಜಿಲ್ಲೆಯ ರಾಜಕೀಯ, ಸಾಮಾಜಿಕ, ಆರ್ಥಿಕ-ಧಾರ್ಮಿಕ ಮೊದಲಾದ ವಿಷಯಗಳ ಕುರಿತ ಕೃತಿಕೋಶವಾಗಿಯೂ ಆಕೃತಿಗೊಂಡಿದೆ.

ಆದ್ದರಿಂದ ಒಂದು ರೀತಿಯಲ್ಲಿ ಅಂತರ್‌ಶಿಸ್ತೀಯ ಸಂಶೋಧನೆ (Inter Discplinary Research) ನಡೆಸಲು ಪ್ರೇರಕವಾಗುತ್ತದೆ.

ಲೇಖಕ ತನ್ನ ಕೃತಿಗಳಿಂದಾಗಿಯೇ ಸಾಹಿತ್ಯ ಜಗತ್ತಿನಲ್ಲಿ ಜೀವಂತವಾಗಿರುತ್ತಾನೆ. ಯಾವ ಯಾವುದೋ ಕಾರಣಗಳಿಂದ ನಮ್ಮ ಅಲಕ್ಷ್ಯ, ಅವಜ್ಞೆಗೆ ಗುರಿಯಾದ ಕವಿಕೃತಿಗಳು ಕೃತಿಕೋಶದಲ್ಲಿ ಪ್ರತ್ಯಕ್ಷವಾಗಿ ಗಮನಾರ್ಹರಾಗುತ್ತಾರೆ. ಈ ಕೃತಿಸೂಚಿ ಜಿಲ್ಲಾ ಸಾಹಿತಿಗಳ ಸಾಹಿತ್ಯಸೂಚಿಯೂ ಆಗಿ ಆ ಸಾಹಿತಿಯ ಸಮಗ್ರಕೃತಿಗಳ ಅಧ್ಯಯನಕ್ಕೆ ಪ್ರೇರಕವಾಗುತ್ತದೆ. ನಿರ್ದಿಷ್ಟ ವರ್ಷಕ್ಕೆ ಈ ಕೃತಿಸೂಚಿ ನಿಗದಿತವಾಗಿರುವದರಿಂದ ಮುಂದಿನ ವರ್ಷಗಳಲ್ಲಿ ಹೊಸ ಸೇರ್ಪಡೆ ಈ ಕೃತಿಸೂಚಿಗೆ ಸೇರಬೇಕಾಗುತ್ತದೆ. ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡೆಮಿ, ವಿಶ್ವವಿದ್ಯಾಲಯಗಳಂಥ ಸಾಂಸ್ಥಿಕ ಪ್ರಯತ್ನದಿಂದ ಆಗಬೇಕಾದ ಕಾರ್ಯವನ್ನು ನಾರಾಯಣ ಶಾನಭಾಗರು ಏಕವ್ಯಕ್ತಿಯಾಗಿ ಈ ಕೃತಿಕೋಶ ರಚಿಸಿ ನಮ್ಮೆಲ್ಲರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ವಿವಿಧ ಜನಸಮುದಾಯ ತಾಲೂಕುವಾರು ಲೇಖಕಲೋಕವನ್ನು ಈ ಕೃತಿಸೂಚಿ ತೆರೆದು ತೋರಿಸಿದೆ. ಉತ್ತರ ಕನ್ನಡದ ಹೆಸರಿನಲ್ಲಿಯೇ ಕನ್ನಡ ಸೇರಿದೆ. ಕನ್ನಡ ಕಟ್ಟುವ ಗ್ರಂಥೋದ್ಯಮದ ವಿಕಾಸ ಈ ಜಿಲ್ಲೆಯಲ್ಲಿ ಶತಮಾನಗಳಿಂದ ನಿರಂತರವಾಗಿ ಸಾಗಿಬಂದುದನ್ನು ನಾವು ಕಾಣುತ್ತೇವೆ. ಕನ್ನಡದ ಜೊತೆಗೆ ಸಂಸ್ಕೃತ, ಮರಾಠಿ, ಕೊಂಕಣಿ ಭಾಷೆಗಳಲ್ಲಿ ಬಂದ ಕೃತಿಗಳ ಬಗೆಗೂ ಮಾಹಿತಿ ಇದರಲ್ಲಿ ಅಂತಸ್ಥವಾಗಿದೆ. ಸರ್ವಭಾಷಾಮಯಿ ಸರಸ್ವತಿಯ ಬಹುಮುಖಿ ನೆಲೆಗಳನ್ನು ಕಂಡು ನಾವು ಬೆರಗಾಗುತ್ತೇವೆ. ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಜಿಲ್ಲಾ ಗೆಜೆಟಿಯರ್ ಸಿದ್ಧವಾಗುತ್ತಿತ್ತು. ಅದರಲ್ಲಿ ಜಿಲ್ಲೆಯ ಸಾಹಿತ್ಯ, ಇತಿಹಾಸ, ಕಲೆ, ಇತ್ಯಾದಿ ವಿಷಯಗಳ ಸಮಗ್ರ ಮಾಹಿತಿ ಲಭ್ಯವಾಗುತ್ತಿತ್ತು. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಸ್ಥಳೀಯ ಸಂಸ್ಕೃತಿ, ಸಾಹಿತ್ಯ ಕಲೆಗಳಿಗೆ ಮಹತ್ವ ಬಂದಿದ್ದರೂ ಅವುಗಳ ದಾಖಲೀಕರಣ ಸಮಗ್ರವಾಗಿ ಆಗದೆ ಉಳಿದುಕೊಂಡಿದೆ. ನಮ್ಮ ಜನಾಂಗ ಜೀವನದಲ್ಲಿ ಸಾಂಸ್ಕೃತಿಕ ವಿಸ್ಮೃತಿ ಉಂಟಾಗುತ್ತಲಿದೆ. ಇದರಿಂದ ಜಿಲ್ಲೆಯ ಗ್ರಂಥಕಾರರ ಕೃತಿಲೋಕದ ಪರಿಚಯ ನವಪೀಳಿಗೆಗೆ ಆಗುತ್ತಿಲ್ಲ. 'ಪುಸ್ತಕಗಳು ಜಗತ್ತನ್ನಾಳುತ್ತವೆ' ಎಂಬುದು ಪ್ರಸಿದ್ಧವಾದ ಮಾತು. ಒಂದು ಒಳ್ಳೆಯ ಪುಸ್ತಕ ಲೇಖಕರ ಜೀವಮಾನದ ಮಹತ್ವಾಕಾಂಕ್ಷೆಯ ಪ್ರತೀಕವಾಗಿರುತ್ತದೆ. ಅದು Master Spirit ಎಂದೂ ಹೇಳಲಾಗುತ್ತದೆ. ಪುಸ್ತಕಗಳಿಂದ ಜನರು ಸಂಸ್ಕೃತಿ ಸಂಸ್ಕಾರಗಳನ್ನು ಪಡೆಯುತ್ತಿದ್ದರು. ಪುಸ್ತಕಗಳು ನಿರಂತರವಾಗಿ ಸಂಸ್ಕೃತಿ ಸಂವಹನದ ಕಾರ್ಯ ಮಾಡುತ್ತಿದ್ದವೆಂಬುದನ್ನು ಇಂಥ ಕೃತಿಕೋಶದಿಂದ ನಾವು ಅರಿಯಬಹುದು.

ಪ್ರತಿಯೊಂದು ಜನಾಂಗವೂ ತನ್ನ ಸಾಂಸ್ಕೃತಿಕ ವೈಭವದಲ್ಲಿ ಹರ್ಷಿತವಾಗಿರುತ್ತದೆ. ನಾರಾಯಣ ಶಾನಭಾಗರ ಜಿಲ್ಲಾ ಗ್ರಂಥಕಾರರ ಕೃತಿಕೋಶ ಜಿಲ್ಲಾ ಕೇಂದ್ರ ಸ್ಥಾನದಲ್ಲಿರಬೇಕು. ಅದನ್ನು ಅವಲೋಕಿಸಿಯೇ ಸರಕಾರ ತಾನು ನೀಡುವ ಪ್ರಶಸ್ತಿ/ ರಾಷ್ಟ್ರೀಯ/ರಾಜ್ಯಮಟ್ಟದ ವಿಚಾರ ಸಂಕಿರಣಗಳಿಗೆ ಜಿಲ್ಲಾ ಲೇಖಕರನ್ನು ಸೂಚಿಸಲು ಅದು ಸಹಾಯಕವಾಗುತ್ತದೆ. ತಾನು ನಡೆಸುವ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಿಗೆ ಲೇಖಕರನ್ನು ಯೋಜಿಸಲು ಮಾರ್ಗದರ್ಶಿಯಾಗುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪುಸ್ತಕಗಳ ಮರುಮುದ್ರಣಗೊಳಿಸಿ ಸಾಹಿತ್ಯಕೃತಿ ಸಾರ್ವಜನಿಕರಿಗೆ ಸಿಗುವಂತೆ ಮಾಡುವಲ್ಲಿ ಈ ಕೃತಿಕೋಶ ಸಹಾಯಕವಾಗುತ್ತದೆ. ಸರಕಾರಕ್ಕೆ, ಸಂಶೋಧಕರಿಗೆ, ಸಾಹಿತ್ಯಾಸಕ್ತ ಸಹೃದಯರಿಗೆ ಬಹುಮುಖೀ ನೆಲೆಯಲ್ಲಿ ಜಿಲ್ಲಾ ಗ್ರಂಥಕಾರರ ಕೃತಿಕೋಶ ಉಪಯುಕ್ತವಾಗಿದೆ.

ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರರ ಕೃತಿಕೋಶ ಕೃತಿ ಸಂಸ್ಕೃತಿಗೆ ಪ್ರೇರಕವಾಗಲಿದೆ. ಕರ್ನಾಟಕದ ಮೂವತ್ತು ಜಿಲ್ಲೆಗಳಲ್ಲೂ ತನ್ನ ಶಾಖೆಯನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿಯೊಂದು ಜಿಲ್ಲಾ ಗ್ರಂಥಕಾರರ ಕೃತಿಕೋಶವನ್ನು ವಿದ್ವಾಂಸರಿಂದ ಸಿದ್ಧಪಡಿಸಿ ಪ್ರಕಟಿಸಿದಾಗ ಕನ್ನಡ ಗ್ರಂಥೋದ್ಯಮದ ಸಮಗ್ರ ಮಾಹಿತಿಕೋಶ ಉಪಲಬ್ಧವಾಗುತ್ತದೆ. ಇನ್ನೂ ಮುಂದಾದರೂ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಜಾತ್ರೆ, ಉತ್ಸವಗಳಿಗೆ ತೊಡಗಿಕೊಳ್ಳುವಂತೆ ಇಂಥಹ ವಿಧಾಯಕ ಶಾಶ್ವತ ಯೋಜನೆಗಳನ್ನು ಕೈಕೊಳ್ಳಬೇಕಾಗಿದೆ. ನಾರಾಯಣ ಶಾನಭಾಗರು ಜಿಲ್ಲಾ ಗ್ರಂಥಕಾರರ ಕೃತಿಕೋಶದ ಸಿದ್ಧತೆಯಿಂದ ತಾವು ನಡೆಸಿದ ಸಂಖ್ಯಾತ್ಮಕ ವಿಶ್ಲೇಷಣೆಯ ಫಲಶ್ರುತಿಯಾಗಿ ಜಿಲ್ಲೆಯ ಸಾಹಿತ್ಯ ಸಂಪದದಲ್ಲಿ ಮುಂಚೂಣಿಯಲ್ಲಿರುವ ಸಮಾಜಗಳ ಸ್ಥಾನ, ಜಿಲ್ಲೆಯ ತಾಲೂಕಾವಾರ ಸ್ಥಾನ ಮುಂತಾದ ಕುತೂಹಲಕರ ಅಂಶಗಳನ್ನು ಗುರುತಿಸಿದ್ದಾರೆ. ಈ ನೆಲೆಯಲ್ಲಿ ಸಂಶೋಧನೆ ನಡೆಸುವವರಿಗೆ ಇದು ಸಹಕಾರಿಯಾಗಿದೆ. ಈ ಕೃತಿಸೂಚಿ ಈವರೆಗಿನ ಪ್ರಕಟಿತ ಗ್ರಂಥಸೂಚಿಯಾಗಿ ವಿಪುಲ ಆಕರಗಳನ್ನು ನಮಗೆ ಒದಗಿಸುವಲ್ಲಿ ಯಶಸ್ವಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಪ್ರಕಟಿತ ಸಾಹಿತ್ಯ ಕೃತಿಗಳೂ ಬಹುಸಂಖ್ಯೆಯಲ್ಲಿವೆ. ಈವರೆಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಮೂದು ಆಗದ ಕೃತಿಗಳೂ ಹಸ್ತಪ್ರತಿ, ತಾಡೋಲೆಗಳಲ್ಲಿ ಉಳಿದುಕೊಂಡಿವೆ. ಸ್ವರ್ಣವಲ್ಲೀಮಠದ ಹಸ್ತಪ್ರತಿ ಭಂಡಾರ, ಎನ್.ಕೆ. ಹೆಗಡೆಯವರ ಮನೆಯ ಹಸ್ತಪ್ರತಿ ಭಂಡಾರಗಳಲ್ಲಿಯ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ ಪ್ರಕಟವಾಗಬೇಕಿದ್ದು ಅವೆಲ್ಲವೂ ಬಂದಾಗ ಜಿಲ್ಲಾ ಕೃತಿಸಂಪದ ಸಮಗ್ರವಾಗಿ ಲಭ್ಯವಾದಂತಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಮಹೋನ್ನತಿಯನ್ನು ನಾವು ಅರಿಯುವಂತೆ ಮಾಡಿದ ಈ ಕೃತಿಕೋಶ ಉತ್ತರ ಕನ್ನಡ ಜಿಲ್ಲಾ ಶಾಸನಸೂಚಿ, ಜಾನಪದ, ಗ್ರಂಥಸೂಚಿ, ಮೊದಲಾದ ಸೂಚಿ ಸಾಹಿತ್ಯಕ್ಕೆ ಪ್ರೇರಕವಾಗಲಿದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿರಚನೆಯನ್ನು ಕೈಕೊಳ್ಳುವವರಿಗೆ ಸೃಜನ ಮತ್ತು ಮಾನವಿಕ ಸಂಶೋಧಕರಿಗೆ ಹಿಂದಣ ಹೆಜ್ಜೆಯನರಿಯಲಾಗದೆ ಮುಂದಣ ಹೆಜ್ಜೆಯನಿಡಲಾಗದು ಎಂಬುದನ್ನು ನೆನಕೆಗೆ ತಂದುಕೊಡುತ್ತದೆ. 'ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರರ ಕೃತಿಕೋಶ' ಸಮಗ್ರವಾಗಿ ಒಂದು ಗ್ರಂಥಾಲಯದಲ್ಲಿ ಸಿಗುವಂತಾಗಲು ಸರಕಾರ ಅಥವಾ ಯಾರಾದರೂ ಯೋಜಿಸಿದರೆ ಅವರು ನಾರಾಯಣ ಶಾನಭಾಗರ ಶ್ರಮಶ್ರದ್ಧೆಯನ್ನು ಕ್ಷಣಕ್ಷಣಕ್ಕೂ ನೆನಪಿಸುತ್ತಾರೆ. ಇಂಥಹ ಸಾರ್ಥಕ ಕಾರ್ಯ ಮಾಡಿದ ನಾರಾಯಣ ಶಾನಭಾಗರಿಗೆ ಹೃದಯಾಳದ ಹಾರ್ದಿಕ ಅಭಿನಂದನೆಗಳು. ಸರಕಾರ ಯಾ ಸಾರ್ವಜನಿಕರಿಂದ ಹಣ ಪಡೆದುಕೊಳ್ಳದೆ ನಿಜವಾದ ಕನ್ನಡ ಪ್ರೀತಿಯಿಂದ ಈ ಕೃತಿಕೋಶ ಸಿದ್ಧಪಡಿಸಿಕೊಟ್ಟು ಜಿಲ್ಲೆಯ ಜನತೆಯ ಪ್ರೀತ್ಯಾದರಕ್ಕೆ ನಾರಾಯಣ ಶಾನಭಾಗರು ಭಾಜನರಾಗಿದ್ದಾರೆ.

ಧಾರವಾಡ

ಡಾ.ಜಿ.ಎಂ. ಹೆಗಡೆ
ನಿವೃತ್ತ ಪ್ರಾಂಶುಪಾಲ,
ಕಿಟ್ಟಲ್ ಕಾಲೇಜ

ಶುಭ ಹಾರೈಕೆ

ಗುಡ್ಡ ಕಡಿದು ಮೈಮೇಲೆ ಹಾಕಿಕೊಳ್ಳುವುದು ಅಂದರೆ ತಾನು ಕೈಯಾರೆ ತೊಂದರೆಗೆ ಸಿಗಹಾಕಿಕೊಳ್ಳುವುದು. ಕೆಲವರು ಇಂಥ ಕೆಲಸ ಗೊತ್ತಿಲ್ಲದೆ ಮಾಡುತ್ತಾರೆ. ಹಲವರು ಗೊತ್ತಿದ್ದೂ ಮಾಡುತ್ತಾರೆ. ನಾರಾಯಣ ಶಾನಭಾಗರು ಗೊತ್ತಿದ್ದೇ ಮಾಡಿದ ಕೆಲಸ ಇದು. ಉತ್ತರ ಕನ್ನಡದ ಲೇಖಕರ ಕೃತಿಕೋಶ ಗುಡ್ಡ ಕಡಿದು ಮೈಮೇಲೆ ಹಾಕಿಕೊಳ್ಳದಿನ್ನೇನು?

ನಾನು ಅನೇಕ ವರ್ಷಗಳಿಂದ ನಾರಾಯಣ ಶಾನಭಾಗರನ್ನು ನೋಡುತ್ತ ಬಂದಿದ್ದೇನೆ. ಇವರಿಗೆ ಸ್ವಂತ ಕೆಲಸಕ್ಕಿಂತ ಊರ ಉಸಾಬರಿಯಲ್ಲಿಯೇ ಜಾಸ್ತಿ ಆಸಕ್ತಿ. ಅವರು ಇದುವರೆಗೆ ಮಾಡಿದ ಕೆಲಸ ನೋಡಿದರೆ ನನ್ನ ಮಾತಿಗೆ ಸಮರ್ಥನೆ ಸಿಗಬಹುದು. ಆದರೆ ನಾರಾಯಣ ಶಾನಭಾಗರಿಂದ ಯಾರಿಗೂ ತೊಂದರೆಯಿಲ್ಲ, ಅಪಾಯವಿಲ್ಲ, ನಷ್ಟವಿಲ್ಲ. ಅವರು ಅಪಾಯ ತಂದುಕೊಳ್ಳುವುದು ತಮ್ಮ ಯೋಚಿತ ಕೆಲಸಗಳಿಂದಲೇ, ನಷ್ಟ ಮಾಡಿಕೊಳ್ಳುವುದು ತಮ್ಮ ನಿರ್ದಿಷ್ಟ ಶಿಸ್ತಿನಿಂದಲೇ.

ಕೆಲವರು ಬಂದರೆ ಮನೆಯ ಬಾಗಿಲು ಮುಚ್ಚುವುದುಂಟು. ನಾರಾಯಣ ಶಾನಭಾಗರು ಬರುತ್ತಾರೆಂದರೆ ಬಾಗಿಲು ತೆರೆದು ಕೂಡುತ್ತಾರೆ. ಕಾರಣ ಅವರು ಯಾರಿಗೂ ಕೇಡು ಬಯಸುವವರಲ್ಲ ಒಂದು ಬಗೆಯಲ್ಲಿ ನಿರುಪದ್ರವ ಜೀವಿಗಳು.

ಇವರು ತಾವು ಸಾಹಿತಿಗಳಲ್ಲವೆಂದು ಹೇಳಿಕೊಳ್ಳುತ್ತಾರೆ. ಆದರೆ ಹಗಲಿರುಳು ಸಾಹಿತಿಗಳ ಸಂಗದಲ್ಲೇ ಓಡಾಡುತ್ತಿರುತ್ತಾರೆ. ಇವರಿಗೆ ಸಾಹಿತಿಗಳ ಗಾಳಿ ಬಡಿಯದಿರುತ್ತದೆಯೆ? ಹೀಗೆಯೇ ಮಧ್ಯೆ ಓಡಾಡುತ್ತ ಒಂದು ದಿನ ಥಕ್ಕನೆ 'ನಾನೂ ಸಾಹಿತಿ' ಎಂದು ಬಿಟ್ಟರೇನು ಗತಿ ಎಂದು ನಾನು ಆಲೋಚಿಸುತ್ತೇನೆ. ಸದ್ಯಕ್ಕಂತೂ ಆ ಅಪಾಯವಿಲ್ಲ. ಕಾರಣ ಅವರು ಯಾರೂ ಕೈಗೆತ್ತಿಕೊಳ್ಳದ, ಯಾರೂ ಮಾಡದ ಕೆಲಸವನ್ನೇ ಮಾಡುತ್ತಿದ್ದಾರೆ.

ಅವರೊಬ್ಬ ನಿವೃತ್ತ ಇಂಜಿನಿಯರ್. ಮುದಿ ವಯಸ್ಸಿನಲ್ಲಿ ಹಾಯಾಗಿ ಉಂಡು ತಿಂದು ಮಲಗಿ ಕಾಲಕಳೆಯುವುದನ್ನು ಬಿಟ್ಟು ಎಂತೆಂಥ ಯೋಜನೆಗಳನ್ನು ಕಟ್ಟಿಕೊಂಡು ಓಡಾಡುವುದನ್ನು ನೋಡಿದರೆ ಇವರಿಗೆ ಪ್ರಾಯ ಮರುಕಳಿಸಿದೆಯೋ ಎಂಬ ಸಂಶಯ ಬರುತ್ತದೆ. ಇವರ ತಲೆಗೆ ಬರುವ ಯೋಚನೆಗಳೊ ಅದ್ಭುತ; ಅಪ್ರತಿಮ! ಎಲ್ಲವೂ ದುಡ್ಡು ಕಳಕೊಳ್ಳುವ ಯೋಜನೆಗಳೇ! ಹಣ, ಆರೋಗ್ಯ ಕಳಕೊಳ್ಳುವ ಅನೇಕ ಯೋಜನೆಗಳು ಚಾಲ್ತಿಯಲ್ಲಿವೆ. ಆದರೆ ನಾರಾಯಣ ಶಾನಭಾಗರು ಕಳಕೊಳ್ಳುವುದು ದುಶ್ಚಟಕ್ಕಲ್ಲ, ಸತ್ಕಾರ್ಯಕ್ಕೆ. ಒಂದು ದೃಷ್ಟಿಯಲ್ಲಿ ಸದ್ವಿನಿಯೋಗ.

ಬೆಂಗಳೂರಿನ ಅಖಿಲ ಹವ್ಯಕ ಮಹಾಸಭೆಯ ಅಧ್ಯಯನ ಕೇಂದ್ರದ ಪ್ರಧಾನ ನಿರ್ದೇಶಕರಾಗಿದ್ದಾಗ ಅವರು ಮಾಡಿದ್ದು ಇಂಥದ್ದೇ ಕೆಲಸ, ಅದಕ್ಕೆ ಅವರು ಮಾಡಿದ ಓಡಾಟ ಅಷ್ಟಿಷ್ಟಲ್ಲ. ಪತ್ರವ್ಯವಹಾರ, ದೂರವಾಣಿ ಸಂಪರ್ಕ ಕಡಿಮೆಯೇನಲ್ಲ. ಕೆಲವರು ಇವರಿಗೆ 'ಮಳ್ಳು' ಹಿಡಿದಿದೆ ಅಂದಿರಬಹುದು. ಜಗತ್ತಿಗೆ ಒಳ್ಳೆಯದ್ದನ್ನು ಕೊಟ್ಟ ಎಲ್ಲರಿಗೂ ಇಂಥ ಬಿರುದುಗಳೇ ಬಂದಿವೆ. ಆದರೆ ನಾರಾಯಣ ಶಾನಭಾಗರು ಮಾಡಿದ ಕೆಲಸ ನಾಲ್ಕು ಕಾಲ ನಿಲ್ಲುವಂಥದ್ದು. ನಾಲ್ಕು ಜನಕ್ಕೆ ಉಪಯೋಗವಾಗುವಂಥದ್ದು.

ಉತ್ತರ ಕನ್ನಡ ಲೇಖಕರ ಕೃತಿಕೋಶ ಮಾಡುವ ಅಗತ್ಯ ಎಷ್ಟೋ ಜನರಿಗೆ ಗೊತ್ತಿದ್ದು ಕೈಬಿಟ್ಟ ಕಾರ್ಯ. ಅದು ನಾನು ಆರಂಭದಲ್ಲೇ ಹೇಳಿದ ಹಾಗೆ ಗುಡ್ಡ ಕಡಿದು ಮೈಮೇಲೆ ಹಾಕಿಕೊಳ್ಳುವ ಕಾರ್ಯ. ಅದು ಒಬ್ಬರು ಮಾಡುವ ಕೆಲಸವಲ್ಲ. ಸರಕಾರ, ಅಕಾಡೆಮಿ ದೊಡ್ಡ

ದೊಡ್ಡ ಸಂಸ್ಥೆಗಳು ಸಂಪಾದಕ ಮಂಡಲಿಯನ್ನು ರಚಿಸಿ ಮಾಡುವಂತಹ ಕೆಲಸ. ಅದಕ್ಕೆ ಹಣಬೇಕು; ಪತ್ರವ್ಯವಹಾರ, ಓಡಾಟ, ದೂರವಾಣಿ ಸಂಪರ್ಕ ಇತ್ಯಾದಿಗಳೆಲ್ಲ ಬೇಕು. ಮುಖ್ಯವಾಗಿ ಸತತ ಶ್ರಮ, ಸಹನೆ ಬೇಡುವ ಕೆಲಸ. ಇದಕ್ಕೂ ಮೊದಲು ಹವ್ಯಕರ ಕೃತಿಕೋಶ ಮಾಡಿ ಅನುಭವ ಪಡೆದ ಶಾನಭಾಗರು ಇನ್ನು ಮುಂದಾದರೂ ಸುಮ್ಮನಿರುತ್ತಾರೆಂದುಕೊಂಡರೆ ಇನ್ನೊಂದು ಬೃಹತ್ ಸಾಹಸಕ್ಕೆ ಕೈ ಹಾಕಿ ಕಳೆದ ನಾಲ್ಕೈದು ವರ್ಷಗಳಿಂದ ಒದ್ದಾಡಿದ್ದಾರೆ. ಒಂದೊಂದು ಸಾರಿ ಅವರನ್ನು ನೋಡಿದರೆ ಪಾಪ ಎನಿಸುತ್ತದೆ. ಒಮ್ಮೊಮ್ಮೆ ಮಾಡಿದ್ದುಣ್ಣೊ ಮಹಾರಾಯ ಎಂದು ಲೊಚಗುಟ್ಟಬೇಕಾಗುತ್ತದೆ.

ನಾರಾಯಣ ಶಾನಭಾಗರೆಂದರೆ ಒಂದು ಬಗೆಯ ಅಂಟು, ಅಂಟು ಅನ್ನುವುದಕ್ಕಿಂತ, 'ಮೇಣ' ಅನ್ನಬಹುದು. ಮೇಣ ಅಂಟಿದರೆ ಬಿಡುವುದಿಲ್ಲ. ನಾರಾಯಣ ಶಾನಭಾಗರೂ ಅಷ್ಟೆ. ಅವರು ಒಬ್ಬರ ವಿವರ ಕಲೆ ಹಾಕಲು ಹೋದರೆ ಒಂದು ಸಾರೆಯಲ್ಲ ಹತ್ತು ಸಾರೆ ಅವರ ಮನೆಗೆ ಹೋಗುತ್ತಾರೆ. ಒಂದು ಫೋನಿಗೆ ಸ್ಪಂದಿಸದಿದ್ದರೆ ಹತ್ತೆಂಟು ಬಾರಿ ಫೋನಿಸುತ್ತಾರೆ. ಒಂದು ಪತ್ರಕ್ಕೆ ಪ್ರತಿಕ್ರಿಯಿಸದಿದ್ದರೆ ಧಾರಾವಾಹಿಯಾಗಿ ಪತ್ರ ಬರೆಯುತ್ತಾರೆ. ಕೊನೆಗೂ ಇವರಿಂದ ತಲೆ ತಪ್ಪಿಸಿಕೊಂಡು ಓಡಾಡುತ್ತಿರುವ ವ್ಯಕ್ತಿ ಇವರ ಬಲೆಯಲ್ಲಿ ಬೀಳುತ್ತಾನೆ. ತಮಗೆ ಬೇಕಾದ ಮಾಹಿತಿ ಹರಸಾಹಸ ಮಾಡಿ ಪಡೆಯುತ್ತಾರೆ. ಶಾನಭಾಗರು ಯಾವುದಕ್ಕೂ ಸೋಲುವುದಿಲ್ಲ. ಯಾರು ಏನಂದರೂ ನಗುಮುಖದಿಂದಲೇ ಸ್ವಾಗತಿಸುತ್ತಾರೆ. ಕೊನೆಗೂ ಒಂದು 'ಶಿಕಾರಿ' ಮಾಡಿದೆ ಎಂಬ ತೃಪ್ತಿ ಅವರದಾಗುತ್ತದೆ. ನಾರಾಯಣ ಶಾನಭಾಗರ ಪ್ರೀತಿಯ ಕಾಟದಿಂದ ತಪ್ಪಿಸಿಕೊಳ್ಳಲು ಕೆಲವರು ಮಾಹಿತಿ ಪೂರೈಸಿದ್ದಾರೆ. ಇಲ್ಲದಿದ್ದರೆ ಜಪ್ಪಯ್ಯ ಅಂದರೂ ಮಾಹಿತಿ ಕಳಿಸದ ಆಸಾಮಿಗಳಿಂದ ಮಾಹಿತಿ ಸಂಗ್ರಹಿಸುವುದಾಗುತ್ತಿರಲಿಲ್ಲ.

ಇವರ ಈ ಸಂಗ್ರಹದಲ್ಲಿ ಬದುಕುತ್ತಿರುವವರೂ ಇದ್ದಾರೆ. ಹೆಸರುವಾಸಿಗಳೂ ಇದ್ದಾರೆ. ಒಂದೆರಡು ಆಕರಗಳು ಅವರ ಸಹಾಯಕ್ಕೆ ಬಂದಿರಬಹುದು. ಮಿಕ್ಕಿದ್ದನ್ನು ಅವರೇ ಸಂಗ್ರಹಿಸಿದ್ದಾರೆ. ಹಿಂದಿನದನ್ನು ಪರಿಷ್ಕರಿಸಿದ್ದಾರೆ. ಹೊಸತನ್ನು ಸೇರಿಸಿದ್ದಾರೆ. ಅದಕ್ಕೆ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ತೊಡಗಿಸಿದ ಹಣ ಕಡಮೆಯಲ್ಲ. ಈ 'ತಲೆತಿನ್ನುವ' ಕೆಲಸ ಇನ್ನೊಬ್ಬರು ಒಂಟಿಯಾಗಿ ಮಾಡಲು ಸಾಧ್ಯವಿಲ್ಲ. ನಾರಾಯಣ ಶಾನಭಾಗರು ಮಾಡಿದ್ದಾರೆ. ನಾವು ಅವರನ್ನು ಅಭಿನಂದಿಸಬೇಕು. ಸುಮ್ಮನೆ ಅಭಿನಂದಿಸಿದರೆ, ಹೊಗಳಿದರೆ ಸಾಲದು. ಈ ಕೃತಿ ಪ್ರತಿಯೊಬ್ಬರೂ ಕೊಂಡುಕೊಂಡು ಮನೆಯಲ್ಲಿಡಬೇಕು. ಇದು ಕಾಲಕಾಲಕ್ಕೆ ಬೇಕಾಗುವ ಕೃತಿ.

ಅವರು ಯಾವ ಜಾತಿಯವರೆಂಬುದು ನನಗೆ ಮುಖ್ಯವಲ್ಲ. ಅವರಂತಹ ಜನ ಯಾವ ಸಮಾಜದಲ್ಲಿದ್ದರೂ ಪೂಜನೀಯರೇ. ಅವರು ಸಾಹಿತಿಗಳಲ್ಲವೆಂದು ಯಾರು ಹೇಳುತ್ತಾರೆ? ಒಂದು ಅಕಾಡೆಮಿ, ಒಂದು ವಿಶ್ವವಿದ್ಯಾನಿಲಯ ಮಾಡುವ ಕೆಲಸ ಅವರು ಒಬ್ಬಂಟಿಗರಾಗಿ ಮಾಡಿದ್ದಾರೆ. ಕನ್ನಡ ಸಾಹಿತ್ಯಕ್ಕೊಂದು ಮಹತ್ವದ ಆಕರಗ್ರಂಥ ಕೊಟ್ಟ ನಾರಾಯಣ ಶಾನಭಾಗರನ್ನು ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಇನ್ನು ಮುಂದೆಯೂ ಅವರ ಲೇಖನಿ ವಿಶ್ರಾಂತಿ ಪಡೆಯದಿರಲಿ ಎಂದು ಹಾರೈಸುತ್ತೇನೆ.

'ಸಾಹಿತ್ಯ ಸದನ' ಶಾ.ಮಂ. ಕೃಷ್ಣರಾಯ ೨೦೦,
11ನೇ ಕ್ರಾಸ್,
ಗಿರಿನಗರ, ಬೆಂಗಳೂರು

ಉತ್ತರ ಕನ್ನಡ ಜಿಲ್ಲಾ ಗ್ರಂಥಕಾರ ಕೃತಿಕೋಶ
ಒಂದು ಅನಿಸಿಕೆ

ಸುಮಾರು ಒಂದು ವರ್ಷದ ಹಿಂದೆ, ಶ್ರೀ ನಾರಾಯಣ ಶಾನಭಾಗರು ಫೋನಿಸಿ, ಉತ್ತರಕನ್ನಡ ಜಿಲ್ಲಾ ಗ್ರಂಥಕಾರ–ಕೃತಿಕೋಶ ಎಂಬ ಗ್ರಂಥ ರಚನೆ ಮಾಡುತ್ತಲಿದ್ದೇನೆ, ಡಾ. ಕೃಷ್ಣಾನಂದ ಕಾಮತರ ಅಲ್ಪಪರಿಚಯ, ಪ್ರಕಟಿತ ಕೃತಿಗಳು, ಅವುಗಳ ಪುಟಗಳು ಸಂದ ಬಹುಮಾನ, ಪ್ರಶಸ್ತಿಗಳ ಕುರಿತ ಮಾಹಿತಿ ಒದಗಿಸಲು ಕೇಳಿಕೊಂಡಿದ್ದರು. ಅದಕ್ಕೆ ಸಂಬಂಧಿಸಿದ ಫಾರ್ಮುಗಳನ್ನೂ ಕಳಿಸಿದ್ದರು. ಅವು ಚಿಕ್ಕವಿದ್ದು, ಹಾಗೂ ಹೀಗೂ ಮಾಡಿ, ತುಂಬಿ ಕಳಿಸಿದ್ದೆ.

ಅಷ್ಟಕ್ಕೇ ಸುಮ್ಮನಾಗದೇ ವಿವರಗಳಿಗೆ ಮತ್ತೆ ಮತ್ತೆ ಫೋನಿಸಿದರು! ಬಳಿಕ ನನ್ನ ಬರವಣಿಗೆಯ ಬಗ್ಗೆಯೂ ಪತ್ತೆ ಹಚ್ಚಿ ವಿವರ ಕೇಳಿದರು. ಕೇವಲ ಫೋನು/ಕಾರ್ಡ್‌ಗಳಿಂದ ಬೇಸರಿಸದೇ ಮಾಹಿತಿ ಪಡೆಯುವ ಈ ವ್ಯಕ್ತಿಯ ಬಗ್ಗೆ ಕುತೂಹಲ ತಾಳಿದ್ದೆ. ಇತ್ತೀಚೆಗೆ ಅವರನ್ನು ಪ್ರತ್ಯಕ್ಷ ಕಾಣುವಂತಾದಾಗ ವಿಸ್ಮಯ ಸಂತೋಷಗಳಾದವು. ತನ್ನ ಹುಟ್ಟು ಜಿಲ್ಲೆಯಾದ ಉತ್ತರ ಕನ್ನಡದ ಹವ್ಯಕ, ಹವ್ಯಕೇತರ ಸಾಹಿತಿಗಳ ವ್ಯಕ್ತಿ–ಕೃತಿ ಪರಿಚಯದ ವಿವರ ಮಾಹಿತಿ ಪಡೆದು, ಅಧಿಕೃತವಾಗಿ ಪುಸ್ತಕ ರೂಪದಲ್ಲಿ ದಾಖಲಿಸುವದೇ ತನ್ನ ಹಾಬಿ! ಅಂದಾಗ ವಿಸ್ಮಯ ಆಗದೇ ಇದ್ದೀತೆ? ಬರಲಿರುವ ಈ ಸಂಶೋಧನಾ ಗ್ರಂಥಕ್ಕೆ ಅವರು ಸಾಧ್ಯವಿದ್ದ ಆಕರಗಳನ್ನೆಲ್ಲ ಪರಿಶೀಲಿಸಿದ್ದರು. ವ್ಯಕ್ತಿಗಳಿಂದ ಸಂಘಸಂಸ್ಥೆಗಳಿಂದ, ಬೆಂಬಿಡದೇ ಮಾಹಿತಿ ಒಟ್ಟು ಮಾಡಿದ್ದಾರೆ. ಒಂದು ಸಂಸ್ಥೆ ಅಥವಾ ವಿಶ್ವವಿದ್ಯಾಲಯದ ಶಾಖೆಯೊಂದು ಸಿಬ್ಬಂದಿಯ ಸಹಾಯದಿಂದ ಮಾಡಬಹುದಾದ ಕೆಲಸವನ್ನು ಎಡಬಿಡದೆ ಛಲದಿಂದ ಒಬ್ಬರೇ ಮಾಡಿತೋರಿಸಿದ್ದಾರೆ.

ಸಿವಿಲ್ ಇಂಜನಿಯರ್ ಆಗಿದ್ದ ವ್ಯಕ್ತಿ, ಸಾಮಾಜಿಕ ವಿಚಾರ ಮತ್ತು ಸಾಹಿತಿಗಳ ನಿರ್ದಿಷ್ಟ ಸಾಧನೆಯಲ್ಲಿ ಆಸ್ಥೆ ತಳೆದದ್ದು ವಿಶೇಷವಾಗಿತ್ತು. ಪ್ರತಿ ಲೇಖಕರ ಊರು, ಜನ್ಮ ಸ್ಥಳ, ಕಾಲಮಾನ, ಪ್ರಕಟಣಾ ವರ್ಷ, ಪುಟಗಳು, ಪುಸ್ತಕಕ್ಕೆ ಬಂದ ಬಹುಮಾನ ಮುಂತಾದ ಮಾಹಿತಿ ಸಂಗ್ರಹಿಸಿ, ಕ್ರೋಡೀಕರಿಸಿ, ವಿಭಜಿಸಿ, ಕ್ರಮಬದ್ಧವಾಗಿ ದಾಖಲಿಸಿ, ಆಸಕ್ತರಿಗೆಲ್ಲ ಒಳನೋಟ ನೀಡಲು ಶ್ರಮಿಸಿದ್ದು ವಿಶಿಷ್ಟ ಬೌದ್ಧಿಕ ಶ್ರಮದ ಮಾದರಿ ಎನಿಸಿತು.

ಸಾಮಾಜಿಕ ಇತಿಹಾಸದ ಶಾಶ್ವತ ವಿದ್ಯಾರ್ಥಿಯಾದ ನನಗೆ ವಿಶೇಷ ಮೆಚ್ಚಿಗೆ ಆದ ಅಂಶವೆಂದರೆ, ಸಂಗ್ರಹಿಸಿದ ಮಾಹಿತಿಯನ್ನೆಲ್ಲ ಸ್ಪಷ್ಟವಾದ ವಿಂಗಡಣೆ ಮಾಡಿ, ಕೋಷ್ಟಕಗಳಲ್ಲಿ ಕಾಣಿಸಿ, ಆಬಾಲವೃದ್ಧ ಆಸಕ್ತರಿಗೆಲ್ಲ ಸುಲಭವಾಗಿ ಗ್ರಹಿಸುವಂತೆ ಸಾಧ್ಯವಾಗಿಸಿದ್ದು. ನಾರಾಯಣ ಶಾನಭಾಗರೇನಾದರೂ ತನ್ನ ಈ ಸಾಧನೆಗೆ ಅಕ್ಯಾಡೆಮಿಕ್ (ಔಪಚಾರಿಕ) ಒತ್ತು ಕೊಟ್ಟು ಸಮುದಾಯವೊಂದರ ಸಾರಸ್ವತ ಸಾಧನೆಯ ಮೇಲೆ ಕುಟ್ಟಿ ತೋರಿಸಿದಲ್ಲಿ ಪಿಎಚ್.ಡಿ. ಡಿಗ್ರಿ ಅವರದಾಗುತ್ತಿತ್ತು. ಅವರು ಅದಕ್ಕಾಗಿ ಎಳಸಲಿಲ್ಲ. ಮುಂಬರುವ ವರ್ಷಗಳಲ್ಲಿ ಜಾಗತೀಕರಣದ ಆಟಾಟೋಪದಲ್ಲಿ, ಪುಟ್ಟ ಸಮುದಾಯ ಸಂಸ್ಕೃತಿಗಳು ಮಣ್ಣುಗೂಡಿ ಹೋಗಬಹುದಾಗಿದೆ. ಕೆಲವೊಂದು ವ್ಯಕ್ತಿಗಳಾದರೂ ಒಂದಾನೊಮ್ಮೆ ತಮ್ಮ ತಾಯ್‌ಬೇರು, ತಾಯ್ನುಡಿಯ

ಹಿನ್ನೆಲೆಯ ಕುರಿತು ಅಭಿಮಾನ, ಕುತೂಹಲ ತಾಳುವ ಅವಕಾಶ ಬಂದೇ ಬರುತ್ತದೆ. ತನ್ನ ಊರು, ತನ್ನವರ ಸಾಧನೆ ಕುರಿತು ಅರಿಯಲಿಚ್ಚಿಸುವ ಸಂದರ್ಭಗಳು ಬಂದಾಗ, ನಾರಾಯಣ ಶಾನಭಾಗರ ಕೃತಿಗಳು, ವಿಶ್ವವ್ಯಾಪಿಗಳಾದ ಹವ್ಯಕ, ಹವ್ಯಕೇತರ ಉತ್ತರ ಕನ್ನಡಿಗರಿಗೆ ಕೈಪಿಡಿಯಾಗುತ್ತವೆ. ತನ್ನವರನ್ನು ಅರಿಯಲು ದಿಕ್‌ಸೂಚಿ ಆಗುತ್ತವೆ. ಅದಕ್ಕಾಗಿ ಅವರ ಶ್ರಮ ಅಭಿನಂದನೀಯ.

ಬೆಂಗಳೂರು ಜ್ಯೋತ್ಸ್ನಾ ಕೃಷ್ಣನಂದ ಕಾಮತ್

ಗ್ರಂಥಕಾರ ಕೃತಿಕೋಶದ ಸಾರ್ಥಕ್ಯ

ಯಕ್ಷಗಾನ ಗ್ರಂಥಸೂಚಿಯ ಕರ್ತರಾದ ಡಾ. ಪಾದೇಕಲ್ಲು ವಿಷ್ಣುಭಟ್ಟರು ಅದರ ಪ್ರಸ್ತಾವನೆಯಲ್ಲಿ ಹೇಳುತ್ತಾರೆ....

"ಯಾವುದೇ ವಿಷಯದ ಬಗ್ಗೆ ಸಂಶೋಧನೆ ಮತ್ತು ವಿಶೇಷಾಧ್ಯಯನವನ್ನು ನಡೆಸುವಾಗ ವಿಷಯದ ಮತ್ತು ತತ್ಸಂಬಂಧಿಗಳಾದ ಇತರ ವಿಷಯಗಳ ಬಗೆಗಿನ ಹಲವು ಗ್ರಂಥಗಳನ್ನು ಪರಿಶೀಲಿಸಬೇಕಾಗುತ್ತದೆ. ಸಂಶೋಧಕನು ತನ್ನ ಅಧ್ಯಯನಕ್ಕೆ ಪೂರಕವಾದ ಮತ್ತು ಆಕರವಾದ ಗ್ರಂಥಗಳನ್ನು ಮೊದಲು ಪರಿಚಯಿಸಿಕೊಳ್ಳಬೇಕಾಗುತ್ತದೆ. ಅನುಕೂಲವಾಗುವ ಆಕರ ಗ್ರಂಥಗಳ ಪಟ್ಟಿ ಅಥವಾ ಸೂಚಿ ಸಿದ್ಧವಾಗಿಯೇ ಇದ್ದಲ್ಲಿ ಮುಂದಿನ ಅಧ್ಯಯನಗಳಿಗೆ ಹೆಚ್ಚಿನ ಅನುಕೂಲ ಒದಗುವುದಲ್ಲದೇ ಸಂಶೋಧಕನ ಸಮಯ ಶ್ರಮಗಳೆರಡೂ ಹೆಚ್ಚಿನ ಪ್ರಮಾಣದಲ್ಲಿ ಉಳಿತಾಯ ಹೊಂದುತ್ತವೆ. ಆದುದರಿಂದ ನಿಘಂಟು, ಕೋಶ, ಸೂಚಿ ಇತ್ಯಾದಿಗಳಿಗೆ ಸಂಶೋಧನೆಯಲ್ಲಿ ಆಕರಗ್ರಂಥಗಳ ಸ್ಥಾನವಿದೆ.

– –

ಕನ್ನಡ ಗ್ರಂಥಸೂಚಿ ಸಂಪುಟ–1ರ ಮೊದಲ ಮಾತುಗಳಲ್ಲಿ ಡಾ.ದೇ. ಜವರೇಗೌಡರು ಹೇಳುತ್ತಾರೆ.

"ಗ್ರಂಥಸೂಚಿ ಪಂಡಿತರಿಗೆ ಕರತಲ ಗ್ರಂಥಾಲಯವಾದರೆ ಸಂಶೋಧಕರಿಗೆ ದಿವ್ಯ ಮಾರ್ಗದರ್ಶಿಯಾಗುತ್ತದೆ, ಅಷ್ಟೇ ಅಲ್ಲ ಇದು ಕನ್ನಡದ ಹಿರಿಯ ಕೋಡಾಗುತ್ತದೆ. ಗ್ರಂಥಸೂಚಿ ಬರಿಯ ಪಟ್ಟಿಯಲ್ಲ, ಬಹುಮುಖ ಪ್ರಯೋಜನವುಳ್ಳ ಸಾರಸ್ವತ ಸಂಗ್ರಹ"

Winners don't *do different things,*
They do things differently.
- Shiv Khera, Management Expert

ಪರಿವಿಡಿ

1.	ಅಧ್ಯಾಯ 1 :	ಪ್ರಸ್ತಾವನೆ	1
2	ಅಧ್ಯಾಯ 2 :	ಪ್ರಾಚೀನ ಕಾಲ	17
3	ಅಧ್ಯಾಯ 3 :	ಆಧುನಿಕ ಕಾಲ–ಕೀರ್ತಿಶೇಷರು	42
4	ಅಧ್ಯಾಯ 4 :	ಆಧುನಿಕ ಕಾಲ–ವರ್ತಮಾನರು ಅ. ಪುರುಷರು ಬ. ಮಹಿಳೆಯರು	 172 419
5	ಅನುಬಂಧ 1 :	ಆಗಂತುಕ ಗ್ರಂಥಕಾರರು	463
6	ಅನುಬಂಧ 2 :	ಅವಶ್ಯಕ ಮಾಹಿತಿ ಲಭ್ಯವಾಗದ ಗ್ರಂಥಕಾರರ ಕುರಿತ ಲಭ್ಯಮಾಹಿತಿ	495
7	ಅನುಬಂಧ 3 :	ಕನ್ನಡ ಸಾಹಿತ್ಯ ಪರಿಷತ್ತಿನ ಉತ್ತರಕನ್ನಡ ಜಿಲ್ಲಾ ಘಟಕ ಮತ್ತು ತಾಲೂಕಾ ಘಟಕಗಳು	500
8	ಅನುಬಂಧ 4 :	ಉತ್ತರಕನ್ನಡ ಜಿಲ್ಲೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳು	505
9	ಅನುಬಂಧ 5 :	ಉತ್ತರಕನ್ನಡ ಜಿಲ್ಲೆಯ ಕರ್ನಾಟಕ ಸಂಘಗಳು	508
10	ಅನುಬಂಧ 6 :	ಕರ್ನಾಟಕ ರಾಜ್ಯ ಚುಟುಕು ಪರಿಷತ್ತಿನ ಉತ್ತರ ಕನ್ನಡ ಜಿಲ್ಲಾ ಘಟಕದ ಸಂಕ್ಷಿಪ್ತ ಮಾಹಿತಿ	512
11	ಅನುಬಂಧ 7 :	ಉತ್ತರ ಕನ್ನಡದಲ್ಲಿ ಕೊಂಕಣಿ ಸಾಹಿತ್ಯ ಚಟುವಟಿಕೆಗಳು	513
12	ಅನುಬಂಧ 8 :	ಜಿಲ್ಲೆಯ ಸಾಹಿತಿ–ಸಾಹಿತ್ಯ ಕುರಿತ ವಿಶೇಷ ಅಧ್ಯಯನಗಳು	514
13	ಅನುಬಂಧ 9 :	ಕೆಲವು ಮಾಹಿತಿಗಳು	515
14	ಅನುಬಂಧ 10 :	ಚಿತ್ರಸಂಪದ	516

ಅಧ್ಯಾಯ 1

ಪ್ರಸ್ತಾವನೆ

ಕನ್ನಡ ನಾಡಿನ ಯಾವುದೇ ಜಿಲ್ಲೆಗೆ ತನ್ನದೇ ಆದ ಸಾಹಿತ್ಯ ಚರಿತ್ರೆ ಅಥವಾ ಗ್ರಂಥಕಾರ ಕೃತಿಕೋಶ ಹೊಂದುವುದೆಂದರೆ ಅದು ಅಭಿಮಾನದ, ಹೆಮ್ಮೆಯ ಸಂಗತಿ. ಕ್ರಿ.ಶ. 1969ರಲ್ಲಿಯೇ 'ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು' ಎಂಬ 550 ಪುಟಗಳ ಕೃತಿ ಬಂದಿದೆಯೆಂಬುದು ಗಮನಾರ್ಹ. ಇದು ಜಿಲ್ಲೆಯ ಸಾಹಿತ್ಯ ಚರಿತ್ರೆಯ ಪ್ರಥಮ ಪ್ರಯತ್ನವೂ ಹೌದು. ಕೃತಿಕಾರರಾದ ಶ್ರೀ ಎನ್.ಕೆ. ಹೆಗಡೆ ಹೆಗಡೆ ಕುಮಟಾ ಮತ್ತು ಶ್ರೀ ಆಯ್.ಎಸ್. ಭಟ್ಟ ಬಾಡ ಕುಮಟಾ ಇವರು ಅಂದು ಹೊನ್ನಾವರ ತಾಲೂಕಿನ ಕಾಸರಕೋಡಿನ ಜನತಾ ವಿದ್ಯಾಲಯದಲ್ಲಿ ಶಿಕ್ಷಕರು. ಅವರ ತೀವ್ರ ಪ್ರಯತ್ನ ಅತ್ಯಂತ ಪ್ರಶಂಸನೀಯ. ಈ ಕೃತಿಯಲ್ಲಿ ಜಿಲ್ಲೆಯ 200 ಗ್ರಂಥಕಾರ ಮತ್ತು ಕೃತಿಗಳ ಪರಿಚಯವಿದೆ. ಅಂದಿನ ದಿನಗಳಲ್ಲಿ ಕನ್ನಡ ನಾಡಿನ ಇತರ ಯಾವುದೇ ಜಿಲ್ಲೆಯಲ್ಲಿ ಇಂಥ ಕೃತಿ ರಚನೆಯಾಗಿರುವುದು ಕಂಡುಬಂದಿಲ್ಲ. ಕನ್ನಡದ ಆದಿಕವಿ ಪಂಪನ ಜಿಲ್ಲೆಯಲ್ಲಿ ನುಡಿ ಸೇವಕ-ಸಾಹಿತ್ಯ ಕುರಿತ ಆದ್ಯ ಕೃತಿಯೊಂದು ಪ್ರಕಟವಾಗಿರುವುದು ಚಾರಿತ್ರಿಕ ದಾಖಲೆ.

ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವ ವರ್ಷದ ಸಡಗರದಲ್ಲಿದೆ. ಕನ್ನಡ ಸಾಹಿತ್ಯದ ಹುಟ್ಟಿನಿಂದ ಇಂದಿನ ತನಕದ ಸಮಗ್ರ ಗ್ರಂಥಕಾರ-ಕೃತಿಕೋಶವು ಅತ್ಯಾವಶ್ಯಕ ಗ್ರಂಥವಾದರೂ ಅಂಥದೊಂದು ಕೃತಿ ಈ ತನಕವೂ ಹೊರಬಂದಿಲ್ಲವೆಂಬುದು ಕಟುವಾಸ್ತವ. ಬಿಡಿ-ಬಿಡಿಯಾಗಿ ಬಂದ ಕೆಲವು ಕೋಶ ಮತ್ತು ಕನ್ನಡ ಸಾಹಿತ್ಯ ಚರಿತ್ರೆಗಳು ಪ್ರತಿಷ್ಠಿತ/ನಾಮಾಂಕಿತ ಸಾಹಿತಿಗಳ ಗ್ರಂಥಗಳಿಗೆ ಸೀಮಿತವಾಗಿವೆಯೆಂದು ಕಂಡುಬರುತ್ತವೆ. ಕೇವಲ ಒಂದೇ ಪುಸ್ತಕ ಪ್ರಕಟಗೊಳಿಸಿಕೊಂಡವರನ್ನೂ ಒಳಗೊಂಡ ರಾಜ್ಯಮಟ್ಟದ ಗ್ರಂಥಕಾರ ಕೃತಿಕೋಶ ರಚನೆ ಸಾಕಷ್ಟು ಶ್ರಮ, ಸಮಯ ಮತ್ತು ವೆಚ್ಚವನ್ನು ಬಯಸುತ್ತದೆ. ಅಂಥದೊಂದು ಕೋಶಕ್ಕಾಗಿ ಸಾಹಿತ್ಯ ಪರಿಷತ್ತಿನಂಥ ಕೇಂದ್ರೀಯ ಸಂಸ್ಥೆ ಸೂಕ್ತ ಕಾರ್ಯಯೋಜನೆ ರೂಪಿಸಿಕೊಂಡರೆ ಉತ್ತಮ. ರಾಜ್ಯದ ಪ್ರತಿ ತಾಲೂಕಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕವು ಆಯಾ ತಾಲೂಕಿನ ಗ್ರಂಥಕಾರ ಕೃತಿಕೋಶ ರಚಿಸುವ ಜವಾಬ್ದಾರಿ ವಹಿಸಿಕೊಳ್ಳುವಂತಾದರೆ ಕೆಲಸ ಸರಳವೂ ಸುಗಮವೂ ಆದೀತು. ರಾಜ್ಯದ ಜಿಲ್ಲಾ ಮತ್ತು ತಾಲೂಕು ಸಾಹಿತ್ಯ ಪರಿಷತ್ತಿನ ಘಟಕಗಳು ವರ್ಷಕೊಮ್ಮೆ ಕೇಂದ್ರೀಯ ಪರಿಷತ್ತಿನಿಂದ ಬಂದ ವಾರ್ಷಿಕ ಅನುದಾನ/ಸಹಾಯದಿಂದ ಜಿಲ್ಲಾ ಮತ್ತು ತಾಲೂಕಾ ಸಾಹಿತ್ಯ ಸಮ್ಮೇಳನ ಮಾಡುವದರಲ್ಲಿಯೇ ತೃಪ್ತಿಪಟ್ಟುಕೊಳ್ಳುವಂತಾಗಬಾರದು. ಶಾಶ್ವತವಾಗಿನಿಲ್ಲಬಲ್ಲ ರಚನಾತ್ಮಕ ಕಾರ್ಯಕ್ರಮಕ್ಕೂ ಮಹತ್ವ ಕೊಡುವಂತಾಗಬೇಕು. ಕೆಲವು ತಾಲೂಕು, ಜಿಲ್ಲೆಗಳಲ್ಲಿ ಕರ್ನಾಟಕ ಸಂಘ, ಕನ್ನಡ ಸಂಘ ಮುಂತಾದ ಸಂಘಟನೆಗಳೂ ಇವೆ. ಈಗ ಎಲ್ಲಾ ತಾಲೂಕುಗಳಲ್ಲಿಯೂ ಪದವಿ ಕಾಲೇಜುಗಳಿವೆ. ಅಲ್ಲಿ ಕನ್ನಡ ವಿಭಾಗವೂ ಇದೆ. ಈ ಎಲ್ಲ ವ್ಯವಸ್ಥೆಗಳು ಸಂಘಟಿತ/ಸಮನ್ವಯ ಕಾರ್ಯಯೋಜನೆಯನ್ನು ರೂಪಿಸಿಕೊಂಡಾದರೂ ಇಂಥದೊಂದು ಉಪಕ್ರಮಕ್ಕೆ ನಾಂದಿ ಹಾಡುವಂತಾಗಲಿ. ಉತ್ತರ ಕನ್ನಡದಲ್ಲಿ ಎಲೆಮರೆಯ ಕಾಯಿಗಳಂತೆ ಆಗಿಹೋದ ಅದರಲ್ಲೂ ಕ್ರಿ.ಶ. 1900-1950ರ ಅವಧಿಯಲ್ಲಿ ಆಗಿಹೋದ ಕೆಲವು ಗ್ರಂಥಕಾರರ ಕನಿಷ್ಟ ಪರಿಚಯ/ಮಾಹಿತಿ ನೀಡುವವರೂ ಸಿಗಲಾರದ ಪರಿಸ್ಥಿತಿ ಇದೆಯೆಂಬುದು ಪ್ರಸಕ್ತ ಗ್ರಂಥಕರ್ತನ ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡುಬಂದಿದೆ. ಈ ಪರಿಸ್ಥಿತಿ ನಿಜಕ್ಕೂ ವಿಷದನೀಯ. ಪ್ರತಿ ತಾಲೂಕಿನಲ್ಲಿ ಇಂಥಹ ಗ್ರಂಥಕಾರರನ್ನು ಗುರುತಿಸಿ ಅವರ ಬದುಕು-ಬರಹಗಳ ಬಗ್ಗೆ ವ್ಯವಸ್ಥಿತ ವಿಚಾರ ಸಂಕಿರಣಗಳು ನಡೆದರೆ

ಈ ಸಮಸ್ಯೆಗೆ ಪರಿಹಾರ ದೊರಕಬಹುದೇನೋ. ಯಾವುದೇ ವ್ಯಕ್ತಿ ಸ್ವಯಂಪ್ರೇರಣೆಯಿಂದ ಇಂತಹ ಗ್ರಂಥಕಾರರಲ್ಲಿ ಕನಿಷ್ಟ ಒಬ್ಬರ ಬಗ್ಗೆಯಾದರೂ ಸಾಧಾರಣ ವಿವರಗಳನ್ನು ಸಂಗ್ರಹಿಸಿದಲ್ಲಿ ಅವನನ್ನು ಸೂಕ್ತ ರೀತಿಯಲ್ಲಿ ಗೌರವಿಸುವ ಯೋಜನೆಯಾದರೂ ಬರಲಿ.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ವರ್ಷದಲ್ಲಿಯಾದರೂ ಇಂತಹ ರಚನಾತ್ಮಕ ಯೋಜನೆ ಕಾರ್ಯರೂಪಕ್ಕೆ ಬರಲಿ ಎಂದು ಆಶಿಸಲಾಗಿದೆ.

* * * * *

ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು ಕೃತಿಯಲ್ಲಿ 201 ಗ್ರಂಥಕಾರ ಕೃತಿಗಳ ವಿವರ ಇದೆ. ಅದರಲ್ಲಿ ದಾಖಲಾದ ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿಗಳು (ಪು. 61) ತೀರ್ಥಹಳ್ಳಿ (ಶಿವಮೊಗ್ಗ ಜಿಲ್ಲೆ) ತಾಲೂಕಿನವರು. ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರ ಸಂಖ್ಯೆ 200 ಮಾತ್ರ. ಕೃತಿಯ ಪರಿಶಿಷ್ಟದಲ್ಲಿ 5 ಗ್ರಂಥಕಾರರ ವಿವರ ದಾಖಲಾಗಿದ್ದು ಇವರೆಲ್ಲ ಬೇರೆ ಜಿಲ್ಲಾ ಮೂಲದವರಾಗಿದ್ದರೂ ಕಾರಣಾಂತರಗಳಿಂದ ಈ ಜಿಲ್ಲೆಗೆ ಬಂದಿದ್ದು ಸಾಹಿತ್ಯ ಕೃಷಿ ಮಾಡಿದವರಾಗಿದ್ದಾರೆ.

"ಅಂಕೋಲೆ" ಎಂಬ ಕೃತಿಯಲ್ಲಿ ಅಂಕೋಲೆಯ ಸಾಹಿತ್ಯ ಸಮೃದ್ಧಿ ಎಂಬ ದೀರ್ಘ ಲೇಖನವಿದ್ದು ಲೇಖಕರಾದ ಶ್ರೀ ವಿಷ್ಣುನಾಯ್ಕರು ಹೀಗೆ ಹೇಳಿದ್ದಾರೆ.

"ಯಾವುದೇ ಒಂದು ಪ್ರದೇಶದ ಸಾಧಕರ ಇಲ್ಲವೇ ಪ್ರತಿಭೆಗಳ ಪರಿಚಯ ಮಾಡಿಕೊಡುವವರಿಗೆ ಎದುರಾಗಬಹುದಾದ ಆರಂಭದ ಒಂದು ತೊಡಕನ್ನೇ ಇಲ್ಲಿ ನಾನೂ ಎದುರಿಸಬೇಕಾಗಿ ಬಂದಿದೆ. ಅಂಕೋಲೆಯ ಸಾಹಿತ್ಯ ಸಮೃದ್ಧಿ ಕುರಿತು ಬರೆಯುವಾಗ–ಒಬ್ಬ ವ್ಯಕ್ತಿ ಅಂಕೋಲೆಯವ ಎಂದು ಪರಿಗಣಿಸುವುದಕ್ಕೆ ಅನುಸರಿಸಬೇಕಾದ ಮಾನದಂಡಯಾವುದು–ಎಂಬುದೇ ಆ ತೊಡಕು. ಕನ್ನಡ ಸಾಹಿತ್ಯದ ಕಣಜಕ್ಕೆ ಕಾಳು ಸೇರಿಸಿದವರಲ್ಲಿ ಈ ನೆಲದ ಋಣವುಂಡ ಮೂರು ಮಾದರಿಯ ಬರಹಗಾರರಿದ್ದಾರೆ. ಮೊದಲನೆಯದಾಗಿ ಈ ತಾಲೂಕಿನಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದು, ಇಲ್ಲಿಯೇ ಬದುಕನ್ನು ಸವೆಸಿ ಸಾಹಿತ್ಯಕೃಷಿ ಮಾಡಿಕೊಂಡಿರುವವರು. ಎರಡನೆಯದಾಗಿ ಇಲ್ಲೇ ಹುಟ್ಟಿ ಬೆಳೆದು, ಈ ಭಾಗದ ಜೀವಸತ್ವವನ್ನೂ ಸಾಂಸ್ಕೃತಿಕ ಸೊಗಡನ್ನೂ ಮೈಗೂಡಿಸಿಕೊಂಡು ಕೇವಲ ಉದ್ಯೋಗಾರ್ಥ ಬೇರೆ ಬೇರೆ ಪ್ರದೇಶಗಳಲ್ಲಿ ಇದ್ದು ಸಾಹಿತ್ಯಕೃಷಿ ಮಾಡಿದವರು. ಮೂರನೆಯದಾಗಿ ಈ ತಾಲೂಕಿನ ಹೊರಗೆ ಬೇರಾವುದೋ ನೆಲದಲ್ಲಿ ಹುಟ್ಟಿ ಉದ್ಯೋಗದ ನಿಮಿತ್ತ ಈ ನೆಲಕ್ಕೆ ಬಂದು ಸರಿಸುಮಾರು ಒಂದು ತಲೆಮಾರನ್ನಾದರೂ ಪ್ರಭಾವಿಸುವಷ್ಟು ಕಾಲ ಇಲ್ಲಿದ್ದೇ ಸಾಹಿತ್ಯ ಕೃಷಿ ಮಾಡಿದವರು. ಈ ಲೇಖನದೊಳಗೆ ಈ ಮೂರು ಮಾದರಿಯ ಬರಹಗಾರರು ಬರುತ್ತಾರೆ."

ಶ್ರೀಯುತರು ಗುರುತಿಸಿದ ಮೂರು ಮಾದರಿಗಳಲ್ಲಿ ಮೊದಲಿಗರು ಸರ್ವಗ್ರಾಹ್ಯ. ಎರಡನೆಯ ಮಾದರಿಯಲ್ಲಿ ಈ ಪರಿಗಣನೆ/ಸವಲತ್ತು ವಲಸೆಹೋದ ಮೊದಲನೇ ತಲೆಮಾರಿಗಷ್ಟೇ ಸೀಮಿತಗೊಂಡರೆ ಸೂಕ್ತವೆಂದೂ ಮೂರನೇ ಮಾದರಿಯವರನ್ನು ಗುರುತಿಸಿ ಅವರನ್ನು ಅನುಬಂಧದಲ್ಲಿ ಸೇರಿಸುವದು ಸೂಕ್ತವೆಂದೂ ಅನುಭವಿಗಳ ಅಭಿಪ್ರಾಯವಿದೆ.

ಇನ್ನೂ ನಾಲ್ಕು ಮಾದರಿಯ ಗ್ರಂಥಕಾರರನ್ನು ಗುರುತಿಸಲು ಸಾಧ್ಯ. ಇದು ಮಹಿಳೆಯರಿಗೆ ಹಾಗೂ ದತ್ತಕವಾಗಿ ಹೋದ/ಬಂದವರಿಗೆ ಮಾತ್ರ ಸೀಮಿತ. ಸಾಂಪ್ರದಾಯಿಕವಾಗಿ ಬಂದ ಆಚರಣೆಯ ಪ್ರಕಾರ ಈ ಜಿಲ್ಲೆಯ ಸೊಸೆಯಾಗಿ ಬಂದ

ಪರಜಿಲ್ಲಾ ಮೂಲದ ಮಹಿಳೆ ಪರಿಗಣನೆಗೆ ಅರ್ಹಳಾಗುತ್ತಾಳೆ. ಆದರೆ ಪರಜಿಲ್ಲೆಯ ಸೊಸೆಯಾಗಿ ಹೋದ ಈ ಜಿಲ್ಲೆಯ ಮಹಿಳೆ ಪರಿಗಣನೆಯಿಂದ ಹೊರತಾಗುತ್ತಾಳೆ. ಈ ಜಿಲ್ಲೆಯ ಪುರುಷನು ಪರಜಿಲ್ಲೆಗೆ ದತ್ತಕವಾಗಿ ಹೋದಾಗ ಪರಿಗಣನೆಗೆ ಹೊರತಾಗುವದು ಮತ್ತು ಪರಜಿಲ್ಲೆಯ ಪುರುಷನು ಈ ಜಿಲ್ಲೆಗೆ ದತ್ತಕವಾಗಿ ಬಂದಾಗ ಪರಿಗಣನೆಗೆ ಅರ್ಹನಾಗುವುದು ಕ್ರಮಪ್ರಾಪ್ತ.

ಉಪರೋಕ್ತ ಮಾನದಂಡಗಳ ಅಳವಡಿಕೆಯಿಂದಾಗಿ

ಈ ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ಮುಂಬಯಿವಾಸಿ ಚಿತ್ತಾಲ ಬಂಧುಗಳು, ಸಾಗರವಾಸಿ ಡಾ. ಜಿ.ಎಸ್. ಭಟ್ಟ ಮುಂತಾದವರನ್ನು ಇದೇ ಜಿಲ್ಲೆಯ ಗ್ರಂಥಕಾರರೆಂದು ಪರಿಗಣಿಸಲಾಗಿದೆ.

ಡಾ.ಜಿ.ಎಸ್. ಭಟ್ಟರು ಸಾಗರದಲ್ಲಿ ಮನೆಮಾಡಿ ವಾಸ್ತವ್ಯ ಹೂಡಿದ್ದರಿಂದ ಅವರ ಮಗ ಯೋಗೀಶರ ಕೃತಿ ಪ್ರಕಟಗೊಂಡಿದ್ದರೂ ಅವರನ್ನು ಪರಿಗಣಿಸಲಾಗಿಲ್ಲ.

ಕುಂದಾಪುರ ತಾಲೂಕಿನವರಾದ ಬಿ.ಎಚ್. ಶ್ರೀಧರರನ್ನು ಆಗಂತುಕರೆಂದು ಅವರನ್ನು ಅನುಬಂಧದಲ್ಲಿ ದಾಖಲಿಸಿದೆಯಾದರೂ ಅವರು ಉತ್ತರ ಕನ್ನಡವಾಸಿಯಾದ್ದರಿಂದ ಅವರ ಮಗ ಶಿರಸಿವಾಸಿ ರಾಜಶೇಖರ ಹೆಬ್ಬಾರರನ್ನು ಈ ಜಿಲ್ಲೆಯವರೆಂದು ಪರಿಗಣಿಸಲಾಗಿದೆ.

ಡಾ. ಶಾಂತಿನಾಥ ದೇಸಾಯಿಯವರು ಹಳಿಯಾಳದವರಾಗಿದ್ದರೂ ಧಾರವಾಡ ಜಿಲ್ಲೆಯ ಕುಟುಬಂದಕ್ಕೆ ದತ್ತಕವಾಗಿ ಹೋದವರಾದ್ದರಿಂದ ಅವರನ್ನು ಪರಿಗಣಿಸಲಾಗಿಲ್ಲ.

ಸಿದ್ದಾಪುರ ತಾಲೂಕಿನಲ್ಲಿ ಹುಟ್ಟಿ ಬೆಳೆದ ಡಾ.ಶಾಲಿನಿ ರಘುನಾಥ ಭಟ್ಟರು ಶಿವಮೊಗ್ಗ ಜಿಲ್ಲಾ ಸೂರಬ ತಾಲೂಕಿನ ಡಾ.ರಘುನಾಥ ಭಟ್ಟರ ಪತ್ನಿಯಾಗಿ ಹೋಗಿದ್ದರಿಂದ ಅವರನ್ನು ಪರಿಗಣಿಸಲಾಗಿಲ್ಲ.

ಸೂರಬ ತಾಲೂಕಿನ ಕಂತನ ಹಳ್ಳಿ ಶ್ರೀ ಪತಿ ಹೆಗಡೆ ಯವರ ಮಗಳು ಡಾ.ಚಂದ್ರಮತಿಯವರು ಶಿರಸಿ ತಾಲೂಕಿನ ಡಾ. ರಾಮಕೃಷ್ಣ ಜೋಶಿ ಸೋಂದಾ ಇವರ ಪತ್ನಿಯಾಗಿ ಬಂದಿದ್ದರಿಂದ ಪರಿಗಣಿಸಲ್ಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಬಿ.ಎ. ಸನದಿ, ರಾಣೆಬೆನ್ನೂರು ತಾಲೂಕಿನ ಪುಟ್ಟು ಕುಲಕರ್ಣಿ ಮುಂತಾದವರು ವರ್ತಮಾನದಲ್ಲಿ ಉತ್ತರ ಕನ್ನಡ ಜಿಲ್ಲಾ ವಾಸಿಗಳು; ಅಂಕೋಲಾ ಕಾಲೇಜಿನಲ್ಲಿ ದಶಕಗಳ ಕಾಲ ಪ್ರಾಧ್ಯಾಪಕರಾಗಿದ್ದ ಸವದತ್ತಿ ತಾಲೂಕಿನ ವಿ.ಎ. ಜೋಶಿಯವರು ಸದ್ಯ ಧಾರವಾಡ ವಾಸಿಗಳು – ಆದರೂ ಇವರನ್ನು ಆಗಂತುಕ ಗ್ರಂಥಕಾರರೆಂದು ಅನುಬಂಧದಲ್ಲಿ ದಾಖಲಿಸಿದೆ.

ಪ್ರಸಕ್ತ ಕೋಶ ರಚನೆಗಾಗಿ ಸುಮಾರು ಎರಡು ವರ್ಷ ಕಾಲ ಮಾಹಿತಿ ಸಂಗ್ರಹಕ್ಕಾಗಿ ನಡೆದ ಕ್ಷೇತ್ರಕಾರ್ಯದಲ್ಲಿ ಲಭ್ಯವಾದ ಮಾಹಿತಿಗಳನ್ನು ಪೂರ್ವೋಕ್ತ ಮಾನದಂಡಗಳ ಆಧಾರದ ಮೇಲೆ ಪರಿಷ್ಕರಣೆಗೊಳಪಡಿಸಿ ಸಂಗ್ರಹಿತ ವಿವರಗಳನ್ನು ಕಾಲಮಾನದ ಮೇರೆಗೆ ನಿಗದಿತ ಅಧ್ಯಾಯಗಳಲ್ಲಿ ವಿಂಗಡಿಸಿ ನೀಡಲಾಗಿದೆ.

ಸಾಹಿತ್ಯ ರಚನೆಯ ಕಾಲಘಟ್ಟಗಳು : ಜಿಲ್ಲೆಯಲ್ಲಿ ಕ್ರಿ.ಶ. ೮೦೦ಕ್ಕಿಂತಲೂ ಮೊದಲು ಸಾಹಿತ್ಯ ರಚನೆಯಾಗಿರಬಹುದಾದರೂ ಅದರ ಸುಳಿವು ಇನ್ನೂ ಸಿಕ್ಕಿಲ್ಲ. ಪ್ರಾರಂಭದಿಂದ ಕ್ರಿ.ಶ. ಸು. 1900 ರ ತನಕ ರಚನೆಯಾದ ಸಾಹಿತ್ಯ ಪ್ರಾಚೀನ ಇತಿಹಾಸ, ಪುರಾಣ,

ಕಾವ್ಯ, ನಾಟಕ ಮುಂತಾದ ಕೃತಿಗಳನ್ನು ಅವಲಂಬಿಸಿದ್ದು ಕಂಡುಬರುತ್ತದೆ. ಸಂಸ್ಕೃತ, ಕನ್ನಡ, ಮರಾಠಿ ಭಾಷೆಗಳಲ್ಲಿ ರಚಿತವಾದ ಈ ಗ್ರಂಥಕಾರರ ದೇಶ ಕಾಲಗಳನ್ನು ಗುರುತಿಸುವುದು ಕಷ್ಟಸಾಧ್ಯವಾಗಿದೆ. ಇದಕ್ಕೆ ಪುರಾತನ ಕವಿಗಳು ಸ್ವನಾಮ-ದೇಶ-ಕಾಲ ಇತ್ಯಾದಿ ಮೋಹದೂರರಾಗಿದ್ದರು, ಅವರು ತಮ್ಮ ಕೀರ್ತಿಕಾಯಕ್ಕೆ ಮಹತ್ವ ನೀಡಿದರು, ಭೌತಿಕ ಕಾಯಕ್ಕಲ್ಲ, ಆದ್ದರಿಂದಲೇ ತಮ್ಮ ವ್ಯಕ್ತಿಗತ ವಿವರಗಳನ್ನು ದಾಖಲಿಸದಿರಬಹುದು ಎಂಬುದೊಂದು ಸಮಾಧಾನವನ್ನು ಹೇಳಬಹುದಾಗಿದೆ. ಕ್ರಿ.ಶ. 1900ರ ನಂತರದಲ್ಲಿ ಸ್ವತಂತ್ರ ಕೃತಿಗಳ ರಚನೆ ಬಹುಮುಖಿಯಾಗುತ್ತ ನಡೆದಿದೆ. ಅಲ್ಲದೇ ಮಾಹಿತಿ ಪ್ರಜ್ಞೆ ಬೆಳೆದುಬಂದಿರುವುದರಿಂದಾಗಿ ಐತಿಹಾಸಿಕ ದಾಖಲೀಕರಣಯೋಗ್ಯ ವಿವರಗಳ ದಾಖಲಾತಿ ಮತ್ತು ಸಂಗ್ರಹ ಪ್ರವೃತ್ತಿಯೂ ಬೆಳೆದಿದೆ. ಆದ್ದರಿಂದ ಅಧ್ಯಯನ ದೃಷ್ಟಿಯಿಂದ ಕ್ರಿ.ಶ. 1900ನ್ನು ಒಂದು ಕಾಲ್ಪನಿಕ ಗಡಿಯಾಗಿಟ್ಟುಕೊಂಡು ಅದಕ್ಕಿಂತ ಹಿಂದಿನದನ್ನು ಪ್ರಾಚೀನಕಾಲ ಎಂದೂ ಅದರ ನಂತರದ ಕಾಲವನ್ನು ಆಧುನಿಕ ಕಾಲ ಎಂದೂ ಗುರುತಿಸಿಕೊಳ್ಳಲಾಗಿದೆ.

ಪ್ರಾಚೀನಕಾಲ (ಪ್ರಾರಂಭದಿಂದ ಕ್ರಿ.ಶ. 1900 ರ ತನಕ) : ಈ ಕಾಲದ ಗ್ರಂಥಕಾರರನ್ನು **ಕಾಲಾನುಕ್ರಮ**ದಲ್ಲಿ ದಾಖಲಿಸಲು ಪ್ರಯತ್ನಿಸಲಾಗಿದೆ. (ನೋಡಿ ಅಧ್ಯಾಯ 2). ಇವರಲ್ಲಿ ಸಂಸ್ಕೃತ ಗ್ರಂಥಕಾರರಾದ ವಿದ್ಯಾಮಾಧವ ಪಂಡಿತ, ವಿದ್ಯಾರಣ್ಯ, ಸಾಯಣಾಚಾರ್ಯ, ಗಂಗಾಧರೇಂದ್ರ ಸರಸ್ವತಿ; ಕನ್ನಡ ಗ್ರಂಥಕಾರರಾದ ಪಂಪ, ಸಾಳ್ವ, ಭಟ್ಟಾಕಳಂಕ, ಸದಾಶಿವರಾಯ, ಶುಭಾನಂದ ಪಿಕಳೆ, ಗೇರಸೊಪ್ಪೆಯ ಶಾಂತಯ್ಯ, ಸೂರಿ ವೆಂಕಟರಮಣ ಶಾಸ್ತ್ರಿ, ಶಾಮರಾವ್ ವಿಠ್ಠಲ ಕಾಯ್ಕಿಣಿ ಮತ್ತು ವಿಠ್ಠಲ ಕೃಷ್ಣ ಕಾಯ್ಕಿಣಿ ಇವರು ಪ್ರಮುಖರು.

ಆಧುನಿಕ ಕಾಲ (ಕ್ರಿ.ಶ. 1900 ರಿಂದ ಇಲ್ಲಿಯ ತನಕ) : ಈ ಕಾಲದ ಗ್ರಂಥಕಾರರನ್ನು ಅಧ್ಯಯನ/ದಾಖಲಾತಿ ಅನುಕೂಲಕ್ಕಾಗಿ **ಕೀರ್ತಿಶೇಷ** ಮತ್ತು **ವರ್ತಮಾನ**ದವರೆಂದು ವರ್ಗೀಕರಿಸಿಕೊಂಡು 2 ಅಧ್ಯಾಯಗಳಲ್ಲಿ ಪ್ರತ್ಯೇಕವಾಗಿ **ಅಕಾರಾದಿ**ಯಾಗಿ ದಾಖಲಿಸುವ ಪ್ರಯತ್ನಮಾಡಲಾಗಿದೆ. (ನೋಡಿ ಅಧ್ಯಾಯ 3 ಮತ್ತು 4.) ಈ ವಿಭಾಗದಲ್ಲಿ ಗುರುತಿಸಲಾದ 363 ಗ್ರಂಥಕಾರರಲ್ಲಿ ಗೌರವ ಡಾಕ್ಟರೇಟ್ ಪುರಸ್ಕೃತ ವೈಚಾರಿಕ ಸಾಹಿತಿ ಗೌರೀಶ ಕಾಯ್ಕಿಣಿ, ಪಂಪ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಯಶವಂತ ಚಿತ್ತಾಲ, ಜಿಲ್ಲೆಯ ಪ್ರಸಿದ್ಧ ಸಾಪ್ತಾಹಿಕ 'ಜನಸೇವಕ' ಸ್ಥಾಪಕ ಹೋರಾಟಗಾರ ಡಾ. ದಿನಕರ ದೇಸಾಯಿ, ಮಂತ್ರದೃಷ್ಟಾರ ದೈವರಾತ, ಖ್ಯಾತ ಪರಿಸರ ಸಾಹಿತಿ ಡಾ.ಕೃಷ್ಣನಾಂದ ಕಾಮತ, ಪಾಂಡಿಚೇರಿವಾಸಿ ಅಂಗ್ರೇಜೀ ಗ್ರಂಥಕಾರ ಎಂ.ಪಿ. ಪಂಡಿತ, ಆತ್ಮಾರಾಮ ಅಮ್ಮಿನಳ್ಳಿ, ನಾರಾಯಣ ವೆಂಕಟೇಶ ಕುರಡಿ, ವಿದ್ವಾನ್ ಸಾಂಬ ದೀಕ್ಷಿತ, ಡಾ. ಸದಾನಂದ ನಾಯಕ ಅವರ್ಸಾ, ಮುಂಬೈವಾಸಿ ಕಾರವಾರದ ಮರಾಠಿ ಗ್ರಂಥಕಾರ ದತ್ತಾ ಬಾಂದೇಕರ, ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿಯಿಂದ ನಿವೃತ್ತಿ ನಂತರ ಪಿಎಚ್.ಡಿ. ಪಡೆದ ವೈಚಾರಿಕ ಸಾಹಿತಿ ಡಾ.ಆರ್.ವಿ. ಭಂಡಾರಿ, ಕವಿ-ನಾಟಕಕಾರ ಗ.ಸು. ಭಟ್ಟ ಬೆತ್ತಗೇರಿ, ಶಿರಸಿಯ ಪ.ಸು. ಭಟ್ಟ, ಖ್ಯಾತ ವಿಡಂಬನ ಕವಿ ವಿ.ಜಿ. ಭಟ್ಟ, ಅಂಗ್ರೇಜೀ ಗ್ರಂಥಕಾರ ಮನೋಹರ ಮಾಳಗಾಂವಕರ, ನಾಸಿಕವಾಸಿ ಮರಾಠಿ ಗ್ರಂಥಕಾರ ಕಾರವಾರದ ಡಾ. ಅನಂತ ವಾಮನ ವರ್ಟಿ, ಕನ್ನಡ-ಸಂಸ್ಕೃತ-ಇಂಗ್ಲೀಷ್ ಸಾಹಿತಿ ಡಾ.ದಯಾನಂದ ಶಾನಭಾಗ, ಕನ್ನಡ-ಮರಾಠಿ-ಸಂಸ್ಕೃತ ಸಾಹಿತಿ ಆತ್ಮಾರಾಮ ಶಾಸ್ತ್ರಿ ಓಡ್ಲಮನೆ, ರಾಷ್ಟ್ರಪ್ರಶಸ್ತಿ ಪುರಸ್ಕೃತ ವಿದ್ವಾನ್ ಸೂರಿರಾಮಚಂದ್ರ ಶಾಸ್ತ್ರಿ, ಗಾಂಧಿವಾದಿ ಮ.ಗ. ಶೆಟ್ಟಿ ಅಂಕೋಲಾ, ರಾಷ್ಟ್ರಧರ್ಮ ದೃಷ್ಟಾರ ಬನವಾಸಿಯ ಹರ್ಡೇಕರ ಮಂಜಪ್ಪ, ಜಾನಪದ ತಜ್ಞ ಡಾ.ಎಲ್.ಆರ್. ಹೆಗಡೆ, ಪತ್ರಕರ್ತ, ನಾಟಕಕಾರ. ಗಂಗಾಧರ ಹೆಗಡೆ ಹುಬ್ಬಳ್ಳಿ, ಗ್ರಾಮೀಣ

ಕೃಷಿಕ ಸಾಹಿತಿ ಬಾಳೆಗದ್ದೆ ಶಿವರಾಮ ಹೆಗಡೆ, ಯಕ್ಷಗಾನ ಕಲಾವಿದ ಬೆಳಸಲಿಗೆ ಗಣಪತಿ ಹೆಗಡೆ, ಭೂದಾನ ಕಾರ್ಯಕರ್ತ ವಾಮನ ಹೊದಿಕೆ, ಇಂದಿರಾ ತೇಲಂಗ, ದೇವಕಿ ತಿಮ್ಮಣ್ಣ ಭಟ್ಟ, ಪ್ರೇಮಾ ಕಂಟಕ, ಸೀತಕ್ಕ ನೀರಗಾನ ಮುಂತಾದ ಪ್ರಮುಖರು ಕಂಡುಬರುತ್ತಾರೆ.

ಆಧುನಿಕ ಕಾಲ : ವರ್ತಮಾನ ಗ್ರಂಥಕಾರರು (ಅಧ್ಯಾಯ-4) : ಈ ಅಧ್ಯಾಯದ 794 ಗ್ರಂಥಕರ್ತರಲ್ಲಿ ಪಂಪ ಪ್ರಶಸ್ತಿ ಮತ್ತು ಗೌರವ ಡಾಕ್ಟರೇಟ್ ಪುರಸ್ಕೃತ ಪ್ರೊ.ಜಿ.ಎಚ್.ನಾಯಕ ಮೈಸೂರು; ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಾದ ಕೊಂಕಣಿ ಸಾಹಿತಿ ದೇವಿದಾಸ ಕದಂ ಗೋವಾ, ಕೊಂಕಣಿ-ಮರಾಠಿ ಸಾಹಿತಿ ಮಹಾಬಲೇಶ್ವರ ಸೈಲ ಗೋವಾ, ಕೊಂಕಣಿ ಸಾಹಿತಿ ಶೀಲಾ ಕೋಲಂಬಕರ; ಭಾರತೀಯ ಅನುವಾದ ಪರಿಷತ್ ಪುರಸ್ಕೃತ, ಹಿಂದೀ-ಕನ್ನಡ ಅನುವಾದಕ ಸಾಹಿತಿ ಡಾ.ಆರ್.ಪಿ. ಹೆಗಡೆ; ಅ.ಭಾ. ದಲಿತ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸುರೇಂದ್ರ ರೇವಣಕರ; ಗೌರವ ಡಾಕ್ಟರೇಟ್ ಪುರಸ್ಕೃತ ಜಯಂತ ಕಾಯ್ಕಿಣಿ; ರಾಷ್ಟ್ರಪ್ರಶಸ್ತಿ ಪುರಸ್ಕೃತ ಕನ್ನಡ-ಹಿಂದಿ ಸಾಹಿತಿ ಡಾ.ಶ್ರೀಧರ ಹೆಗಡೆ ಮಡಿಕೇರಿ, ರಾಷ್ಟೀಯ ಖ್ಯಾತಿಯ ಇತಿಹಾಸ ತಜ್ಞ ಡಾ.ಎ.ಕೆ. ಶಾಸ್ತ್ರಿ, ರಾಷ್ಟ್ರಪ್ರಶಸ್ತಿ ಪುರಸ್ಕೃತ. ಕನ್ನಡ-ಸಂಸ್ಕೃತ ಸಾಹಿತಿ ಜನಾರ್ದನ ಹೆಗಡೆ ಬೆಂಗಳೂರು; ಶಾಮಂ ಕೃಷ್ಣರಾಯ, ಕಾದಂಬರಿಕಾರ ದಯಾನಂದ ತೊರ್ಕೆ ಧಾರವಾಡ, ಜಾನಪದ ತಜ್ಞ ಡಾ.ಎನ್.ಆರ್. ನಾಯಕ, ಗೋಪಾಲಕೃಷ್ಣ ಪಿ.ನಾಯಕ ಹುಬ್ಬಳ್ಳಿ, ಮಾಸ್ಕೇರಿ ಎಂ.ಕೆ. ನಾಯಕ, ವಿ.ಗ. ನಾಯಕ ಮಂಗಳೂರು, ವಿಷ್ಣುನಾಯ್ಕ, ನಾರಾಯಣ ಮಾಳ್ಕೋಡ್ ಬೆಂಗಳೂರು, ಡಾ. ನಿರಂಜನ ವಾನಳ್ಳಿ ಮೈಸೂರು, ಮರಾಠಿ-ಕನ್ನಡ ಅನುವಾದಕ ಸಾಹಿತಿ ಚಂದ್ರಕಾಂತ ಪೋಕಳೆ ಬೆಳಗಾವಿ, ಕವಿ ನರಸಿಂಹ ಪರಾಂಜಪೆ ಧಾರವಾಡ, ಮರಾಠಿ ಸಾಹಿತಿ ವಸಂತ ಫೇಣೆ ನಾಸಿಕ, ಯಕ್ಷಗಾನ ಕಲಾವಿದ ಎಂ.ಜಿ. ಬರವಣಿ ಬಿ.ವಿ. ಮಾರ್ಕಂಡೇಯ ಉಡುಪಿ, ಜಿ.ಎಸ್. ಭಟ್ಟ ಮೈಸೂರು, ಪತ್ರಕರ್ತ ವಿಶ್ವೇಶ್ವರ ಭಟ್ಟ ಬೆಂಗಳೂರು, ಇತಿಹಾಸಕಾರ ಎಲ್.ಜಿ. ಭಟ್ಟ, ಕನ್ನಡ-ಮರಾಠಿ-ಕೊಂಕಣಿ-ಅಂಗ್ರೇಜೀ ಸಾಹಿತಿ ವಿಠ್ಠಲರಾಯ ಭಟ್ಟ ಮುಂಬೈ, ಡಾ. ಸೂರ್ಯನಾರಾಯಣ ಭಟ್ಟ ಬೆಂಗಳೂರು, ನಾ.ಸು. ಭರತನಹಳ್ಳಿ, ಭುವನಗಿರಿ ಅನಂತಶರ್ಮಾ ಬೆಂಗಳೂರು, ಯಲ್ಲಾಪುರ ಕೃಷ್ಣಶರ್ಮಾ ಬೆಂಗಳೂರು, ವನರಾಗ ಶರ್ಮಾ ಯಲ್ಲಾಪುರ, ಚುಕ್ಕಿಚಿತ್ರ ಕಲಾವಿದ ಮೋಹನ ವೆರ್ಣೇಕರ ಬೆಂಗಳೂರು, ಪತ್ರಕರ್ತ ಎಲ್.ಎಸ್. ಶಾಸ್ತ್ರಿ ಬೆಳಗಾವಿ, ಜಿ.ವಿ. ಶಾಸ್ತ್ರಿ ಬೆಂಗಳೂರು, ಸುಮುಖಾನಂದ ಜಲವಳ್ಳಿ, ಅಂಗ್ರೇಜೀ ಸಾಹಿತಿ ಡಾ. ಎನ್.ಜಿ. ಹೆಗಡೆ ಪುಣೆ, ಯಕ್ಷಗಾನ ಕಲಾವಿದ-ಸಂಶೋಧಕ-ವಿಮರ್ಶಕ ಪ್ರೊ. ಎಂ.ಎ. ಹೆಗಡೆ, ಪ್ರಾಣಿ ಶಾಸ್ತ್ರಜ್ಞ ಡಾ. ಎಸ್.ಎನ್. ಹೆಗಡೆ ಮೈಸೂರು, ಮರಾಠಿ-ಕನ್ನಡ ಬೆಸುಗೆಗಾರ ಕೃ.ಶಿ. ಹೆಗಡೆ ಪುಣೆ, ಪ್ರೊ. ಗುರುಪಾದ ಹೆಗಡೆ ಮೈಸೂರು, ಡಾ. ಜಿ.ಎಂ. ಹೆಗಡೆ ಧಾರವಾಡ, ಪರಿಸರವಾದಿ ನಾಗೇಶ ಹೆಗಡೆ ಬೆಂಗಳೂರು, ಪರಮೇಶ್ವರ ಹೆಗಡೆ ಹನ್ಮಂತಿ, ಅನುವಾದಕ ಸಾಹಿತಿ ಲಕ್ಷ್ಮೀಕಾಂತ ಹೆಗಡೆ ಬೆಂಗಳೂರು, ಗಣಪಿ ವೆಂ.ಭಟ್ಟ, ಡಾ. ಚಂದ್ರಮತಿ ಸೋಂದಾ ಮೈಸೂರು, ಡಾ. ಜೋತ್ಸ್ನಾ ಕಾಮತ ಬೆಂಗಳೂರು, ಭಾಗೀರಥಿ ಹೆಗಡೆ, ಭುವನೇಶ್ವರಿ ಹೆಗಡೆ ಮಂಗಳೂರು, ಡಾ.ಮಾಧವಿ ಭಂಡಾರಿ ಉಡುಪಿ, ಶಾಂತಿ ನಾಯಕ, ಕಾನೂನು ಸಾಹಿತಿ ಸರಸ್ವತಿ ಜಿ.ಹೆಗಡೆ, ಸೀತಾಲಕ್ಷ್ಮಿ ಹೆಗಡೆ ಮುಂತಾದವರು ಮುಂಚೂಣಿಯಲ್ಲಿದ್ದಾರೆ.

ಮೂರೂ ಅಧ್ಯಾಯಗಳಲ್ಲಿ ಮೊದಲು ಪುರುಷರು ನಂತರ ಮಹಿಳೆ ಹೀಗೆ ದಾಖಲಿಸಿದೆ. ಪುರುಷ ವಿಭಾಗದಲ್ಲಿ ಸಾಮಾನ್ಯವಾಗಿ ಅವರ ಅಡ್ಡ ಹೆಸರನ್ನು ಮೊದಲಾಗಿಟ್ಟುಕೊಂಡು ಅಕಾರಾದಿಯಾಗಿಯೂ ಮಹಿಳಾ ವಿಭಾಗದಲ್ಲಿ ಅವರ ಹೆಸರನ್ನೇ ಮೊದಲಾಗಿಟ್ಟುಕೊಂಡು ಅಕಾರಾದಿಯಾಗಿಯೂ ದಾಖಲಿಸಿದೆ. ಈ ಪದ್ಧತಿ ಯಾವುದೇ ಕೃತಿಕಾರ ಯಾ ಕೃತಿಯನ್ನು

ಹುಡುಕುವವರಿಗೆ ಹೆಚ್ಚಿಗೆ ಅನುಕೂಲಕರವೆಂದು ಕಂಡುಬಂದಿದೆ. ಇಂತಹ ಯಾವುದೇ ಕೋಶವು Quick Reference ಗೆ ಹೆಚ್ಚು ಸರಳ ಮತ್ತು ಅನುಕೂಲಕರವಾದಷ್ಟು ಹೆಚ್ಚು ಸಂಗ್ರಹಯೋಗ್ಯವೆನಿಸುತ್ತದೆ ಎನ್ನಲಾಗಿದೆ.

ಲಭ್ಯ ವಿವರಗಳ ಆಧಾರದಲ್ಲಿ ಗ್ರಂಥಕಾರರ ಸಂಕ್ಷಿಪ್ತ ವೈಯಕ್ತಿಕ ಮಾಹಿತಿ, ಅಕಾರಾದಿಯಾಗಿ ಪ್ರಕಟಿತ ಕೃತಿಗಳ ಶೀರ್ಷಿಕೆ, ಪ್ರಕಾರ, ಪ್ರಕಟಣೆ ವರ್ಷ, ಪುಟ ಸಂಖ್ಯೆ ಮತ್ತು ಗ್ರಂಥಕಾರ ಯಾ ಕೃತಿಗೆ ಸಂದ ಪ್ರಶಸ್ತಿ/ಗೌರವ; ಕೀರ್ತಿಶೇಷ ಗ್ರಂಥಕಾರರ ಸಂದರ್ಭದಲ್ಲಿ ಮಾತ್ರ ಅಪ್ರಕಟಿತ ಕೃತಿಶೀರ್ಷಿಕೆ ಇತ್ಯಾದಿಗಳನ್ನು ದಾಖಲಿಸಿದೆ. ಇದರಿಂದಾಗಿ ಗ್ರಂಥಕಾರ ಮತ್ತು ಕೃತಿಗಳ ಬಗ್ಗೆ ಸಂಕ್ಷಿಪ್ತವಾದರೂ ಸಮಗ್ರ ಮಾಹಿತಿ ದಾಖಲಿಸಲು ಪ್ರಯತ್ನಿಸಲಾಗಿದೆ. ಸಾಕಷ್ಟು ಹುಡುಕಾಟದ ನಂತರವೂ ಕೆಲವು ಗ್ರಂಥಕಾರ ಮತ್ತು ಗ್ರಂಥಗಳ ಕುರಿತು ಅವಶ್ಯಕ ವಿವರಗಳು ದೊರಕಿಲ್ಲವೆಂಬುದು ನಿರಾಶಾದಾಯಕ ಸತ್ಯ. ಅಂತಹ 70 ಗ್ರಂಥಕಾರರ ಲಭ್ಯ ವಿವರಗಳನ್ನು ಅನುಬಂಧ-2ರಲ್ಲಿ ದಾಖಲಿಸಿದೆ.

ಪರಜಿಲ್ಲೆಯಿಂದ ಈ ಜಿಲ್ಲೆಗೆ ಬಂದು ಸಾಹಿತ್ಯ ಕೃಷಿ ಮಾಡಿದ 40 ಆಗಂತುಕ ಗ್ರಂಥಕಾರರಿಂದ ರಚಿತವಾದ 624 ಗ್ರಂಥಗಳ ಮಾಹಿತಿ ದೊರಕಿದೆ. ಲಭ್ಯ ವಿವರಗಳನ್ನು ಅನುಬಂಧ-1ರಲ್ಲಿ ದಾಖಲಿಸಿದೆ. ಈ ಯಾದಿ ಅಪೂರ್ಣವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲೂಕಾ ಘಟಕಗಳ ಸಂಕ್ಷಿಪ್ತ ಪರಿಚಯ; ಜಿಲ್ಲೆಯಲ್ಲಿ ನಡೆದ ಅಖಿಲ ಭಾರತ, ಜಿಲ್ಲಾ ಮತ್ತು ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನಗಳು; ಜಿಲ್ಲೆಯ ಕರ್ನಾಟಕ ಸಂಘಗಳು, ಚುಟುಕು ಸಾಹಿತ್ಯ ಮತ್ತು ಕೊಂಕಣಿ ಸಾಹಿತ್ಯ ಪರಿಷತ್ ಚಟುವಟಿಕೆಗಳ ಸಂಕ್ಷಿಪ್ತ ನೋಟಗಳನ್ನು 3 ರಿಂದ 7ನೇ ಅನುಬಂಧಗಳಲ್ಲಿ ನೀಡಿದೆ. 8 ಮತ್ತು 9ನೇ ಅನುಬಂಧಗಳಲ್ಲಿ ಕೆಲವು ವಿಶೇಷ ಮಾಹಿತಿ ಅಳವಡಿಸಿದೆ. 10ನೇ ಅನುಬಂಧವು ಚಿತ್ರಸಂಪದಕ್ಕೆ ಮುಡಿಪಾಗಿದ್ದು ಅದರಲ್ಲಿ ಜಿಲ್ಲೆಯ ಮತ್ತು ಆಗಂತುಕ ಗ್ರಂಥಕಾರರ ಒಟ್ಟಾರೆ 189 ಭಾವಚಿತ್ರಗಳನ್ನು ಅಳವಡಿಸಿದೆ. ಎಲ್ಲಾ ಗ್ರಂಥಕಾರರ ಚಿತ್ರ ಸಂಗ್ರಹ ಮತ್ತು ಅಳವಡಿಕೆ ಕಷ್ಟಸಾಧ್ಯ. ಕನಿಷ್ಟ 10 ಪುಸ್ತಕ ಪ್ರಕಟಗೊಂಡ ಪುರುಷ ಮತ್ತು ಕನಿಷ್ಟ 5 ಪುಸ್ತಕ ಪ್ರಕಟಗೊಂಡ ಮಹಿಳಾ ಸಾಹಿತಿಗಳಲ್ಲಿ ಲಭ್ಯ ಭಾವಚಿತ್ರಗಳನ್ನು ಮಾತ್ರ ಅಳವಡಿಸಲಾಗಿದೆ.

ಕಾರಣಾಂತರಗಳಿಂದ ಪ್ರಸಕ್ತ ಸಮೀಕ್ಷಾಧ್ಯಯನ ಸಂಪೂರ್ಣವಾಗಿಲ್ಲವೆಂಬ ಅರಿವಿದೆ. ಆ ಕುರಿತ ನೋವೂ ಇದೆ. ಆದರೂ ಇದು ಹಿಂದಿಗಿಂತಲೂ ವ್ಯಾಪಕವೂ ಆಳವೂ ಆಗಿದ್ದು ಭವಿಷ್ಯತ್ತಿನಲ್ಲಿ ಆಸಕ್ತ ಸಂಶೋಧಕರಿಗೆ ಜಿಲ್ಲಾ ಸಾಹಿತ್ಯ ಚರಿತ್ರಕಾರರಿಗೆ ಸಹಾಯಕವಾದೀತೆಂಬ ನಂಬಿಗೆಯಿದೆ.

ಸಂಖ್ಯಾತ್ಮಕ ವಿಶ್ಲೇಷಣೆ: ಸಾಹಿತ್ಯ ರಚನೆಯ ಬೇರೆ ಬೇರೆ ಕಾಲಘಟ್ಟಗಳಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ರಚನೆಯಾದ ಸಾಹಿತ್ಯ ಕೃತಿಗಳ ವಿಮರ್ಶೆ, ತುಲನಾತ್ಮಕ ಅಧ್ಯಯನ ಇತ್ಯಾದಿಗಳು ಈ ಕೃತಿಯ ವ್ಯಾಪ್ತಿಗೆ ಮೀರಿದ್ದಾಗಿವೆ. ಕಾಲವಾರು, ಪ್ರದೇಶವಾರು ಕೃತಿಕಾರ ಮತ್ತು ಕೃತಿಗಳ ಸಂಖ್ಯಾತ್ಮಕ ವಿವರಗಳನ್ನು ವಿವಿಧ ಕೋಷ್ಟಕಗಳಲ್ಲಿ ನೀಡಲು ಪ್ರಯತ್ನಿಸಲಾಗಿದೆ. ಇವುಗಳ ಫಲಿತ/ಒಳನೋಟಗಳು ಕುತೂಹಲಕಾರಿಯಾಗಿವೆ.

ಪ್ರಾರಂಭದಿಂದ ಈ ತನಕ ಬಂದ ಒಟ್ಟಾರೆ ಸು.7354 ಗ್ರಂಥಗಳಲ್ಲಿ ಕನ್ನಡ ಭಾಷೇತರ (ಸಂಸ್ಕೃತ, ಮರಾಠಿ, ಕೊಂಕಣಿ ಇತ್ಯಾದಿ) ಕೃತಿಗಳೂ ಇವೆ. ಕನ್ನಡದಲ್ಲಿಯೂ ಕೂಡ ಸಾಹಿತ್ಯಕ್ಕೆ ಹೊರತಾದ ಪ್ರಕಾರಗಳಲ್ಲಿಯೂ ಕೆಲವು ಕೃತಿಗಳು ಬಂದಿವೆ. ಕನ್ನಡ

ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳು 5724 (ಶೇ. 78.5) ಮಾತ್ರ. ಇವುಗಳಲ್ಲಿ ಆಧುನಿಕ ಕಾಲದ ವರ್ತಮಾನ ಗ್ರಂಥಕಾರರಿಂದ ಬಂದ ಕೃತಿಗಳ ಸಂಖ್ಯೆ 4862. (ಕೋಷ್ಟಕ-5). ಕ್ರಿ.ಶ 1900ರ ನಂತರ ಪ್ರಕಟಿತ ಗ್ರಂಥಗಳಲ್ಲಿ ಕನ್ನಡೇತರ ಭಾಷಾ ಕೃತಿಗಳು 1238. (ಅಂಗ್ರೇಜಿ-637, ಮರಾಠಿ-234, ಸಂಸ್ಕೃತ-170, ಕೊಂಕಣಿ-152 ಮತ್ತು ಹಿಂದಿ-45).

ತಾಲೂಕಾವಾರು ವರ್ತಮಾನ ಗ್ರಂಥಕಾರ-ಕೃತಿಸಂಖ್ಯೆ ನೀಡುವ ಕೋಷ್ಟಕ -4. ಇದು ಸಾಹಿತ್ಯ ಶ್ರೀಮಂತಿಕೆಯಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಕ್ರಮವಾಗಿ ಶಿರಸಿ, ಕುಮಟಾ, ಹೊನ್ನಾವರಗಳನ್ನು ತೋರಿಸುತ್ತದೆ. ಸುಪಾ ಮತ್ತು ಹಳಿಯಾಳಗಳಿಗೆ ಕೊನೆಯದಾದ 10 ಮತ್ತು 11ನೇ ಸ್ಥಾನಗಳನ್ನು ನೀಡುತ್ತದೆ. ತಾಲೂಕಾವಾರ ಜನಸಂಪತ್ತು, ಗ್ರಂಥಸಂಪತ್ತು, ಸಾಕ್ಷರತಾ ಪ್ರಮಾಣ ಸ್ಥಾನಗಳನ್ನು ತೋರಿಸುವ 5 ಮತ್ತು 6ನೇ ಕೋಷ್ಟಕಗಳು ಇನ್ನೂ ಹೆಚ್ಚಿನ ವಿಶ್ಲೇಷಣೆಗಳಿಗೆ ಆಹ್ವಾನ ನೀಡುತ್ತದೆ.

ಜಿಲ್ಲೆಯ ವರ್ತಮಾನ ಗ್ರಂಥಸಂಪತ್ತಿಯ ಶೇ. 58ರಷ್ಟು ಭಾಗ ಜಿಲ್ಲೆಯ ಜನಸಂಪತ್ತಿಯ ಶೇ.35.3 ರಷ್ಟು ಜನಸಂಪತ್ತುಳ್ಳ ಶಿರಸಿ, ಕುಮಟಾ, ಹೊನ್ನಾವರ ಈ ಮೂರು ತಾಲೂಕುಗಳ ವರ್ತಮಾನ ಗ್ರಂಥಕಾರರಿಂದ ಬಂದಿದೆ. ಜಿಲ್ಲೆಯ ವರ್ತಮಾನ ಗ್ರಂಥಸಂಪತ್ತಿಯ ಶೇ.92 ರಷ್ಟು ಭಾಗ ಜಿಲ್ಲೆಯ ಜನಸಂಪತ್ತಿಯ ಶೇ.55 ರಷ್ಟು ಜನಸಂಪತ್ತುಳ್ಳ ಶಿರಸಿ, ಕುಮಟಾ, ಹೊನ್ನಾವರ, ಯಲ್ಲಾಪುರ, ಸಿದ್ದಾಪುರ ಮತ್ತು ಅಂಕೋಲಾ ಈ ಆರು ತಾಲೂಕುಗಳ ವರ್ತಮಾನ ಗ್ರಂಥಕಾರರಿಂದ ಬಂದಿದೆ. ಕೇವಲ ಶೇ.8 ರಷ್ಟು ಗ್ರಂಥಸಂಪತ್ತಿ ಮಾತ್ರ ಜಿಲ್ಲೆಯ ಇತರ 5 ತಾಲೂಕುಗಳಿಂದ ಬಂದಿದೆ. ಸಾಕ್ಷರತಾ ಪ್ರಮಾಣದಲ್ಲಿ 2ನೇ ಸ್ಥಾನದಲ್ಲಿರುವ ಶಿರಸಿ ಜನಸಂಪತ್ತು ಹಾಗೂ ಗ್ರಂಥಸಂಪತ್ತಿಗಳಲ್ಲಿ ಪ್ರಥಮವಾಗಿದೆ. ಸಾಕ್ಷರತೆಯಲ್ಲಿ ಮೊದಲನೇ ಸ್ಥಾನದಲ್ಲಿರುವ ಕಾರವಾರ ತಾಲೂಕು ಜನಸಂಪತ್ತು ಮತ್ತು ಗ್ರಂಥಸಂಪತ್ತಿಗಳಲ್ಲಿ 5 ಮತ್ತು 7ನೇ ಸ್ಥಾನದಲ್ಲಿದೆ. ಜನಸಂಪತ್ತಿಯಲ್ಲಿ 2ನೇ ಸ್ಥಾನದಲ್ಲಿರುವ ಹಳಿಯಾಳ ತಾಲೂಕು ಸಾಕ್ಷರತೆಯಲ್ಲಿ 9ನೇ ಹಾಗೂ ಗ್ರಂಥಸಂಪತ್ತಿಯಲ್ಲಿ 10ನೇ ಸ್ಥಾನದಲ್ಲಿದೆ. ಇವುಗಳನ್ನು ಗಮನಿಸಿದಾಗ ತಾಲೂಕಿನ ಜನಸಂಖ್ಯೆ ಮತ್ತು ಸಾಕ್ಷರತಾ ಪ್ರಮಾಣಗಳು ಗ್ರಂಥಸಂಪತ್ತಿಗೆ ಮಾನದಂಡವಾಗಲಾರವು ಎಂಬುದು ನಿಚ್ಚಳವಾಗುತ್ತದೆ.

ಜಿಲ್ಲೆಯ ಜನಸಂಪತ್ತಿಯಲ್ಲಿ ಕೇವಲ ಶೇ.7ರಷ್ಟಿರುವ ಹವ್ಯಕ ಸಮುದಾಯದ ವರ್ತಮಾನ ಗ್ರಂಥಕಾರರಿಂದ ಶೇ.62.80 ರಷ್ಟು ಗ್ರಂಥಗಳು ರಚನೆಯಾಗಿರುವುದು, ಕೇವಲ ಶೇ. 2.1 ರಷ್ಟಿರುವ ನಾಡವ ಸಮುದಾಯದ ವರ್ತಮಾನ ಗ್ರಂಥಕಾರರಿಂದ ಶೇ.11.3 ರಷ್ಟು ಗ್ರಂಥಗಳು ರಚನೆಯಾಗಿರುವುದು ಮತ್ತು ಶೇ. 24.4 ರಷ್ಟಿರುವ ನಾಮಧಾರಿ ಸಮುದಾಯದ ವರ್ತಮಾನ ಗ್ರಂಥಕಾರರಿಂದ ಶೇ.3.6 ರಷ್ಟು ಗ್ರಂಥಗಳು ರಚನೆಯಾಗಿರುವುದು ಇತ್ಯಾದಿ ಫಲಿತಗಳು (ನೋಡಿ ಕೋಷ್ಟಕ-8) ಆಸಕ್ತ ಓದುಗರಿಗೆ, ಅಧ್ಯಯನಾಸಕ್ತರಿಗೆ ಹೊಸ ಒಳನೋಟಗಳನ್ನು ನೀಡಬಲ್ಲವು ಎನಿಸುತ್ತದೆ.

ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಪ್ರಥಮ ಕೃತಿಗಳು

1. ಪ್ರವಾಸ ಸಾಹಿತ್ಯ: ಶ್ರೀಕೃಷ್ಣರಾಜ ವರ್ಧಂತೀ ಶತಕ-ಕಾವ್ಯ (ಸು. 1860) ಲೇ.: ಶ್ರೀನಿವಾಸ ಗೋಕರ್ಣ (ಇದು ಕನ್ನಡ ಸಾಹಿತ್ಯದಲ್ಲಿಯೂ ಪ್ರಥಮವಂತೆ)
2. ನಾಟಕ: ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ (1887) ಲೇ.: ಸೂರಿ ವೆಂಕಟರಮಣ ಶಾಸ್ತ್ರಿ ಕರ್ಕಿ. ಇದು ಹವಿಗನ್ನಡದ ಪ್ರಥಮಕೃತಿಯಲ್ಲದೇ ಕನ್ನಡದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ನಾಟಕವೂ ಹೌದು.
3. ಕಥೆ: ದೈವದುರ್ವಿಲಾಸ (1919) ಲೇ.: ರಂಗ್ಯೆಶೇಣ್ವಿ ವಿಷ್ಣಪಂತ ಶ್ರೀನಿವಾಸ ಯಲ್ಲಾಪುರ
4. ಕಾದಂಬರಿ: ಸಂಸಾರವು ಸುಖವೋ ದುಃಖವೋ(1923)ಲೇ.:ಕೆ.ವಿ.ಶರ್ಮಾಮತ್ತಿಗಾರು ಶಿರಸಿ.
5. ಜ್ಞಾನಿಕ: ಜ್ಞಾನಪದ್ಯಮಾಲಾ (1929) ಡಾ.ಎಂ.ಎನ್. ಗಾಂವ್ಕರ ಹಿರೇಗುತ್ತಿ ಕುಮಟಾ.
6. ಮಕ್ಕಳ ಸಾಹಿತ್ಯ (ಕಥೆ): ಕುಂಟನ ಇಲಿ ಬುಡಕ (1936) ಲೇ.: ಸುಬ್ರಾಯ ಮಹಾದೇವ ಭಟ್ಟ, ಗುಡೇ ಅಂಗಡಿ, ಕುಮಟಾ.
7. ಕವನ ಸಂಕಲನ: ಸವಿ ನೆನಪು (1943) ಲೇ.: ವಿ.ಜಿ. ಭಟ್ಟ ಕಡತೋಕಾ, ಹೊನ್ನಾವರ.
8. ಕಥಾ ಸಂಕಲನ: ಮೃಗಜಲ (1946) ಲೇ.: ಟಿ.ಆರ್. ಭಾಗವತ ಮುಂಬಯಿ(ಮೂಲತಃ ಹೊನ್ನಾವರ ತಾಲೂಕ ಕರ್ಕಿಯವರು)
9. ಪತ್ತೇದಾರಿ ಕಾದಂಬರಿ: ಶವಗಳ ಸಾಗಾಟ (1950) ಲೇ.: ಸುಬ್ಬರಾವ್ ಕೃಷ್ಣಹೆಗಡೆ ಕಾನಗೋಡು ಶಿರಸಿ.
10. ಮಕ್ಕಳ ಸಾಹಿತ್ಯ (ಕವನ): ಮಕ್ಕಳ ಗೀತೆಗಳು(1951) ಲೇ.: ದಿನಕರ ದೇಸಾಯಿ ಅಂಕೋಲಾ.
11. ಭಾವಗೀತೆ: ಹೂಗೊಂಚಲು (1958) ಲೇ.: ದಿನಕರ ದೇಸಾಯಿ, ಅಂಕೋಲಾ.

ಹೆಚ್ಚು ಕೃತಿ ರಚನೆ ಮಾಡಿದವರು

ಅ. ಕೀರ್ತಿಶೇಷರು

1. ಎಂ.ಪಿ. ಪಂಡಿತ ಶಿರಸಿ – ಪಾಂಡಿಚೇರಿ ನಿವಾಸಿ 172
2. ಹರ್ಡೇಕರ ಮಂಜಪ್ಪ ಬನವಾಸಿ.. 95
3. ಡಾ.ಎಲ್.ಆರ್. ಹೆಗಡೆ ಹೊಲನಗದ್ದೆ ಕುಮಟಾ 76
4. ಗೌರೀಶ ಕಾಯ್ಕಿಣಿ ಗೋಕರ್ಣ 67
5. ವಾಮನ ಹೊದಿಕೆ ಶಿರಸಿ... 58
   i) ಸೀತಾಬಾಯಿ ನೀರಗಾನ ಸಿದ್ದಾಪುರ 11
   ii) ಪ್ರೇಮಾ ಕಂಟಕ ಮುಂಬಯಿ 5
   iii) ದೇವಕಿ ತಿಮ್ಮಣ್ಣ ಭಟ್ಟ ಯಡಳ್ಳಿ ಶಿರಸಿ.. 5

ಬ. ವರ್ತಮಾನರು

1. ಜಿ.ವಿ. ಶಾಸ್ತ್ರಿ ಬೆಂಗಳೂರು (ಮೂಲತಃ ಯಲ್ಲಾಪುರ ತಾಲೂಕಿನವರು) 106
2. ವಿಠ್ಠಲರಾಯ ಭಟ್ಟ ಮುಂಬಯಿ (ಮೂಲತಃ ಕಾರವಾರದವರು) 99
3. ಜಿ.ಎಸ್. ಭಟ್ಟ ಮೈಸೂರು (ಮೂಲತಃ ಶಿರಸಿಯವರು) 90

4. ಚಂದ್ರಕಾಂತ ಪೋಕಳೆ ಬೆಳಗಾವಿ (ಮೂಲತಃ ಯಲ್ಲಾಪುರದವರು) 84
5. ಡಾ. ಆರ್.ಪಿ. ಹೆಗಡೆ ಸಿದ್ದಾಪುರ 82
6. ಪರಮೇಶ್ವರ ಹೆಗಡೆ ಹನ್ಮಂತಿ ಶಿರಸಿ 81
7. ಡಾ.ಎನ್.ಆರ್. ನಾಯಕ ಹೊನ್ನಾವರ.. 81
8. ದಯಾನಂದ ತೊರ್ಕೆ ಧಾರವಾಡ (ಮೂಲತಃ ಕುಮಟಾತಾಲೂಕಿನವರು) 72
9. ಶಾ.ಮಂ.ಕೃಷ್ಣ ರಾಯ ಬೆಂಗಳೂರು (ಮೂಲತಃ ಅಂಕೋಲಾದವರು) 71
10 ವಿಷ್ಣು ನಾಯ್ಕ ಅಂಕೋಲಾ 63
11. ವಿಶ್ವೇಶ್ವರ ಭಟ್ಟ ಬೆಂಗಳೂರು 62
12 ಸುಮುಖಾನಂದ ಜಲವಳ್ಳಿ ಹೊನ್ನಾವರ 62
13 ಮೋಹನ ವರ್ಣೇಕರ ಬೆಂಗಳೂರು(ಮೂಲತಃ ಹೊನ್ನಾವರ ತಾಲೂಕಿನವರು) 52
i) ಶಾಂತಿ ನಾಯಕ ಹೊನ್ನಾವರ 31
ii) ಸೀತಾಲಕ್ಷ್ಮಿ ಹೆಗಡೆ 16
iii) ಡಾ. ಮಾಧವಿ ಭಂಡಾರಿ ಉಡುಪಿ 15
iv)ಡಾಜ್ಯೋತ್ಸ್ನಾ ಕಾಮತ ಬೆಂಗಳೂರು(ಮೂಲತಃ ಹೊನ್ನಾವರ ತಾಲೂಕಿನವರು) 14
v) ಭಾಗೀರಥಿ ಹೆಗಡೆ ಶಿರಸಿ 14
vi) ಡಾ. ಚಂದ್ರಮತಿ ಸೋಂದಾ (ಮೈಸೂರು ನಿವಾಸಿ) 12

ತಾಲೂಕಾವಾರು ಪ್ರಕಟಿತ ಪ್ರಥಮ ಕೃತಿಗಳು			
ತಾಲೂಕು	ಕೃತಿ	ವರ್ಷ	ಲೇಖಕ
1. ಭಟ್ಕಳ	ಶ್ರೀ ಮಾಂಗೀಶ ಮಾಹಾತ್ಮ್ಯ – ಮರಾಠಿ ಓವೀ ಕಾವ್ಯ	1872	ವಿಠ್ಠಲ ಕೃಷ್ಣ ಕಾಯ್ಕಿಣಿ
2. ಹೊನ್ನಾವರ	ದಕ್ಷಿಣ ಯಾತ್ರಾ ಚರಿತ್ರೆ	1885	ಸೂರಿ ವೆಂಕಟರಮಣಶಾಸ್ತ್ರಿ
3. ಕುಮಟಾ	ಕೃಷ್ಣರಾಜ ವರ್ಧಂತೀ ಶತಕ	ಸು.1860	ಶ್ರೀನಿವಾಸ ಗೋಕರ್ಣ
4. ಅಂಕೋಲಾ	ಶ್ರೀಮಾಂಗೀಶಮಾಹಾತ್ಮ್ಯ – ಮರಾಠಿ ಓವೀ ಕಾವ್ಯ	1873	ಶುಭಾನಂದ ಪಿಕಳೆ
5. ಕಾರವಾರ	ಸಂಗೀತ ಹಜಾಮತ ಮರಾಠಿ ವಿಡಂಬನ ಕಾವ್ಯ	1889	ತೇಲಂಗ ಮಂಗೇಶರಾವ್
6. ಸುಪಾ	Admiral Kanhoji Angre	1959	Manohar Malgaonkar
7. ಹಳಿಯಾಳ	ಸಪ್ತಸುಮನ–ಹಿಂದಿಯಲ್ಲಿ ಕಥೆಗಳು	1987	ಶಾಂತಾಬಾಯಿ ಶಿರಸಠ
8. ಯಲ್ಲಾಪುರ	ಜ್ಞಾನಸಾಧನ–8 ವೈಚಾರಿಕ ನಿಬಂಧಗಳು	1917	ರಂಗೈಶೇಣ್ವಿ ವಿಷ್ಣುಪಂತ
9. ಮುಂಡಗೋಡ	ಹುಟ್ಟಿತೆಂತು ಹಿಂಸೆಯಿಂದು–ಕವನ ಸಂಕಲನ	2002	ಎಂ.ಜಿ.ಹೆಗಡೆ ಶಾನವಳ್ಳಿ (ಮಂಗಳೂರು ನಿವಾಸಿ)
10. ಶಿರಸಿ	ಅಪ್ಪಾ ಸಾಹೇಬ ವಾರದ–ಚರಿತ್ರೆ	1909	ಹರ್ಡೇಕರ ಮಂಜಪ್ಪ
11. ಸಿದ್ದಾಪುರ	ರಾಷ್ಟ್ರೀಯ ಪದ್ಯಗಳು	1930	ತಿಪ್ಪಯ್ಯ ಮಾಸ್ತರ

ಕೋಷ್ಟಕ–1

ತಾಲ್ಲೂಕಾವಾರು ಜನಸಂಖ್ಯೆ (ಆಧಾರ: ಜನಗಣತಿ 2011)

ತಾಲೂಕು	ಭೌಗೋಳಿಕ ವಿಸ್ತೀರ್ಣ (ಚ.ಕಿ.)	ಜನಸಂಖ್ಯೆ	ಜನಸಂಖ್ಯೆ	
			ಶೇಕಡಾ	ಸ್ಥಾನ
1. ಭಟ್ಕಳ	355.50	161576	11.24	4
2. ಹೊನ್ನಾವರ	756.15	166264	11.57	3
3. ಕುಮಟಾ	590.45	154280	10.73	6
4. ಅಂಕೋಲಾ	904.79	107332	7.47	7
5. ಕಾರವಾರ	724.12	155213	10.80	5
6. ಸುಪಾ	1910.44	52012	3.62	11
7. ಹಳಿಯಾಳ	847.62	171426	11.93	2
8. ಯಲ್ಲಾಪುರ	1298.75	78662	5.47	10
9. ಮುಂಡಗೋಡ	667.44	106174	7.39	8
10. ಶಿರಸಿ	1322.32	186908	13.01	1
11. ಸಿದ್ದಾಪುರ	847.27	97322	6.77	9

ಕೋಷ್ಟಕ–2

ಉತ್ತರ ಕನ್ನಡ ಜಿಲ್ಲೆಯ ಸಮಗ್ರ ಗ್ರಂಥಸಂಪತ್ತು

ಕಾಲಮಾನ	**ಪುರುಷ**		ಮಹಿಳೆ		ಒಟ್ಟಾರೆ	
	ಕರ್ತೃ	ಕೃತಿ	ಕತ್ರೃ	ಕೃತಿ	ಕರ್ತೃ	ಕೃತಿ
1 ಪ್ರಾಚೀನಕಾಲ ಪ್ರಾರಂಭದಿಂದ ಕ್ರಿ. ಶ. 1900	55	218	2	2	57	220
2 ಆಧುನಿಕ ಕಾಲ i) ಕೀರ್ತಿ ಶೇಷರು ii) ವರ್ತಮಾನರು	341 622	2139 4322	22 172	49 540	363 794	2188 4862
ಒಟ್ಟಾರೆ	963	6461	194	589	1157	7050
3 ದೇಶಕಾಲ ಗೊತ್ತಾಗದ ಗ್ರಂಥಕಾರರು	70	83	–	–	70	83
ಒಟ್ಟಾರೆ (1+2+3)	**1088**	**6762**	**196**	**591**	**1284**	**7353**

ಕೋಷ್ಟಕ-3

ಉತ್ತರ ಕನ್ನಡ ಜಿಲ್ಲೆಯ ಜನಸಂಖ್ಯೆಯ ಸಾಮಾಜಿಕ ಚಿತ್ರ

	ಒಟ್ಟಾರೆ	ಶೇಕಡಾ	**ಗಂಡು**	ಶೇಕಡಾ	**ಹೆಣ್ಣು**	ಶೇಕಡಾ
ಜನಸಂಖ್ಯೆ	14,37,169		7,26,256	50.53	7,10,916	49.47
ಪರಿಶಿಷ್ಟ ಜಾತಿ	1.16.491	8.10	57,841	7.16	58,590	8.24
ಪರಿಶಿಷ್ಟ ವರ್ಗ	34,239	2.38	17,095	2.41	17,144	2.38
ಶಿಕ್ಷಣ ಪಡೆದವರು	10,81,906	84.06	5,82,099	89.63	4,99,207	78.39

(ಆಧಾರ: 2011ರ ಜನಗಣತಿ ವರದಿ)

ಕೋಷ್ಟಕ-4

ಉತ್ತರ ಕನ್ನಡ ಜಿಲ್ಲಾ ಸಮಗ್ರ/ಕನ್ನಡ ಗ್ರಂಥಕಾರ ಗ್ರಂಥ ಸಂಪತ್ತು

ಕಾಲ	ಗ್ರಂಥ ವರ್ಗ	**ಪುರುಷ**		ಮಹಿಳೆ		ಒಟ್ಟಾರೆ	
		ಕರ್ತೃ	ಕೃತಿ	ಕರ್ತೃ	ಕೃತಿ	ಕರ್ತೃ	ಕೃತಿ
ಪ್ರಾಚೀನಕಾಲ ಪ್ರಾರಂಭದಿಂದ ಕ್ರಿ. ಶ. 1900 ರ ವರೆಗೆ	ಅ	55	218	2	2	57	220
	ಬ	17	97	2	2	19	99
	ಕ	38	121	–	–	38	121
ಆಧುನಿಕ ಕಾಲ ಕೀರ್ತಿ ಶೇಷರು	ಅ	341	2139	22	49	363	2188
	ಬ	64	598	6	13	70	611
	ಕ	277	1541	16	36	293	1577
	ಸಮಗ್ರ ಕೀರ್ತಿಶೇಷ ಗ್ರಂಥಕಾರ-ಕೃತಿ ಸಂಪದ						
	ಅ	395	2358	24	51	419	2409
	ಬ	81	695	8	15	89	710
	ಕ	314	1663	16	36	330	1699
	ವರ್ತಮಾನ ಗ್ರಂಥಕಾರ-ಕೃತಿ ಸಂಪದ						
	ಅ	622	4324	172	538	794	4862
	ಬ	59	828	12	65	71	903
	ಕ	563	2484	160	475	723	3959
ವಲಸೆ ಕಾಲ ಗೋಷ್ಠಿ ದವರು	ಅ	70	83	–	–	70	83
	ಬ	12	17	–	–	12	17
	ಕ	58	66	–	–	58	66
	ಪ್ರಾರಂಭದಿಂದ ಇಲ್ಲಿಯ ತನಕ						
	ಅ	1088	6783	196	591	1284	7353
	ಬ	152	1540	20	80	172	1630
	ಕ	936	5243	176	511	1112	5723

ಅ – ಒಟ್ಟಾರೆ ಗ್ರಂಥಕಾರರು – ಗ್ರಂಥಗಳು. ಕ – ಕನ್ನಡ ಸಾಹಿತ್ಯ ಕೃತಿಕರ್ತರು – ಕೃತಿಗಳು

ಬ – + ಕನ್ನಡೇತರ ಭಾಷಾ ಕೃತಿಕಾರ/ಕೃತಿ ಮತ್ತು ಕನ್ನಡ ಸಾಹಿತ್ಯೇತರ ಕೃತಿಕಾರ/ಕೃತಿ ಸೇರಿವೆ.

ಕೋಷ್ಟಕ-5

ಉತ್ತರ ಕನ್ನಡ ಜಿಲ್ಲಾ ತಾಲೂಕಾವಾರ ವರ್ತಮಾನ ಗ್ರಂಥಕಾರ ಕೃತಿಸಂಖ್ಯೆ

ತಾಲೂಕು	ಪುರುಷ		ಮಹಿಳೆ		ಒಟ್ಟಾರೆ	
	ಕರ್ತೃ	ಕೃತಿ	ಕರ್ತೃ	ಕೃತಿ	ಕರ್ತೃ	ಕೃತಿ
1. ಭಟ್ಕಳ	19	52	3	10	22	62
2. ಹೊನ್ನಾವರ	111	738	27	108	138	846
3. ಕುಮಟಾ	129	878	27	96	155	974
4. ಅಂಕೋಲಾ	76	421	16	69	92	490
5. ಕಾರವಾರ	24	265	6	23	29	288
6. ಸುಪಾ	1	1	2	5	3	6
7. ಹಳಿಯಾಳ	2	14	4	9	6	23
8. ಯಲ್ಲಾಪುರ	59	550	13	31	72	581
9. ಮುಂಡಗೋಡ	6	22	1	1	7	23
10. ಶಿರಸಿ	114	891	46	124	160	1015
11. ಸಿದ್ದಾಪುರ	84	494	27	62	111	556

ಕೋಷ್ಟಕ-6

ತಾಲೂಕಾವಾರ ಗ್ರಂಥ ಸಂಪತ್ತು ಗಿಖ ಜನಸಂಪತ್ತು (ತುಲನಾತ್ಮಕ)

	+ ಗ್ರಂಥ ಸಂಖ್ಯೆ	ಸ್ಥಾನ	ಶೇಕಡಾ	ಒಟ್ಟು ಶೇಕಡಾ	ಜನಸಂಖ್ಯೆ * ಸ್ಥಾನ	ಶೇಕಡಾ	ಒಟ್ಟು ಶೇಕಡಾ
1. ಶಿರಸಿ	1015	1	21.0		1	13.0	
2. ಕುಮಟಾ	974	2	19.5	40.5	6	10.7	23.7
3. ಹೊನ್ನಾವರ	846	3	17.5	58.0	3	11.6	35.3
4. ಯಲ್ಲಾಪುರ	581	4	12.0	70.0	10	5.5	40.8
5. ಸಿದ್ದಾಪುರ	556	5	11.5	81.5	9	6.8	47.6
6. ಅಂಕೋಲಾ	490	6	10.2	91.7	7	7.5	55.1
7. ಕಾರವಾರ	288	7	6.0	97.7	5	10.8	65.9
8. ಭಟ್ಕಳ	62	8	1.2	98.9	4	11.2	77.1
9. ಮುಂಡಗೋಡ	23	9	0.5	99.4	8	7.4	84.5
10. ಹಳಿಯಾಳ	23	10	0.5	99.9	2	11.9	96.4
11. ಸುಪಾ	6	11	0.1	100	11	3.6	100

* **ಕೋಷ್ಟಕ-3** ರಂತೆ

+ ವರ್ತಮಾನ ಕಾಲದ ಗ್ರಂಥಕಾರರ ಪ್ರಕಟಿತ ಗ್ರಂಥಸಂಖ್ಯೆ

ಕೋಷ್ಟಕ –7

ಜಿಲ್ಲೆಯ ತಾಲೂಕುಗಳ ತುಲನಾತ್ಮಕ ಸ್ಥಾನ (3 ವಿಭಾಗಗಳಲ್ಲಿ)

ಜಿಲ್ಲೆಯ ಸಾಕ್ಷರತಾ ಪ್ರಮಾಣ 84%

ಗರಿಷ್ಟ ಪ್ರಮಾಣ ಕಾರವಾರ ತಾಲೂಕು 90%

ಕನಿಷ್ಟ ಪ್ರಮಾಣ ಸುಪಾ ತಾಲೂಕು 76%

ತಾಲೂಕು	ವಿಭಾಗೀಯ ಸ್ಥಾನ		
	1+	2+	3+
ಶಿರಸಿ	1	1	2
ಕುಮಟಾ	2	6	3
ಹೊನ್ನಾವರ	3	3	5
ಯಲ್ಲಾಪುರ	4	10	7
ಸಿದ್ದಾಪುರ	5	9	4
ಅಂಕೋಲಾ	6	7	4
ಕಾರವಾರ	7	5	1
ಭಟ್ಕಳ	8	4	6
ಮುಂಡಗೋಡ	9	8	8
ಹಳಿಯಾಳ	10	2	9
ಸುಪಾ	11	11	10

+1 ಗ್ರಂಥಸಂಖ್ಯಾ ಸ್ಥಾನ +2 ಜನಸಂಖ್ಯಾ ಸ್ಥಾನ +3 ಸಾಕ್ಷರತಾ ಪ್ರಮಾಣ ಸ್ಥಾನ

ಕೋಷ್ಟಕ –8

ತಾಲೂಕಾವಾರ ವರ್ತಮಾನ ಹವ್ಯಕ ಮತ್ತು ಹವ್ಯಕೇತರ ಗ್ರಂಥಕಾರ ಕೃತಿ ಸಂಪತ್ತು

	ಹವ್ಯಕ		ಇತರ		ಒಟ್ಟಾರೆ	
	ಕರ್ತೃ	ಕೃತಿ	ಕರ್ತೃ	ಕೃತಿ	ಕರ್ತೃ	ಕೃತಿ
ಶಿರಸಿ	144	874	15	141	159	1015
ಕುಮಟಾ	103	587	54	387	157	974
ಹೊನ್ನಾವರ	98	522	40	324	138	846
ಯಲ್ಲಾಪುರ	66	458	6	123	72	581
ಸಿದ್ದಾಪುರ	101	511	10	45	111	556
ಅಂಕೋಲಾ	8	19	82	471	90	490
ಕಾರವಾರ	4	42	26	248	30	288
ಭಟ್ಕಳ	9	24	13	38	22	62
ಮುಂಡಗೋಡ	3	12	4	11	7	23
ಹಳಿಯಾಳ	–	–	6	23	6	23
ಸುಪಾ	2	5	1	1	3	6
ಒಟ್ಟಾರೆ	538	3054	256	1808	794	4862

ಕೋಷ್ಟಕ –9

ಜಿಲ್ಲೆಯ ಜನಸಮುದಾಯವಾರು ಗ್ರಂಥಕಾರ ಕೃತಿ ಸಂಪತ್ತು

ಜನ ಸಮುದಾಯ	ಅಂದಾಜಿತ		ಗ್ರಂಥಕಾರರು		ಗ್ರಂಥಗಳು	
	ಜನಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಹವ್ಯಕ	**1 ಲಕ್ಷ**	**7.0**	**538**	**67.7**	**3054**	**62.8**
ನಾಡವ	**30,000**	**2.1**	**72**	**9.0**	**548**	**11.3**
ನಾಮಧಾರಿ	**3.50 ಲಕ್ಷ**	**24.4**	**30**	**3.8**	**177**	**3.6**
ಇತರ	**9.70 ಲಕ್ಷ**	**66.5**	**154**	**19.5**	**1133**	**23.3**
ಒಟ್ಟಾರೆ	**14.37ಲಕ್ಷ**		**794**		**4862**	

ಟಿಪ್ಪಣಿ: ಹೊನ್ನಾವರ, ಕುಮಟಾ, ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲೂಕುಗಳ ಹವ್ಯಕ; ಅಂಕೋಲಾ, ಕುಮಟಾ ತಾಲೂಕುಗಳ ನಾಡವ ಮತ್ತು ಹೊನ್ನಾವರ, ಕುಮಟಾ, ಅಂಕೋಲಾ ತಾಲೂಕುಗಳ ನಾಮಧಾರಿ ಸಮುದಾಯಗಳ ಗ್ರಂಥಕಾರರ ಕೊಡುಗೆ ಗಮನಾರ್ಹವಾಗಿರುವದು ಕಂಡುಬರುತ್ತದೆ.

ಕೋಷ್ಟಕ –10

ಕ್ರಿ.ಶ. 1900ರಿಂದ ಕನ್ನಡ ಸಾಹಿತ್ಯದ ಆಯ್ದ ಪ್ರಕಾರಗಳಲ್ಲಿ ಪ್ರಕಟಿತ ಕೃತಿಗಳು

ಪ್ರಕಾರ	ಕೀರ್ತಿಶೇಷರಿಂದ		ವರ್ತಮಾನರಿಂದ		ಒಟ್ಟು
	ಪುರುಷ	**ಮಹಿಳೆ**	**ಪುರುಷ**	**ಮಹಿಳೆ**	
1. ಕವನ ಸಂಕಲನ	**238**	**25**	**443**	**153**	**859**
2. ಜೀವನ ಚರಿತ್ರೆ ಪರಿಚಯ	**73**	**1**	**299**	**18**	**391**
3. ಕಥಾ ಸಂಕಲನ	**107**	**3**	**231**	**43**	**384**
4. ನಾಟಕ	**108**	–	**183**	**9**	**300**
5. ಕಾದಂಬರಿ	**76**	–	**197**	**17**	**290**
6. ಮಕ್ಕಳ ಸಾಹಿತ್ಯ	**43**	–	**160**	**22**	**225**
7. ಯಕ್ಷಗಾನ ಪ್ರಸಂಗ	**100**	–	**77**	–	**177**
8. ಕಾವ್ಯ	**101**	**1**	**26**	**5**	**133**

ಕೋಷ್ಟಕ –11

ಕ್ರಿ.ಶ. 1900ರಿಂದ ಪ್ರಕಟಿತ ಕನ್ನಡ ಸಾಹಿತ್ಯ ಕೃತಿಗಳು

ಕಾಲಾವಧಿ	ಕೀರ್ತಿಶೇಷರಿಂದ		ವರ್ತಮಾನರಿಂದ		ಒಟ್ಟಾರೆ
	ಪುರುಷ	**ಮಹಿಳೆ**	**ಪುರುಷ**	**ಮಹಿಳೆ**	
1901 – 1920	**29**	–	–	–	**29**
1921 – 1930	**112**	**3**			**115**
1931 – 1940	**101**	–	–	–	**101**
1941 – 1950	**107**	**1**	**4**	–	**112**
1951 – 1960	**187**	**5**	**18**	**3**	**213**
1961 – 1970	**187**	**2**	**56**	**3**	**248**
1971 – 1980	**215**	**3**	**117**	**5**	**340**
1981 – 1990	**182**	**8**	**251**	**21**	**462**
1991 – 2000	**155**	**8**	**300**	**61**	**524**
2001 – 2010	**127**	**4**	**1426**	**161**	**1718**
2010 ರಿಂದ	**52**	**2**	**984**	**168**	**1206**

ವರ್ಷದಿಂದ ವರ್ಷಕ್ಕೆ ಏರುತ್ತಿರುವ ಪ್ರಕಟಿತ ಸಾಹಿತ್ಯ ಕೃತಿಗಳ ಸಂಖ್ಯಾಮಾನವನ್ನು ಗಮನಿಸಿದಾಗ ವರ್ತಮಾನ ಶತಮಾನದ ಮೊದಲ ಕೇವಲ ಎರಡು ದಶಮಾನಗಳಲ್ಲಿ ಪ್ರಕಟವಾಗಲಿರುವ ಕೃತಿಗಳ ಸಂಖ್ಯೆ ಕಳೆದ ಶತಮಾನದಲ್ಲಿ ಪ್ರಕಟವಾದ ಒಟ್ಟಾರೆ ಕೃತಿಗಳ ಸಂಖ್ಯೆ ಮೀರಲಿರುವುದನ್ನು ಸೂಚಿಸುತ್ತದೆ. ಈ ಬೆಳವಣಿಗೆ ಅತ್ಯಂತ ಆಶಾದಾಯಕ.

ಅಧ್ಯಾಯ 2

ಪ್ರಾಚೀನ ಕಾಲ

[ಪ್ರಾರಂಭದಿಂದ ಕ್ರಿ.ಶ. 1900ರ ತನಕ]

ನಿಸರ್ಗ ಸೌಂದರ್ಯದ ಬೀಡೂ ಅತ್ಯಧಿಕ ಜಲಪಾತಗಳ ನಾಡೂ ಆದ ಉತ್ತರ ಕನ್ನಡ ಜಿಲ್ಲೆ ಸಾಹಿತ್ಯಾರಾಧಕರ ನೆಲೆವೀಡೂ ಆಗಿದೆ. ಬನವಾಸಿಯ ಮಣ್ಣಿನ ಮಗನೂ ಕನ್ನಡದ ಮಹಾಕವಿಯೂ ಆದ ಪಂಪ, ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರೂ ದಕ್ಷಿಣಾಮ್ನಾಯ ಶೃಂಗೇರಿ ಪೀಠದ 12ನೆಯ ಗುರುಗಳೂ ಆದ ವಿದ್ಯಾರಣ್ಯರು, ಕರ್ನಾಟಕದಲ್ಲಿ ಪ್ರಪ್ರಥಮ ಸಂಸ್ಕೃತ ಕವಯಿತ್ರಿಯಾದ ಗಂಗಾದೇವಿ ಇವರೆಲ್ಲರೂ ಉತ್ತರಕನ್ನಡ ಜಿಲ್ಲೆಯವರು ಎಂಬುದು ಅಭಿಮಾನಾಸ್ಪದ ಸಂಗತಿಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಪ್ರಾಚೀನ ಸಾಹಿತ್ಯಧಾರೆಯು ದ್ವಿಮುಖಿಯಾಗಿದೆ. ಕ್ರಿ.ಶ' 9ನೆಯ ಶತಮಾನದಲ್ಲಿ ರಚನೆಯಾದ ಸಂಸ್ಕೃತ ಮತ್ತು ಕ್ರಿ.ಶ.10ನೆಯ ಶತಮಾನದಲ್ಲಿ ರಚನೆಯಾದ ಕನ್ನಡ ಸಾಹಿತ್ಯ ಕೃತಿಗಳನ್ನು ಗುರುತಿಸಲು ಸಾಧ್ಯವಾಗಿದೆ. ಅಧ್ಯಯನ-ದಾಖಲಾತಿಗಳ ಅನುಕೂಲಕ್ಕಾಗಿ ಜಿಲ್ಲೆಯ ಪ್ರಾಚೀನ ಸಾಹಿತ್ಯವನ್ನು ಸಂಸ್ಕೃತ ಮತ್ತು ಕನ್ನಡ ಎಂದು ಗುರುತಿಸಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಪ್ರಚಲಿತವಿದ್ದ ಮರಾಠಿ ಮತ್ತು ಕೊಂಕಣಿ ಸಾಹಿತ್ಯವನ್ನು ಸದ್ಯಕ್ಕೆ ಕನ್ನಡ ವಿಬಾಗದಲ್ಲಿಯೇ ಸೂಕ್ತವಾಗಿ ದಾಖಲಿಸಲಾಗಿದೆ. ಕನ್ನಡ ಸಾಹಿತ್ಯಕ್ಕಿಂತಲೂ ಹಿಂದಿನ ಸಂಸ್ಕೃತ ಸಾಹಿತ್ಯ ಲಭ್ಯವಾಗಿರುವುದರಿಂದ ಅದನ್ನೇ ಮೊದಲು ದಾಖಲಿಸಲಾಗಿದೆ. ಸಂಸ್ಕೃತ ಮತ್ತು ಕನ್ನಡ ಎರಡೂ ವಿಭಾಗಗಳಲ್ಲಿ ಗ್ರಂಥಕಾರರನ್ನು ಕಾಲಾನುಕ್ರಮದಲ್ಲಿ ಮೊದಲು ಪುರುಷ ಅನಂತರ ಮಹಿಳೆ ಹೀಗೆ ದಾಖಲಿಸಿದೆ. ಕೃತಿಕಾರ-ಕೃತಿ ಕುರಿತಂತೆ ಬಂದ ಪುಸ್ತಕಗಳ ವಿವರಗಳನ್ನು ಕೃತಿಕಾರನ ಮಾಹಿತಿಗಳ ಕೊನೆಯಲ್ಲಿ ಕಾಲಾನುಕ್ರಮದಲ್ಲಿ ನೀಡಲಾಗಿದೆ.

ಅ. ಸಂಸ್ಕೃತ ಸಾಹಿತ್ಯ ಸಂಪದ

ಆದಿಶಂಕರಾಚಾರ್ಯರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಲ್ಲಿ ಪೂರ್ವಾಮ್ನಾಯ ದ್ವಾರಕಾ ಪೀಠದ ಎರಡನೆಯ ಗುರುಗಳಾದ ಚಿತ್ಸುಖಾಚಾರ್ಯರು, ವಿಜಯನಗರ ಸಾಮ್ರಾಜ್ಯ ಸಂಸ್ಥಾಪನಾಚಾರ್ಯರೂ ದಕ್ಷಿಣಾಮ್ನಾಯ ಶೃಂಗೇರಿ ಪೀಠದ 12ನೆಯ ಗುರುಗಳೂ ಆದ ವಿದ್ಯಾರಣ್ಯ ಮಹಾಮುನಿಗಳು,ಜ್ಯೋತಿಷ್ಯ ಶಾಸ್ತ್ರಜ್ಞರಾದ ವಿದ್ಯಾಮಾಧವ ಪಂಡಿತರು, ವೇದಭಾಷ್ಯಕಾರರೂ ವಿದ್ಯಾರಣ್ಯರ ಸೋದರರೂ ಆದ ಸಾಯಣಾಚಾರ್ಯರು ಮತ್ತು ಕರ್ನಾಟಕದ ಪ್ರಥಮೈಕ ಸಂಸ್ಕೃತ ಕವಯಿತ್ರಿಯಾದ ಗಂಗಾದೇವಿ ಇವರೆಲ್ಲಾ ಉತ್ತರಕನ್ನಡದ ಸಂಸ್ಕೃತ ಗ್ರಂಥಕಾರರೆಂಬುದು ಅಭಿಮಾನಾಸ್ಪದವೂ ಗಮನಾರ್ಹವೂ ಆಗಿದೆ.

(1) **ಚಿತ್ಸುಖಾಚಾರ್ಯರು** : ಶ್ರೀಶಂಕರಾಚಾರ್ಯರ ಶಿಷ್ಯರು. ದ್ವಾರಕಾಪೀಠದ ಎರಡನೆಯ ಗುರುಗಳು. ಇವರ ಬಗ್ಗೆ ಖ್ಯಾತ ಲೇಖಕ ದಿವಂಗತ ನಾರಾಯಣ ಕುರಡಿ (1868-1974) ಕರ್ಕಿಯವರು ಹೀಗೆ ಹೇಳಿದ್ದಾರೆ. "ಆದ್ಯ ಶಂಕರರಲ್ಲಿ ಗೋಕರ್ಣದ ವಿಷ್ಣು ಭಟ್ಟ ಎಂಬ ಹವ್ಯಕ ಹುಡುಗ ಅಧ್ಯಯನ ಮಾಡುತ್ತಿದ್ದ. ಈತ ಮುಂದೆ ಸಂನ್ಯಾಸಗ್ರಹಣ ಮಾಡಿದಾಗ ಆಚಾರ್ಯರು ಈತನಿಗೆ ಚಿತ್ಸುಖಾಚಾರ್ಯ ಎಂದು ಹೆಸರಿಟ್ಟರು. ಶಂಕರಾಚಾರ್ಯರು ದಿಗ್ವಿಜಯ ಮಾಡಿದಾಗ ಚಿತ್ಸುಖಾಚಾರ್ಯರು ಅವರ ಜೊತೆಗಿದ್ದು ಮುಂದೆ **ಬೃಹತ್ ಶಂಕರ**

ವಿಜಯ ಎಂಬ ಗ್ರಂಥವನ್ನು ರಚಿಸಿದರು. ಈ ಗ್ರಂಥದ ಕೊನೆಯಲ್ಲಿ ಅವರು ತಮ್ಮ ಕುಲಗೋತ್ರ ವಿವರಣೆಯನ್ನು ಕೊಟ್ಟಿದ್ದಾರೆ. ಪಂಡಿತೋತ್ತಮ 'ಮಹಾದೇವ ರಾಜಾರಾಮ ಟೋಡಸ್' ಇವರು ಈ ಗ್ರಂಥದ ಆಧಾರದ ಮೇಲೆ 'ಶಂಕರಾಚಾರ್ಯ ವ ತ್ಯಾಂಚೇ ಸಂಪ್ರದಾಯ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಅದರಲ್ಲಿಯೂ ಈ ವಿಚಾರವಿದೆ. (ನೋಡಿ–ಹವ್ಯಕ ಮಾಸಪತ್ರಿಕೆ ಜೂನ್ 1998 ಮತ್ತು ನವೆಂಬರ್ 2005)

ಶ್ರೀಶಂಕರ ಕಾಲಮಾನ ಕ್ರಿ.ಶ. 788–820. ಆದ್ದರಿಂದ ಚಿತ್ಸುಖಾಚಾರ್ಯರ ಕಾಲಮಾನ ಕ್ರಿ.ಶ.9ನೆಯ ಶತಮಾನದ ಪೂರ್ವಾರ್ಧ ಇರಬಹುದಾಗಿದೆ.

(2) **ವಿದ್ಯಾಮಾಧವ ಪಂಡಿತ** : ಇವರ ಸಾಹಿತ್ಯಕ ಕಾಲಮಾನ ಕ್ರಿ.ಶ. ಸು. 1126–1138. ಹೊನ್ನಾವರ ತಾಲೂಕಿನ ಗುಣವಂತೆಯ ಹತ್ತಿರದ ಮಂಕಿಯ ನಾರಾಯಣ ಪೂಜ್ಯಪಾದರ ಮಗ. ತೈತ್ತಿರೀಯ ಯಜುಃ ಶಾಖಾ ವಾಸಿಷ್ಠ • ಮೈತ್ರಾವರುಣ ಕೌಂಡಿನ್ಯ ಪ್ರವರಾನ್ವಿತ ವಾಸಿಷ್ಠಗೋತ್ರದ ಇವರ ವಂಶಜರು ಈಗ ಹೊನ್ನಾವರ ತಾಲೂಕಿನ ಗುಣವಂತೆ, ಮಾಳಕೋಡ ; ಕುಮಟಾ ತಾಲೂಕಿನ ಬಗ್ಗೋಣ, ಅಗಸೆ, ಅಘನಾಶಿನಿ, ಮತ್ತು ಗೋಕರ್ಣಗಳಲ್ಲಿ ಇದ್ದಾರೆ. ವಿದ್ಯಾಮಾಧವರು ಮಂಕಿಯಲ್ಲಿ ಸ್ಥಾಪಿಸಿದ ಬಲಮುರಿ ಗಣಪತಿ ಈ ವಂಶದವರ ಕುಲದೇವತೆ. ಗೋಕರ್ಣ ಮತ್ತು ಬಗ್ಗೋಣದಲ್ಲಿರುವ ಇವರ ವಂಶಜರು ಕ್ರಿ.ಶ.1880 ರಿಂದ ಬಗ್ಗೋಣ ಪಂಚಾಂಗ ರಚನೆ ಮಾಡುತ್ತಿದ್ದಾರೆ.

ವಿದ್ಯಾಮಾಧವರ ಕೃತಿಗಳು :

1. ಕಾಮದುಘಾ/ಕಾಮಧೇನು – ನೈಷಧಕಾವ್ಯವ್ಯಾಖ್ಯಾ
2. ದೀಪಿಕಾ – ಕುಮಾರಸಂಭವ ಕಾವ್ಯವ್ಯಾಖ್ಯಾ
3. ಪಾರ್ವತೀರುಕ್ಮಿಣೀಯಮ್ – ದ್ವಿಸಂಧಾನಕಾವ್ಯ
   ಸಂಪಾದಕ ಅನುವಾದಕ : ಡಾ.ಸೂರ್ಯನಾರಾಯಣ ಭಟ್ಟ ಹಿತ್ಲಳ್ಳಿ, 2012/140
4. ಮುಹೂರ್ತದರ್ಪಣ
5. ಮುಹೂರ್ತದರ್ಶನ ಅಥವಾ ಮುಹೂರ್ತಮಾಧವೀ ಅಥವಾ ವಿದ್ಯಾಮಾಧವೀಯ
   – ಈ ಕೃತಿಯ ಸಂಸ್ಕೃತ ಮೂಲ ಮತ್ತು ಅನುವಾದಗಳು ಆಗಾಗ್ಗೆ ಪ್ರಕಟಗೊಂಡಿವೆ.
6. ಮೇಘಮಾಲಾಮಂಜರೀ
7. ಮೇಘಾನಯನಮ್
8. ಲಘುಪ್ರಕಾಶಿಕಾ – ಬೃಹಜ್ಜಾತಕಕಾವ್ಯವ್ಯಾಖ್ಯಾ
9. ವಿದ್ವಜ್ಜನವಲ್ಲಭಾ ಅಥವಾ ಸಂದೇಹ ವಿಷೌಷಧೀ – ಶಿಶುಪಾಲವಧಕಾವ್ಯವ್ಯಾಖ್ಯಾ
10. ವಿದ್ಯಾಮಾಧವೀಯಮ್ – ಕಿರಾತಾರ್ಜುನೀಯಕಾವ್ಯವ್ಯಾಖ್ಯಾ
11. ಶ್ರೀಸೂಕ್ತವ್ಯಾಖ್ಯಾ : ಇದು ಶ್ರೀ ಸೂಕ್ತಭಾಷ್ಯ ಎಂದು ಅನುವಾದ ಸಹಿತ ಪ್ರಕಟಗೊಂಡಿದೆ. ಸಂಪಾದಕ ಮತ್ತು ಅನುವಾದಕ: ಡಾ.ಸೂರ್ಯನಾರಾಯಣ ಭಟ್ಟ ಹಿತ್ಲಳ್ಳಿ, 2015/68
12. ಸೌಂದರ್ಯ ಲಹರೀವ್ಯಾಖ್ಯಾ

ಟಿಪ್ಪಣಿ :

(1) ಗ್ರಂಥಕರ್ತರ ಪಾರ್ವತೀ ರುಕ್ಮಿಣೀಯಮ್ ಮತ್ತು ಮುಹೂರ್ತದರ್ಶನ ಮಾತ್ರ ಪ್ರಕಟಗೊಂಡಿವೆ. ಉಳಿದವು ತಾಳೆಗರಿಗಳಲ್ಲಿಯೇ ಇವೆ.

(2) ಜ್ಯೋತಿಷ್ಯಶಾಸ್ತ್ರಜ್ಞ ಕಾವ್ಯಾರಾಧಕ ವಿದ್ಯಾಮಾಧವ ಪಂಡಿತರು (ಪರಿಚಯ) ಲೇ: ಡಾ.ಸೂರ್ಯನಾರಾಯಣ ನಾಗೇದ್ರ ಭಟ್ಟ 2011/66

(3) **ಕೇಶವ ಪಂಡಿತ** : ವಿದ್ಯಾಮಾಧವ ಪಂಡಿತರ ತಮ್ಮ.

ಕೃತಿ: ಮುಹೂರ್ತ ಶತಕ–ಇದು ಅನುವಾದ ಸಹಿತ ಆಗಾಗ ಪ್ರಕಟಗೊಂಡಿದೆ.

(4) **ವಿಷ್ಣುಶರ್ಮಾ ಪಂಡಿತ** : ವಿದ್ಯಾಮಾಧವ ಪಂಡಿತರ ಮಗ.

ಕೃತಿ: ಮುಹೂರ್ತಮಾಧವೀ ಗ್ರಂಥದ ವ್ಯಾಖ್ಯಾನ

(5) **ಗಣ ಬಟ್ಟ** : ವಿದ್ಯಾಮಾಧವ ಪಂಡಿತರ ಶಿಷ್ಯ. ಧಾರಾಪುರ (ಧಾರೇಶ್ವರ ?) ದ ಲಕ್ಷ್ಮೀನಾರಾಯಣರ ಮಗ. ಪಂಡಿತರ ಸೌಂದರ್ಯಲಹರೀ ವ್ಯಾಖ್ಯಾಗ್ರಂಥವನ್ನು ಸಂಗ್ರಹಿಸಿ ಪ್ರತ್ಯೇಕವಾಗಿ ನೀಡಿದ್ದಾನೆ.

(6) **ವಿದ್ಯಾತೀರ್ಥರು** : ಇವರ ಕುರಿತು ದಿವಂಗತ ನಾರಾಯಣ ಕುರಡಿಯವರು ಹೀಗೆ ಹೇಳಿದ್ದಾರೆ. "ಆದ್ಯ ಶಂಕರಾಚಾರ್ಯರ ಪುನರವತಾರವೆಂಬ ಖ್ಯಾತಿಗೆ ಪಾತ್ರರಾದ ವಿದ್ಯಾತೀರ್ಥರು ಹೊನ್ನಾವರ ತಾಲೂಕಿನ ನೀಲಕೋಡು ಗ್ರಾಮದ ಬಂಗಾರಮಕ್ಕಿಯವರು. ಇದು ಕರಿಕಾನಪರಮೇಶ್ವರಿ ಗುಡ್ಡದ ಬುಡದಲ್ಲಿದೆ. ಇವರು ಬರೆದ **"ಪುಣ್ಯಶ್ಲೋಕಮಂಜರೀ"** ಯಲ್ಲಿ ತಾವು ಬಿಲ್ವಾರಣ್ಯಸ್ಥ ಶಾರ್ಙಪಾಣಿ ತನಯಃ ಎಂದು ಹೇಳಿಕೊಂಡಿದ್ದಾರೆ. ಬಿಲ್ವಾರಣ್ಯವು (ಪತ್ರೆಕಾನು) ಬಂಗಾರಮಕ್ಕಿಗೆ ಹೊಂದಿಕೊಂಡಿದೆ. ಪತ್ರೆಕಾನಿನಿಂದ ಪತ್ರೆಯನ್ನು ಶಿವರಾತ್ರಿಗೆ ಗೋಕರ್ಣಕ್ಕೆ ಒಯ್ಯುತ್ತಿದ್ದರಂತೆ. (ಇತ್ತೀಚೆಗೆ ಪತ್ರಕಾನು ನಷ್ಟವಾಗಿದೆ.) ಮಹಾಮಹೋಪಾಧ್ಯಾಯ ರಾಣೆಯವರು ಭಾರತದಲ್ಲಿ ಬೇರೆಲ್ಲಿಯೂ ಬಿಲ್ವಾರಣ್ಯವಿಲ್ಲವೆಂದು ಹೇಳಿದ್ದಾರೆ. ರಾಣೆಯವರ ಹೇಳಿಕೆಯಂತೆ ವಿದ್ಯಾತೀರ್ಥರ ಪೂರ್ವಾಶ್ರಮದ ಹೆಸರು ವಿಷ್ಣುಭಟ್ಟ. ಮಹಾವಿದ್ಯಾಪರಿಣತರಾದುದರಿಂದ ಅವರನ್ನು "ಸರ್ವಜ್ಞ ವಿಷ್ಣು" ಎನ್ನುತ್ತಿದ್ದರು. ಇವರು ವಿಜಯನಗರ ಸಂಸ್ಥಾಪಕ ವಿದ್ಯಾರಣ್ಯರಿಗೂ ಅವರ ತಮ್ಮ ಸಾಯಣರಿಗೂ ಗುರುವಾಗಿದ್ದರು. ವಿಜಯನಗರ ಸ್ಥಾಪನೆಯ ಅನಂತರ ವಿದ್ಯಾತೀರ್ಥರಿಗೆ ಉಂಬಳಿ, ಬಿರುದು ಬಾವಲಿ ದೊರೆತ ಬಗ್ಗೆ ನೀಲಕೋಡಿನಲ್ಲಿ ಶಿಲಾಶಾಸನವೊಂದು ಇತ್ತೆಂದು ದಿವಂಗತ ಕೆಕ್ಕಾರ ಶಿವಭಟ್ಟರಿಗೆ ತಿಳಿದಿತ್ತು. (ಶಿವ ಭಟ್ಟರಕಾಲ ಕ್ರಿ.ಶ. 1886–1931) ಈ ಶಾಸನದ ವಿಷಯ ನಿಜಕ್ಕೂ ಪರಿಶೀಲನೀಯ ಅಭಿಮಾನೀ ಸಂಶೋಧಕರು ಸದ್ರಿ ಶಾಸನವನ್ನು ಹುಡುಕಿ ಪರಿಶೀಲಿಸುವಂತಾಗಲಿ.

(7) **ವಿದ್ಯಾರಣ್ಯರು** : ಇವರ ಕುರಿತು ದಿವಂಗತ ನಾರಾಯಣ ಕುರುಡಿಯವರು 1968 ರಲ್ಲಿ ಹೀಗೆ ಬರೆದಿದ್ದಾರೆ. "ಶ್ರೀವಿದ್ಯಾರಣ್ಯ ಮಹಾಮುನಿಗಳೂ, ಸಾಯಣಾಚಾರ್ಯರೂ ಹವ್ಯಕರು. ಅವರು ಕೃಷ್ಣಯಜುರ್ವೇದೀ ಬೌಧಾಯನ ಸೂತ್ರದವರು. ಭಾರದ್ವಾಜ ಗೋತ್ರದವರು. ಬೌಧಾಯನ ಸೂತ್ರ ಅನುಸರಿಸುವವರು ಹವ್ಯಕರು. ಚಿತ್ಪಾವನ ಬ್ರಾಹ್ಮಣರಲ್ಲಿ ಕೆಲವರಿದ್ದರೂ ಅವರು ವಿದ್ಯಾರಣ್ಯರು ತಮ್ಮವರು ಎಂದು ಹೇಳುವುದಿಲ್ಲ. ವಿದ್ಯಾರಣ್ಯರ ಗುರುಗಳಾದ ವಿದ್ಯಾತೀರ್ಥರು ಹವ್ಯಕರೆಂಬ ಬಗ್ಗೆ ಯಾವ ತರ್ಕ ವಿತರ್ಕಗಳೂ ಇಲ್ಲ."ಶೃಂಗೇರಿಯ ವಿದ್ಯಾಶಂಕರ ದೇವಾಲಯವು ಗುರು ವಿದ್ಯಾತೀರ್ಥರ ನೆನಪಿಗಾಗಿ ವಿದ್ಯಾರಣ್ಯರ ಕಾಲದಲ್ಲಿ ನಿರ್ಮಾಣಗೊಂಡಿತು ಎಂಬ ಪ್ರತೀತಿ ಇದೆ.

ಶತಾವಧಾನಿ ಡಾ. ಆರ್. ಗಣೇಶ ಅವರು ರಚಿಸಿದ 'ವಿಭೂತಿಪುರುಷ ವಿದ್ಯಾರಣ್ಯ' ಎಂಬ ಕೃತಿ ಶ್ರೀ ಸ್ವರ್ಣವಲ್ಲೀ ಸಂಸ್ಥಾನದ ಶ್ರೀ ಭಗವತ್ಪಾದ ಪ್ರಕಾಶನದಿಂದ 1996ರಲ್ಲಿ ಪ್ರಕಟವಾಗಿದೆ. ಲೇಖಕರು ಅದರಲ್ಲಿ ವಿದ್ಯಾರಣ್ಯರು ಹವ್ಯಕರೆಂದು ಸತಾರ್ಕಿಕವಾಗಿ ಅಭಿಪ್ರಾಯಪಟ್ಟಿದ್ದಾರೆ. (ನೋಡಿ ಪು. 6–7) ವಿದ್ಯಾರಣ್ಯರು ಅವರ ಸೋದರರಾದ ಸಾಯಣ ಮತ್ತು ಭೋಗನಾಥರಲ್ಲದೇ ಸಮಕಾಲೀನ ಹವ್ಯಕರು ರಚಿಸಿದ ಕೃತಿಗಳ

ವಿವರಗಳನ್ನು ನೀಡಿದ್ದಾರೆ. ಈ ಗ್ರಂಥಗಳಲ್ಲೆವೂ ಸಂಸ್ಕೃತದಲ್ಲಿ ಇವೆ. ಆಸಕ್ತರು ಹೆಚ್ಚಿನ ವಿವರಕ್ಕಾಗಿ ಡಾ.ಆರ್. ಗಣೇಶರ ಗ್ರಂಥವನ್ನು ಪರಾಂಬರಿಸುವುದು ಶ್ರೇಯಸ್ಕರ.

ವಿದ್ಯಾರಣ್ಯರು ಉತ್ತರಕನ್ನಡ ಮೂಲದವರು ಎಂದು ಕೆಲವರ ಅಭಿಪ್ರಾಯವಿದೆ. ಖ್ಯಾತ ಸಂಶೋಧಕರಾದ ಕೆಳದಿಯ ಗುಂಡಾ ಜೋಯಿಸರ ಸಂಪಾದಕತ್ವದಲ್ಲಿ ಪ್ರಕಟವಾದ 'ಕೆಳದಿ ವಸ್ತುಸಂಗ್ರಹಾಲಯದಲ್ಲಿರುವ ಗೋಕರ್ಣ ಇತಿಹಾಸ ಶಾಸನಗಳು' – ಭಾಗ 1 (ಪ್ರ.ಮು.2008) ಕೃತಿಯಲ್ಲಿ 'ವಿದ್ಯಾರಣ್ಯರು ಹೊನ್ನಾವರದವರೆಂದು ಉಲ್ಲೇಖಗೊಂಡಿದ್ದು ಆಸಕ್ತಿದಾಯಕವಾಗಿದೆ' ಎಂದಿದೆ (ನೋಡಿ ಪು.3)

ವಿದ್ಯಾರಣ್ಯರ ಜನನ : ದುರ್ಮುಖ ಸಂ। ವೈಶಾಖ ಶುದ್ಧ ಸಪ್ತಮಿ ಬುಧವಾರ (11.05.1296) **ಮರಣ** : ಶಾಲಿವಾಹನಶಕ 1309ನೆಯ ವರ್ಷ, ಕ್ಷಯಸಂ। ಜ್ಯೇಷ್ಠ ಬಹುಳ ತ್ರಯೋದಶೀ ಶನಿವಾರ (ಕ್ರಿ.ಶ. 1386). ತೈತ್ತಿರೀಯ ಯಜುಃ ಶಾಖಾ, ಬೋಧಾಯನ ಸೂತ್ರ, ಭಾರದ್ವಾಜಗೋತ್ರದವರು. ಪ್ರಕಾಂಡ ಪಂಡಿತರು. ರಾಜ್ಯಶಾಸ್ತ್ರ ಪ್ರವೀಣರು. ವಿಜಯನಗರ ಸಾಮ್ರಾಜ್ಯ ಸ್ಥಾಪನಾಚಾರ್ಯರು. ಜೀವಿತದ ಕೊನೆಯ ದಶಕದಲ್ಲಿ ಸಂನ್ಯಾಸಾಶ್ರಮಿಗಳು. ಅಂತಿಮ 6 ಋತುಗಳ ಕಾಲ ದಕ್ಷಿಣಾಮ್ನಾಯ ಪೀಠ ಶೃಂಗೇರಿ ಪೀಠಸ್ಥ 12ನೆಯ ಗುರುಗಳು. ಗೋಕರ್ಣ ಶಂಕರಮಠ ಸಂಸ್ಥಾಪಕರು, ಸಿದ್ದಾಪುರ ತಾಲೂಕು ನೆಲೆಮಾವು ಮಠ ಸ್ಥಾಪನೆಗೆ ಪ್ರೇರಕ ಶಕ್ತಿ. ಕರ್ನಾಟಕ ಸಂಗೀತಶಾಸ್ತ್ರದ ಪಿತಾಮಹರು. ತಂದೆ ಮಾಯಣ. ತಾಯಿ ಶ್ರೀಮತಿ. ಸೋದರ ಸಾಯಣಾಚಾರ್ಯ.

ವಿದ್ಯಾರಣ್ಯ ವಿರಚಿತ ಗ್ರಂಥಗಳು :

1.	ಅನುಭೂತಿಪ್ರಕಾಶ: 12 ಪ್ರಧಾನೋಪನಿಷತ್ತುಗಳ ಸಾರ ಸಂಗ್ರಹ–ಮುಂಬೈ	1926
2.	ಐತರೇಯೋಪನಿಷದ್ದೀಪಿಕಾ ....ಪುಣೆ	1927
3.	ಕಾಲಮಾಧವೀಯ: ವೈದಿಕಕಾರ್ಯಕಲಾಪಗಳಿಗೆ ಕಾಲನಿರ್ಣಯ ಮಾಡಲು ಸಹಾಯಕ ಕೃತಿ..ಪುಣೆ	**1949**
4.	ಜೀವನ್ಮುಕ್ತಿ ವಿವೇಕ. .... ಬೆಂಗಳೂರು	1990
5.	ಜೈಮಿನೀಯ ನ್ಯಾಯಮಲಾ..	
6.	ಜೈಮಿನೀ ನ್ಯಾಯಮಾಲಾ ವಿಸ್ತರ–ವ್ಯಾಖ್ಯಾನ ಗ್ರಂಥ .... ಪುಣೆ	1928
7.	ದೃಗ್ದೃಶ್ಯ ವಿವೇಕ–ಕೇವಲ 42ಶ್ಲೋಕಗಳದ್ದಾದರೂ ಅತ್ಯುನ್ನತ ಪರಿಪಾಕವುಳ್ಳ ಗ್ರಂಥ ....ಬೆಂಗಳೂರು	1980
8.	ನೃಸಿಂಹತಾಪನೀಯೋಪನಿಷದ್ದೀಪಿಕಾ : .... ಪುಣೆ	1932
9.	ಪರಾಶರ ಮಾಧವೀಯ–ಪರಾಶರ ಸ್ಮೃತಿಯ ಟೀಕೆ : ಧರ್ಮಶಾಸ್ತ್ರದ ವಿಶ್ವಕೋಶ.. ಕಲ್ಕತ್ತಾ	1972
10.	ಬೃಹದಾರಣ್ಯಕಭಾಷ್ಯವಾರ್ತಿಕ ಸಾರ ....ಪುಣೆ [ಶ್ರೀಶಂಕರರು ಬೃಹದಾರಣ್ಯಕ ಉಪನಿಷತ್ತಿಗೆ ಬರೆದ ಭಾಷ್ಯಕ್ಕೆ ಅವರ ಪ್ರಧಾನ ಶಿಷ್ಯರಲ್ಲೊಬ್ಬರಾದ ಸುರೇಶ್ವರಾಚಾರ್ಯರ 10ಸಾವಿರ ಶ್ಲೋಕಗಳ ವಾರ್ತಿಕವನ್ನು ವಿದ್ಯಾರಣ್ಯರು ಸುಮಾರು 5 ಸಾವಿರ ಶ್ಲೋಕಗಳಿಗೆ ಸಂಕ್ಷೇಪಿಸಿದ್ದಾರೆ.]	1952
11.	ವಿವರಣ ಪ್ರಮೇಯ ಸಂಗ್ರಹ ಅಥವಾ ವಿವರಣೋಪನ್ಯಾಸ ..... ವಾಲ್ಟೇರ್	1941
12.	ವೇದಾಂತ ಪಂಚದಶೀ ....ಬೆಂಗಳೂರು	1995
13.	ವೈಯಾಸಕ ನ್ಯಾಯಮಾಲಾ	
14.	ವೈಯಾಸಕ ನ್ಯಾಯಮಾಲಾ ವಿಸ್ತರ–ವ್ಯಾಖ್ಯಾನ ಗ್ರಂಥ .... ಪುಣೆ	1980

ಟಿಪ್ಪಣಿ :

(1) ಜೀವನ್ಮುಕ್ತಿ ವಿವೇಕ ಮತ್ತು ವೇದಾಂತ ಪಂಚದಶೀ ಇವೆರಡೂ ವಿದ್ಯಾರಣ್ಯರ ವೇದಾಂತ ಕೃತಿಗಳಲ್ಲಿ ಪ್ರಧಾನವಾದವುಗಳೆಂದು ಪರಿಗಣಿತವಾಗಿವೆ.

(2) ವಿದ್ಯಾರಣ್ಯರ ಕುರಿತ ಅಧ್ಯಯನಕ್ಕೆ ಡಾ॥ ವೇಣಕಿ ಮಾಧವ ಶಾಸ್ತ್ರಿ, ಧಾರವಾಡ ಇವರಿಗೆ ಕ.ವಿ.ವಿ. ಯಿಂದ ಪಿಎಚ್.ಡಿ. ದೊರಕಿದೆ.

(3) ವಿಭೂತಿ ಪುರುಷ ವಿದ್ಯಾರಣ್ಯ:ಲೇಖಕ-ಶತಾವಧಾನಿ ಡಾ.ಆರ್.ಗಣೇಶ 1996

(4) ವಿದ್ಯಾರಣ್ಯರ ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಅನೇಕ ಗ್ರಂಥಗಳು ಪ್ರಕಟಗೊಂಡಿವೆ.

(8) ಸಾಯಣಾಚಾರ್ಯ (ಕ್ರಿ.ಶ. 1315-1387) : ಇವರು ವಿದ್ಯಾರಣ್ಯರ ಕಿರಿಯ ಸಹೋದರ. ಇವರ ಅಪೂರ್ವವೂ ಅಮೂಲ್ಯವೂ ಆದ ಗ್ರಂಥಗಳ ರಚನೆಯ ಹಿಂದೆ ವಿದ್ಯಾರಣ್ಯರ ಅನುಪಮ ಪ್ರೋತ್ಸಾಹವಿದೆಯೆಂದು ಡಾ.ಆರ್. ಗಣೇಶ ಅವರು ಅಭಿಪ್ರಯಿಸಿದ್ದಾರೆ. ಇವರ ಕೃತಿಗಳು ಕೆಳಗಿನಂತಿವೆ.

1. ಮಾಧವೀಯ ಧಾತುವೃತ್ತಿ-ಸಂಸ್ಕೃತಭಾಷೆಯಿಂ 2000ಕ್ಕೂ ಹೆಚ್ಚು ಧಾತುಗಳನ್ನು ಅವುಗಳ ಸಮಸ್ತ ರೂಪ ವಿಸ್ತಾರಗಳೊಂದಿಗೆ ಕ್ರೋಢೀಕರಿಸಿದ ಅನುಪಮ ಕೃತಿ ....ಮೈಸೂರು 1968.
2. ವೇದಾರ್ಥ ಪ್ರಕಾಶ - ವೇದ ವಾಙ್ಮಯದ ಭಾಷ್ಯ. ಇದು ಸಾಯಣಭಾಷ್ಯವೆಂದೇ ಪ್ರಸಿದ್ಧ ....ಮೈಸೂರು-1952, ತಿರುಪತಿ-1968, ... ಕಲ್ಕತ್ತಾ-1972, ಪುಣೆ-1979, ದೆಹಲಿ-1985.
3. ಸುಭಾಷಿತ ಸುಧಾನಿಧಿ .... ಧಾರವಾಡ 1968

ಅಪ್ರಕಟಿತ ಕೃತಿಗಳು (5) : ಅಲಂಕಾರ ಸುಧಾನಿಧಿ, ಆಯುರ್ವೇದ ಸುಧಾನಿಧಿ, ಪ್ರಾಯಶ್ಚಿತ್ತ ಸುಧಾನಿಧಿ, ಪುರುಷಾರ್ಥ ಸುಧಾನಿಧಿ, ಯಜ್ಞತಂತ್ರ ಸುಧಾನಿಧಿ. ಈ ಐದೂ ಕೃತಿಗಳ ಹಸ್ತಪ್ರತಿಗಳು ಓರಿಯಂಟಲ್ ರಿಸರ್ಚ ಇನ್ ಸ್ಟಿಟ್ಯೂಟ್‌ನಲ್ಲಿವೆ ಎಂದು ತಿಳಿದುಬಂದಿದೆ.

(9) ಭೋಗನಾಥ : ವಿದ್ಯಾರಣ್ಯರ ಕಿರಿಯ ಸಹೋದರ ಆದ ಇವರು ಅವರಿಗಿಂತಲೂ ಸುಮಾರು 20ವರ್ಷ ಚಿಕ್ಕವರೆಂದು ಅಭಿಪ್ರಾಯವಿದೆ. ಇವರ ಕೃತಿಗಳು ಕೆಳಗಿನಂತಿವೆ.

1. ಉದಾಹರಣಮಾಲಾ 2. ಗೌರೀನಾಥಾಷ್ಟಕ, 3. ತ್ರಿಪುರವಿಜಯ, 4. ರಾಮೋಲ್ಲಾಸ,
5. ಶೃಂಗಾರಮಂಜರಿ. 6. ಮಹಾಗಣಪತಿಸ್ತವ.

(10) ಸೋಮೇಶ್ವರ ಭಟ್ಟ : ಮಾಧವಾಚಾರ್ಯ(ವಿದ್ಯಾರಣ್ಯ) ರ ಮಗ, ಕುಮಾರಿಲ ಭಟ್ಟರ ತಂತ್ರವಾರ್ತಿಕ ಗ್ರಂಥಕ್ಕೆ 'ನ್ಯಾಯಸುಧಾ' ಎಂಬ ವ್ಯಾಖ್ಯಾನ ರಚಿಸಿದ್ದಾರೆ.

(11) ಮಾಧವ ಭಟ್ಟ : ಸಾಯಣಾಚಾರ್ಯರ ಮಗ, 'ಏಕಾಕ್ಷರಮಾಲಾ, ಸ್ಮೃತಿರತ್ನ ಮತ್ತು ಸರ್ವದರ್ಶನ ಸಂಗ್ರಹ' ಎಂಬ ಮೂರು ಕೃತಿಗಳನ್ನು ರಚಿಸಿದ್ದಾರೆ. ಮೊದಲನೆಯದು ಒಂದು ನಿಘಂಟು. ಸರ್ವದರ್ಶನ ಸಂಗ್ರಹದಲ್ಲಿ ಭರತಖಂಡದ ಎಲ್ಲ ಮತ ಪಂಥಗಳ ದರ್ಶನ ಸಂಗ್ರವಿದ್ದು ಇದಕ್ಕೆ ಸಮಾನವಾದ ಇನ್ನೊಂದು ಗ್ರಂಥ ಇನ್ನೂ ಬಂದಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ. ಇದು ಇಮ್ಮಡಿ ಶಿವಬಸವ ಸ್ವಾಮಿಗಳ ಅನುವಾದ ಸಹಿತ ಪ್ರಕಟಗೊಂಡಿದೆ. .... ಧಾರವಾಡ 1976.

(12) ಚೆನ್ನು ಭಟ್ಟ : ಮಾಧವಭಟ್ಟರ ಗುರುಗಳಲ್ಲೊಬ್ಬರಾದ ಸರ್ವಜ್ಞ ವಿಷ್ಣುಭಟ್ಟರ ಮಗ. ತರ್ಕಭಾಷೆಯ ವ್ಯಾಖ್ಯೆಯಾದ ತಾರ್ಕಿಕ ರಕ್ಷಾ ಪ್ರಕಾಶಿಕಾ ಟೀಕೆಯನ್ನು ರಚಿಸಿದ್ದಾರೆ.

(13) **ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿ** : ಶಿರಸಿ ತಾಲೂಕಿನ ಸೋಂದಾ ಸ್ವರ್ಣವಲ್ಲೀ ಗುರುಪರಂಪರೆಯಲ್ಲಿ 38ನೆಯವರು. ಕ್ರಿ.ಶ. 1648-52 ರ ಅವಧಿಯಲ್ಲಿ ಪೀಠಸ್ಥರು. **ಬೃಹದ್ಗಂಗಾಧರೇಂದ್ರರೆಂದೂ** ಕರೆಯಲಾಗುತ್ತಿದೆ.

ರಚಿತ ಕೃತಿಗಳು :

1. ಕೈವಲ್ಯ ಕಲ್ಪದ್ರುಮ-ಸ್ವಾರಾಜ್ಯ ಸಿದ್ಧಿಯ ವ್ಯಾಖ್ಯಾನ
2. ಜ್ಞಾನದೀಪಿಕಾ
3. ಪ್ರಣವಕಲ್ಪ ಪ್ರಕಾಶ
4. ಭಟ್ಟಸಾರ ಸರ್ವಸ್ತೋದ್ಯೋತ ಚಂದ್ರಿಕಾ
5. ಶುಕಾಷ್ಟಕ ವ್ಯಾಖ್ಯಾ-ಸಂಪಾದಕ-ಡಾ. ಸೂರ್ಯನಾರಾಯಣ ಭಟ್ಟ 1992/64
6. ಸಿದ್ಧಾಂತ ಚಂದ್ರಿಕೋದ್ಧಾರ-ರಮಾನಂದ ಸರಸ್ವತಿಯವರ ಸಿದ್ಧಾಂತ ಚಂದ್ರಿಕದ ಭಾಷ್ಯ.
7. ಸಿದ್ಧಾಂತ ಬಿಂದುಶೇಖರ-ಅಪ್ಪಯ್ಯ ದೀಕ್ಷಿತರ ಸಿದ್ಧಾಂತಲೇಶದ ಭಾಷ್ಯ.
8. ಸಿದ್ಧಾಂತಲೇಶಟೀಕಾ
9. ಸಿದ್ಧಾಂತ ಸೂಕ್ತಿಮಂಜರೀ ಪ್ರಕಾಶ (ವೇದಾಂತ ಸಿದ್ಧಾಂತ ಸೂಕ್ತಿಮಂಜರೀ) ಸ್ವಾರಾಜ್ಯ ಸಿದ್ಧಿ ಉಪನಿಷತ್ತುಗಳ ಚಿಕ್ಕ ಸಾರಾಂಶ ಮತ್ತು ಬ್ರಹ್ಮಸೂತ್ರ ಹಾಗೂ ಶಾಂಕರ ಭಾಷ್ಯದ ಸಂಕ್ಷಿಪ್ತ ಪದ್ಯಮಯ ವಿವರಣೆ : ಇದರ ಕನ್ನಡ ಮತ್ತು ಇಂಗ್ಲೀಷ್ ಅನುವಾದ ಕ.ವಿ.ವಿ.ಯಿಂದ ಪ್ರಕಟಗೊಂಡಿದೆ. ಅನುವಾದ ಡಾ.ಬಿ.ಆರ್.ಮೋಡಕ ...1964/120

ಟಿಪ್ಪಣಿ :

(1) ಕೃತಿಗಳಲ್ಲಿ ಕೆಲವು ಮುಂಬೈ, ಕಾಶಿಗಳಲ್ಲಿ ಮುದ್ರಿತಗೊಂಡಿವೆ. ಕೆಲವು ಮೈಸೂರಿನ ಓರಿಯಂಟಲ್ ಗ್ರಂಥಾಲಯದಲ್ಲಿ ಇವೆ. (ಮಾಹಿತಿ : ನಾ.ಸು.ಭರತನ ಹಳ್ಳಿ)

(2) ಬೃಹದ್ಗಂಗಾಧರೇಂದ್ರರು - ಚರಿತ್ರೆ ಡಾ.ಸೂರ್ಯನಾರಾಯಣ ಭಟ್ಟ...........2001/70

(14) **ಗಂಗಾದೇವಿ** : ಕ್ರಿ.ಶ. ಸು. 1371. ಸಂಸ್ಕೃತ ಭಾಷೆಯಲ್ಲಿ ಕಾವ್ಯರಚನೆ ಮಾಡಿದ ಪ್ರಥಮೈಕ ಕವಯಿತ್ರಿ. 9 ಸರ್ಗಗಳ ಕಾವ್ಯಕರ್ತೃ. ಪತಿ ಕಂಪಣ ಅಥವಾ ಕಂಪರಾಜ.

1. ಮಧುರಾವಿಜಯಮ್ ಅಥವಾ ವೀರಕಂಪರಾಜಚರಿತಮ್:
   ಸಂ। ಜಿ. ಹರಿಹರ ಶಾಸ್ತ್ರೀ, ಮತ್ತು ವಿ.ಶ್ರೀನಿವಾಸ ಶಾಸ್ತ್ರೀ
   ತಿರುವನಂತಪುರಮ್ ....1916(2), 1924.
2. ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಪ್ರೊ. ತಿರುವೆಂಕಟಾಚಾರಿಯವರ ಅಂಗ್ರೇಜಿ ಅನುವಾದದೊಡನೆ ಪ್ರಕಟಣೆ 1957
3. ಗಂಗಾದೇವಿ ವಿರಚಿತ ಮಧುರಾವಿಜಯಂ ಅಥವಾ ವೀರಕಂಪರಾಯ ಚರಿತಂ-ಮೂಲ ಮತ್ತು ಕನ್ನಡದಲ್ಲಿ ಪ್ರತಿಶ್ಲೋಕ ಕಾವ್ಯಾನುವಾದ ಸಹಿತ
   -ಕೆ.ಕುಶಾಲಪ್ಪ ಗೌಡ 1987/170

ಟಿಪ್ಪಣಿ :

ಗಂಗಾದೇವಿ ಕುಮಟಾ ತಾಲೂಕಿನ ಹಿರೇಗುತ್ತಿಯ ಚಿಕ್ಕಗುತ್ತಿಯವಳು ಎಂಬುದು ಹಿರೇಗುತ್ತಿ ಮಹಾಲಿಂಗೇಶ್ವರ ದೇವಾಲಯದ ಆವಾರದಲ್ಲಿರುವ ಶಾಸನದಿಂದ ಬೆಳಕಿಗೆ ಬಂದಿದೆ. ಇದು ವಿಜಯನಗರ ಸಾಮ್ರಾಟ ಪ್ರತಾಪದೇವರಾಯನು ಸ್ಥಳದಲ್ಲಿದ್ದು ಸ್ಥಾಪಿಸಿದ ಶಾಸನ. ಪ್ರತಾಪದೇವರಾಯನು ಕಂಪಣ ಮತ್ತು ಗಂಗಾದೇವಿಯವರ ಮಗ. ಕಾಂಚೀಪುರದಲ್ಲಿ ಆಳುತ್ತಿದ್ದ ಕಂಪಣನು ಕ್ರಿ, ಶ. 1371ರಲ್ಲಿ ಸೈನ್ಯ ಸಹಿತ ಮಧುರೆಯನ್ನು ಜಯಿಸಿದಾಗ ಪತಿಯ ಜೊತೆಗಿದ್ದ ಗಂಗಾದೇವಿಯು ರಚಿಸಿದ ಸಂಸ್ಕೃತ ಕಾವ್ಯ. ಮಾಹಿತಿ ಕೃಪೆ - ಶ್ರೀ ಜಿ.ಎಸ್.ನಾಯಕ, ಗಣಪತಿ ಕೆರೆಮನೆ ನಿವೃತ್ತ ಇತಿಹಾಸ ಶಿಕ್ಷಕ ಮತ್ತು ಸಂಶೋಧಕರು ಹಿರೇಗುತ್ತಿ.

ಆ. ಕನ್ನಡ ಸಾಹಿತ್ಯ ಸಂಪದ

ಕನ್ನಡದ ಆದಿಕವಿ, ಮಹಾಕವಿ ಪಂಪನ ಕಾವ್ಯಗಳಲ್ಲಿ ಒಂದಾದ ವಿಕ್ರಮಾರ್ಜುನ ವಿಜಯದಲ್ಲಿ ಬರುವ ಬನವಾಸಿಯ ವರ್ಣನೆ ಗಮನಾರ್ಹ.

'ಆವನಂದನವನಂಗಳೊಳಂ ಬನವಾಸಿ ದೇಶದೊಳ್ ॥'

'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ
ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್॥'

'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಮ್ ॥'

ಇತ್ಯಾದಿ ಓದಿದರೆ ಆತ ತನ್ನ ತಾಯ್ನಾಡನ್ನು ಎಷ್ಟೊಂದು ಗಾಢವಾಗಿ ಪ್ರೀತಿಸುತ್ತಿದ್ದನೆಂಬುದು ಅರಿವಾಗುತ್ತದೆ.

'ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ'ಕಾರರಾದ ತ.ಸು.ಶಾಮರಾಯರು ಪಂಪನ ದೇಶ ಕಾಲದ ಕುರಿತು 'ಪಂಪನು ಹುಟ್ಟಿ ಬೆಳೆದುದು ಬನವಾಸಿಯ ಪ್ರಾಂತವಿರಬಹುದಾದರೂ ತನ್ನ ಉಪಜೀವನಕ್ಕಾಗಿ ಬಂದು ನೆಲೆಸಿದುದು ಹೈದರಾಬಾದು ಜಿಲ್ಲೆಯ ಮೇಮುಲವಾಡದಲ್ಲಿ ಚಾಲುಕ್ಯ ರಾಜನಾದ ಅರಿಕೇಸರಿ ಇಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಪಂಪನ ಪೂರ್ವಜರು ತೆಲಗುದೇಶವಾದ ವೆಂಗಿಪಳುವನ್ನು ಬಿಟ್ಟು ಕನ್ನಡನಾಡಿಗೆ ಬಂದು ಬನವಾಸಿಯಲ್ಲಿ ನೆಲೆಸಿದರೆಂದು ತೋರುತ್ತದೆ.' ಎಂದಿದ್ದಾರೆ.

ಉತ್ತರ ಕನ್ನಡದ ಆದಿಕವಿಯೇ ಕನ್ನಡ ಸಾಹಿತ್ಯದ ಆದಿಕವಿ, ಮಹಾಕವಿ ಎನಿಸಿಕೊಂಡಿರುವುದು ಅಭಿಮಾನದ ಸಂಗತಿ. ಕರ್ನಾಟಕ ಸರಕಾರವು ಕವಿಯ ಸವಿನೆನಪಿಗಾಗಿ **ಪಂಪಪ್ರಶಸ್ತಿಯ**ನ್ನು ಸ್ಥಾಪಿಸಿರುವುದೂ ಅದನ್ನು ಹಾಹಾಜಕ್ಷಂಖಮ್ಮೆ ಕನ್ನಡದ ಅಗ್ರಗಣ್ಯ ಸಾಹಿತಿಗಳೊಬ್ಬರಿಗೆ ಪ್ರದಾನ ಮಾಡುತ್ತಿರುವುದೂ ಪಂಪಪ್ರಶಸ್ತಿ ಪ್ರಧಾನ ಸಮಾರಂಭವನ್ನು ಬನವಾಸಿಯಲ್ಲಿ ಏರ್ಪಡಿಸುತ್ತಿರುವುದೂ ತುಂಬಾ ಔಚಿತ್ಯಪೂರ್ಣವಾಗಿದೆ. ಉತ್ತರಕನ್ನಡದ ಅಗ್ರಮಾನ್ಯ ಸಾಹಿತಿಗಳಾದ ಶ್ರೀ ಯಶವಂತ ಚಿತ್ತಾಲರಿಗೆ 2007ರಲ್ಲಿ ಮತ್ತು ಶ್ರೀ ಜಿ.ಎಚ್.ನಾಯಕರಿಗೆ 2010ರಲ್ಲಿ ಈ ಪಂಪಪ್ರಶಸ್ತಿ ಸಂದಿರುವುದು ಉತ್ತರಕನ್ನಡಕ್ಕೆ ಹೆಮ್ಮೆಯ ವಿಷಯ.

ಆದಿಕವಿ ಪಂಪನ **ಆದಿಪುರಾಣ** ಮತ್ತು **ವಿಕ್ರಮಾರ್ಜುನ ವಿಜಯಂ** ಎಂಬ ಎರಡೂ ಕಾವ್ಯಗಳು ಹಳೆಗನ್ನಡದಲ್ಲಿದ್ದು ಪಂಪಕವಿ ಮತ್ತು ಆತನ ಕೃತಿಗಳ ಪರಿಚಯ, ವಿಮರ್ಶೆ, ಗದ್ಯಾನುವಾದ, ಕವಿಕೃತಿ ಕುರಿತು ನಡೆದ ಅಧ್ಯಯನಗಳೂ ಪ್ರಕಟಗೊಂಡ ಗ್ರಂಥಗಳೂ ಗಮನಾರ್ಹವಾಗಿವೆ.

(15) ಪಂಪಮಹಾಕವಿ : ಜನನ ಕ್ರಿ.ಶ. 902, ಕೃತಿರಚನೆ 39ನೆಯ ವಯಸ್ಸಿನಲ್ಲಿ – ಕ್ರಿ.ಶ.941ರಲ್ಲಿ. ತಂದೆ ಶ್ರೀವತ್ಸಗೋತ್ರದ ಅಭಿರಾಮ ದೇವರಾಯ. ಮೂಲತಃ ಬ್ರಾಹ್ಮಣನಾಗಿದ್ದು ಅನಂತರ ಜೈನಮತಾನುಯಾಯಿಯಾದವ.

ಪಂಪನ ಕೃತಿಗಳು :

1. ಆದಿಪುರಾಣ – ಹಳೆಗನ್ನಡ ಕಾವ್ಯ
2. ವಿಕ್ರಮಾರ್ಜುನ ವಿಜಯ ಅಥವಾ ಪಂಪಭಾರತ–ಹಳೆಗನ್ನಡ ಕಾವ್ಯ

ಪಂಪ: ಕವಿ ಹಾಗೂ ಕಾವ್ಯಗಳ ಕುರಿತ ಕೃತಿಗಳು :

1. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ ಸಂ. ಬಿ. ಲೂಯಿ ರೈಸ್, ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು..1898

2. ಪಂಪಮಹಾಕವಿ ವಿರಚಿತ ಆದಿಪುರಾಣಂ 1900
ಸಂ. ಎಸ್.ಜಿ. ನರಸಿಂಹಾಚಾರ್, ಓರಿಯೆಂಟರ್ ಲೈಬ್ರರಿ, ಮೈಸೂರು.

3. ಪಂಪಭಾರತ ಅಥವಾ ವಿಕ್ರಮಾರ್ಜುನ ವಿಜಯ
(2, 3ನೆಯ ಆಶ್ವಾಸಗಳು) ದಿ ಕರ್ನಾಟಕ ಟ್ರೇಡಿಂಗ್
ಕಂ.ಧಾರವಾಡ 1918

4. ಸಂ. ಬೆಳ್ಳಾವೆ ವೆಂಕಟನಾರಾಯಣಪ್ಪ, ಕನ್ನಡ ಸಾಹಿತ್ಯ ಪರಿಷತ್ತು.
ಬೆಂಗಳೂರು 1926 (ಭಾಗ 1) 1927 (ಭಾಗ 2), 1935 (ಭಾಗ 2) 1931; ಮೈಸೂರು
ವಿಶ್ವವಿದ್ಯಾನಿಲಯ, ಮೈಸೂರು 1955 (ಭಾಗ 2), 1969 (ಭಾಗ 1), 1960, 1970

5. ಪಂಪಭಾರತದ ಕಥೆ (ಗದ್ಯಾನುವಾದ)
ಬೆಳ್ಳಾವೆ ವೆಂಕಟನಾರಾಯಣಪ್ಪ, ಕನ್ನಡ ಸಾಹಿತ್ಯ ಪರಿಷತ್ತು ಬೆಂ. 1930

6. ಪಂಪಭಾರತದ ನಿಘಂಟು, ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂ. 1931

7. ನಾಡೋಜ ಪಂಪ-ಜೀವನ ಮತ್ತು ಕೃತಿ ಸಮೀಕ್ಷೆ:
ಮುಳಿಯ ತಿಮ್ಮಪ್ಪಯ್ಯ .... 1938(2) 1977/592

8. ಆದಿಪುರಾಣ ಸಂಗ್ರಹ (ಗದ್ಯಾನುವಾದ)
ಮುಳಿಯ ತಿಮ್ಮಪ್ಪಯ್ಯ, ಮಂಗಳೂರು 1938

9. ಪಂಪ-ಪಂಪನ ಕಾವ್ಯಗಳ ವಿವೇಚನೆ :
ತೀ.ನಂ. ಶ್ರೀಕಂಠಯ್ಯ .... 1939(7) 1974/70

10. ಪಂಪಮಹಾಕವಿ: ಪಂಪನ ಸಹಸ್ರಮಾನೋತ್ಸವದಲ್ಲಿ
ಅಧ್ಯಕ್ಷ ಮುಳಿಯ ತಿಮ್ಮಪ್ಪಯ್ಯ ಅವರ ಭಾಷಣ.........................1941/38

11. ಪಂಪವಾಣಿ-ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 1941

12. ಸಮಸ್ತ ಭಾರತಸಾರ (ಗದ್ಯಾನುವಾದ)
ಮುಳಿಯ ತಿಮ್ಮಪ್ಪಯ್ಯ, ಧರ್ಮಪ್ರಕಾಶ ಪ್ರೆಸ್, ಮಂಗಳೂರು 1941

13. ಪಂಪಭಾರತಸಾರ (ಪೂರ್ವಭಾಗ)
ಜಿ.ಪಿ. ರಾಜರತ್ನಂ, ಹಿಂದ್ ಕಿತಾಬ್ಸ್ ಲಿಮಿಟೆಡ್, ಬೆಂಗಳೂರು. 1948

14. ಪಂಪಕವಿಯ ಕರ್ಣರಸಾಯನಂ
ಸಂ. ಜಿ.ಪಿ. ರಾಜರತ್ನಂ, ಬಿ.ಬಿ.ಡಿ. ಪವರ್ ಪ್ರೆಸ್, ಬೆಂಗಳೂರು 1950

15. ಪಂಪಮಹಾಕವಿ
ಸಂ.ರಂ.ಶ್ರೀ ಮುಗಳಿ, ಪಂಪ ಪ್ರಕಟನಾಲಯ, ಲಕ್ಷ್ಮೇಶ್ವರ 1951

16. ಶ್ರೀ ಕವಿ ಪಂಪ
ಜಿ.ಪಿ. ರಾಜರತ್ನಂ, ಸತ್ಯಶೋಧಕ ಪ್ರಕಟನ ಮಂದಿರ, ಬೆಂಗಳೂರು. ..1951

17. ಪಂಪನ ಭರತ ಬಾಹುಬಲಿ
ಜಿ. ಬ್ರಹ್ಮಪ್ಪ, ಶಾಂತಿನಾಥ ಬಸದಿ, ಮೈಸೂರು. 1952

18. ಪಂಪನ ಕಲಿಕರ್ಣ
ಜಿ. ಬ್ರಹ್ಮಪ್ಪ, ಶಾಂತಿನಾಥ ಬಸದಿ, ಮೈಸೂರು. 1952

19. ಪಂಪಕವಿಯ ಭರತ ಬಾಹುಬಲಿ
ಸಂ. ಕೆ.ಎಂ. ಕುಇಷುಗುಾವ್, ಜಿ. ಬ್ರಹ್ಮಪ್ಪ, ಮೈಸೂರು. 1953

20. ಪಂಪಕವಿಯ ಕರ್ಣರಸಾಯನಂ
ಸಂ. ಕೆ.ವಿ. ಕುಇಷ್ಣಭಟ್ಟ, ಎಂ. ಸುಬ್ರಾಯ ಭಟ್ಟ, ಬೇಳ 1953

21. ಪಂಪಮಹಾಕವಿ ವಿರಚಿತಂ ಆದಿಪುರಾಣಂ
ಸಂ. ಕೆ.ಜಿ. ಕುಂದಣಗಾರ, ಎ.ಪಿ. ಚೌಗುಲೆ, ಬೆಳಗಾವಿ.................... 1953

22. ಆದಿಪುರಾಣ ಸಂಗ್ರಹ:ಸಂಪಾದಕ–ಎಲ್.ಗುಂಡಪ್ಪ .....1954(2)1979/164

23. ಪಂಪನ ಕರ್ಣರಸಾಯನ (ಗದ್ಯಾನುವಾದ)
ಶ್ರೀಧರ, ಶ್ರೀ ರಂಗನಾಥ ಬುಕ್‌ಸ್ಟಾಲ್, ಬೆಂಗಳೂರು. 1959

24. ಪಂಪಭಾರತ ಸಂಗ್ರಹ ಸಂ. ಎನ್.ಬಸವಾರಾಧ್ಯ ಮತ್ತು ಇತರರು,
ಪ್ರಾಚ್ಯಕಾವ್ಯಪ್ರಕಾಶನ ಮಂದಿರ, ಬೆಂಗಳೂರು. 1964

25. ಮಹಾಕವಿ ಪಂಪ ಹಾಗೂ ಅವನ ಕೃತಿಗಳು–ಆರು ಉಪನ್ಯಾಸಗಳು:
ಬಿ.ಎಸ್. ಕುಲಕರ್ಣಿ ಮತ್ತು ಇತರರು .... 1966(3) 1976/84

26. ಪಂಪಭಾರತದ ಕಥೆ (ಗದ್ಯಾನುವಾದ) ಅಮ್ಮೆಂಬಳ ಅನಂತಯ್ಯ ನಾವಡ,
ಕನ್ನಡ ಲೇಖಕರ ಸಂಘ, ಮಂಗಳೂರು. 1969

27. ಪಂಪಭಾರತ ದರ್ಶನ: ಕೆ. ವೆಂಕಟರಾಮಪ್ಪ 1970/244

28. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ ಭಾಗ–2:
9 ರಿಂದ 14 ಆಶ್ವಾಸಗಳು ....1970(2) 1976/182

29. ಪಂಪ ಮತ್ತು ಇತರರು–ಜೈನ ಸಾಹಿತ್ಯ ಕಥೆಗಳು
ಗದ್ಯಾನುವಾದ : ಡಿ.ಪದ್ಮನಾಭ ಶರ್ಮಾ..................................1971/174

30. ಪಂಪ–ನನ್ನಯ : ಒಂದು ಸಮೀಕ್ಷೆ–ತೌಲನಿಕ ವಿಮರ್ಶೆ:
ಕೆ. ವೆಂಕಟರಾಮಪ್ಪ 1971/186

31. ಪಂಪಭಾರತ ದೀಪಿಕೆ
ಡಿ.ಎಲ್. ನರಸಿಂಹಾಚಾರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ... 1971

32. ನಾಡೋಜ ಪಂಪ
ಹಂ.ಪ. ನಾಗರಾಜಯ್ಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು. 1971

33. ಪಂಪ
ಸಂ. ವಿ. ಸೀತಾರಾಮಯ್ಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು. 1973

34. ಪಂಪ
ತ.ಸು. ಶಾಮರಾಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1973

35. ಪಂಪ
ಜಿ.ಎಸ್. ಶಿವರುದ್ರಪ್ಪ, ಭಾರತಭಾರತೀ ಪ್ರಕಾಶನ, ಬೆಂಗಳೂರು. 1973

36. ಪಂಪ : ಒಂದು ಅಧ್ಯಯನ ಸಂ. ಜಿ.ಎಸ್. ಶಿವರುದ್ರಪ್ಪ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. 1973

37. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ ಭಾಗ–1:
1 ರಿಂದ 8 ಆಶ್ವಾಸಗಳು .... 1973(2) 1976/222

38. ಪಂಪ–ಕವಿ, ಕಾವ್ಯವನ್ನು ಕುರಿತು : ತ.ಸು.ಶಾಮರಾಯ 1973/64

39. ಪಂಪಭಾರತದ ಅರ್ಜುನ : ಕೆ.ಎಸ್.ನರಸಿಂಗರಾವ್ 1973/81

40. **ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ**: ಉಪೋದ್ಘಾತ, ಕಥಾಸಾರ, ಅರ್ಥಕೋಶಗಳೊಂದಿಗೆ
(ಪ್ರ. : ಪ್ರಸಾರಾಂಗ, ಮೈಸೂರು ವಿ.ವಿ.) 1973/578

41. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ
ಆಶ್ವಾಸ : 6-7 (ಮೂಲ, ಹೊಸಗನ್ನಡ ಸರಳಾನುವಾದ ಸಹಿತ)
ಸಂಪಾದಕ - ಕಾವ್ಯಪ್ರೇಮಿ 1973/104
42. ಮಹಾಭಾರತ ಸಮೀಕ್ಷೆ
ನ. ಸುಬ್ರಹ್ಮಣ್ಯಂ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. 1973
43. ಪಂಪ-ಜೀವನ ಮತ್ತು ಕೃತಿಪರಿಚಯ: ತೀ.ನಂ.ಶ್ರೀಕಂಠಯ್ಯ 1974/68
44. ಪಂಪ ಒಂದು ಅಧ್ಯಯನ (15 ವಿಮರ್ಶಾ ಲೇಖನಗಳು)
ಸಂ. ಜಿ.ಎಸ್.ಶಿವರುದ್ರಪ್ಪ 1974/340
45. ನೆನೆವೊಡೆ ಕರ್ಣನಂ ನೆನೆಯ - ಪಂಪಭಾರತದ ಕರ್ಣ ಪ್ರಸಂಗದ ಭಾಗಗಳು,
ಸಂ.-ಬಿ.ಟಿ. ಸಾಸನೂರ ಮತ್ತು ಸಂಗಮನಾಥ ಜಿ.ಹಂಡಿ.........1975/178
46. ಮಹಾಕವಿ ಪಂಪ - ಪಂಪ ಹಾಗೂ ಆತನ ಕೃತಿಗಳ ವಿಮರ್ಶಾತ್ಮಕ
ಅಧ್ಯಯನ : ವಿ.ಸೀತಾರಾಮಯ್ಯ 1975/328
47. ಪಂಪಭಾರತ ಕಥಾಲೋಕ - ಗದ್ಯ (ವಿಕ್ರಮಾರ್ಜುನ ವಿಜಯದ
ಹೊಸಗನ್ನಡ ರೂಪಾಂತರ ಮತ್ತು ಕಾವ್ಯ ಕುರಿತ ವಿವೇಚನೆ.)
ಎಲ್.ಆರ್.ಅನಂತರಾಮಯ್ಯ ....1975(2) 1977/350
48. ಪಂಪ-ನನ್ನಯರ ಪ್ರತಿಭಾತಪಸ್ಸು : ಬಾಡಾಲ ರಾಮಯ್ಯ 1975
49. ಪಂಪನ ಆದಿಪುರಾಣ : ಸಂ॥ ಎಲ್.ಬಸವರಾಜು 1976/608
50. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ - ಆಶ್ವಾಸ 13-14
[ಮೂಲ, ಹೊಸಗನ್ನಡ ಸರಳಾನುವಾದ, ಕವಿಕಾವ್ಯ ಪರಿಚಯ, ಕಿರು ವಿಮರ್ಶೆ]
ಸಂ. : ಗಂಗಾಸುತ 1976/56
51. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ-ಆಶ್ವಾಸ 6-7,
ಮೂಲಸಹಿತ ಹೊಸಗನ್ನಡ ಸರಳಾನುವಾದ 1976/104
52. ಪಂಪಕವಿ ಚಿತ್ರಿಸಿದ ಬಣ್ಣಬಣ್ಣ : ಬಿ.ಸಿ.ಜವಳಿ 1976/84
53. ಪಂಪಕವಿಯ ಪಂಪಭಾರತಂ-ಗದ್ಯಾನುವಾದ :
ಅನಂತ ರಂಗಾಚಾರ್ 1977/850
54. ಪಂಪಕವಿ ವಿರಚಿತ 'ಪಂಪಭಾರತಂ' (ಮೂಲ ಗದ್ಯಾನುವಾದ) ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. 1977
55. ಪಂಪಮಹಾಕವಿ ವಿರಚಿತಂ ಆದಿಪುರಾಣಂ (ಮೂಲ ಗದ್ಯಾನುವಾದ) ಕೆ.ಎಲ್. ನರಸಿಂಹಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. 1977
56. ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ - ಪಂಪಭಾರತದಲ್ಲಿಯ
ಭೀಷ್ಮಪ್ರಸಂಗಗಳು: ಬಿ.ಕೆ. ಹಿರೇಮಠ.. 1979/148
57. ಪಂಪಮಹಾಕವಿ ವಿರಚಿತ ಆದಿಪುರಾಣ
ಗದ್ಯಾನುವಾದ : ಕೆ.ಎಲ್. ನರಸಿಂಹ ಶಾಸ್ತ್ರೀ 1980/744
58. ಪಂಪ: ಕೆಲವು ಮುಖಗಳು
ಸಿ.ಪಿ.ಕೆ. ಅರ್ಕಾವತಿ ಪ್ರಕಾಶನ, ಮೈಸೂರು. 1986
59. ಪಂಪ : ಟಿ.ವಿ. ವೆಂಕಟಾಚಲ ಶಾಸ್ತ್ರೀ ಸಾಹಿತ್ಯ ಅಕಾಡೆಮಿ ದೆಹಲಿ ....1987(3) 2008/128
[ಇದರಲ್ಲಿ ವಿಸ್ತೃತ ಪಂಪಕೃತಿಸೂಚಿ ಇದೆ]

60. ಮತ್ತೆ ಮತ್ತೆ ಪಂಪ : ಪ್ರೊ. ಜಿ.ಎಚ್. ನಾಯಕ 2008
61. ಪಂಪನ ಪದಪ್ರಪಂಚ : ಬಿ. ವೀರಭದ್ರಪ್ಪ
62. ಪಂಪನ ವಿಕ್ರಮಾರ್ಜುನ ವಿಜಯ – ತಿಳಿಗನ್ನಡದ ಅವತರಣಿಕೆ :
ಲೇ: ಎಚ್ .ಎಸ್.ವೆಂಕಟೇಶಮೂರ್ತಿ 2014
63. ಪಂಪನ ನುಡಿಗಣಿ : ಪಿ.ವಿ.ನಾರಾಯಣ 2014/608
64. Mahakavi Pampa
V. Sitaramaiah, Popular Prakashan, Bombay,
National Book Trust, India, New Delhi 1967
65. A Descriptive Grammar of Pampa Bharata
B. Ramachandra Rao, University of Mysore, Mysore 1972

(16) **ಅಜ್ಞಾತ ಕವಿ** : ಆದಿಪರ್ವ ಯಕ್ಷಗಾನ ಪ್ರಸಂಗದ ಕರ್ತೃ : ಈ ತನಕ ಲಭ್ಯವಾದ ಯಕ್ಷಗಾನ ಪ್ರಸಂಗಗಳಲ್ಲಿ ಆದಿಪರ್ವವೇ 'ಆದಿ ಪ್ರಸಂಗ' ಎಂದು ಕಂಡುಬಂದಿದೆ. ಇದನ್ನು ಸಂಪಾದಿಸಿದ ಪ್ರಸಂಗಕರ್ತರೂ ಸಂಶೋಧಕರೂ ಯಕ್ಷಗಾನ ಕಲಾವಿದರೂ ಆದ ಪ್ರೊ.ಎಂ.ಎ.ಹೆಗಡೆಯವರು ಈ ಕೃತಿ ಸು.13–14ನೆಯ ಶತಮಾನದ್ದು ಹಾಗೂ ಕವಿ ಉತ್ತರಕನ್ನಡ ಹವ್ಯಕನಾಗಿರಬಹುದಾಗಿದೆ ಎಂದು ಹೇಳಿದ್ದಾರೆ ಪ್ರಸಂಗ ಕರ್ತರೂ ಸಂಶೋಧಕರೂ ಆದ ಅತ್ತೀಮುರುಡು ವಿಶ್ವೇಶ್ವರ ಹೆಗಡೆಯವರು ಪ್ರಸಂಗ ಪರಿಶೀಲನೆ ಮಾಡಿ ಕವಿಯು ಉತ್ತರಕನ್ನಡ ವಡ್ಡಿ–ಸುಣಜೋಗನಕೋರಿ ಪ್ರದೇಶದವನು ಎಂದು ಅಭಿಪ್ರಾಯಪಟ್ಟಿದ್ದಾರೆ.

ಯಾಣ–ವಡ್ಡಿ–ಶಿರಸಿ ರಸ್ತೆ ಸಂಪರ್ಕ ಇದೆ.

ಆದಿಪರ್ವ : ಸಂಪಾದಕ – ಪ್ರೊ. ಎಂ.ಎ.ಹೆಗಡೆ ....1983/62.

(17) **ಅಭಿನವಾದಿ ವಿದ್ಯಾನಂದ** : ಕಾಲ ಕ್ರಿ.ಶ. ಸು. 1533. ಭಲ್ಲಾತಕೀಪುರ – ಇಂದಿನ ಹೊನ್ನಾವರದ ಗೇರಸೊಪ್ಪೆಯ ಜೈನಕವಿ.

ಕೃತಿ : **ಕಾವ್ಯಸಾರ**– 45 ಅಧ್ಯಾಯ, 1143 ಪದ್ಯಗಳು. ಎಲ್ಲಾ ವಿಷಯಗಳಿಗೂ ಉದಾಹರಣೆಯಾಗಿ ಪೂರ್ವಕವಿಗಳ ಗ್ರಂಥಗಳಿಂದ ಆಯ್ದ ಪದ್ಯಗಳನ್ನು ಉದ್ಧರಿಸಿ ಒಂದೊಂದು ವಿಷಯವನ್ನು ಒಂದೊಂದು ಅಧ್ಯಾಯದಲ್ಲಿ ನಿರೂಪಿಸಿದ ಸಂಕಲನ ಗ್ರಂಥ.

(18) **ಸಾಳ್ವ** : ಕಾಲ ಕ್ರಿ.ಶ. ಸು. 1550. ಹೊನ್ನಾವರದ ಗೇರಸೊಪ್ಪೆಯ ಜೈನಕವಿ. ನಗಿರೆ ರಾಜ್ಯದ ಆಸ್ಥಾನ ಕವಿ, ಸಾಜಕವಿ, ಕರ್ನಾಟ ಲಕ್ಷಣದೋಜ ಎಂದೂ ಹೆಸರಾಗಿದ್ದನಂತೆ. ತಂದೆ ಧರ್ಮಚಂದ್ರ. ಗುರು–ದೇಶಿಗಣದ ವಿಜಯಕೀರ್ತಿಯ ಮಗ ಶ್ರುತಕೀರ್ತಿ.

ಕೃತಿಗಳು :

1. ಭಾರತ (ಸಾಳ್ವಭಾರತ ಅಥವಾ ನೇಮೀಶ್ವರ ಚರಿತೆ) : ಭಾಮಿನೀ ಷಟ್ಪದಿ ಕಾವ್ಯ 16ಪರ್ವಗಳು.
ಸಾಳ್ವಭಾರತ : ಸಂ॥ ಹಂ.ಪ.ನಾಗರಾಜಯ್ಯ 1976/746
2. **ರಸರತ್ನಾಕರಂ** : 4 ಆಶ್ವಾಸಗಳ ಕಾವ್ಯ.
   i) ರಸರತ್ನಾಕರಂ : ಸಂಪಾದಕರು – ಎಂ. ವೆಂಕಟರಾವ್ ಮತ್ತು
   ಎಚ್. ಶೇಷಯ್ಯಂಗಾರ 1932/271
   ii) ರಸರತ್ನಾಕರಂ – ಕಾವ್ಯಲಕ್ಷಣಗಳ ಪ್ರತಿಪಾದನೆ
   ಸಂ॥ ರಾಮಚಂದ್ರ ಕೊಟ್ಟಲಗಿ 1971/163
   iii) ರಸರತ್ನಾಕರಂ : ಸಂ॥ ಕೆ.ನರಸಿಂಹೇ ಗೌಡ 1972/190

iv) ರಸರತ್ನಾಕರಂ ಮತ್ತು ಶಾರದಾ ವಿಲಾಸ
ಪ್ರ. : ಕ.ರಾ.ಸರಕಾರ ಪಠ್ಯವಿಭಾಗ 1974/170

3. **ವೈದ್ಯಸಾಂಗತ್ಯ–ಕಾವ್ಯ :** ಆಯುರ್‌ವೈದ್ಯವಿಷಯಿಯಂಕ ಗ್ರಂಥ.

4. **ಶಾರದಾ ವಿಲಾಸ** – ಕಾವ್ಯ : ಕಾವ್ಯಕ್ಕೆ ಜೀವವೆಂದು ಹೇಳಲಾಗುವ ಧ್ವನಿಯನ್ನು ಪ್ರತಿಪಾದಿಸುವ ಗ್ರಂಥ. ಇದರ ನಾಲ್ಕು ಆಶ್ವಾಸಗಳಲ್ಲಿ 'ಧ್ವನಿವ್ಯಂಗ್ಯ ವಿವರಣ' ಎಂಬ ಎರಡನೆಯ ಆಶ್ವಾಸ ಮಾತ್ರ ದೊರಕಿದೆಯಂತೆ.

(19) ಭೈರವ ಕವಿ : ಕಾಲ – ಸುಮಾರು 16ನೆಯ ಶತಮಾನದ ಉತ್ತರಾರ್ಧ. 'ಕಾರ್ತವೀರ್ಯಕಾಳಗ' ಯಕ್ಷಗಾನಪ್ರಸಂಗದ ಕವಿ ತಿರುಮಲ ತನ್ನ ಪರಿಚಯದಲ್ಲಿ ಮುಂದಿನಂತೆ ಹೇಳಿದ್ದಾನೆ.

ಧರೆಯೊಳುತ್ತಮವಾದ ಚಂಡಿಕ । ವರನದಿಯ ತೀರದಲಿ ಶೋಭಿಪ ।
ಪರಮ ಲವಣಾಪುರದ ಭೈರವಾತ್ಮಭವನಾದ ॥
ಪರಮಗುರು ಆಂಗೀರಸ ಗೋತ್ರಜ । ತರಳ ತಿರುಮಲ ಎಂಬ ಬಾಲನು ।
ಬರೆದು ಮುಗಿಸಿದನಿದನು ಭಾರ್ಗವರಾಮ ಕರುಣದಲಿ ॥

ಶ್ರೀಕ್ಷೇತ್ರ ಯಾಣದ ಮೂಲಕ ಹರಿಯುವ ಚಂಡಿಕಾ ನದಿ ಲವಣಾಪುರ (ಇಂದಿನ ಉಪ್ಪಿನ ಪಟ್ಟಣ) ದ ಹತ್ತಿರ ಅಘನಾಶಿನಿನದಿಯನ್ನು ಸೇರುತ್ತದೆ. ಈ ಊರಿನ ಹವ್ಯಕ ಬ್ರಾಹ್ಮಣ ಆಂಗೀರಸ ಗೋತ್ರದ ಭೈರವನ ಮಗನೇ ತಿರುಮಲ. ಈ ಊರಿನ ಆಸುಪಾಸಿನಲ್ಲಿ ಈಗಲೂ ಭೈರವ ಎಂಬ ಹೆಸರಿನ ಹವ್ಯಕರು ಕಂಡುಬರುತ್ತಾರೆ.

ಭೈರವ ಪುರಾಣ – ಕಾವ್ಯ ಸಂ. ಎನ್.ಕೆ. ಹೆಗಡೆ 1982/450
(ಶ್ರೀಕ್ಷೇತ್ರ ಯಾಣದ ಚರಿತ್ರೆ. ಇದನ್ನು ಭೈರವೇಶ್ವರಪುರಾಣ ಎಂದೂ ಕರೆಯಲಾಗುತ್ತದೆ.)

(20) ಅಜಪುರದ ವಿಷ್ಣು : ಕಾಲ 16ನೆಯ ಶತಮಾನ. ಈತ ಅಜಪುರದ ಈಶ್ವರನನ್ನು ಸ್ತುತಿಸಿದ್ದಾನೆ. ಅಜಪುರ ಎಂದರೆ ಬ್ರಹ್ಮೂರು. ಇದು ಕುಮಟಾ ಅಂಕೋಲಾ ತಾಲೂಕುಗಳ ಗಡಿಯಲ್ಲಿದೆ. ಡಾ.ಶಿವರಾಮ ಕಾರಂತರ ಪ್ರಕಾರ ಲಭ್ಯ ತಾಡೋಲೆಗಳ ಕಾಲ ಕೆಳಗಿನಂತಿದೆ.

ಕೃತಿಗಳು : ಎಲ್ಲವೂ ಯಕ್ಷಗಾನ ಪ್ರಸಂಗಗಳು.
1. ಇಂದ್ರಕೀಲ (1678, 1695) 2. ಬಾಣಾಸುರ ಕಾಳಗ [ಉಷಾ ಪರಿಣಯ] (1683)
3. ವಿರಾಟಪರ್ವ (1564) 4. ಶ್ರೀಕೃಷ್ಣ ಬಾಲಲೀಲೆ

ಟಿಪ್ಪಣಿ : ಡಾ.ಶಿವರಾಮ ಕಾರಂತರು 'ಯಕ್ಷಗಾನ' ಕೃತಿಯಲ್ಲಿ 'ಅಜಪುರ' ವನ್ನು ಉಡುಪಿಯ ಹತ್ತಿರದ ಬ್ರಹ್ಮಾವರ ಎಂದು ಗುರುತಿಸಿದ್ದಾರೆ. "ಬ್ರಹ್ಮೂರು ಹಿಂದೆ ಬ್ರಾಹ್ಮಣರ ಅಗ್ರಹಾರವಾಗಿತ್ತು. ಬ್ರಹ್ಮೂರಿನಲ್ಲಿ ಮಧುಲಿಂಗೇಶ್ವರ ದೇವಾಲಯವಿದೆ, ಹತ್ತಿರದ ನಾಗೂರಿನಲ್ಲಿ ಶಿವನ ಬೃಹತ್ತಾದ ಲಿಂಗವಿದ್ದು ಅದನ್ನು ಹಿರೇಶ್ವರ ಎಂದು ಕರೆಯುತ್ತಾರೆ. ಇದು ಕದಂಬರ ಕಾಲದ್ದೆನ್ನಲಾಗಿದೆ. ಬ್ರಹ್ಮೂರಿನಲ್ಲಿಯೂ ಹಿಂದೆ ಯಕ್ಷಗಾನ ಕವಿಯಿದ್ದನೆಂದು ತಿಳಿದುಬರುತ್ತದೆ. ಈಗಲೂ ಇದ್ದಾರೆ. ಈ ಬ್ರಹ್ಮೂರು ಅಜಪುರ" ಎಂದು ಸಂಶೋಧಕ ಪ್ರೊ. ಎಂ.ಎ.ಹೆಗಡೆ ಅಭಿಪ್ರಯಿಸಿದ್ದಾರೆ. (ನೋಡಿ ಹವ್ಯಕ ಯಕ್ಷಗಾನ ಕವಿ ಕಾವ್ಯ ಸೂಚಿ ಪು.93)

(21) ನಗಿರೆಯ ಸುಬ್ರಹ್ಮಣ್ಯ : 16 ನೆಯ ಶತಮಾನ. ಡಾ.ಶಿವರಾಮ ಕಾರಂತರು ಇವನು ಗೇರಸೊಪ್ಪೆಯ ಬಳಿಯ ನಗಿರೆಯವನೆಂದು ತೀರ್ಮಾನಿಸಿದ್ದಾರೆ. ನಗಿರೆ ಹೊನ್ನಾವರ ಹೊನ್ನಾವರ ತಾಲೂಕಿನಲ್ಲಿ ಶರಾವತಿನದಿಯ ಎಡದಂಡೆಯಲ್ಲಿದೆ. ಕವಿ ನಗಿರೆಯ ವೆಂಕಟರಮಣ ದೇವರನ್ನು ಸ್ತುತಿಸಿದ್ದಾನೆ. ಈತನ ತಂದೆ ಪೌರಾಣ ಕುಲಜಾತ ದೈವಜ್ಞವಿಠ್ಠಲ. ತಾಯಿ ಗೌರಿ.

1. ರಾವಣೋದ್ಭವ – ಯಕ್ಷಗಾನ ಪ್ರಸಂಗ
2. ಶಂಬರಾಸುರ ಕಾಳಗ – ಕ್ರಿ.ಶ. 1623, 1691, 1711
(ಹಸ್ತಪ್ರತಿಯ ಕಾಲ ಡಾ.ಶಿವರಾಮಕಾರಂತರ ಪ್ರಕಾರ)

ಟಿಪ್ಪಣಿ : ಉ.ಕ.ಜಿಲ್ಲಾ ಗ್ರಂಥಕಾರರು ಕೃತಿಯಲ್ಲಿ ಕವಿಯ ಕಾಲ ಸು. 1840 ಎಂದಿದೆ (ನೋಡಿ ಪು. 35) ಸಂಶೋಧಕ ಪ್ರೊ.ಎಂ.ಎ.ಹೆಗಡೆಯವರು ಕವಿ ಹವ್ಯಕ ಬ್ರಾಹ್ಮಣ ಎಂಬುದರಲ್ಲಿ ಸಂಶಯವಿಲ್ಲ ಎಂದಿದ್ದಾರೆ. (ನೋಡಿ ಹವ್ಯಕ ಯಕ್ಷಗಾನ ಕವಿಕಾವ್ಯ ಸೂಚಿ ಪು. 94)

(22) **ಬಟ್ಟಾಕಳಂಕ** : ಕಾಲ 1526–1604. ಜೈನಕವಿ. ಇವನ ಗುರು ಸಂಗೀತಪುರದ (ಇಂದಿನ ಆಡುವಳ್ಳಿಯ) ಅಕಲಂಕದೇವ. ಕವಿ ಪ್ರಾಕೃತ, ಸಂಸ್ಕೃತ, ಮಾಗಧಿ, ಕನ್ನಡ ಮೊದಲಾದ ಷಡ್ಭಾಷ ಪರಿಣತ. ಸ್ವಾದಿಯ ಅರಸರ ಆಶ್ರಯದಲ್ಲಿ ವ್ಯಾಕರಣಗ್ರಂಥ ರಚನೆ. ಸಿದ್ದಾಪುರದ ಬಿಳಗಿಯ ಅರಸರ ಆಸ್ಥಾನಗುರು. ಕವಿ ಸು.1580ರಲ್ಲಿ ಸ್ವಾದಿಯ ಜೈನಮಠದ ಸ್ವಾಮಿಯಾಗಿದ್ದರಂತೆ.

ಕೃತಿ : **ಕರ್ಣಾಟಕ ಶಬ್ದಾನುಶಾಸನಂ** – ಸಂಸ್ಕೃತದಲ್ಲಿ ಕನ್ನಡ ವ್ಯಾಕರಣ (ಭಾಷಾಮಂಜರೀ ಎಂಬ ವೃತ್ತಿ, ಮಂಜರೀ ಮಕರಂದ ಎಂಬ ಸಂಸ್ಕೃತ ವ್ಯಾಖ್ಯೆ ಸಹಿತ)

1. ಭಟ್ಟಾಕಳಂಕದೇವಕೃತ ಕರ್ಣಾಟಕ ಶಬ್ದಾನುಶಾಸನಂ–
ಭಾಷಾ ಮಂಜರ್ಯಾಖ್ಯ ವೃತ್ತಾಮಂಜರೀ ಮಕರಂದಾಖ್ಯ ವ್ಯಾಖ್ಯಯಾ ಚ ಸಹಿತಮ್
ಸಂ॥ ಬಿ.ಲೂಯಿ ರೈಸ್ 1890/745
2. ಕರ್ಣಾಟಕ ಶಬ್ದಾನುಶಾಸನಂ :
ಸಂ॥ ಆರ್. ನರಸಿಂಹಾಚಾರ್ಯ ....1890(2) 1923/600
3. ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕಾ ಸಂ.1
ಸಂ॥ ಕುಂಡಲಗಿರ್ಯಾಚಾರ್ಯ 1908/504
4. ಕರ್ಣಾಟಕ ಶಬ್ದಾನುಶಾಸನ ತತ್ವಾಲೋಕ ತರಂಗ
ವಿಮರ್ಶೆ. ಲೇ: ಕಾನಕಾನಹಳ್ಳಿ ವರದಾಚಾರ್ಯ ....1922/185.
5. ಕರ್ಣಾಟಕ ಶಬ್ದಾನುಶಾಸನಂ ನಲ್ನುಡಿಗನ್ನಡಿ ಎಂಬ ವ್ಯಾಖ್ಯಾನ ಸಹಿತ.
ವ್ಯಾಖ್ಯಾನ : ಡಿ.ಪದ್ಮನಾಭ ಶರ್ಮಾ.. 1968/466
6. ಕರ್ಣಾಟಕ ಶಬ್ದಾನುಶಾಸನಂ 1975/468
7. ಕನ್ನಡ ವೈಯಾಕರಣ ಭಟ್ಟಾಕಲಂಕ–ಕವಿಕೃತಿ ಪರಿಚಯ
ಲೇ. : ಡಾ.ಉಪ್ಪಂಗಳ ರಾಮ ಭಟ್ಟ 1986/100
8. ಕರ್ಣಾಟಕ ಶಬ್ದಾನುಶಾಸನ ವಿವೇಚನೆ –
ಪಿಎಚ್.ಡಿ ಪ್ರಬಂಧ : ಡಾ. ಉಪ್ಪಂಗಳ ರಾಮ ಭಟ್ಟ 1996/444

ಟಿಪ್ಪಣಿ : ಬಿಳಗಿಯ ಭಟ್ಟಾಕಳಂಕ ಶಾಸನದಲ್ಲಿ ಕ್ರಿ.ಶ. 1470–1580 ರ ಮಾಹಿತಿ ಇದ್ದು 'ಶ್ವೇತಪುರ ಘಂಟೇಂದ್ರ ಸಂಪೂಜಿತ ಭಟ್ಟಾಕಳಂಕ' ಎಂದಿದೆಯಂತೆ.

(23) **ಶಿವಪುರ ರಾಮ** : ಕಾಲ ಕ್ರಿ.ಶ. 17ನೆಯ ಶತಮಾನ. ಹೆಸರು ರಾಮ. ಚಂದ್ರಮೌಳಿಯ ಮಗ. ಈತನ ಊರು ಶಿವಪುರ ಎಂದು ಡಾ.ಶಿವರಾಮ ಕಾರಂತರ ಅಭಿಪ್ರಾಯ. ಶಿವಪುರ ಎಂಬ ಒಂದು ಊರು ಉತ್ತರಕನ್ನಡ ಜಿಲ್ಲೆಯ ಜೊಯಡಾ ತಾಲೂಕಿನಲ್ಲಿದೆ. ಕಾರವಾರ ತಾಲೂಕಿನ ಕದ್ರಾದಿಂದ ಶಿವಪುರಕ್ಕೆ ಕಾಳಿನದಿಯ ಬಲದಂಡೆಗುಂಟ ದಾರಿಯಿದೆ. ಜೊಯಡಾ ತಾಲೂಕಿನಲ್ಲಿ ಉಳವಿ–ಗುಂದ–ಶಿವಪುರ ಮಾರ್ಗಗಳಿವೆ. ತಾಲೂಕಿನ ಹಿರೇಗುತ್ತಿಯ ಸಮೀಪದಲ್ಲಿಯೂ ಶಿವಪುರ ಎಂಬ ಊರಿದೆ.

1. ತಾಮ್ರಧ್ವಜ ಕಾಳಗ – ಯಕ್ಷಗಾನ ಪ್ರಸಂಗ (1691)
2. ಮೂಲಕಾಸುರ ಕಾಳಗ – ಯಕ್ಷಗಾನ ಪ್ರಸಂಗ

(24) **ತಿರುಮಲ ಕವಿ** : ಕಾಲ ಕ್ರಿ.ಶ. 17ನೆಯ ಶತಮಾನ. ಕುಮಟಾ ತಾಲೂಕಿನ ಉಪ್ಪಿನಪಟ್ಟಣದ ಭೈರವ ಕವಿಯ ಮಗ. [ಭೈರವ ಕವಿ ಕುರಿತ ವಿವರ ಗಮನಿಸಿ] ಕಾರ್ತವೀರ್ಯಾರ್ಜುನ ವಧೆ (ಕಾರ್ತವೀರ್ಯ ಕಾಳಗ) – ಯಕ್ಷಗಾನ ಪ್ರಸಂಗ

(25) **ಹಳೆಮಕ್ಕಿ ರಾಮ**: ಕವಿ ತನ್ನ ಕೃತಿ 'ಕೃಷ್ಣಾರ್ಜುನರ ಕಾಳಗ'ದಲ್ಲಿ ತಾನು ಅಂಬುನದಿ ತೀರದ ಪ್ರಾಕಿನಮಕ್ಕಿಯ ಭೀಮೇಶನ ಭಕ್ತನೆಂದು ಹೇಳಿಕೊಂಡಿದ್ದಾನೆ. ಕಾರಂತರ ಪ್ರಕಾರ ಕವಿಯ ಊರು ಹಳೇಮಕ್ಕಿ ಮತ್ತು ಆತನ ಕೃತಿಯ ಕಾಲ ಕ್ರಿ.ಶ. 1697. ಸಾಗರದ ಡಾ. ಜಿ.ಎಸ್. ಭಟ್ಟರ ಪ್ರಕಾರ ಈ ಊರು ಶರಾವತಿ ನದಿಯ ಎಡದಂಡೆಯಲ್ಲಿ ಭಟ್ಕಳ ತಾಲೂಕಿನಲ್ಲಿದೆ.

ಕೃತಿಗಳು : ಕೃಷ್ಣಾರ್ಜುನರ ಕಾಳಗ, ಮದಾಲಸಾ ಸ್ವಯಂವರ (ಎರಡೂ ಯಕ್ಷಗಾನ ಪ್ರಸಂಗಗಳು)

(26) **ಪರಮೇಶ್ವರ ಭಟ್ಟ** : ಕಾಲ ಕ್ರಿ.ಶ. 17ನೆಯ ಶತಮಾನ, ತಂದೆ ವೆಂಕಟ. ಕವಿಯು ಬಕುಳಾದೇವಿಯನ್ನು ಸ್ತುತಿಸಿದ್ದಾನೆ. ಡಾ. ಶಿವರಾಮ ಕಾರಂತರು ಕವಿಯ ಊರು ಆಗುಂಬೆಗೆ 20 ಮೈಲು ದೂರದ ಹರಿಹರಪುರ ಎಂದಿದ್ದಾರೆ. 'ಕುಮಟಾ ತಾಲೂಕಿನ ಹರೀಟೆಗೆ ಹಿಂದೆ ಹರೀತಕೀಪುರ ಅಥವಾ ಹರಿಹರಪುರ ಎನ್ನುತ್ತಿದ್ದರು. ಪರಮೇಶ್ವರ ಭಟ್ಟ ಅಲ್ಲಿಯವನಿದ್ದಿರಬೇಕು' ಎಂದು ವಿಮರ್ಶಕ ಸಾಹಿತಿ ಜಿ.ಎಸ್.ಅವಧಾನಿ ಅಭಿಪ್ರಾಯಿಸಿದ್ದಾರೆ. [ನೋಡಿ ವೈಜಯಂತಿ ಪು. 69]

ಕೃತಿಗಳು :

1. ಅಭಿಮನ್ಯುಕಾಳಗ – ಯಕ್ಷಗಾನ ಪ್ರಸಂಗ ....
2. ಕರ್ಣಪರ್ವ – ಯಕ್ಷಗಾನ ಪ್ರಸಂಗ ....
3. ಕಾಲನೇಮಿ ಕಾಳಗ – ಯಕ್ಷಗಾನ ಪ್ರಸಂಗ (1685)
4. ಪ್ರಭಾವತಿ ಕಲ್ಯಾಣ (ವಜ್ರನಾಭ ಕಾಳಗ) – ಯಕ್ಷಗಾನ ಪ್ರಸಂಗ ....

(27) **ಆದಿಯಪ್ಪ** : ಗೇರಸೊಪ್ಪೆಯ ಜೈನಕವಿ. ಕಾಲ ಕ್ರಿ.ಶ. 1650. ತಂದೆ ಮುನಿಯಣ್ಣ. ತಾಯಿ ದೇವರಸಿ. ಗೇರಸೊಪ್ಪೆಯ ದೊರೆ ಭೈರವರಾಯನ ಗುರುವಾದ ವೀರಸೇನನ ಆಜ್ಞೆಯಂತೆ ಕೃತಿ ರಚನೆ.

ಕೃತಿಗಳು : **ಧನ್ಯಕುಮಾರ ಚರಿತೆ** – ಸಾಂಗತ್ಯ ಕಾವ್ಯ **:** ಸಾಂಗತ್ಯ ಮತ್ತು ವೃತ್ತಗಳಲ್ಲಿ ಒಟ್ಟು 410 ಪದ್ಯಗಳು.

ಆದಿಯಪ್ಪ ವಿರಚಿತ ಧನ್ಯಕುಮಾರ ಚರಿತೆ ಸಂ॥ಹಂ.ಪ.ನಾಗರಾಜಯ್ಯ...1976/110

(28) **ವಿಮಲಾನಂದ** : ಕಾಲ ಕ್ರಿ.ಶ. ಸು. 1685. ಬ್ರಾಹ್ಮಣ ಕವಿ. ಚಿದಾನಂದ ಕವಿಯ ಶಿಷ್ಯ. ಹೊನ್ನಾವರ ತಾಲೂಕಿನ ಬೈಲೂರಿನವ. ಭಟ್ಕಳದ ಕವಿ ಅಪ್ಪಯ್ಯ ಸಮರ್ಥನ ಗುರು.

ಕೃತಿ : ಕೃಷ್ಣಾರ್ಜುನರ ಕಾಳಗ – ಯಕ್ಷಗಾನ ಪ್ರಸಂಗ. (1685)

(29) **ಸದಾಶಿವರಾಯ ಸೋದೆ ಶಿರಸಿ** : ಸೋದೆ (ಇಂದಿನ ಸ್ವಾದಿ, ಸೋಂದಾ) ಯ ಪ್ರಸಿದ್ಧ ಅರಸ. ಅರಸೊತ್ತಿಗೆಯ ಕಾಲ ಕ್ರಿ.ಶ. 1674–1692. ಕನ್ನಡ, ಸಂಸ್ಕೃತ, ಮರಾಠಿ, ಉರ್ದು ಭಾಷಾಪಂಡಿತ. ತಂದೆ ಮಧುಲಿಂಗನಾಯಕ.

ಪ್ರಕಟಿತ ಕೃತಿ : ಸದಾಶಿವ ನೀತಿ – ಕಂದಪದ್ಯಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ವ್ಯವಹಾರಬೋಧಕ ನೀತಿಗಳ ಪ್ರತಿಪಾದನೆ, ಕೊನೆಯಲ್ಲಿ ಗಜಾಶ್ವ ಲಕ್ಷಣ ಹೇಳುವ ಪದ್ಯಗಳೂ ಇವೆ.

ಅಪ್ರಕಟಿತ ಕೃತಿಗಳು : (17) ಉಳುಮೆಯ ಮಹಾತ್ಮೆ, ಕಂದಪದ್ಯ, ಕಲಹಕೇತಯ್ಯಗಳ ಲಕ್ಷಣ, ಖಡ್ಗ ಪ್ರಬಂಧ, ಜಾವಡಿ, ಜೋಗುಳ ಪದಗಳು, ತ್ರಿವಿಧಿ, ನವರಸ ಜಕ್ಕಿಣಿ, ಪಂಚವಿಂಶತಿ ಲೀಲೆಯ ಮೂಲಪದ್ಯಗಳು, ಪಂಚವಿಂಶತಿ ಲೀಲೆಯ ರಗಳೆ, ಪ್ರಭುಲಿಂಗಲೀಲೆಯ ಜಾವಡಿ, ಭಿಕ್ಷಾಟನ ಲೀಲೆಯ ಕಂದ, ಮಂಗಲಾಷ್ಟಕಗಳು, ಮಹಾಚದುರಂಗ ಲಕ್ಷಣ, ರಾಗಮಾಲಿಕೆ, ಸಮಸ್ಯಾಪೂರಣ ವೃತ್ತ–ಕಂದ, ಸ್ವರವಚನಗಳು.

(ಮಾಹಿತಿ ಕೃಪೆ: ಲಕ್ಷ್ಮೀಶ ಹೆಗಡೆ, ಸೋಂದಾ)

(30) **ಅಪ್ಪಯ್ಯ ಸಮರ್ಥ (ದೀಕ್ಷಿತ) ಭಟ್ಕಳ** : ಕಾಲ ಕ್ರಿ.ಶ.ಸು. 1650–1725. ತಂದೆ ಸಾರಸ್ವತ ಬ್ರಾಹ್ಮಣ ಕೌಂಡಿನ್ಯಗೋತ್ರದ ಸೇನಬೋವ ರಾಮರಾಯ. ಪತ್ನಿ ಭಾಗೀರಥಿ. ಗುರು ವಿಮಲಾನಂದ. ಜನ್ಮನಾಮ ಲಕ್ಷ್ಮಣ. ಬಾಲ್ಯದಲ್ಲಿ ಪ್ರೀತಿಯಿಂದ ಕರೆದ 'ಅಪ್ಪು' ಎಂಬುದು ಮುಂದೆ ಅಪ್ಪಯ್ಯ ಎಂದಾಗಿ ಗುರುಗಳಿಂದ 'ಅಪ್ಪಯ್ಯ ಸಮರ್ಥ' ಎಂದಾಯಿತಂತೆ.

ಕೃತಿಗಳು: ಇತರರಿಂದ ಸಂಗ್ರಹಿತ.

1. ಅಪ್ಪಯ್ಯ ಸಮರ್ಥರ ಪುಣ್ಯಚರಿತ್ರೆಯೂ ಪದಗಳೂ.
   ಲೇ : ಅನಂತ ಶಿವರಾಮ ಮೂಡಭಟ್ಕಳ 1928/104
2. ಭಟ್ಕಳ ಅಪ್ಪಯ್ಯ ದೀಕ್ಷಿತರ ಕೀರ್ತನೆಗಳು –
   ಸಂಕ್ಷಿಪ್ತ ಜೀವನಚರಿತ್ರೆ ಸಹಿತ.ಸಂ॥ ಸಂತಶರಣ...........................1959/12
3. ಭಟ್ಕಳದ ಜೀವನ್ಮುಕ್ತ ಕವಿ ಶ್ರೀಮತ್ ಅಪ್ಪಯ್ಯ ಸಮರ್ಥರ ಪುಣ್ಯ ಚರಿತ್ರೆಯೂ
   ಪದಗಳೂ ಮತ್ತು ಭಟ್ಕಳ ಯೇಥೀಲ ಜೀವನ್ಮುಕ್ತ ಕವಿ ಶ್ರೀಮತಿ ನಾಡಘರ
   ಶಾಂತಿಬಾಯೀ ಕೃತ ಅಭಂಗ, ಪದೆ ವ ತೀಚೆ ಪುಣ್ಯ ಚರಿತ್ರ.
   (ಪ್ರ : ನಾಡಘರ ಟ್ರಸ್ಟ್ ಭಟ್ಕಳ) 2001/164

ಟಿಪ್ಪಣಿ : ಕವಿಗೆ ನಗರದ ಅರಸರಿಂದ 'ವರಕವಿ' ಬಿರುದು ಸಂದಿದೆ. ಧರ್ಮಸ್ಥಳದ ವರದಯ್ಯ ಹೆಗ್ಡೆಯವರಿಗೆ ಕಣ್ಣು ಬರುವಂತೆ ಮಾಡಿದರಂತೆ. ಭಟ್ಕಳದಲ್ಲಿ ಇವರ ಸಮಾಧಿಯ ಸ್ಥಳದಲ್ಲಿದ್ದ ನಾಡಘರ ದೇವಾಲಯ 1900ರಲ್ಲಿ ಜೀರ್ಣೋದ್ಧಾರಗೊಂಡಿದೆ. ಕವಿ ತೆಂಗಿನ ಗೆರಟೆಯ ಮೇಲೆ ಬರೆದ ಸಂಕ್ಷಿಪ್ತ ರಾಮಾಯಣ ನಷ್ಟವಾಗಿದೆಯಂತೆ. ಕವಿಯ ರಚನೆಗಳಲ್ಲಿ ವೇದಾಂತಪರವೇ ಹೆಚ್ಚು.

(31) **ಚಿದಾನಂದಾವಧೂತ** : ಕಾಲ ಕ್ರಿ.ಶ. 1750. ಉತ್ತರಕನ್ನಡ ಜಿಲ್ಲಾ ಗ್ರಂಥಕಾರರು ಕೃತಿಯ ಪ್ರಕಾರ ಇವರು ಉತ್ತರಕನ್ನಡದವರೆಂಬುದು ನಿಶ್ಚಿತ. (ನೋಡಿ ಪು. 16)

ಕೃತಿಗಳು :

1. ಕಾಮ ವಿಡಂಬನ ಅಥವಾ ಹೋಳಿ ಪದಗಳು–110 ಪದ್ಯಗಳು.
2. ಚಿದಾನಂದರ ವಚನ–ಚೌಪದಿ ಹಾಡುಗಳು
3. ಜ್ಞಾನಸಿಂಧು–49 ಅಧ್ಯಾಯಗಳ ಭಾಮಿನಿ ಷಟ್ಪದಿ ಕಾವ್ಯ.
4. ತತ್ತ್ವ ಚಿಂತಾಮಣಿ–ಆಧ್ಯಾತ್ಮಿಕ ವಿಷಯಗಳು–ಗದ್ಯರೂಪದಲ್ಲಿ
5. ದೇವೀ ಮಹಾತ್ಮೆ–18ಸಂಧಿ (796ಪದ್ಯ) ಭಾಮಿನಿ ಷಟ್ಪದಿ ಕಾವ್ಯ :
   ಸಂ॥ ಎನ್.ಕೆ. ಹೆಗಡೆ 1973/230
6. ನವಚಕ್ರಕುಲರೇಖಾಲಕ್ಷ್ಮಣ – ಶಿವಪಾರ್ವತಿ ಸಂವಾದರೂಪ
   ಶ್ಲೋಕಗಳು – ಸರಳಗದ್ಯ ಟೀಕಾ.

7. ಪಂಜೀಕರಣ – 15 ವಚನಗಳು
8. ಬಗಳಾಂಬಾ ಸ್ತೋತ್ರ – 101 ಪದ್ಯಗಳು

ಟಿಪ್ಪಣಿ :

(1) ತ.ಸು.ಶಾಮರಾಯರ ಪ್ರಕಾರ ಕೃತಿಕಾರ ತುಂಗಾತೀರದ ನಿವಾಸಿ ಅವಧೂತ. (ನೋಡಿ : ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ 1964 ಪು. 389)

(2) ರಂ.ಶ್ರೀ.ಮುಗಳಿಯವರ ಕನ್ನಡಸಾಹಿತ್ರಯ ಚರಿತ್ರೆಯಲ್ಲಿ ಕೃತಿಕಾರನ ದೇಶ ನಮೂದಿಸಿಲ್ಲ. (ನೋಡಿ ಪು. 239)

(3) ಕರ್ನಾಟಕ ಕವಿಚರಿತೆ ಸಂಪುಟ 3ರಲ್ಲಿ ಕವಿಯ ಕಾಲ ಸು. ಕ್ರಿ.ಶ. 1675 ಎಂದಿದೆ. ದೇಶ ನಮೂದಾಗಿಲ್ಲ.

(32) ಸುಬ್ರಹ್ಮಣ್ಯ : ಕಾಲ ಸು. ಕ್ರಿ.ಶ. 1750. ಬ್ರಾಹ್ಮಣ ಕವಿ. ತಂದೆ ಆಡುವಳ್ಳಿಯ ವೆಂಕಾರ್ಯ. ಆಡುವಳ್ಳಿ (ಪೂರ್ವಕಾಲದ ಸಂಗೀತಪುರ-ಹಾಡುವಳ್ಳಿ) ಭಟ್ಕಳ ತಾಲೂಕಿನಲ್ಲಿದೆ.

ಕೃತಿಗಳು : ಹನುಮದ್ರಾಮಾಯಣ : 15 ಆಶ್ವಾಸ, 1750 ಕಂದಪದ್ಯಗಳ ಕಾವ್ಯ.

1. ಹನುಮದ್ರಾಮಾಯಣ : ಸಂ॥ ಮು.ಶಿವರಾಮಯ್ಯ 1913/316

(33) ವಿಷ್ಣು ಸಭಾಹಿತ ಅಗ್ರಹಾರ ಹೊನ್ನಾವರ : ಕಾಲ ಕ್ರಿ.ಶ. 1745. ನಾರಾಯಣ ಸಭಾಹಿತರ 6ನೆಯ ಮಗ. ಕವಿಯ 4 ಯಕ್ಷಗಾನ ಪ್ರಸಂಗಗಳು ಲಭ್ಯ.

1. ಏಕಾದಶೀ ಪ್ರಸಂಗ
2. ಚಂದ್ರಹಾಸ ಚರಿತ್ರೆ
3. ಬಬ್ರುವಾಹನ ಕಾಳಗ
4. ಶತಾಸ್ಯ ರಾವಣ ಕಾಳಗ-1993

(34) ಪಾಯಣ್ಣ : ಸಂಗೀತಪುರ (ಇಂದಿನ (ಹಾ)ಆಡುವಳ್ಳಿ) ಭಟ್ಕಳ. ಕಾಲ ಕ್ರಿ.ಶ.ಸು.1748. ಜೈನ ಕವಿ. ತಂದೆ ಗುಮ್ಮಸೆಟ್ಟಿ. ಗುರು ನಯಸೇನ.

ಕೃತಿ: ಅಹಿಂಸಾ ಚರಿತೆ-ಸಾಂಗತ್ಯ ಕಾವ್ಯ. ಇದಕ್ಕೆ ಪಂಚಾಣು ವ್ರತಚರಿತೆ ಎಂಬ ಹೆಸರೂ ಇದೆ.

ಟಿಪ್ಪಣಿ : ಭೇಕನರ್ಥಾಖ್ಯಾನ ಎಂಬ 16 ಸಂಧಿಗಳ ಸಾಂಗತ್ಯ ಕಾವ್ಯ ಇದೇ ಕವಿಯದು ಎಂದು ಹೇಳಲಾಗುತ್ತಿದೆ.

(35) ವರದ ವಿಠ್ಠಲ : ಕಾಲ ಕ್ರಿ.ಶ. 1751. ವರದ ವಿಠ್ಠಲ ಅಂಕಿತವಿರುವ ಕೌಸಲ್ಯಾ ವಿವಾಹ ಎಂಬ 2 ಅಧ್ಯಾಯ 120 ಭಾಮಿನೀ ಪದ್ಯಗಳಿರುವ ಕೃತಿಯ ಮೊದಲನೆಯ ಸಂಧಿಯ 66ನೆಯ ಪದ್ಯ, ಎರಡನೆಯ ಅಧ್ಯಾಯದ 51ನೆಯ ಹಾಗೂ 52ನೆಯ ಪದ್ಯಗಳಲ್ಲಿ 'ವರದ ವಿಠ್ಠಲ' ಅಂಕಿತವಿದೆ. ಮೊದಲನೆಯ ಸಂಧಿಯ 7ನೆಯ ಪದ್ಯದಲ್ಲಿ 'ಸ್ಮರನಯ್ಯ ಸಾಕ್ಷಾದ್ವರದ ವಿಠ್ಠಲ ಕರ್ತೃವೀಕೃತಿಗೆ' ಎಂದೂ ಇದೆ. ಎರಡನೆಯ ಸಂಧಿಯ 53ನೆಯ ಪದ್ಯದಲ್ಲಿ ಕವಿಯ ಕಾಲಮಾನ ಸೂಚಿತವಾಗಿದೆ.

> ಸ್ವಸ್ತಿಶ್ರೀಮಚ್ಛಾಲಿವಾಹನ । ವಿಸ್ತರದಲಾಳಿದವನೆಂಬೀ ।
> ವತ್ಸರವು ಸಾವಿರದ ಮೇಲರುನೂರು ಚೌಸಪ್ತ ॥
> ಮತ್ತೆ ಕಳೆಯಲು ಭಾವವತ್ಸರ । ದುತ್ತರೋತ್ತರ ಜ್ಯೇಷ್ಠ ಮಾಸಸಿ
> ತತ್ರಯೋದಶಿಯಿಂದುವಾರದಿ ಮುಗಿದುದೀ ಕೃತಿಯು ॥

ಇದು ಕ್ರಿ.ಶ. 1751ಕ್ಕೆ ಸರಿಹೊಂದುತ್ತದೆ. ಕವಿಯು ವಾಲಗಳ್ಳಿಯ ವಿಠ್ಠಲನೆಂದೂ ಕವಿಯ ಇಷ್ಟದೇವತೆ ವರದ ವಿಠ್ಠಲನೆಂದೂ ಕವಿಯ ಕಾಲಮಾನ ಕ್ರಿ.ಶ.1751 ಎಂದೂ ಸ್ಪಷ್ಟವಾಗುತ್ತದೆ.

1. ವಿಠ್ಠಲ ವಿರಚಿತ ಕೌಸಲ್ಯಾ ವಿವಾಹ ಸಂ॥ ಬಿ.ಎಸ್.ಎಸ್. ಕೌಶಿಕ
   ಪ್ರ : ವಾಲ್ಮೀಕಿ ಗಮಕ ಪಾಠಶಾಲಾ ಮೈಸೂರು 1969
2. ಕೌಸಲ್ಯಾ ವಿವಾಹ–ಕಾವ್ಯ (ವರದ ವಿಠ್ಠಲ ವಿರಚಿತ)
   ಸಂ॥ ಎನ್.ಕೆ.ಹೆಗಡೆ 1981/64
3. 'ಕೌಸಲ್ಯಾ ವಿವಾಹ' ಖಂಡಕಾವ್ಯವು ಯೋಗೀಂದ್ರ ಪರಮಾನಂದ ಚರಿತೆ
   ಲೇ : ಡಾ. ಜಿ.ಎಲ್. ಹೆಗಡೆ 2010/103
   ಈ ಕೃತಿಯಲ್ಲಿಯೂ ಅಡಕಗೊಂಡಿದೆ. (ನೋಡಿ ಪುಟ 71–97)
4. ಕೌಸಲ್ಯಾ ವಿವಾಹ ಖಂಡಕಾವ್ಯವು ಕೆಲವು ಕಡೆ ರಾಮಾಯಣದ ತಾಡೋಲೆ ಕಟ್ಟುಗಳ ಜೊತೆ ದೊರಕಿರುವುದರಿಂದ ಈ ರಾಮಾಯಣಕ್ಕೆ ವರದ ವಿಠ್ಠಲ ರಾಮಾಯಣ ಎಂಬ ಹೆಸರು ಬಂದಿರುವುದಾಗಿ ಸಂಶೋಧಕ, ಜಾನಪದ ವಿದ್ವಾಂಸ ಡಾ।ಎಲ್.ಆರ್. ಹೆಗಡೆಯವರು ಅಭಿಪ್ರಾಯಿಸಿದ್ದಾರೆ. ಹೆಚ್ಚಿನ ವಿವರಕ್ಕಾಗಿ ಯೋಗೀಂದ್ರ ಪರಮಾನಂದ ಚರಿತೆ–ಲೇ ಡಾ।ಜಿ.ಎಲ್. ಹೆಗಡೆ 2010 ಕೃತಿ ಗಮನಿಸಿ.

(36) ಸಂತ ಶಿವಾನಂದ ಅಥವಾ ಶಿವಮುನೀಶ್ವರ : ಮರಣ 20.06.1752. ಮುರ್ಡೇಶ್ವರ ಸಮೀಪದ ಬೈಲೂರ ಮಠದ ಪರಂಪರೆಯ ಸ್ವಾಮಿಗಳು. ಪೂರ್ವಾಶ್ರಮದಲ್ಲಿ ಕಾಯ್ಕಿಣಿ ಮನೆತನದವರು.

ಕೃತಿಗಳು :

1. ದೇವೀ ಮಹಾತ್ಮೆ – ಮರಾಠಿಯಲ್ಲಿ ಓವೀಬದ್ಧಕಾವ್ಯ.
2. ನವರಾತ್ರಿ ಕಥಾ
3. ಭಜನೆ/ಆರತಿ ಪದ್ಯಗಳು.

(37) ಶುಭಾನಂದ ಪಿಕಳೆ (ಸುಖಾನಂದ ಸ್ವಾಮಿ) ಅಂಕೋಲಾ : 18ನೆಯ ಶತಮಾನ. ಕೈವಲ್ಯಪುರ ಮಠಾನುಯಾಯಿ. ಕೌಂಡಿನ್ಯ ಗೋತ್ರದ ಶೇಣ್ವಿ ಬ್ರಾಹ್ಮಣ ಸಂತ ಕವಿ. ಕುಲದೇವ ಶ್ರೀ ಮಂಗೇಶ. ಕುಲಸ್ವಾಮಿನಿ ಶ್ರೀ ಮಹಾಲಕ್ಷ್ಮಿ ಬಾಂದೀವಡೆ. ಗುರು ಶ್ರೀ ವಿಶ್ವಂಭರ. ಹೆಸರು ಸುಬ್ಬಾ. ತಂದೆ ಅನಂತ ಪಿಕಳೆ, ತಾಯಿ ಜಾನಕಿ.

ಪ್ರಕಟಿತ ಕೃತಿಗಳು : ಎಲ್ಲವೂ ಮರಾಠಿಯಲ್ಲಿ

1. ಮಹಾಭಾರತ ಪರ್ವ 5 : ಉದ್ಯೋಗಪರ್ವ – 6303 ಓವೀಗಳು.
   ಸಂ॥ ನಾರಾಯಣ ಚಿಂತಾಮಣ ಕೇಳಕರ...1902
2. ಮಹಾಭಾರತ ಪರ್ವ 6 : ಭೀಷ್ಮಪರ್ವ – 2287 ಓವೀಗಳು.
   ಸಂ॥ ಬಾಲಕೃಷ್ಣ ಅನಂತ ಭಿಡೆ.. 1905

ಟಿಪ್ಪಣಿ : ಭೀಷ್ಮಪರ್ವವು ಶ್ರೀ ಶಕೆ 1688ನೆಯ ವ್ಯಯ ಸಂ॥ ಆಶ್ವೀನ ಶುದ್ಧ ಪ್ರತಿಪದೆ ಶನಿವಾರ (ತಾ:04.10.1766) ದಿನ ಅಂಕೋಲಾದ ಕುಂಭಾರಕೇರಿ ಕಳಶ ದೇವಾಲಯದಲ್ಲಿ ಪೂರ್ತಿಯಾಗಿದೆಯೆಂದು ತಿಳಿದುಬರುತ್ತದೆ.

ಗೌರಾಷ್ಟ್ರದೇಶಮಾಜಾರೀ ಗೋಕರ್ಣ ಪಂಚಕೋಶಾಭೀತರೀ
ಶಕೆ ಸೋಳಾಶೆ ಅಠ್ಯಾಯಶೀ ಉಪರೀ ಮಾಸ ಸಪ್ತ ಲೋಟಲೆ ।
ವ್ಯಯ ಸಂವತ್ಸರ ಆಶ್ವಿನಮಾಸೀ ಮಂದವಾರ ಶುದ್ಧ ಪ್ರತಿಪದೇ ದಿವಶೀ
ಪೂರ್ಣ ಕೇಲೆ ಭೀಷ್ಮಪರ್ವಾಶೀ ದೇವಾಲಯೀ ಕಲಶಾಚ್ಯಾ॥

ಈ ಪರ್ವವು ಮುಂಬಯಿಯ 'ಸರ್ವಸಂಗ್ರಹ ಮಾಸಪತ್ರಿಕಾ' ಸಂಪಾದಕ ಮಾಧವ ಚಂದ್ರೋಬಾ ಡುಕಳೆ ಇವರಿಂದ ಕ್ರಿ.ಶ. 1866ರಲ್ಲಿ ಮುದ್ರಣಗೊಂಡಿದೆ.

3. ಶ್ರೀ ಮಾಂಗೀಶ ಮಾಹಾತ್ಮ್ಯ – 521 ಓವೀಗಳು.
ಸಂ॥ ಭವಾನೀ ವಿಶ್ವನಾಥ ಕಾನವಿಂದೆ ಮುಂಬಯಿ 1873

ಟಿಪ್ಪಣಿ : ಈ ಕಾವ್ಯವು ಶ್ರೀ ಶಕೆ 1692ನೆಯ ವಿಕೃತನಾಮ ಸಂವತ್ಸರ ಆಷಾಢ ಬಹುಳ ಅಷ್ಟಮೀ ರವಿವಾರ (ತಾ: 15.07. 1770) ದಿನ ಶ್ರೀ ಮಾಂಗೀಶ ದೇವಾಲಯದಲ್ಲಿ ಪೂರ್ಣಗೊಂಡಿದೆ ಎಂದು ತಿಳಿದುಬರುತ್ತದೆ. (ಅ.7 ಓ. 127–128)

ಅಪ್ರಕಟಿತ ಕೃತಿಗಳು : ಎಲ್ಲವೂ ಮರಾಠಿಯಲ್ಲಿ **:** 1. ಪಂಡರೀನಾಥ ಮಾಹಾತ್ಮ್ಯ. 2. ಮಹಾಲಸಾ ಮಾಹಾತ್ಮ್ಯ. 3. ಮಲ್ಹಾರೀ ಮಾಹಾತ್ಮ್ಯ 4. ವೆಂಕಟೇಶ ಮಾಹಾತ್ಮ್ಯ

(38) **ಆಡುವಳ್ಳಿಯ ಸುಬ್ಬನ ಮಗ ವೆಂಕಟ** : ಕಾಲ ಸು. 18ನೆಯ ಶತಮಾನದ ಉತ್ತರಾರ್ಧ.

ಕೃತಿಗಳು : ಮೈರಾವಣ ಕಾಳಗ – ಯಕ್ಷಗಾನ ಪ್ರಸಂಗ.

(39) **ತ್ಯಾರಗಲ್ ರಾಮ ಭಾಗವತ** : ಕಾಲ ಕ್ರಿ.ಶ.ಸು. 1800. ಪ್ರೊ.ಎಂ.ಎ.ಹೆಗಡೆಯವರ ಪ್ರಕಾರ ಕವಿ ಸಿದ್ದಾಪುರ ತಾಲೂಕಿನ ಹೇರೂರಿನ ಹತ್ತಿರದ ತ್ಯಾರಗಲ್ ಗ್ರಾಮದವನು.

ಕೃತಿಗಳು :

1. ಜಲಂಧರ ಕಾಳಗ – ಯಕ್ಷಗಾನ ಪ್ರಸಂಗ

2. ಲಕ್ಷಣಾವತಿ ಕಲ್ಯಾಣ (ಲಕ್ಷಣ ಸ್ವಯಂವರ) – ಯಕ್ಷಗಾನ ಪ್ರಸಂಗ.... 1993

(40) **ಶ್ರೀನಿವಾಸ ಗೋಕರ್ಣ** : ಕಾಲ ಕ್ರಿ.ಶ. ಸು 1830. ತಂದೆ ನಾರಾಯಣ ಗೋಕರ್ಣದ ಶಾಂಡಿಲ್ಯ ಗೋತ್ರದ ಬ್ರಾಹ್ಮಣ.

ಕೃತಿ : ಕೃಷ್ಣರಾಜ ವರ್ಧಂತೀ ಶತಕ – ಖಂಡಕಾವ್ಯ. 3 ಸಂಧಿ, 101ವಾರ್ಧಿಕ ಷಟ್ಪದಿಗಳಿರುವ ಕೃತಿಯಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ (1794–1868) ವರ್ಧಂತಿ ಮಹೋತ್ಸವ ವರ್ಣಿತವಾಗಿದೆ. ಈ ಕೃತಿ ಕನ್ನಡದ ಪ್ರಥಮ ಪ್ರವಾಸ ಸಾಹಿತ್ಯಕೃತಿ ಎಂದು ಡಾ. ಶ್ರೀನಿವಾಸ ಹಾವನೂರ ಅಭಿಪ್ರಾಯಿಸಿದ್ದಾರೆ.

(41) **ಗೇರಸೊಪ್ಪೆಯ ಶಾಂತಯ್ಯ** : ಕಾಲ ಕ್ರಿ.ಶ. ಸು. 1830. ಸಾರಸ್ವತ ಬ್ರಾಹ್ಮಣ. ಹೊನ್ನಾವರದಲ್ಲಿ ಪ್ರಿನ್ಸಿಪಲ್ ಸದರ ಅಮೀನ. ಯಕ್ಷಗಾನ ಕಲಾವಿದ. ಕವಿಯ 12 ಯಕ್ಷಗಾನ ಪ್ರಸಂಗ ಕೃತಿಗಳಿವೆ ಎಂದು ತಿಳಿದುಬಂದಿದೆ.

1. ಏಕಾದಶೀ ಪ್ರಸಂಗ ....

2. ಕರ್ಣಪರ್ವ (ತೆಂಕುತಿಟ್ಟು) .... 1951(2) 1964/56

3. ಕರ್ಣಾರ್ಜುನ ಕಾಳಗ (ಕರ್ಣಪರ್ವ) 1931/80

4. ಜರಾಸಂಧ ಕಾಳಗ 5. ದ್ರೋಣಪರ್ವ

6. ಭೀಷ್ಮಪರ್ವ 7. ರಾವಣ ದಿಗ್ವಿಜಯ

8. ಲವಣ ಸಂಹಾರ 9. ಸೀತಾಕಲ್ಯಾಣ

10. ಸೀತಾ ವಿಯೋಗ 11. ಸುಭದ್ರಾ ಕಲ್ಯಾಣ

12. ಸುರಥ–ಸುಧನ್ವರ ಕಾಳಗ

(42) **ಸೀತಾರಾಮ ಸೂರಿ ಕರ್ಕಿ ಹೊನ್ನಾವರ** : ಕಾಲ ಕ್ರಿ.ಶ. ಸು. 1840. ಕರ್ಕಿಯ ಹವ್ಯಕ ಬ್ರಾಹ್ಮಣ. 'ಸೂರಿ' ಮನೆತನಕ್ಕೆ 'ಸೂರಿ' ಎಂಬ ಬಿರುದು/ಗೌರವ ಮೈಸೂರು ರಾಜಮನೆತನದಿಂದ ಸಂದಿದೆ ಎಂದೂ, ಈತ ಕರ್ಕಿಯ ಖ್ಯಾತ ವಿದ್ವಾಂಸ ಸೂರಿ ರಾಮಚಂದ್ರ ಶಾಸ್ತ್ರಿ (1914–2008) ಗಳ ಪೂರ್ವಜ ಎಂದೂ ಪ್ರತೀತಿ.

ಕೃತಿ : ಸಹಸ್ರಾಯುದ ಕಥೆ – ಇದು ಬ್ರಹ್ಮಾಂಡೋಪಪುರಾಣದ ಉತ್ತರಭಾಗದ ಲಲಿತೋಪಾಖ್ಯಾನದ ಪೂರ್ವಖಂಡದಲ್ಲಿಯ ಹಯಗ್ರೀವ–ಅಗಸ್ತ್ಯ ಸಂವಾದ ರೂಪವಾದ 24 ಅಧ್ಯಾಯಗಳ ಕನ್ನಡ ಟೀಕೆ.

ಟಿಪ್ಪಣಿ : 'ಕೃಷ್ಣರಾಜಮುದೇ ಕಥಿತಾ' ಎಂದು ಹೇಳಿರುವುದರಿಂದ ಈ ಮುಮ್ಮಡಿ ಕೃಷ್ಣರಾಜ (1794–1868) ರ ಆಶ್ರಿತನಿರಬಹುದಾಗಿದೆ.

(43) **ಕಾಶೀನಾಥ ಸ್ವಾಮೀ** : ಕಾಲ ಕ್ರಿ.ಶ. 19ನೆಯ ಶತಮಾನ. ಸ್ಥಳ ತಿಳಿದುಬಂದಿಲ್ಲ.

ಕೃತಿ : ಜೀವನ್ಮುಕ್ತಿ ಟೀಕಾ – ತಮ್ಮ ಜೀವನ್ಮುಕ್ತ ಗುರುಗಳ ನೆನಪಿಗಾಗಿ 1887

ಟಿಪ್ಪಣಿ : ಭಗವದ್ಗೀತೆಗೆ ವೈಶಿಷ್ಟ್ಯಪೂರ್ಣ ಟೀಕೆ – ವೃದ್ಧಭಾಷಾಂತರ, ಗೇಯರೂಪದ ಭಾಷಾಂತರ, ಶ್ಲೋಕಗಳ ಕಾವ್ಯಮಯ ಶೈಲಿಯ ಅನುವಾದ ರಚಿಸಿದ್ದರಂತೆ.

(44) **ಎಣ್ಣೆಮಡಿ ವೆಂಕಟರಮಣಯ್ಯ** : ಕಾಲ ಕ್ರಿ.ಶ. 19ನೆಯ ಶತಮಾನ. ಕುಮಟಾದ ಸಾರಸ್ವತ ಬ್ರಾಹ್ಮಣ. ಭಟ್ಕಳ ತಾಲೂಕಿನ ಶಿರಾಲಿಯಲ್ಲಿ ಶಾಲಾಧ್ಯಾಪಕರಾಗಿದ್ದರಂತೆ. ಚಿತ್ರಾಪುರಮಠದ ಶ್ರೀ ಕೇಶವಾನಂದರನ್ನು ಸ್ಮರಿಸಿದ್ದಾರೆ.

ಕೃತಿಗಳು : ದೇವೀ ಮಹಾತ್ಮೆ
ಭೀಷ್ಮಪರ್ವ – ಯಕ್ಷಗಾನ ಪ್ರಸಂಗ
ರುಕ್ಮಿಣೀ ಸ್ವಯಂವರ –ಯಕ್ಷಗಾನ ಪ್ರಸಂಗ

(45) **ವೆಂಕಪ್ಪ ಕೆಕ್ಕಾರ** : ಕಾಲ ಕ್ರಿ.ಶ. 19ನೆಯ ಶತಮಾನ. ಕವಿ ರಾಮಚಂದ್ರಾಪುರಮಠದ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳನ್ನು ಸ್ಮರಿಸಿದ್ದಾನೆ ಎಂದು ಸಂಶೋಧಕ ಪ್ರೊ.ಎಂ.ಎ.ಹೆಗಡೆ ತಿಳಿಸಿದ್ದಾರೆ. [6ನೆಯ ರಾಘವೇಶ್ವರಭಾರತೀಗಳು ಕ್ರಿ.ಶ. 1814ರಲ್ಲಿ ಬ್ರಹ್ಮೀಭೂತರು. 7ನೆಯ ರಾಘವೇಶ್ವರಭಾರತೀಗಳ ಕಾಲ 1897–1908]

ಕೃತಿ : ಶ್ರೀರಾಮಾಶ್ವಮೇಧ – ಯಕ್ಷಗಾನ ಪ್ರಸಂಗ

(46) **ಶ್ರೀ ರಾಘವೇಶ್ವರಭಾರತೀ ಸ್ವಾಮಿ** : ರಾಮಚಂದ್ರಾಪುರಮಠ ಗುರುಪರಂಪರೆಯಲ್ಲಿ 33ನೆಯವರು. ಕ್ರಿ.ಶ. 1897–1908 ರ ಅವಧಿಯಲ್ಲಿ ಪೀಠಸ್ಥರು. ಮೂಲತಃ ಹೊನ್ನಾವರ ತಾಲೂಕು ಕೆಕ್ಕಾರಿನ ರಾಯರ ಮನೆಯವರು.

ಪ್ರಕಟಿತ ಕೃತಿ : ಹವ್ಯಕ ದ್ರಾವಿಡಬ್ರಾಹ್ಮಣರ ಉತ್ಪತ್ತಿ ಇತಿಹಾಸ .... 1885/47 ಸ್ಕಂದಪುರಾಣದ ಸಹ್ಯಾದ್ರಿಖಂಡದ 2 ಅಧ್ಯಾಯಗಳ ಸಂಸ್ಕೃತ ಮೂಲ ಮತ್ತು ಕನ್ನಡ ಅನುವಾದಗಳ ಸಂಪಾದಿತ ಕೃತಿ.

(47) **ಸೂರಿ ವೆಂಕಟರಮಣ ಶಾಸ್ತ್ರೀ ಕರ್ಕಿ (ಹವ್ಯಕ ಹಿತೇಚ್ಛು) ಹೊನ್ನಾವರ** : (1852–1892) ಕನ್ನಡ, ಸಂಸ್ಕೃತ, ಅಗ್ರೇಜೀ ಶಿಕ್ಷಣ, ಮುಂಬೈಯಲ್ಲಿ ಮುದ್ರಣಾಲಯ ಸ್ಥಾಪಕ; ಹವ್ಯಕರಲ್ಲಿ ಪ್ರಪ್ರಥಮ ಗ್ರಂಥ ಸಂಪಾದಕ, ಪ್ರಕಾಶಕ, ಪತ್ರಿಕೋದ್ಯಮಿ– ಹವ್ಯಕ ಸುಬೋಧ ವಾರಪತ್ರಿಕೆ ಮತ್ತು ಹಿತೋಪದೇಶ ಮಾಸಪತ್ರಿಕೆ ಸಂಪಾದಕ. ಮುಂಬೈಯಿಂದ ಪ್ರಕಟಣೆ. ತಂದೆ ನಾರಾಯಣ ಶಾಸ್ತ್ರಿ, ತಾಯಿ ಪರಮೇಶ್ವರಿ. ಪತ್ನಿ ....

ಪ್ರಕಟಿತ ಕೃತಿಗಳು :

ಅ. ಸ್ವಂತ ಕೃತಿಗಳು

1. ಅನಾರ್ಯರ ವಿವರ 1889/29
2. ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ .... (1)1887, (2)1953, ... (3)2013/48

3. ದಕ್ಷಿಣ ಯಾತ್ರಾ ಚರಿತ್ರೆ 1885/13
4. ಪ್ರಾಚೀನ ನಾಟ್ಯ ಕಥಾರ್ಣವ ಭಾಗ-1 .... 1888/82

ಟಿಪ್ಪಣಿ :

1. ಅನಾರ್ಯರ ವಿವರವು ಸಮಾಜದಲ್ಲಿ ಶೂದ್ರರ ಸ್ಥಾನ ಪರಿಚಯಿಸುವ ಕೃತಿ.
2. ಇಗ್ಗಪ್ಪಹೆಗಡೇ ವಿವಾಹ ಪ್ರಹಸನವು ಹವಿಗನ್ನಡದ ಆದ್ಯ ಕೃತಿ. ಇದು ಕನ್ನಡ ಸಾಹಿತ್ಯದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಪ್ರಹಸನ. 'ಹವ್ಯಕ ಹಿತೇಚ್ಛು' ಕಾವ್ಯನಾಮದಿಂದ ಪ್ರಕಟಣೆ. ಪ್ರೊ. ಲಿಂಗೇಶ ಶರ್ಮಾ ಇವರಿಂದ 1953ರಲ್ಲಿ ಕವಿಯ ಮೂಲ ಹೆಸರಿನಿಂದ ಪ್ರಕಟಣೆ. ಡಾ. ಶಾಲಿನಿ ರಘುನಾಥ ಭಟ್ಟರ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ - ಒಂದು ಅಧ್ಯಯನ ಕೃತಿಯಲ್ಲಿ ಪೂರಕ ಮಾಹಿತಿಗಳು ಲಭ್ಯ. ಈ ಪ್ರಹಸನದ ಅಂಗ್ರೇಜಿ ಅನುವಾದವು Indian Literature ನಿಯತಕಾಲಿಕದ ಮಾರ್ಚ-ಏಪ್ರಿಲ್ 2012 ಸಂಚಿಕೆ (IL-268) ಯಲ್ಲಿ ಪ್ರಕಟವಾಗಿದೆ. ಅನುವಾದಕ : ಡಾ. ನಾರಾಯಣ ವಿ.ಹೆಗಡೆ ದೊಡ್ಮನೆ -ಅಮೇರಿಕಾದ ನ್ಯೂಯಾರ್ಕ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ.

ಬ. ಸಂಪಾದಿತ ಸಂಗ್ರಹಿತ ಕೃತಿಗಳು [ಎಲ್ಲವೂ 1880ರ ದಶದಲ್ಲಿ ಮುದ್ರಿತ]

1. ಅಮರಕೋಶ - ಮೂಲ ....
2. ಆದಿತ್ಯಪುರಾಣ ....
3. ಆಧ್ಯಾತ್ಮ ರಾಮಾಯಣ - ಸಟೀಕಾ ....
4. ಕಲ್ಪೋಕ್ತ ದೇವತಾಪೂಜಾ ....
5. ಕೃಷ್ಣಸಂಧಾನ ಮತ್ತು ಭೀಷ್ಮಪರ್ವ-ಯಕ್ಷಗಾನ ಪ್ರಸಂಗ 1886/77
6. ಕಾರ್ತವೀರ್ಯಾರ್ಜುನ ವಧೆ-ಯಕ್ಷಗಾನ ಪ್ರಸಂಗ 1889/67
7. ಗಾಯತ್ರೀ ಪುರಶ್ಚರಣ ವಿಧಾನ ....
8. ಗೋಕರ್ಣ ಪುರಾಣ ....
9. ಘಟೋತ್ಕಚನ ಕಾಳಗ-ಯಕ್ಷಗಾನ ಪ್ರಸಂಗ 1888/31
10. ಚತುರ್ಥಾಶ್ರಮ ಧರ್ಮಾಚಾರ ....
11. ಚಂದ್ರಹಾಸೋಪಾಖ್ಯಾನ-ಯಕ್ಷಗಾನ ಪ್ರಸಂಗ ....
12. ತತ್ವಚ್ಚೌಪದನ-ಪರಮದೇವ ವಿರಚಿತ 1889/11
13. ತುರಂಗ ಭಾರತ-ಪರಮದೇವ ವಿರಚಿತ.................................. 1886/944
14. ದುರ್ಗಾ ಸಪ್ತಶತಿ ....
15. ದುರ್ಗಾ ಸಹಸ್ರನಾಮ ....
16. ಪಂಚರತ್ನ ಭಗವದ್ಗೀತೆ...
17. ಪದ್ಯಾತ್ಮಕ ಭಗವದ್ಗೀತೆ ....
18. ಪೂಜಾ ಸಮುಚ್ಚಯ ....
19. ಬಿಲ್ಲಹಬ್ಬ ಅಥವಾ ಕಂಸವಧೆ-ಯಕ್ಷಗಾನ ಪ್ರಸಂಗ ....
20. ಬೃಹತ್ ಪೂಜಾ ವಿಧಾನವು 1886/203
21. ಬೃಹತ್ ಸ್ತೋತ್ರ ರತ್ನಾಕರ ....
22. ಭಾಗವತದೊಳಗಿನ ಯಕ್ಷಗಾನ-ಕೃಷ್ಣಾವತಾರದ ಬಾಲಲೀಲೆ 1886/32
23. ಮನುಸ್ಮೃತಿ-ಸಟೀಕಾ ....
24. ಯಜುಃಶಾಖಾ ಬೋಧಾಯನೋಕ್ತ ತ್ರಿಕಾಲಸಂಧ್ಯಾವಂದನಮ್ ....
25. ಯೋಗ ವಾಸಿಷ್ಠ ....
26. ರತಿಕಲ್ಯಾಣ-ಕೌಂಡಲನ ವಧೆ - ಯಕ್ಷಗಾನಪ್ರಸಂಗ 1886/68

27. ರಂಭಾ ಶುಕಸಂವಾದ ....
28. ರೇವತೀ ಕಲ್ಯಾಣ – ಯಕ್ಷಗಾನ ಪ್ರಸಂಗ 1889/113
29. ಲಕ್ಷ್ಮೀನಾರಾಯಣ ಹೃದಯ ....
30. ವಿಷ್ಣುಸಹಸ್ರನಾಮ ..../22
31. ವೆಂಕಟೇಶೀ ಪ್ರಯೋಗ (ವೆಂಕಟೇಶ ಭಟ್ಟರಿಂದ ಸಂಗ್ರಹಿತ) 1885
32. ವೇದಾಂತ ತತ್ತ್ವಸಾರ–ಕಿಬ್ಬಚ್ಚಲು ಮಂಜಮ್ಮ ವಿರಚಿತ 1886/48
33. ಶಂಕರ ಸಂಹಿತೆ..... ಭಾಮಿನೀ ಷಟ್ಪದಿ ಕಾವ್ಯ 1888/234
34. ಶೂದ್ರ ಕಮಲಾಕರ..
35. ಷೋಡಶ ಸೋಮವಾರ ಕಥೆ ....
36. ಶ್ರೀರಾಮಚಂದ್ರಾಪುರಮಠಕ್ಕೆ ಆಯಾ ಕಾಲದಲ್ಲಿ ಸಿಕ್ಕಿದ ತಾಮ್ರಶಾಸನ ಮುಂತಾದ ಕೆಲವು ಸನದು ಪತ್ರಗಳ ಸಂಗ್ರಹವು 1886/16
37. ಸ್ಥಾವರ ಜಂಗಮಾತ್ಮಕ ಸೃಷ್ಟಿಯ ವಿಷಯದಲ್ಲಿ ಡಾಕ್ಟರ್ ಕಾಣೆಯವರು ಕೊಟ್ಟ ವ್ಯಾಖ್ಯಾನ...
38. ಸತ್ಯಗಣಪತಿ ಪೂಜಾ ....
39. ಸಂಧ್ಯಾವಂದನಮ್ 1885/20
40. ಸರ್ಪಸಂಸ್ಕಾರ ವಿಧಿ ....
41. ಸಹಸ್ರನಾಮಾವಳಿ ....
42. ಸುಂದರಕಾಂಡ ....

ಟಿಪ್ಪಣಿ :

(1) ಹವ್ಯಕ ವೆಲ್‌ಫೇರ್ ಟ್ರಸ್ಟ್ ಮುಂಬೈ ಸಂಸ್ಥೆಯು 2006ರಿಂದ ವಾರ್ಷಿಕವಾಗಿ ಕರ್ಕಿ ಸೂರಿ ವೆಂಕಟರಮಣ ಶಾಸ್ತ್ರಿ ಯವರ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿದೆ.

(2) ಬೆಂಗಳೂರಿನ ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರವು 2006 ರಿಂದ ಸೂರಿವೆಂಕಟರಮಣ ಶಾಸ್ತ್ರಿಗಳ ನೆನಪಿನಲ್ಲಿ 'ಹವಿಗನ್ನಡ ಸೂರಿ ಪ್ರಶಸ್ತಿ' ನೀಡುತ್ತಿದೆ.

(3) ಸೂರಿ ಸೌರಭ: ಸಂಶೋಧನ ಗ್ರಂಥ–ಲೇ: ಮೋಹನ ಹೆಗಡೆ ಸಾಗರ .. 2012/104

(4) ಸೂರಿ ವೆಂಕಟರಮಣ ಶಾಸ್ತ್ರಿ – ಲೇ: ಕೃ.ಶಿ.ಹೆಗಡೆ ಪುಣೆ 2012/64

(5) ಸೂರಿ ಶಾಸ್ತ್ರಿ ತೆರೆದ ದಾರಿ–ಪರಿಚಯ ಲೇ.: ಕೃಷ್ಣಮೂರ್ತಿ ಹೆಬ್ಬಾರ.... 2015/100

(48) ಶಿವರಾಮ ನಾರ್ಣಪ್ಪ ಧಾರೇಶ್ವರ ಕುಮಟಾ:ಸೂರಿ ವೆಂಕಟರಮಣ ಶಾಸ್ತ್ರಿಗಳ ಸಮಕಾಲೀನ.

ಕೃತಿ : ಕನ್ಯಾ ವಿಕ್ರಯ – ನಾಟಕ 1887/23
ಪ್ರ. : ಕರ್ನಾಟಕ ಛಾಪಖಾನೆ ಮುಂಬಯಿ.

(49) ವಿಘ್ನೇಶ್ವರ ಕುಪ್ಪಾ ಭಟ್ಟ ಕರ್ಕಿ ಹೊನ್ನಾವರ : (ಸು. 1830–1900)

ಪ್ರಕಟಿತ ಕೃತಿ : ಉಪಯುಕ್ತ ಪೂಜಾ ಸಂಗ್ರಹ.................................... 1887/31
(ಪ್ರಕಾಶನ : ಭಾರತಿ ಛಾಪಖಾನೆ, ಮುಂಬೈ)

(50) ಸೂರ್ಯನಾರಾಯಣ ತಿಮ್ಮಣ್ಣ ಭಟ್ಟ ಮದ್ಗುಣೆ, ಕುಮಟಾ (ಸು. 1840–1900)

ಪ್ರಕಟಿತ ಕೃತಿ : Kanarese Ankalipi 1888/30
(ಪ್ರಕಾಶನ : ಭಾರತೀ ಪ್ರಸ್ ಮುಂಬೈ)

(51) ಅನಂತ ಶಿವರಾಮ ಮೂಡಭಟ್ಕಳ ಭಟ್ಕಳ : (ಕಾಲ ಸು. 1840–1910) ಸಾರಸ್ವತ ಬ್ರಾಹ್ಮಣ, ಅಪ್ಪಯ್ಯ ಸಮರ್ಥರ ಅನುಯಾಯಿ.

ಕೃತಿಗಳು :

1. ಅಪ್ಪಯ್ಯ ಸಮರ್ಥರ ಪುಣ್ಯಚರಿತ್ರೆಯೂ ಪದಗಳೂ..1907(2) 1928/104

2. Modern Canarese Grammar Explained in English........ 1899/277 (ಅಂಗ್ರೇಜಿಯಲ್ಲಿ ಬರೆದ ಹೊಸಗನ್ನಡ ವ್ಯಾಕರಣ)

(52) ಶ್ಯಾಮರಾವ ವಿಠ್ಠಲರಾವ್ ಕಾಯ್ಕಿಣಿ ಮುಂಬಯಿ : (ಜ:1841 ಮ:15.16.1905) ಕಾನೂನು ಶಿಕ್ಷಣ. ಕಾರವಾರದಲ್ಲಿ ಕಂದಾಯ ಖಾತೆಯಲ್ಲಿ ನೌಕರ. ಜಿಲ್ಲಾ ಕೋರ್ಟಿನಲ್ಲಿ ನೌಕರ. ಮುಂಬಯಿ ಹೈಕೋರ್ಟಿನಲ್ಲಿ ಕನ್ನಡ ಅನುವಾದಕ. 1871ರಿಂದ ಹೈಕೋರ್ಟಿನಲ್ಲಿ ನ್ಯಾಯವಾದಿ. ಕೊಂಕಣಿ, ಕನ್ನಡ, ಇಂಗ್ಲೀಷ್, ಜರ್ಮನ್, ಗುಜರಾತಿ, ಪರ್ಶಿಯನ್ ಭಾಷಾಜ್ಞಾನ. ಸಂಸ್ಕೃತಪ್ರೇಮಿ. 'ಕನ್ನಡಸುವಾರ್ತೆ' ಸಾರಸ್ವತ ಪತ್ರಿಕೆಯ ಸಂಸ್ಥಾಪಕ ಸಂಪಾದಕ. ಮುಂಬಯಿಯಲ್ಲಿ ನಿರ್ಣಯಸಾಗರ ಮುದ್ರಣಾಲಯದ ಕನ್ನಡ ವಿಭಾಗ, ಭಾರತೀಯ ಛಾಪಖಾನೆ ಸಂಸ್ಥಾಪನೆಯಲ್ಲಿ ಸಕ್ರಿಯ. 1888ರಲ್ಲಿ ಕನ್ನಡಿಗರ ಪ್ರಥಮ ಮುದ್ರಣೋದ್ಯಮ ಕರ್ನಾಟಕ ಛಾಪಖಾನೆ ಸ್ಥಾಪಕ. ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳಿಗೆ ತನುಮನಧನ ಸಹಾಯಕ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪಕ ಸದಸ್ಯ. ಮುಂಬಯಿ ಹೈಕೋರ್ಟಿನಲ್ಲಿ ಅಪೆಲೆಟ್ ವಿಭಾಗದಲ್ಲಿ ಏಕೈಕ ಕನ್ನಡಿಗ ವಕೀಲ. ಮುಂಬಯಿ ವಿಶ್ವವಿದ್ಯಾಲಯದ ಫೆಲೋ ಮತ್ತು ಸಿಂಡಿಕೇಟ್ ಸದಸ್ಯ. ಮುಂಬಯಿಯಲ್ಲಿ Co-oparative Housing Society ಯ ಸ್ಥಾಪನೆಗೆ ಕಾರಣೀಭೂತ. ತಂದೆ ವಿಠ್ಠಲರಾವ್ ಕಾಯ್ಕಿಣಿ [ಪಂಡಿತ ಕುಲನಾಮದ ಕೌಶಿಕ ಗೋತ್ರದ ಸಾರಸ್ವತ ಬ್ರಾಹ್ಮಣ] ಭಟ್ಕಳ. ತಾಯಿ ಶಾಂತಾಬಾಯಿ. ಪತ್ನಿ ಲಲಿತಾಬಾಯಿ. [ಮೊದಲಿನ ಎರಡು ಪತ್ನಿಯರ ಅಕಾಲ ಮರಣ] ಸಂತಾನವಿಲ್ಲ.

ಪ್ರಕಟಿತ ಕೃತಿಗಳು :

1. ಪರಾಶರ ಮಾಧವೀ –ಪರಾಶರಸ್ಮೃತಿಯ ಟೀಕಾಗ್ರಂಥ(ಸಂಪಾದಿತ)..ಮರಣೋತ್ತರ ಪ್ರಕಟ.
2. ವೆಂಕಟಾಧ್ವರಿಯ ವಿಶ್ವಗುಣಾದರ್ಶ ಚಂಪೂ(7 ಹಸ್ತಪ್ರತಿಗಳ ಪರಿಶೀಲನೆಯಿಂದ ಸಂಪಾದಿತ) 1889
3. ವಿಧವೆಯರ ವಿವಾಹ – ಕಿರುಹೊತ್ತಿಗೆ 1885
4. ಸಮುದ್ರಯಾನ ಮೀಮಾಂಸೆ – ಕಿರುಹೊತ್ತಿಗೆ 1895
5. ಹಿಂದೂ ವಿಧವೆಯರ ವಿವಾಹ ಮತ್ತು ಹಿಂದು ಜನರಲ್ಲಿಯ ವಿವಾಹ ಕಾಲವನ್ನು ಕುರಿತು ಶಾಸ್ತ್ರ ವಿಚಾರ 1891/74

ಗೌರವ :

* ಮುಂಬಯಿ ವಿ.ವಿ. ಕನ್ನಡ ಎಂ.ಎ.ವಿಭಾಗದ ಪರೀಕ್ಷಕ
* ಪಶ್ಚಿಮ ಭಾರತದ ಹೈಕೋರ್ಟ ವಕೀಲರ ಸಂಘದ ಕಾರ್ಯದರ್ಶಿ...1876–84
* ಧಾರವಾಡದ ಕರ್ನಾಟಕ ವಿಧ್ಯಾವರ್ಧಕ ಸಂಘದ ಅಧ್ಯಕ್ಷ 1891 ರಿಂದ ಆಜೀವ.
* ಮುಂಬಯಿ ಹೈಕೋರ್ಟ್‌ನ ಅಪೆಲೆಟ್ ವಿಭಾಗದ ಬಾರ್ ರೂಮಿನ ಗೋಡೆಯ ಮೇಲೆ ಶಾಮರಾಯರ ತೈಲವರ್ಣದ ಚಿತ್ರ ಇದೆ.
* ಶ್ಯಾಮರಾವ್ ವಿಠ್ಠಲ ಕಾಯ್ಕಿಣಿ – ಜೀವನ ಮತ್ತು ಕಾರ್ಯ
  ಲೇಖಕ – ಗೌರೀಶ ಕಾಯ್ಕಿಣಿ 1972/98

* Shamaro Vitthal Kaikini - by Gourish Kaikini 1981

ಟಿಪ್ಪಣಿ : ಮುಂಬಯಿಯಲ್ಲಿ 1904ರಲ್ಲಿ ಸ್ಥಾಪನೆಯಾದ ಸಾರಸ್ವತ ಸಮಾಜದ ಸೊಸೈಟಿಯಲ್ಲಿ ಶಾಮರಾಯರು ಸಕ್ರಿಯರಾಗಿದ್ದರು. ಇದು 1906ರಲ್ಲಿ ಬ್ಯಾಂಕ್ ಆದಾಗ 'ಶಾಮರಾವ್ ವಿಠ್ಠಲ್ ಸಹಕಾರಿ ಬ್ಯಾಂಕ್' ಎಂದು ನಾಮಕರಣ ಮಾಡಲಾಯಿತು. ಈಗ ಇದು ಶೆಡ್ಯೂಲ್ಡ್ ಬ್ಯಾಂಕ್ ಆಗಿದ್ದು 2006ರಲ್ಲಿ ಶತಮಾನೋತ್ಸವ ಆದರಿಸಿದೆ.

(53) ಯೋಗೀಂದ್ರ ಪರಮಾನಂದ ಉಂಚಗಿ ಕುಮಟಾ : (1845–1910) ಗೃಹಸ್ಥನಾಗಿದ್ದೂ ಸಾಧಕ. ಮೊದಲಿನ ಹೆಸರು ಪರಮೇಶ್ವರ. ತಂದೆ ವಿಷ್ಣು ಶಾನಭಾಗ ಉಂಚಗಿ–ವಾಲಗಳ್ಳಿ. ತಾಯಿ ಪಾರ್ವತಿ. ಪತ್ನಿ ಪಾರ್ವತಿ.

ಪ್ರಕಟಿತ ಕೃತಿ : ಯೋಗೀಂದ್ರ ಪರಮಾನಂದರ 28 ಭಜನೆಗಳು 'ಯೋಗೀಂದ್ರ ಪರಮಾನಂದ ಚರಿತೆ' ಕೃತಿಯಲ್ಲಿ ಅಡಕಗೊಂಡಿವೆ.

ಇತರ :

1. ಶ್ರೀ ಪರಮಾನಂದರ ಸದ್ಗುರುಗಳ ಸಂಕ್ಷಿಪ್ತ ಚರಿತ್ರವು
   ಲೇ. : ಶ್ರೀ ಶಿವಾನಂದ ಸರಸ್ವತಿ ಶೀಗೇಹಳ್ಳಿ 1930/63
2. ಮಹಾಮಹಿಮರಾದ ಯೋಗೀಂದ್ರ ಪರಮಾನಂದರು :
   ಗಣಪತಿ ಶಂಕರ ಭಟ್ಟ ಸರ್ಪಕರ್ಣೇಶ್ವರ 1950/76
3. ಯೋಗೀಂದ್ರ ಪರಮಾನಂದಚರಿತೆ: ಡಾ॥ ಜಿ.ಎಲ್. ಹೆಗಡೆ ...2010/103
4. ಶಿರಸಿಯಿಂದ 12 ಕಿ.ಮೀ. ದೂರದ ಶೀಗೇಹಳ್ಳಿಯಲ್ಲಿ ಪರಮಾನಂದ ಮಠವಿದ್ದು ವಾರ್ಷಿಕವಾಗಿ ಪರಮಾನಂದರ ಆರಾಧನೆಯು ನಡೆಯುತ್ತಿದೆ.
5. ಉಂಚಗಿಯಲ್ಲಿ ಪರಮಾನಂದರ ರುದ್ರಭೂಮಿಯಲ್ಲಿ ಚಿಕ್ಕ ಮಠವಿದ್ದು ಆರಾಧನೆ ನಡೆಯುತ್ತಿದೆ.

(54) ವಿಠ್ಠಲ ಕೃಷ್ಣ ಕಾಯ್ಕಿಣಿ ಭಟ್ಟಳ : (ಜನನ : ಸು. 1830 ಮರಣ 1919). ಇವರು ಕಾಯ್ಕಿಣಿ ಮನೆತನದ ಪೂರ್ವಜರಲ್ಲಿ ಒಬ್ಬರಾದ ಸಂತ ಶಿವಯ್ಯ (ಶಿವಾನಂದ) ಅಥವಾ ಶಿವಮುನೀಶ್ವರರ ಮಗ ಕೃಷ್ಣಾಜೀಯವರ ಮೊಮ್ಮಗ ಎಂದು ತಿಳಿದುಬರುತ್ತದೆ.

ಕೃತಿಗಳು :

1. ಗೋಕರ್ಣ ಮಾಹಾತ್ಮ್ಯ – ಕನ್ನಡದಲ್ಲಿ ....
2. ಲವಣ ಚರಿತ್ರ ....
3. ಶ್ರೀ ಗೋಕರ್ಣ ವರ್ಣನ – ಕನ್ನಡದಲ್ಲಿ ....
4. ಶ್ರೀ ಗೋಕರ್ಣ ಮಾಹಾತ್ಮ್ಯ – ಮರಾಠಿ ತ್ರಿಪದಿಗಳಲ್ಲಿ. ....
   (ಓವೀ ಕಾವ್ಯ) 64 ಅಧ್ಯಾಯಗಳು, 13159 ತ್ರಿಪದಿಗಳು............. 1876
5. ಶ್ರೀ ಮಾಂಗೀಶ ಮಹಾತ್ಮ್ಯ – ಮರಾಠೀ ಓವೀ ಕಾವ್ಯ 1872
6. ಶ್ರೀ ಸತ್ಯನಾರಾಯಣ ಕಥೆ ....

(55) ಗೋಪಾಲಕೃಷ್ಣ ಭಟ್ಟ ಬೆತ್ತಗೇರಿ, ಕುಮಟಾ : (1839–1924) ವೈದಿಕ. ಪುರೋಹಿತ. ಸ್ವಗ್ರಾಮದಲ್ಲಿ 1905ರಲ್ಲಿ ಶ್ರೀ ಸಿದ್ಧಿವಿನಾಯಕ ದೇವಾಲಯದ ಸ್ಥಾಪಕ. ಶ್ರೀಸಿದ್ಧಿವಿನಾಯಕ ವೇದ ಸಂಸ್ಕೃತ ಪಾಠಶಾಲೆಯ ಸ್ಥಾಪಕ. ಅಧ್ಯಾಪಕ. ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಶಿಕ್ಷಣ. ಕೃಷಿಕ, ಪುರಾಣಪ್ರವಚನಕಾರ. ಅಂತ್ಯಕಾಲದಲ್ಲಿ ಆತುರ ಸಂನ್ಯಾಸಿ "ಶ್ರೀಕೃಷ್ಣಾನಂದ ಸರಸ್ವತೀ" ಅಭಿಧಾನ. ಸ್ವಗ್ರಾಮದಲ್ಲಿ ಗುರುಲಿಂಗಮೂರ್ತಿ ಇದೆ.

ಇವರಿಗೆ ರಾಗಿಕಾಳ ಪುಟ್ಟ ಭಟ್ಟ ಎನ್ನುತ್ತಿದ್ದರಂತೆ. ತಂದೆ ಶಿವಭಟ್ಟ, ತಾಯಿ ಪರಮೇಶ್ವರಿ, ಪತ್ನಿ ಭಾಗೀರಥಿ.

ಪ್ರಕಟಿತ ಕೃತಿ : ಶ್ರೀ ಸತ್ಯನಾರಾಯಣ ಕಥಾ-ಢವಳಾರ .... 1888/21 (ಪ್ರಕಾಶನ : ಕರ್ನಾಟಕ ಛಾಪಖಾನೆ, ಮುಂಬಯಿ.)

(56) ಪುಂಡರಿನಾಥ ಹರಿ ನಾವಲಕರ : ಕಾಲ ಸು. 19ನೇ ಶತಮಾನದ ಉತ್ತರಾರ್ಧ

ಪ್ರಕಟಿತ ಕೃತಿ :ಉತ್ತರ ಕನ್ನಡ ಜಿಲ್ಲೆಯ ವರ್ಣನೆ (2ನೇ ಇಯತ್ತೆಗಾಗಿ)....1887(2) 1888/28

ಟಿಪ್ಪಣಿ: ಸದ್ರಿ ಕೃತಿಯು ಲೇಖಕರಿಂದ ಕಾರವಾರದಲ್ಲಿ ಪ್ರಕಟಗೊಂಡಿದೆ. ಆದ್ದರಿಂದ ಗ್ರಂಥಕಾರ ಕಾರವಾರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನಿದ್ದಿರಬಹುದಾಗಿದೆ.

(57) ನಾಡಘರ ಶಾಂತಿಬಾಯಿ ಭಟ್ಕಳ : (ಜ : 1851, ಮ : 1901). ತಂದೆ ಸಾಗರದ ಕೊಪ್ಪಿ ವೆಂಕಟೇಶಯ್ಯ. ಪತಿ ಭಟ್ಕಳದ ಅಪ್ಪಯ್ಯ ಸಮರ್ಥರ ವಂಶಜ ನಾಡಘರ ಮನೆತನದ ಕೃಷ್ಣರಾಯ. ಋಗ್ವೇದೀ ಸಾರಸ್ವತ ಬ್ರಾಹ್ಮಣ. ಪತಿ ಮತ್ತು ಪುತ್ರ ವಿಯೋಗದಿಂದಾಗಿ ವಿರಕ್ತಳಾಗಿ ಪರಮಾರ್ಥ ಸಾಧನೆ. ಕ್ರಿ.ಶ. 1900ರಲ್ಲಿ ಭಟ್ಕಳದ ನಾಡಘರ ದೇವಾಲಯದ ಜೀರ್ಣೋದ್ಧಾರದಲ್ಲಿ ಸಕ್ರಿಯ ಸಹಭಾಗಿನಿ. ಭಟ್ಕಳದ ಮಠದಲ್ಲಿ ವಾರ್ಷಿಕವಾಗಿ ಪುಷ್ಯ ಶುದ್ಧ ಚತುರ್ಥಿಯಂದು ಇವರ ಪುಣ್ಯತಿಥಿ ಆಚರಣೆ ನಡೆಯುತ್ತಿದೆ.

ಪ್ರಕಟಿತ ಕೃತಿ : ಮರಾಠಿಯಲ್ಲಿ ರಚಿಸಿದ ಅಭಂಗ ಮತ್ತು ಭಜನೆಗಳು ಮುಂದಿನ ಕೃತಿಯಲ್ಲಿ ಅಡಕಗೊಂಡಿವೆ.

1. ಶಾಂತಾಬಾಯಿ ನಾಡಘರ ಅವರ ಕಾವ್ಯ ಮತ್ತು ಚರಿತ್ರೆ
   ಸಂ॥ ಸರಸ್ವತಿಬಾಯಿ 1912
2. ಭಟ್ಕಳದ ಜೀವನ್ಮುಕ್ತ ಕವಿ ಶ್ರೀಮತ್ ಅಪ್ಪಯ್ಯ ಸಮರ್ಥರಪುಣ್ಯ ಚರಿತ್ರೆಯೂ,ಪದಗಳು ಮತ್ತು ಭಟಕಳ ಯೇಥೀಲ ಜೀವನ್ಮುಕ್ತ ಕವಿ ಶ್ರೀಮತಿ ನಾಡಘರ ಶಾಂತಿ ಬಾಯೀ ಕೃತ ಅಭಂಗ, ಪದೆ ವ ತೀಚೆ ಪುಣ್ಯ ಚರಿತ್ರ (ಪ್ರ॥ ನಾಡಘರ ಟ್ರಸ್ಟ್ ಭಟ್ಕಳ) 2001/164
   ಟಿಪ್ಪಣಿ : ಕವಿಯಿತ್ರಿಯ ಕನ್ನಡ ಭಜನೆಗಳೂ ಇವೆಯಂತೆ.

ಅವಶ್ಯಕ ಮಾಹಿತಿ ದೊರಕದ ಗ್ರಂಥಕಾರರು

ಗ್ರಂಥಕಾರ ಕೃತಿಕೋಶ ರಚನೆಯ ಅಂಗವಾಗಿ ನಡೆಸಿದ ಸಂಗ್ರಹ ಪ್ರಕ್ರಿಯೆಯಲ್ಲಿ ಗ್ರಂಥಕಾರರೆಂದು ಕಂಡುಬಂದ ಕೆಲವರ ದೇಶ, ಕಾಲ, ಕೃತಿಗಳ ಕುರಿತ ಖಚಿತವಾದ ಮಾಹಿತಿ ದೊರಕಿಲ್ಲವಾದರೂ ಅವರು ಗ್ರಂಥಕಾರರು ಹೌದು ಎಂಬುದು ಖಚಿತವಾಗಿದ್ದು ಲಭ್ಯವಾದ ಅಲ್ಪಸ್ವಲ್ಪ ವಿವರಗಳು ಮುಂದಿನಂತಿವೆ.

(58) ಹಸ್ತಾಮಲಕಾಚಾರ್ಯರು : ಆಚಾರ್ಯ ಶಂಕರರ ಶಿಷ್ಯರಾದ ಇವರ 'ಹಸ್ತಾಮಲಕಸ್ತೋತ್ರ' ತುಂಬ ಪ್ರಸಿದ್ಧ. ಇವರು ಮೂಲತಃ ಶ್ರೀವಳೀ ಅಥವಾ ಶೀಳೀ ಎಂಬ ಊರಿನವರು. ಇದೇ ಶಿರಾಳಿ ಎಂದು 'ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು' ಕೃತಿಯಲ್ಲಿದೆ. (ನೋಡಿ:ಉ.ಕ.ಜಿ.ಗ್ರ.ಪುಟ-1)ಉಡುಪಿಯ ವಿದ್ವಾನ್ ಡಾ.ನಿಟಿಲಾಪುರ ಕೃಷ್ಣಮೂರ್ತಿ ಯವರು ತಮ್ಮ 'ತುಳುನಾಡಿನ ಸಂಸ್ಕೃತ ಸಾಹಿತ್ಯ' ಪಿಎಚ್.ಡಿ ಪ್ರಬಂಧದಲ್ಲಿ ಹಸ್ತಾಮಲಕರ ಊರು ಉಡುಪಿ ತಾಲೂಕಿನ ಶಿವಳ್ಳಿ ಎಂದಿದ್ದಾರೆ. ಹಸ್ತಾಮಲಕರು ದ್ವಾರಕಾ ಪೀಠದ ಪ್ರಥಮ ಗುರುಗಳು.

(59) ಅಂಡಯ್ಯ (ಕ್ರಿ.ಶ. 1217) : ಕದಂಬರ ಕಾಮದೇವನ ಕಾಲದ ಜೈನಕವಿ. ಸಂಸ್ಕೃತವನ್ನು ಬೆರಕೆ ಮಾಡದೇ ಅಚ್ಚಗನ್ನಡದಲ್ಲಿ 'ಕಬ್ಬಿಗರ ಕಾವಂ' ಕಾವ್ಯ ರಚನೆ. ಇದಕ್ಕೆ 'ಸೊಬಗಿನ ಸುಗ್ಗಿ', 'ಕಾವನ ಗೆಲ್ಲಂ', 'ಮದನ ವಿಜಯ' ಎಂಬ ಹೆಸರುಗಳೂ ಇವೆ.

ಕವಿಯ ಜನ್ಮಸ್ಥಳ ತಿಳಿದುಬಂದಿಲ್ಲ. ಕಾವ್ಯದಲ್ಲಿನ ಪ್ರಕೃತಿವರ್ಣನೆಯಿಂದ ಆತನು ಮಲೆನಾಡಿನ ಮಧ್ಯದವನೆಂದು ಸೂಚ್ಯವಾಗುತ್ತದೆ. ಕವಿ ಉತ್ತರ ಕನ್ನಡದವನು ಎಂದು ಉ.ಕ.ಜಿ.ಗ್ರ.ದಲ್ಲಿ ಅಭಿಪ್ರಾಯಿಸಲಾಗಿದೆ. ನೋಡಿ. ಪುಟ.2.

(60) ಬತ್ತಲೇಶ್ವರ ರಾಮಾಯಣದ ಕವಿ : ಕುಮಟಾ ತಾಲೂಕಿನ ಹೆಗಡೆ ಗ್ರಾಮದ ಸಂಶೋಧಕ, ಗ್ರಂಥ ಸಂಪಾದಕ, ಎನ್.ಕೆ.ಹೆಗಡೆಯವರು ಸಂಪಾದಿಸಿದ ಬತ್ತಲೇಶ್ವರ ರಾಮಾಯಣ 2005ರಲ್ಲಿ ಪ್ರಕಟಗೊಂಡಿದೆ. ಕವಿಯ ಹೆಸರು ತಿಳಿದಿಲ್ಲ. ಆದರೆ ಕವಿ ಸು. 16-17ನೆಯ ಶತಮಾನದ ಉತ್ತರ ಕನ್ನಡ ಕನ್ನಡದವನಿರಬೇಕೆಂದು ಊಹಿಸಿದ್ದಾರೆ. ಕನ್ನಡ ಕವಿಚರಿತೆಯಲ್ಲಿ ಈತನ ಕಾಲ ಸು. 1430 ಮತ್ತು ವೀರಶೈವ ಕವಿ ಎಂದಿದೆ.

(61) ಕವಿ ಕೋಟೇಶ್ವರ : ಕಾಲ ಸು. 1440. ಕೃತಿ ಜನಂಧರ ಷಟ್ಪದಿ. (ನೋಡಿ ನಾ.ಡಿಸೋಜ : ಭಟ್ಕಳ ತಾಲೂಕಾ 2ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೀಯ ಭಾಷಣ)

(62) ಚಿದಾನಂದ : ಕಾಲ ಸು. 1685. ಹೊನ್ನಾವರ ತಾಲೂಕಿನ ಬೈಲೂರಿನ ಬ್ರಾಹ್ಮಣ ಕವಿ. ಸಂನ್ಯಾಸಿ. ಕೆಲವು ಹಾಡುಗಳನ್ನು ಬರೆದಿದ್ದು ಅವುಗಳಿಗೆ ಚಿದಾನಂದ ಕೋರಡೆ ಅಥವಾ ಕೋರಡೆ ಎಂಬ ಹೆಸರಿದೆ. (ನೋಡಿ ಉ.ಕ.ಜಿ.ಗ್ರ. ಪುಟ 12)

(63) ವೆಂಕಟ ಬದ್ರಿ : ಸಂಸ್ಕೃತ ಮರಾಠಿ ವಿದ್ವಾಂಸರಾದ ಇವರು 18ನೆಯ ಶತಮಾನದ ಹಳಿಯಾಳದ ಪ್ರಸಿದ್ಧ ಕವಿ. ಎಷ್ಟೋ ಸಂಸ್ಕೃತ ಗ್ರಂಥಗಳನ್ನು ಮರಾಠಿಗೆ ಭಾಷಾಂತರಿಸಿದ್ದರು ಎಂದು ತಿಳಿದುಬರುತ್ತದೆ. (ನೋಡಿ ಉ.ಕ.ಜಿ.ಗ್ರ. ಪು. 483)

(64) ಗೇರಸೊಪ್ಪೆ ವೆಂಕಟರಮಣಯ್ಯ : ಗೇರಸೊಪ್ಪೆ ಶಾಂತಯ್ಯನ ಮಗ. ಹಾಡು, ಜ್ಯೋತಿಷ ಗ್ರಂಥ ಮತ್ತು ಯಕ್ಷಗಾನಗಳನ್ನು ಬರೆದಿದ್ದಾನೆ ಎನ್ನುತ್ತಾರೆ. (ನೋಡಿ ಉ.ಕ.ಜಿ.ಗ್ರ. ಪು.34)

(65) ನಾಯಕ ಸ್ವಾಮಿ : ಮೂಲ ಹೆಸರು ಶಂಕರ ಮಂಗೇಶ ಕರಂಡೇ ನಾಯಕ ದೇಸಾಯಿ. ಊರು ಕುಮಟಾ ತಾಲೂಕಿನ ಅಂತ್ರವಳ್ಳಿ ಗ್ರಾಮ. ಜೀವನದಲ್ಲಿ ವಿರಕ್ತಿ ಉಂಟಾಗಿ ಗೋವೆಯ ಮಂಗೇಶ ದೇವಾಲಯದಲ್ಲಿ ಶೇಷಾಯುಷ್ಯ ಕಳೆಯುವಾಗ ಮರಾಠಿಯಲ್ಲಿ ರಚಿಸಿದ ರಾಧಾವಿಲಾಸ ಮತ್ತು ಶಿವಗೀತಾ ಕಾವ್ಯಗಳು ಪ್ರಕಟವಾಗಿವೆಯೆಂದೂ **ಪೂರ್ಣಪ್ರಬೋಧ ಚಂದ್ರೋದಯ** ಕಾವ್ಯ ಅಪ್ರಕಟಿತವೆಂದೂ ತಿಳಿದುಬಂದಿದೆ. (ನೋಡಿ ಉ.ಕ.ಜಿ.ಗ್ರ. 484)

(66) ಅಣ್ಣಪ್ಪಯ್ಯ ನಾಡಕರ್ಣಿ : ಕಾಲ ಸು.19ನೆಯ ಶತಮಾನದ ಉತ್ತರಾರ್ಧ. ಗೋಕರ್ಣ ಸಮೀಪದ ತದಡಿಯ ಸಾರಸ್ವತ ಬ್ರಾಹ್ಮಣ. ಶೀಘ್ರ ಕವಿ. ಹಾಡು, ಯಕ್ಷಗಾನಗಳನ್ನು ಬರೆದಿದ್ದಾಗಿ ಹೇಳುತ್ತಾರೆ. (ನೋಡಿ ಉ.ಕ.ಜಿ.ಗ್ರ. ಪು. 82)

(67) ಶ್ರೌತಿ ವಿಶ್ವಪತಿ ಭಟ್ಟ ಕಾಶಿ : ಕಾಲ ಕ್ರಿ.ಶ. 18ನೇ ಶತಮಾನಕ್ಕಿಂತ ಮೊದಲು. ಗೋಕರ್ಣ ಅಥವಾ ಹೊನ್ನಾವರದವರು ಎಂದು ಪ್ರತೀತಿ. ತಂದೆ ಕಾಶೀವಾಸಿ ಕೇಶವ ಭಟ್ಟ.

ಕೃತಿ: ಬೋಧಾಯನೀಯ ಪ್ರಯೋಗ ಶಿಖಾಮಣಿ.

* * * * *

ಅಧ್ಯಾಯ 3 : ಆಧುನಿಕ ಕಾಲ

ಕೀರ್ತಿಶೇಷರು: ಕ್ರಿ.ಶ. 1900 ರಿಂದ ಈ ತನಕ

[ಗ್ರಂಥಕಾರ ಮತ್ತು ಕೃತಿಗಳನ್ನು ಅಕಾರಾದಿಯಾಗಿ ದಾಖಲಿಸಿದೆ]

ಪುರುಷರು

(68) ಅಭಿಶಂಕರ ಕೆ. ಬನವಾಸಿ, ಶಿರಸಿ (ಜ: 21-9-1921, ಮ: 9-9-1998) M.A., B.Lit., Ph.D. ಪದವೀಧರ. ಸ್ವಾತಂತ್ರ್ಯ ಹೋರಾಟಗಾರ. ಗದಗಿನಲ್ಲಿ 'ಪ್ರಜಾ' ಪತ್ರಿಕೆ ಸಹಸಂಪಾದಕ. ಸ್ವಾಮಿ ರಮಾನಂದರ ಮಾರ್ಗದರ್ಶನದಲ್ಲಿ ಹೈದರಾಬಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿ. 'ONWARD MARCH' ವಾರಪತ್ರಿಕೆ ಸಂಪಾದಕ. ಹೈದರಾಬಾದ ರಾಷ್ಟ್ರೀಯ ಮುದ್ರಣ ಪ್ರಕಾಶನ ಟ್ರಸ್ಟಿನ ಪ್ರಬಂಧಕ. ಮದ್ರಾಸ್, ದೆಹಲಿ, ಬೆಂಗಳೂರುಗಳಲ್ಲಿ ಪತ್ರಿಕಾ ಕ್ಷೇತ್ರದಲ್ಲಿ ಕಾರ್ಯ. ದೆಹಲಿ (1956, 1984), ಬೆಂಗಳೂರು (1991)ಗಳಲ್ಲಿ ನಡೆದ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಲನಗಳಲ್ಲಿ ಸಕ್ರಿಯ. ಕರ್ನಾಟಕ ಸರಕಾರದ ಗೆಝೆಟಿಯರ ಇಲಾಖೆಯಲ್ಲಿ ಸಂಪಾದಕ, ಮುಖ್ಯ ಸಂಪಾದಕ (1965-1984). ಕರ್ನಾಟಾಲಜಿ ಗ್ರಂಥಾಲಯ ಸ್ಥಾಪಕ. ಹೆಸರು ಕೇಶವ. ತಂದೆ ಗುರುನಾಥ ಅಭ್ಯಂಕರ. ತಾಯಿ ಯಶೋದಾ. ಪತ್ನಿ ವಿಶಾಲಾಕ್ಷಿ.

ಪ್ರಕಟಿತ ಕೃತಿಗಳು:

ಅ. ಪುಸ್ತಿಕೆಗಳು (6): Hindu Buddhist Union, Heroic Struggle in Hyderabad, Karbla Re-enacted, Martyrdom of Gandhiji, Swami Ramanand-A Valient Monk, Whither Hyderabad.

ಬ. ಗೆಝೆಟಿಯರ್ ಇಲಾಖೆಯಲ್ಲಿದ್ದಾಗ ಪ್ರಕಟಗೊಂಡ ಜಿಲ್ಲಾ ಗೆಝೆಟಿಯರ್‌ಗಳು (14)

ಕೊಡಗು	ದಕ್ಷಿಣ ಕನ್ನಡ	ಮಂಡ್ಯ
ಕೋಲಾರ	ಧಾರವಾಡ	ರಾಯಚೂರು
ಗುಲ್ಬರ್ಗಾ	ಬಳ್ಳಾರಿ	ಶಿವಮೊಗ್ಗ
ಚಿತ್ರದುರ್ಗ	ಬೀದರ	ಹಾಸನ

ಪ್ರಶಸ್ತಿ/ಗೌರವ:

- ಸಾಹಿತ್ಯರತ್ನ, ಸಂಪಾದನ ಕಲಾವಿಶಾರದ ಇತ್ಯಾದಿ ಬಿರುದುಗಳು.
- ದೇಶ, ವಿದೇಶಗಳ ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮ್ಮೇಲನಗಳಲ್ಲಿ ಪ್ರಬಂಧ ಮಂಡನೆ.
- ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಲನಾಧ್ಯಕ್ಷ ಶಿರಸಿ-1982.
- ಶಿರಸಿ ಬನವಾಸಿ ರಸ್ತೆಗೆ ಅಭಿಶಂಕರ ರಸ್ತೆ ಎಂದು ನಾಮಕರಣ.
- ಬನವಾಸಿಯ ಜಯಂತಿ ಪ.ಪೂ. ಕಾಲೇಜಿನಲ್ಲಿ ಅಭಿಶಂಕರ ಕಂಚಿನ ಪುತ್ಥಳಿ ಸ್ಥಾಪನೆ.
- ಬನವಾಸಿಯ ಹರ್ಡೇಕರ ಮಂಜಪ್ಪ ಸ್ಮಾರಕ ಭವನದ ಸಭಾಂಗಣಕ್ಕೆ ಅಭಿಶಂಕರ ಸಭಾಂಗಣ ನಾಮಕರಣ.
- ಅವಿಸ್ಮರಣೀಯ ಸಾಧಕ ಕೆ. ಅಭಿಶಂಕರ: ಸಂಸ್ಮರಣ ಗ್ರಂಥ ಸಂ.: ಎಂ.ಬಿ. ಪಾಟೀಲ-2012/320

(69) ಅವಧಾನಿ ಕೆ.ಕೆ. ಕರ್ಕಿ, ಹೊನ್ನಾವರ (ಜ: 7-11-1925/ಮ: 5-2-2012) ಬಿ.ಎ., ಎಲ್.ಎಲ್.ಬಿ. ಪದವೀಧರ. ನಿವೃತ್ತ ದಿವಾಣಿ ನ್ಯಾಯಾಧೀಶ. ಸಾಮಾಜಿಕ ಕಾರ್ಯಕರ್ತ. ಹೆಸರು ಕೃಷ್ಣ. ತಂದೆ ಕೃಷ್ಣ, ತಾಯಿ ಕಮಲಾ. ಪತ್ನಿ ಗೌರಿ.

ಪ್ರಕಟಿತ ಕೃತಿ :

1. ಮೈಸೂರು (ಕರ್ನಾಟಕ) ಗ್ರಾಮ ಪಂಚಾಯತಿ ಮತ್ತು ಲೋಕಲ್ ಬೋರ್ಡ್ ಕಾಯಿದೆ ಮತ್ತು ಅದರ ಮೇಲೆ ಟಿಪ್ಪಣಿ 1959/337
2. The Mysore (Karnataka) Police Act 1963 with Exhaustive Commentary 1966/365

(70) ಅವಧಾನಿ ಜಿ. ಎಸ್., ಮಾಡಗೇರಿ, ಹೊನ್ನಾವರ (ಜ: 11-8-1948/ಮ: 20-8-2000) ಎಂ. ಎ. ಪದವೀಧರ. ಉಪನ್ಯಾಸಕ, ವಿಮರ್ಶಕ. ಹೆಸರು ಗಣಪತಿ. ತಂದೆ ಶಿವರಾಮ, ತಾಯಿ ಸಾವಿತ್ರಿ. ಪತ್ನಿ ಅನಸೂಯ.

ಪ್ರಕಟಿತ ಕೃತಿ :

1. ಎಲ್ಲ ಕವಿತೆಗಳು-ಕವನ ಸಂಕಲನ 2003/198
2. ಕಣಗಿಲೆ-ಕಾದಂಬರಿ 2007
3. ಕಾವ್ಯ ಸೃಷ್ಟಿಯ ಸ್ವರೂಪ-ವಿಮರ್ಶೆ-ಸಂಪಾದಿತ 1994/200
4. ಕ್ವಾಸಾರ-ಕಿರು ಕಾದಂಬರಿ 1979/60
5. ಗಂಗೋತ್ರಿಯ ಹಕ್ಕಿಗಳು-ಕವನ ಸಂಕಲನ 1995/60
6. ಪರಸ್ಪರ-ವಿಮರ್ಶಾ ಲೇಖನ ಸಂಗ್ರಹ 1990/170
7. ಬೆಂಕಿ ಬಳ್ಳಿ-ಕವನ ಸಂಕಲನ 1969/88
8. ಸಾಹಿತ್ಯ ವಿಮರ್ಶೆ 1991-ಸಂಪಾದಿತ 1992/256
9. ಹೊಕ್ಕಳು-ಮಿನಿ ಪೋಯೆಮ್ಸ್.. 1971/28
10. ಹೊತ್ತು ಮುಳುಗುವ ಮುನ್ನ-ಕವನ ಸಂಕಲನ 1984/50

(71) ಆಚಾರ್ಯ ಕುಮಟಾ ನಾರಾಯಣ (ಜ: 14-9-1874, ಮ: 5-9-1942): ಗೌಡ ಸಾರಸ್ವತ ಬ್ರಾಹ್ಮಣ. ಮೂಲ ಹೆಸರು ಗಣಪಯ್ಯ ನಾರಾಯಣ ಪೈ. ತಾಯಿ ಲಕ್ಷ್ಮಿ. ವಿದ್ಯಾಗುರುಗಳಾದ ಗೋಕರ್ಣ ಪರ್ತಗಾಳ ಮಠಾಧೀಶ ಶ್ರೀ ಇಂದಿರಾಕಾಂತ ತೀರ್ಥಸ್ವಾಮಿಗಳಿಂದ 'ನಾರಾಯಣ ಆಚಾರ್ಯ' ಎಂಬ ಅಭಿಧಾನ. ವ್ಯಾಕರಣ, ಅಲಂಕಾರ, ಜ್ಯೋತಿಷ್ಯಗಳಲ್ಲಿ ಪರಿಣತ. ಗ್ರಂಥ ಸಂಶೋಧಕ. ನಿಪ್ಪಾಣಿಯ ಮೂಡಕಟ್ಟೆ ರಾಘವೇಂದ್ರ ರಾಯರ ಕನ್ನಡ ಜ್ಞಾನೇಶ್ವರೀ ಗ್ರಂಥ ಪರಿಶೋಧಕ.

ಪ್ರಕಟಿತ ಕೃತಿಗಳು:

1. ಶ್ರೀ ಗಯಾಕ್ಷೇತ್ರ ಮಹಾತ್ಮ್ಯವು ಎಂಬ ದಕ್ಷಿಣಕಾಶಿ ಉಪ್ಪಿನಂಗಡಿ ಕುಮಾರಧಾರಾ ನೇತ್ರಾವತೀ ಸಂಗಮಸ್ಥಳ ಮಹಾತ್ಮ್ಯವು (ಅನುವಾದಿತ) 1910/88
2. ಸುನೀತಿ ಭಾಗವತ.

ಟಿಪ್ಪಣಿ: ಇವರ ಕೆಲವು ಕೃತಿಗಳ ಹಸ್ತಪ್ರತಿಗಳು ಪರ್ತಗಾಳ ಮಠದಲ್ಲಿವೆಯಂತೆ.

(72) ಆಚಾರ್ಯ ವಿಠ್ಠಲ ನಾರಾಯಣ [ಆಚಾರ್ಯ ವಿ.ನಾ.] ಶಿರಸಿ (ಜ: 8-8-1921, ಮ: 15-7-2009) ಮೆಟ್ರಿಕ್ಯುಲೇಶನ್, ಹಿಂದೀ ರಾಷ್ಟ್ರಭಾಷಾ ವಿಶಾರದ ಶಿಕ್ಷಣ. ವೈದಿಕ,

ಜ್ಯೋತಿಷಿ. ಸಾಮಾಜಿಕ ಕಾರ್ಯಕರ್ತ. ತಂದೆ ನಾರಾಯಣ ಆಚಾರ್ಯ ಶಿರಸಿ. ತಾಯಿ ಪದ್ಮಾವತಿ. ಪತ್ನಿ ರುಕ್ಮಿಣಿ.

ಪ್ರಕಟಿತ ಕೃತಿಗಳು:

1. ಅಮೃತ ಬಿಂದುಗಳು–ನುಡಿಮುತ್ತುಗಳು 1967/112
2. ಈಶ್ವರಮ್ಮ 1999/166
3. ತಂತ್ರಪ್ರಕಾಶ 1960
4. ದಕ್ಷಿಣಾಪಥದ ಸಂತರು 1967/110
5. ಬಾಬಾ 1968
6. ಬುಲ್‌ಬುಲ್ 1941
7. ಭಗವಾನ್ ಶ್ರೀ ಸತ್ಯಸಾಯೀ ವ್ರತಪೂಜಾವಿಧಿ 1994/30
8. ಭಾರತೀಸ್ತವ 1946
9. ಯಾತ್ರಿಕನ ಪತ್ರಗಳು (ಸಚಿತ್ರ) 1963/120
10. ರತ್ನಮಾಲಾ–ಅಷ್ಟೋತ್ತರ ಶತನಾಮಗಳು 1967/122
11. ಸಂಘವಾಹಿನ ....

(73) **ಆತ್ಮಾರಾಮ (ರಾಮಕೃಷ್ಣ ಹೆಗಡೆ) ಅಮ್ಮಿನಳ್ಳಿ, ಶಿರಸಿ** (ಜ: 1903/ಮ: 1972) ಅಲ್ಪ ಶಿಕ್ಷಣ, ಸಂಸ್ಕೃತಾಭ್ಯಾಸ, ಕನ್ನಡದ ಕಟ್ಟಾಭಿಮಾನಿ. 'ಸದ್ಗುರು ಸೇವಾ ಸಾಹಿತ್ಯ ಮಾಲೆ' ಸ್ಥಾಪಕ. 'ಆತ್ಮರಾಮ ಪಾರಿತೋಷಕ ಟ್ರಸ್ಟ್' ಸ್ಥಾಪಕ. ಅದರ ನಿಧಿಯ ಬಡ್ಡಿಯಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ. ವಿರಕ್ತ. ಅವಿವಾಹಿತ. ತಂದೆ ವೆಂಕಪ್ಪ ಹೆಗಡೆ.

ಪ್ರಕಟಿತ ಕೃತಿ :

1. ಅಮರ ಪ್ರಭೆ–ವಿದ್ವಾಂಸರ ಲೇಖನ ಸಂಗ್ರಹ ....
2. ಕವನ ಮಾಲಿಕೆ–100 ಕವನಗಳು 1953/120
3. ಗರತಿ–ಮಹಿಳಾ ದಿಗ್ದರ್ಶನ ....
4. ನನ್ನ ಬಾಳು–ಕಾದಂಬರಿ 1952/123
5. ಪುಷ್ಪಾಂಜಲಿ–ಹಾಡು, ಪದ್ಯಗಳು ....
6. ರುಕ್ಮಾಂಗದ ಚರಿತ್ರೆ–ಯಕ್ಷಗಾನ ಪ್ರಸಂಗ ....
7. ವನಿತಾ ಗೀತಭಂಡಾರ 1951/116
8. ವಿವಿಧಾವಳಿಗಳು 1953
9. ವಿವೇಕ ವಿಜಯ–ಸಟೀಕಾ ಯಕ್ಷಗಾನ ಪ್ರಸಂಗ ....
10. ಶತಾಕ್ಷರೀ ಜಪವಿಧಿ–ಸಂಗ್ರಹಿತ ....
11. ಶುಭ ಶೋಭನ ಗೀತಾಮಂಜರಿ 1945/144
12. ಶ್ರೀ ಗಾಯತ್ರೀ ಅಷ್ಟೋತ್ತರ– ಶತಾಕ್ಷರೀ ಜಪವಿಧಿ ....
13. ಶ್ರೀ ಗುರುಗೀತಾ 1949/106
14. ಸತೀಶಕ್ತಿ–ಏಕಾಂಕ ನಾಟಕ ....
15. ಸತೀಶಕ್ತಿ ಅರ್ಥಾತ್ ಯಮನ ಸೋಲು–ಯಕ್ಷಗಾನ ಪ್ರಸಂಗ 1951/54
16. ಸಂಗೀತ ಬೋಧಾಸ್ಕಂದ–ಸ್ವರ ಪ್ರಸ್ತಾರ ಸಹಿತ.............................
17. ಸದ್ಗುರು ಪಂಚಾಯತನ ಪದ್ಯಮಾಲೆ ಭಾಗ–1 .....(1)1940,(2)1949/50
18. ಸದ್ಗುರು ಪಂಚಾಯತನ ಪದ್ಯಮಾಲೆ ಭಾಗ–2 ....1973/80

(74) **ಉಭಯಕರ ಸುಬ್ರಾವ ಗೋಪಾಲ, ಹುಬ್ಬಳ್ಳಿ** (ಜ: 1851, ಮ: 1929) ಮೆಟ್ರಿಕ್ ತನಕ ಶಿಕ್ಷಣ. ಹುಬ್ಬಳ್ಳಿಯಲ್ಲಿ ಹತ್ತಿ ವ್ಯಾಪಾರಿ. ಸಿದ್ಧಾರೂಢರ ಭಕ್ತ. ತಂದೆ ಗೋಪಾಲ ಉಭಯಕರ ಮಲ್ಲಾಪುರ ಹೊನ್ನಾವರ.

ಪ್ರಕಟಿತ ಕೃತಿಗಳು:

1. ಪ್ರಾತಃ ಸ್ಮರಣ ....
2. ರಾಸಕ್ರೀಡೆ ....
3. ಶ್ರೀಕೃಷ್ಣ ಪ್ರೇಮಲಹರಿ–ಮರಾಠಿ ಭಕ್ತಿಗೀತೆಗಳು ....
4. ಶ್ರೀಕೃಷ್ಣ ಪ್ರೇಮಾಂಜಲಿ–ಕನ್ನಡ ಭಕ್ತಿಗೀತೆಗಳು ....
5. ಶ್ರೀಕೃಷ್ಣ ವ್ರತೋತ್ಸವ–ರಮಾವಲ್ಲಭದಾಸರ ಭಜನೆಗಳ ಸಂಗ್ರಹ 1913

(75) **Kantak Sarvottam Mumbai** (DOD: 1950) Father-Ganesh Kantak Ankola. Wife-Sharona.

ಟ್ಷೆಭ್ಕಫಿಔತೆ ಭ್ಟಿ: ಫಿಡ್ಲೆಖಿಚಿಣಿಫಿ–ಡೆಗ್ಕೆಕ ಭಿಣಡಿ 1934/102

(76) **ಕಾಮತ ಎಸ್.ವಿ. ಶಿರಸಿ** (ಸು.1890–1960) ಶಿರಸಿ ಮಾರಿಕಾಂಬಾ ಹೈಸ್ಕೂಲು ಮುಖ್ಯಾಧ್ಯಾಪಕ. ಹೆಸರು ಶ್ರೀನಿವಾಸ. ತಂದೆ ವೆಂಕಟರಮಣ.

ಪ್ರಕಟಿತ ಕೃತಿಗಳು:

1. ಕನ್ನಡ ವ್ಯಾಕರಣ ಮತ್ತು ಲೇಖನ ಭಾಗ–1 .... 1938/104
2. ಕನ್ನಡ ವ್ಯಾಕರಣ ಮತ್ತು ಲೇಖನ ಭಾಗ–2........................... 1944/104
3. Befitting End to Hitler.. 1935
4. Grammar in English.. 1940

ಟಿಪ್ಪಣಿ: ಕನ್ನಡ ಪುಸ್ತಕಗಳ ಪ್ರಕಾಶಕರು: ಎ.ಆರ್. ಕಾಮತ ಶಿರಸಿ.

(77) **ಕಾಮತ ಕೃಷ್ಣಾನಂದ (ಡಾ) ಹೊನ್ನಾವರ** (ಜ: 29–9–1934, ಮ: 20–2–2002) M.Sc., D.Ed., Ph.D. (ನ್ಯೂಯಾರ್ಕ್ ಯೂನಿವರ್ಸಿಟಿ) ಪದವೀಧರ. ಉದಯಪುರ ವಿಶ್ವವಿದ್ಯಾಲಯದಲ್ಲಿ Class I Officer-Scientists Pool (1966-1969). Common wealth Institute of Biological Control, Bangalore ನಲ್ಲಿ ಕೀಟ ನಿಯಂತ್ರಣಾಧಿಕಾರಿಯಾಗಿ ಪಶ್ಚಿಮ ಬಂಗಾಲದ ಪ್ಲಾಸಿಯಲ್ಲಿ 1969–70ರಲ್ಲಿ ಕಾರ್ಯ ನಿರ್ವಹಣೆ. ನಂತರ ಬೆಂಗಳೂರಿನಲ್ಲಿ 30 ವರ್ಷ ಸ್ವಂತದ Scientific Photo Lab ನಿರ್ವಹಣೆ. ಸಂಶೋಧಕ. ವೈಜ್ಞಾನಿಕ ಛಾಯಾಚಿತ್ರಗ್ರಾಹಕ. ತಂದೆ ಲಕ್ಷ್ಮಣ ಕಾಮತ ಹೊನ್ನಾವರ. ತಾಯಿ ರಮಾಬಾಯಿ. ಪತ್ನಿ ಡಾ. ಜ್ಯೋತ್ಸ್ನಾ (ಗ್ರಂಥಕರ್ತೆ)

ಪ್ರಕಟಿತ ಕೃತಿಗಳು: **(24)**

ಅ. ಪ್ರವಾಸ ಸಾಹಿತ್ಯ

1. ನಾಕಂಡ ಕರ್ನಾಟಕ–ಸಾಂಸ್ಕೃತಿಕ ನೋಟಗಳು......................... 2008/250
2. ನಾನೂ ಅಮೇರಿಕೆಗೆ ಹೋಗಿದ್ದೆ .... 1969(8) 2002/184
3. ನಾ ರಾಜಸ್ಥಾನದಲ್ಲಿ–2 ಆವೃತ್ತಿಗಳು 1974/255
4. ಪ್ರವಾಸಿಯ ಪ್ರಬಂಧಗಳು–2 ಆವೃತ್ತಿಗಳು 2001/126
5. ಬಸ್ತರ ಪ್ರವಾಸ–ಗಿರಿಜನರ ಪರಿಚಯ–2 ಆವೃತ್ತಿಗಳು 1991/122
6. ಮಧ್ಯಪ್ರದೇಶದ ಮಡಿಲಲ್ಲಿ–2 ಆವೃತ್ತಿಗಳು 1993/135
7. ವಂಗದರ್ಶನ–2 ಆವೃತ್ತಿಗಳು 1971/243

ಬ. ಪಕ್ಷಿ, ಪ್ರಾಣಿ, ಪರಿಸರ ಸಾಹಿತ್ಯ

1. ಇರುವೆಯ ಇರವು–ಕೀಟವಿಸ್ಮಯ 1999/63
2. ಕಾಗೆಯ ಕಾಯಕ–ಕಾಕಲೋಕ ಪರಿಚಯ 1999/55
3. ಕೀಟಜಗತ್ತು–2 ಆವೃತ್ತಿಗಳು 1992/164
4. ಪರಿಸರ ಪರ್ಯಟನ–ಪರಿಸರ ರಕ್ಷಣೆಗಾಗಿ ಸಲಹೆ ಸೂಚನೆಗಳು 2009/128
5. ಪಶುಪಕ್ಷಿ ಪ್ರಪಂಚ–2 ಆವೃತ್ತಿಗಳು 1990/160
6. ಪ್ರಾಣಿ ಪರಿಸರ .... 1975(7) 1999/185
   (ಶಿಲ್ಪದಲ್ಲಿ ಮೂಡಿಬಂದಿರುವ ಪ್ರಾಣಿ ಪರಿಚಯ)
7. ಮರುಪಯಣ–ಪರಿಸರ ದುರಂತ 2001/152
8. ಸರ್ಪಸಂಕುಲ–ಉರಗವರ್ಗ ಪರಿಚಯ 2002/62
9. ಸಸ್ಯಪರಿಸರ–2 ಆವೃತ್ತಿಗಳು 1994/98
10. ಸಸ್ಯ ಪ್ರಪಂಚ–2 ಆವೃತ್ತಿಗಳು 1992/63

ಕ. ಇತರ

1. ಅಕ್ಷತ–ಉತ್ತರ ಕನ್ನಡ ಜನಾಂಗೀಯ ಅಧ್ಯಯನ 1990/120
2. ಕಾಲರಂಗ–ಜನಾಂಗ ಪರಿಚಯ 1982/160
3. ಪ್ರೇಯಸಿಗೆ ಪತ್ರಗಳು–2 ಆವೃತ್ತಿಗಳು 1990/116
4. ಭಗ್ನಸ್ವಪ್ನ–ಕಾದಂಬರಿ–2 ಆವೃತ್ತಿಗಳು 1971/123
5. ಕಾಮತರ ಕುಂಚಪ್ರಪಂಚ ಭಾಗ–1 .... 2012/126
   (ಆದಿವಾಸಿ ಜನಜೀವನ ಕುರಿತ ರೇಖಾಚಿತ್ರಗಳ ಅಧ್ಯಯನ)

ಡ. ಕೊಂಕಣಿ

1. ಕೊಂಕಣ್ಯಾಲಿ ಕಾವಿಕಲಾ–2 ಆವೃತ್ತಿಗಳು..................................2000/136
2. ಪತ್ರ ಪರಾಚಿ–ಮಗ ವಿಕಾಸನಿಗೆ ಬರೆದ ಆಯ್ದ ಪತ್ರಗಳು 2004/152

ಅಪ್ರಕಟಿತ ಕೃತಿ: ಪತ್ರ ಪ್ರಬಂಧಗಳು (ಜೀವನ ದರ್ಶನ) ಕಾಮತರ ಕುಂಚಪ್ರಪಂಚ ಭಾಗ–2 (ಆದಿವಾಸಿ ಜನಜೀವನ ಕುರಿತ ರೇಖಾಚಿತ್ರಗಳ ಅಧ್ಯಯನ)

ಪ್ರಶಸ್ತಿ/ಗೌರವ:

1. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1969,1975,1991
2. ಉ.ಕ. ಜಿಲ್ಲಾ 9ನೇ ಕನ್ನಡ ಸಾಹಿತ್ಯ ಸಮ್ಮೇಳನ
   ಸರ್ವಾಧ್ಯಕ್ಷತೆ ಹೊನ್ನಾವರ 1997
3. ಟಿ.ಎಂ.ಎ. ಪೈ ಉತ್ಕೃಷ್ಟ ಕೊಂಕಣಿ ಪುಸ್ತಕ ಪ್ರಶಸ್ತಿ–
   ಕೊಂಕಣ್ಯಾಲಿ ಕಾವಿಕಲಾ ಕೃತಿಗೆ 2006
4. ಕಮ್ಮಟಿಗ: ಸಂಸ್ಮರಣ ಗ್ರಂಥ. ಸಂ.: ಆರ್. ಶೇಷಶಾಸ್ತ್ರಿ 2004/280
5. ಹೀಂಗಿದ್ರು ನಮ್ ಕಮ್ತಿ–ಸ್ಮೃತಿಗಳು.
   ಸಂ.: ಡಾ. ಜ್ಯೋತ್ಸ್ನಾ ಕಾಮತ 2004/103
6. ನಾನೂ ಅಮೇರಿಕೆಗೆ ಹೋಗಿದ್ದೆ ಕೃತಿ ಕ.ವಿ.ವಿ.: ಬಿ.ಎ., ಬಿ.ಕಾಂ., ಬಿ.ಎಸ್ಸಿ.
   ಕೊನೆಯ ವರ್ಷದ ಪೂರಕ ಪಠ್ಯವಾಗಿತ್ತು.
7. ಪ್ರಾಣಿ ಪರಿಸರ ಕೃತಿ ಬೆಂ.ವಿ.ವಿ.: ಬಿ.ಎ., ಬಿ.ಕಾಂ. ಮೊದಲನೇ ವರ್ಷದ ಪಠ್ಯವಾಗಿತ್ತು.

ಟಿಪ್ಪಣಿ: 'ನಾನೂ ಅಮೇರಿಕೆಗೆ ಹೋಗಿದ್ದೆ' ಕೃತಿ ಕೊಂಕಣಿಯಲ್ಲಿ ಅನುವಾದಗೊಂಡಿದೆ. 'ಹಾಂವೂಯಿ ಅಮೇರಿಕಾಕ ಗೆಲ್ಲೆಲೊಂ' : ರಾಮಚಂದ್ರ ಗಣೇಶ ಭಂಡಾರಿ ಮುಂಬಯಿ. ಲಿಪಿ: ಕನ್ನಡ 2012/86

(78) **ಕಾಮತ ಪಿ.ಎಂ. ಕಿಮಾನಿ ಕುಮಟಾ** (ಜ: 1940, ಮ: 2010) ಹೈಸ್ಕೂಲು ಶಿಕ್ಷಣ. ಅಂಚೆ ಕಚೇರಿಯಲ್ಲಿ ಗುಮಾಸ್ತ. ಹೆಸರು ಪುಂಡಲೀಕ. ತಂದೆ ಮಾಧವ ಕಾಮತ ಕಿಮಾನಿ. ಪತ್ನಿ ವಿಮಲಾ.

ಪ್ರಕಟಿತ ಕೃತಿ: ಮಧುಸಂಗಮ-ಭಾವಗೀತೆಗಳು (ಸಂಪಾದಿತ) 1979/32

(79) Kamat V. V. (Dr.) Mumbai (B:1884, D:1970) Ph.D. from Edinburg University England. Educational Officer in Dharwad. Principal of Tilak Shikshan Vidyalaya Pune. Guide to Ph.D. students. Name-Venkatrao. Father-Vithal Kamat Kadiye Karwar. Mother Rukmini. Wife Krishnabai.

mÉëMüÌOûiÉ M×üÌiÉrÉÉÆ:

1+. Measuring Intelligence of Indian Children .... 1940(4) 1967/322

2. ಹಿಂದಿ ಹುಡುಗರ ಬುದ್ಧಿಮಾಪನವು

3. ÌWûÎlS qÉÑsÉÉÇcÉå oÉÑÎ®qÉÉmÉlÉ-qÉUÉÌPûû..................................... 1936/101

+ This book is translated into several Indian languages including Kashmiri

(80) **ಕಾಮತ ವೆಂಕಟದಾಸ ಅಚ್ಯುತ ಕಾರವಾರ** (ಜ: 1900, ಮ: 1973) ಅಂಚೆ ಇಲಾಖೆ ಉದ್ಯೋಗಿ. ಕನ್ನಡ, ಮರಾಠಿ, ಕೊಂಕಣಿ ಭಾಷೆಗಳಲ್ಲಿ ಕೀರ್ತನಕಾರ. ತಂದೆ ಅಚ್ಯುತ ಕಾಮತ ಕಾರವಾರ. ತಾಯಿ ಯಶೋದಾ. ಪತ್ನಿ ಪದ್ಮಾವತಿ.

ಪ್ರಕಟಿತ ಕೃತಿ: ಆರ್ಯರ ದಿನಚರ್ಯೆ-ಅನುವಾದಿತ
(ಮರಾಠಿ ಮೂಲ: ಆರ್ಯಾಂಚೀ ದಿನಚರ್ಯಾ.
ಲೇ.: ಡಾ.ದತ್ತೋಪಂತ ಪಟವರ್ಧನ ಬುವಾ)-5 ಆವೃತ್ತಿಗಳು 1959/154

(81) **ಕಾಮತ ಶಾಂತರಾಮ ವಿಠ್ಠಲ ಕಾರವಾರ** (ಜ: 25-12-1887, ಮ: 11-12-1978) B.A. ಪದವೀಧರ. ಕಾರವಾರ ಸರಕಾರೀ ಹೈಸ್ಕೂಲು ಮುಖ್ಯಾಧ್ಯಾಪಕ. ತಂದೆ ವಿಠ್ಠಲ ಕಾಮತ ಕಡಿಯೆ ಕಾರವಾರ. ತಾಯಿ ರುಕ್ಮಿಣಿ. ಪತ್ನಿ ಸೀತಾ.

ಪ್ರಕಟಿತ ಕೃತಿ: ಚೌಥೆಜಡಿ ಘ್ರಾಕ್ರಿ-ಮರಾಠಿ ಕವನ ಸಂಕಲನ . 1948(4) 2010/28

(82) **ಕಾಮೇಶ್ವರ ನಾರಾಯಣ, ಮಾಸ್ಕೇರಿ, ಗೋಕರ್ಣ** (ಜ: 1870/ಮ: 1941) ಧಾರವಾಡದಲ್ಲಿ ತರಬೇತಿ ಪಡೆದ ಶಿಕ್ಷಕ. ಕೆಲಕಾಲ ಶಿರಸಿ ಕನ್ನಡ ಶಾಲಾ ಮುಖ್ಯೋಪಾಧ್ಯಾಯ, ಯಕ್ಷಗಾನ ಕಲಾವಿದ.

ಪ್ರಕಟಿತ ಕೃತಿಗಳು :
1. ಕಂಸವಧೆ (ಶ್ರೀಕೃಷ್ಣ ಲೀಲೆ)-ಯಕ್ಷಗಾನ ....
2. ದೇವಯಾನಿ ಕಲ್ಯಾಣ-ಯಕ್ಷಗಾನ ....
3. ಭಕ್ತ ವಿಜಯ-ಯಕ್ಷಗಾನ 1929/49

(83) **ಕಾಯ್ಕಿಣಿ ಗೌರೀಶ ಗೋಕರ್ಣ, ಕುಮಟಾ** (ಜ: 12-9-1912, ಮ: 14-11-2003) B.A. ಮೊದಲನೇ ವರ್ಷದ ತನಕ ಶಿಕ್ಷಣ. ಹಿಂದಿ ರಾಷ್ಟ್ರಭಾಷಾ

ವಿಶಾರದ. 1945ರಲ್ಲಿ School Teachers Course ಪರೀಕ್ಷೆಯಲ್ಲಿ ಮುಂಬಯಿ ಪ್ರಾಂತಕ್ಕೆ ಪ್ರಥಮ. ಗೋಕರ್ಣದ ಎ.ವಿ. ಹೈಸ್ಕೂಲಿನಲ್ಲಿ 2 ವರ್ಷ (1937–39), ಬಂಕಿಕೊಡ್ಲಿನ ಆನಂದಾಶ್ರಮ ಹೈಸ್ಕೂಲಿನಲ್ಲಿ 15 ವರ್ಷ (1939–1954), ಗೋಕರ್ಣದ ಭದ್ರಕಾಳಿ ಹೈಸ್ಕೂಲಿನಲ್ಲಿ 22 ವರ್ಷ (1954–1976) ಕಾಲ ಶಿಕ್ಷಕ. 1973ರಲ್ಲಿ ಮಾಧ್ಯಮಿಕ ಶಿಕ್ಷಕರ ಮತದಾರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಸ್ಪರ್ಧೆ–ಸೋಲು. ಧಾರವಾಡದ 'ಬೆಳಕು' ವಾರಪತ್ರಿಕೆ ಸಂಪಾದಕ–2 ವರ್ಷಗಳು. 1950ರ ದಶಕದ ಪ್ರಾರಂಭದಲ್ಲಿ ಕಾರವಾರದ ನಾಗರಿಕ ವಾರಪತ್ರಿಕೆ ಸಂಪಾದಕ. 1955–1971ರ ಅವಧಿಯಲ್ಲಿ ಅಂಕೋಲಾದ 'ಜನಸೇವಕ' ವಾರಪತ್ರಿಕೆಯಲ್ಲಿ ಅಂಕಣಕಾರ. ನಂತರ ಸಮನ್ವಯ, ಸಂಯುಕ್ತ ಕರ್ನಾಟಕ, ತರಂಗ ಪತ್ರಿಕೆಗಳಲ್ಲಿ ಅಂಕಣಕಾರ. ಗೋಕರ್ಣದಲ್ಲಿ ಮಿತ್ರರೊಂದಿಗೆ 'ಪರ್ಣಕುಟಿ'ಗ್ರಂಥಮಾಲೆಯಿಂದ ಪುಸ್ತಕ ಪ್ರಕಟಣೆ. ತಂದೆ ವಿಠ್ಠಲರಾವ್ ಕಾಯ್ಕಿಣಿ, ತಾಯಿ ಸೀತಾಬಾಯಿ. ಪತ್ನಿ ಶಾಂತಾ.

ಪ್ರಕಟಿತ ಕೃತಿಗಳು: (77)

ಅ. ಜೀವನ ಚಿತ್ರ–ಚರಿತ್ರೆ, ಸ್ಥಳ ಪರಿಚಯ

1. ಕರ್ನಾಟಕದ ಸಿಂಡ್ರೆಲಾ–ಉತ್ತರ ಕನ್ನಡ ಜಿಲ್ಲೆ 1962/40
2. ಗೋಕರ್ಣ ಸಚಿತ್ರ (ಐ.ಬಿ.ಎಚ್. ಪ್ರಕಾಶನ) 1972/44
3. ಗೋಕರ್ಣ ಕ್ಷೇತ್ರ ಪರಿಚಯ 1972/64
4. ಗೋಕರ್ಣದ ಕಥೆ (ಐ.ಬಿ.ಎಚ್. ಪ್ರಕಾಶನ) 1983/40
5. ಥಾಮಸ್ ಎಡಿಸನ್ (ಕ.ವಿ.ವಿ.ಯಲ್ಲಿ ಬಿ.ಎ.–3 ಪಠ್ಯ) 1974/122
6. ಪಶ್ಚಿಮದ ಪ್ರತಿಭೆ ಭಾಗ–1 .... 1950/154
7. ಪಶ್ಚಿಮದ ಪ್ರತಿಭೆ ಭಾಗ–2 .... 1951/107
8. ಪಶ್ಚಿಮದ ಪ್ರತಿಭೆ ಭಾಗ–3 (ಪಾಶ್ಚಿಮಾತ್ಯ ಮಹಾಪುರುಷರು) .. 1953/182
9. ಪಾಂಡೇಶ್ವರ ಗಣಪತಿರಾಯರು 1983/48
10. ಭಾರತೀಯ ವಿಜ್ಞಾನಿಗಳು ಭಾಗ–1 .... 1964/130
11. ಭಾರತೀಯ ವಿಜ್ಞಾನಿಗಳು ಭಾಗ–2 .... 1965/120
12. ಶ್ಯಾಮರಾವ ವಿಠ್ಠಲ ಕಾಯ್ಕಿಣಿ, ಜೀವನ ಮತ್ತು ಕಾರ್ಯ 1972/98
13. ಸತ್ಯಾರ್ಥಿ 1953/140
14. Shamrao Vitthal Kaikini 1981/50

ಆ. ಅನುವಾದ: ಇತರ ಭಾಷೆಗಳಿಂದ ಕನ್ನಡಕ್ಕೆ

1. ಅಖಿಲ ಭಾರತ Radical Democratic ಪಾರ್ಟಿಯ ಚುನಾವಣೆ ಘೋಷಣೆ (ಮೂಲ: ಅಂಗ್ರೇಜಿ) 1946/25
2. ಕೇಶವಸುತರು–ಮರಾಠಿ ಕವಿ ಕೇಶವಸುತರ ಚರಿತ್ರೆ (ಅಂಗ್ರೇಜೀಮೂಲ: ಪ್ರಭಾಕರ ಮಾಚ್ವೆ) 1970/85
3. ಚಿದಂಬರ ಸ್ವಾರಸ್ಯ–ನಾಟಕ (ಆಂಗ್ಲ ಮೂಲ: The Great Adventure by Arnold Benet)........ 1997/60
4. ದೇವತಾತ್ಮಾ–ಪ್ರವಾಸಕಥನ (ಹಿಂದೀ ಮೂಲ:ದೊಡ್ಮನೆ ಮಹಾದೇವಿಯಮ್ಮನವರ ಹಿಮಾಲಯ ಪ್ರವಾಸ ಕಥನ) 1953/120
5. ನಾನಾಲಾಲ–ಗುಜರಾತಿ ಕವಿಯ ಚರಿತ್ರೆ .... 1977/80 (ಆಂಗ್ಲಮೂಲ: U.B. Maniyar)

6. ಪಂಜಾಬೀಕಥೆಗಳು–ವಿವಿಧ ಲೇಖಕರ 21 ಕಥೆಗಳು
(ಮೂಲ:ಪಂಜಾಬಿ) 1971 (2) 1990/220
7. ಪಾಶ್ಚಾತ್ಯ ವಿಶ್ವದ ಆಖ್ಯಾಯಿಕೆಗಳು (ಮೂಲ: ಇಂಗ್ಲೀಷ್) 1972/162
8. ಬರ್ಲಿನ್ ಬಂದಿತು ಗಂಗೆಯ ತಡಿಗೆ–ಕಾದಂಬರಿ
(ಮರಾಠಿ ಮೂಲ: ಭಾ.ದ. ಖೇರ) 1974/218
9. ಬಾಳಿನ ಗುಟ್ಟು–ಜೀವನ ವಿಜ್ಞಾನ
(ಆಂಗ್ಲಮೂಲ: The Science of living by Alfred Adler) 1943/162
10. ಬಿಳಿ ಕೊಕ್ಕರೆ (ಆಂಗ್ಲಮೂಲ: 6 ಅಮೇರಿಕನ್ ಕಥೆಗಳು) 1957/155
11. ಭವಿಷ್ಯತ್ಕಾವ್ಯ (ಆಂಗ್ಲಮೂಲ: Future Poetry by Sri Aurobindo)...1998/228
12. ಭಾರತೀಯ ತತ್ತ್ವಜ್ಞಾನ
(ಮರಾಠಿ ಮೂಲ: ಎಸ್.ಜಿ. ಸರದೇಸಾಯಿ)............................1982/216
13. ಭಾರತೀಯ ಸಂಸ್ಕೃತಿ: ಸಂಕೇತಗಳ ಸ್ಥಿತ್ಯಂತರ
(ಮರಾಠಿ ಮೂಲ: ಶಂ.ಬಾ.ಜೋಶಿ) 1999/124
14. ಮಣ್ಣಿನ ಮನುಷ್ಯ–ಕಾದಂಬರಿ (ಒರಿಯಾ ಮೂಲದ ಕಾಳಿಂದೀಚರಣ
ಪಾಣಿಗ್ರಾಹಿಯವರ 'ಮಾಟಿರ ಮಾನಿಸ' ಕೃತಿಯ ಹಿಂದೀ ಆವೃತ್ತಿ) 1962/200
15. ಮಲೆನಾಡಿಗರು–ಕಾದಂಬರಿ
(ಆಂಗ್ಲಮೂಲ: The Woodlanders by Thomas Hardy) 1974/452
16. ವ್ಯಾಸಪರ್ವ–ಮಹಾಭಾರತದ ಹತ್ತು ಪಾತ್ರಗಳ ವಿಶ್ಲೇಷಣೆ
(ಮರಾಠಿ ಮೂಲ: ದುರ್ಗಾ ಭಾಗವತ) 1992/188

ಇ. ಅನುವಾದ: ಇತರ ಭಾಷೆಗಳಿಂದ ಮರಾಠಿಗೆ

1. ಅಗ್ನಿವರ್ಣ–ಕಾದಂಬರಿ (ಮೂಲ: ರಂ.ಶ್ರೀ.ಮುಗಳಿಯವರ ಅಗ್ನಿವರ್ಣ) /250
2. ಕಾನಡೀ ಸಾಹಿತ್ಯಾಚಾ ಇತಿಹಾಸ
(ಮೂಲ: ರಂ.ಶ್ರೀ. ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ) .... /350
3. ದಯಾ ಚಾ ದಿವಾ
(ಮೂಲ: ರಮೇಶ ಕುಲಕರ್ಣಿಯವರ ಭಗವಾನ್ ನಿತ್ಯಾನಂದ) .... /130
4. ಮಾಝಿ ರಸಯಾತ್ರಾ
(ಮೂಲ: ಮಲ್ಲಿಕಾರ್ಜುನ ಮನಸೂರರ ಆತ್ಮಚರಿತ್ರೆ) .... /140

ಈ. ಸಾಹಿತ್ಯ ಸಿದ್ಧಾಂತ ಮತ್ತು ವಿಮರ್ಶೆ

1. ಆರ್ಕೆಸ್ಟ್ರಾ ಮತ್ತು ತಂಬೂರಿ 1993/107
2. ಉತ್ತರಣ: ವಿಷ್ಣು ನಾಯ್ಕರ ಕಾವ್ಯ ಸಮೀಕ್ಷೆ................................. 1997/60
3. ಕಟಾಕ್ಷ: ವಿಮರ್ಶೆ ವೈಚಾರಿಕ ಬರಹಗಳು 1981/137
4. ಕಂಪಿನ ಕರೆ: ಬೇಂದ್ರೆ ಕಾವ್ಯದೃಷ್ಟಿ–ಒಂದು ಅಧ್ಯಯನ..............1980/160
5. ಗುಣಗೌರವ: ವಿಮರ್ಶಾ ಲೇಖನ ಸಂಗ್ರಹ 1979/180
6. ಚೆನ್ನವೀರ ಕಣವಿ ಅವರ ಕಾವ್ಯದೃಷ್ಟಿ 1977/105
7. ದಿನಕರ ದೇಸಾಯಿಯವರ ಕಾವ್ಯ 1995/100
8. ನವ್ಯದ ನಾಲ್ಕು ನಾಯಕರು 1994/60
9. ಪ್ರಜ್ಞಾನೇತ್ರದ ಬೆಳಕಿನಲ್ಲಿ... 1982/101
10. ಮಾನವ್ಯ ಕವಿ: ಸನದಿ ಕಾವ್ಯ ಸಮೀಕ್ಷೆ .... 1995 (2)2012/92

11. ವಾಲ್ಮೀಕಿ ತೂಕಡಿಸಿದಾಗ ಮತ್ತು
ಇತರ ಸಾಹಿತ್ಯ ಸಮೀಕ್ಷಾ ಪ್ರಬಂಧಗಳು 1986/136
12. ವಿಮರ್ಶೆಗೆ ಯಾವ ದಾರಿ?... 1994/40

ಉ. ವಿಚಾರ ಸಾಹಿತ್ಯ

1. ಗಂಡು-ಹೆಣ್ಣು (ನಿಚ್ಚಳ ನೋಟ: ತತ್ವಜ್ಞಾನಿಗಳು, ಕವಿಗಳು
ಕಂಡಿರುವ ವಿಚಾರಮಂಥನ) 1948/92
2. ಗ್ರೀಕ್ ದಾರ್ಶನಿಕರು 1994/44
3. ನವಮಾನವತಾವಾದ 1993/88
4. ನಾಸ್ತಿಕನು ಮತ್ತು ದೇವರು (ಎಲ್ಲಾ ಆಚೆಯಾ ದಂಡೆ?) 1989/120
5. ಪ್ರೀತಿ .... 1946(2) 1994/80
6. ಭಾರತೀಯ ಸಂಪ್ರದಾಯಗಳು ಹಾಗೂ ಚಿಕ್ಕ ಕುಟುಂಬ .... (1)1980,
(2)1987/18
7. ಭಾರತೀಯ ಸಂಸ್ಕೃತಿನದಿ ಆಧ್ಯಾತ್ಮಿಕವೇ? 2012/40
8. ಮನೋವಿಜ್ಞಾನದ ರೂಪುರೇಖೆಗಳು 1942/140
9. ಮಾರ್ಕ್ಸವಾದ 1949/140
10. ಲೋಕಾಯತ (ಚಾರ್ವಾಕ ದರ್ಶನ) 1995/116
11. ವಿಚಾರವಾದ 1958, 1965, 1971, 2011/104
12. ಸ್ವಾತಂತ್ರ್ಯೋತ್ತರ ವಿಚಾರಸಾಹಿತ್ಯ 1982/90

ಊ. ಇತರ

1. ಆಕಾಶ ನಾಟಕಗಳು-5 ಬಾನುಲಿ ರೂಪಕಗಳು 1982/66
2. ಒಲುಮೆಯ ಒಗಟು-ನಾಟಕ.. 1943/40
3. ಕರ್ಣಾಮೃತ-4 ಬಾನುಲಿ ರೂಪಕಗಳು 1980/92
4. ಕ್ರೌಂಚಧ್ವನಿ-6 ಬಾನುಲಿ ಗೀತರೂಪಕಗಳು ....1963(3) 1980/80
5. ಗಾಂಧಿತತ್ತ್ವ ವಿಶ್ಲೇಷಣೆ (ಸಹಲೇಖಕ) 1970/127
6. ದೇವಿಕೊಟ್ಟ ಬೆಳಕು-ರೇಡಿಯೋ ನಾಟಕಗಳು 1980/46
7. ಮೀನಾಕ್ಷಿ-ಕೊಂಕಣಿ ಕವನ ಸಂಕಲನ 1974/60
8. ರಾಮಾಯಣ ಚಿಂತನ (ಎಂ.ರಾಜಗೋಪಾಲಾಚಾರ್ ಜೊತೆ) 1979/50
9. ಶಾಂಡಿಲ್ಯ ಪ್ರೇಮಸುಧಾ-ಕನ್ನಡ ಮತ್ತು ಮರಾಠಿ ಭಜನೆಗಳು 1930/30
(ಗ್ರಂಥಕಾರರ 18ನೇ ವಯಸ್ಸಿನಲ್ಲಿ ಪ್ರಕಟ)

ಎ. ಗೌರೀಶ ಕಾಯ್ಕಿಣಿ ಸಮಗ್ರ ಸಾಹಿತ್ಯ ಸಂಪುಟಗಳು. ಸಂ.: ವಿಷ್ಣು ನಾಯ್ಕ
(ಪ್ರಕಾಶಕರು: ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲು, ಅಂಕೋಲಾ)

1. ಸಂಪುಟ-1 : ವಿಚಾರ ಸಾಹಿತ್ಯ 1993/443
2. ಸಂಪುಟ-2 : ವಿಚಾರ ಸಾಹಿತ್ಯ 1994/574
3. ಸಂಪುಟ-3 : ಪಾಶ್ಚಾತ್ಯ ಪ್ರತಿಭೆ 1994/462
4. ಸಂಪುಟ-4 : ಸಾಹಿತ್ಯ ಸಮೀಕ್ಷೆ 1995/406
5. ಸಂಪುಟ-5 : ವಿಚಾರ ವಿಮರ್ಶೆ 1996/504
6. ಸಂಪುಟ-6 : ವಿಚಾರ ವಿಮರ್ಶೆ 1997/350
7. ಸಂಪುಟ-7 : ರೂಪಕ ಮತ್ತು ನಾಟಕಗಳು 1998/394
8. ಸಂಪುಟ-8 : ಪತ್ರಿಕಾ ಲೇಖನಗಳು 1999/394

9. ಸಂಪುಟ–9 : ಪತ್ರಿಕಾ ಲೇಖನಗಳು 2001/372
10. ಸಂಪುಟ–10 : ಸಂಕೀರ್ಣ ವಿಷಯಗಳು 2002/380

ಏ. ವಾಚಿಕೆ / ಬದುಕು ಬರಹ / ಪರಿಚಯ ಕೃತಿಗಳು

1. ಗೌರೀಶ ಕಾಯ್ಕಿಣಿ ಸಾಹಿತ್ಯ ಸಮೀಕ್ಷೆ 1993/149
ಪ್ರ.: ಕರ್ನಾಟಕ ಸಾಹಿತ್ಯ ಅಕಾಡೆಮಿ
2. ಡಾ.ಗೌರೀಶ ಕಾಯ್ಕಿಣಿ–ಬದುಕು ಬರಹ 1997/118
ಲೇ: ನಾ.ಸು. ಭರತನಹಳ್ಳಿ
3. ಸಾಹಿತ್ಯ ತೀರ್ಥ ಗೌರೀಶ ಕಾಯ್ಕಿಣಿ 2002/48
ಲೇ: ಮಾಸ್ಕೇರಿ ಎಂ.ಕೆ. ನಾಯಕ
4. ಮಾತುಕತೆ: ಸಂಪಾದಕ ಎಂ.ಜಿ. ಹೆಗಡೆ 2003/80
5. ಗೌರೀಶ ಕಾಯ್ಕಿಣಿ ಸ್ಮೃತಿ ಸಂಚಯ: ಸಂ. ಡಾ.ಜಿ.ಎಂ. ಹೆಗಡೆ 2005/108
6. ಗೌರೀಶ ಕಾಯ್ಕಿಣಿ ಅವರ ಆಯ್ದ ಬರಹಗಳು 2006/250
ಪ್ರ.: ಕನ್ನಡ ಮತ್ತು ಸಂಸ್ಕೃತಿ ಇಲಾಖೆ
7. ಗೌರೀಶ ಕಾಯ್ಕಿಣಿ ಅವರ ಆಯ್ದ ಬರಹಗಳು 2006/108
ಪ್ರ.: ಅಕ್ಷರ ಪ್ರಕಾಶನ ಹೆಗ್ಗೋಡು
8. ಕಟಾಂಜನ: ಕಾಯ್ಕಿಣಿ ಸಾಹಿತ್ಯ, ಚಿಂತನೆ 2011/276
ಕುರಿತ ವಿಮರ್ಶಾತ್ಮಕ ಪ್ರಬಂಧಗಳು
9. ಗಂಡು ಹೆಣ್ಣು ಮತ್ತು ಪ್ರೀತಿ: ಗೌರೀಶ ಕಾಯ್ಕಿಣಿ ಬರಹಗಳು .. 2011/192
ಸಂ॥ ವಿಷ್ಣು ನಾಯ್ಕ
10. ಗೌರೀಶ ಕಾಯ್ಕಿಣಿ ಲೇ: ಎಂ.ಜಿ. ಹೆಗಡೆ 2012/75
ಪ್ರ.: ಕೇಂದ್ರ ಸಾಹಿತ್ಯ ಅಕಾಡೆಮಿ
11. ಗೋಕರ್ಣದ ವೈಚಾರಿಕ ಗುರು ಸಾಹಿತಿ ಗೌರೀಶ ಕಾಯ್ಕಿಣಿ
ಲೇ.: ವಾಸುದೇವ ಶಾನಭಾಗ 2012/64
12. ಗೌರೀಶ ಕಾಯ್ಕಿಣಿ ಅವರ ಬೆಲೆಬಾಳುವ ಬರಹಗಳು
ಸಂ॥ ಎಂ.ಜಿ. ಹೆಗಡೆ 2014/297
13. ಗೌರೀಶ ಕಾಯ್ಕಿಣಿ ಲೇ: ಚಿಂತಾಮಣಿ ಕೊಡ್ಲೆಕೆರೆ 2015/48

ಐ. ಅಪ್ರಕಟಿತ ಕೃತಿಗಳು

1. ಅಧಃಪಾತ–ಅನುವಾದಿತ ನಾಟಕ (ಮರಾಠಿ ಮೂಲ: ಗಡಕರಿಯವರ ಏಕಚಪ್ಯಾಲಾ)
2. ಅಂಬಾ, ಧ್ರುವಕುಮಾರ : ಪೌರಾಣಿಕ ಕೊಂಕಣಿ ಆಕಾಶವಾಣಿ ರೂಪಕಗಳು.
3. ತ್ರಿದಂಡಿ ಸಂನ್ಯಾಸ–ಅನುವಾದಿತ ನಾಟಕ (ಮರಾಠಿ ಮೂಲ: ಅಣ್ಣಾ ಸಾಹೇಬ ಕಿರ್ಲೋಸ್ಕರರವರ ಸೌಭದ್ರಾ) ಬೆಳ್ಳಿಯ ಬಟ್ಟಲು–ಅನುವಾದಿತ ನಾಟಕ (ಆಂಗ್ಲಮೂಲ: Bishop's Candle Stick) ಭೂಕೈಲಾಸ–ಅನುವಾದಿತ ನಾಟಕ. ಮಾಡಿದ್ದೊಂದು ಆದದ್ದೊಂದು–ಅನುವಾದಿತ ನಾಟಕ (ಮರಾಠಿ ಮೂಲ: ವಿದ್ಯಾಧರ ಗೋಖಲೆಯವರ ಕರಾಯಲಾಗೆಲೋ ಏಕ ಆನಿ ಝಾಲಾ ಏಕ) ರಾಜ್ಯಾರೋಹಣ–ಅನುವಾದಿತ ನಾಟಕ (ಮರಾಠಿ ಮೂಲ: ಟಿಪಣೀಸರ ಶಿಕ್ಕಾ ಕಠ್ಯಾರ)

ಪ್ರಶಸ್ತಿ/ಗೌರವ:

1. ಆದರ್ಶ ಶಿಕ್ಷಕ (ರಾಜ್ಯ ಪ್ರಶಸ್ತಿ) 1973
2. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ 1977
3. ವರ್ಧಮಾನ ಪ್ರಶಸ್ತಿ 1992

4. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ 1993
5. ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ 1993
6. ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ('ನವಮಾನವತಾವಾದ'ಕೃತಿಗೆ) 1995
7. ಸಂದೇಶ ಪ್ರಶಸ್ತಿ 1996
8. ಕೊಂಕಣಿ ಸಾಹಿತ್ಯ ಅಕಾಡಮಿ ಪ್ರಶಸ್ತಿ ('ಮೀನಾಕ್ಷಿ' ಕವನಸಂಕಲನಕ್ಕೆ) . 1996
9. ಶಂ.ಬಾ. ವಿಚಾರ ವೇದಿಕೆಯ ಸಂಶೋಧನ ಪ್ರಶಸ್ತಿ 1997
10. ಉಗ್ರಾಣ ಪ್ರಶಸ್ತಿ 1998
11. ಡಾ. ಜ.ಚ.ನಿ. ವಿಚಾರ ಸಾಹಿತ್ಯ ಪ್ರಶಸ್ತಿ 2000

ಇತರ:

1. ಉ.ಕ. ಜಿಲ್ಲಾ 1ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಹೊನ್ನಾವರ...1972
2. ಡಾ. ಶಿವರಾಮ ಕಾರಂತರ ಹಿರಿತನದಲ್ಲಿ ಪೌರಸನ್ಮಾನ
'ನೀಲಾಂಜನ' ಸನ್ಮಾನ ಗ್ರಂಥ ಸಮರ್ಪಣೆ 1979
3. ಗೌರವ-ಗೌರೀಶ ಕಾಯ್ಕಿಣಿ ಸನ್ಮಾನ ಸಂಚಿಕೆ 1979
4. 'Progress of Mysore' ಸಂಪಾದಕ ಮಂಡಳ ಸದಸ್ಯ 1954
5. ಕ.ವಿ.ವಿ.ಯ ವ್ಯಾಸಂಗ ವಿಸ್ತರಣಾ ವಿಭಾಗದ ಸಲಹಾ ಸಮಿತಿಯ ಸದಸ್ಯ
6. ಧಾರವಾಡ ಆಕಾಶವಾಣಿ ನಿಲಯ ಸಲಹಾ ಸಮಿತಿ ಸದಸ್ಯ 1974
7. ಉತ್ತರ ಕನ್ನಡ ಜಿಲ್ಲಾ ಲೇಖಕ, ಪ್ರಕಾಶಕ ಹಾಗೂ ಪತ್ರಕರ್ತರ ಸಂಘದ ಅಧ್ಯಕ್ಷ.

(84) Kaikini Venkatrao Mumbai (B:1875, D:1950) F.R.C.S. Surgeon in Mumbai. Father Manjunath Kaikini Bhatkal.

mÉëMüÌOûiÉ M×üÌiÉrÉÉÆ:
1. oÉÑ¬ kÉqÉï 2. ÍzÉuÉMæüuÉsrÉ cÉËUiÉÇ 3. ÍzÉuÉÉlÉÇS cÉËUiÉÇ
Notes: It is learnt that Author is Late Shamrao Vitthal Kaikini's younger brother's son. Shamrao's period is 1841-1905. Hence the Author's period is likely to be 1875-1950.

(85) ಕಿಬ್ಬಳ್ಳಿ ಗಣಪತಿ ಶರ್ಮ, ಶಿರಸಿ (ಜ: 13-10-1928/ಮ: 13-8-2002) ಎಂ. ಎ. ಸಾಹಿತ್ಯರತ್ನ. ಎಂ. ಎಡ್. ಪದವೀಧರ. ಹಿಂದೀ ಪ್ರಾಧ್ಯಾಪಕ. ಪ.ಪೂ. ಕಾಲೇಜು ಪ್ರಾಂಶುಪಾಲ. ತಂದೆ ಕೆ.ವಿ. ಶರ್ಮಾ-ಗ್ರಂಥಕರ್ತ, ತಾಯಿ ಗಂಗಾ. ಪತ್ನಿ ಮೀನಾಕ್ಷಿ.

ಪ್ರಕಟಿತ ಕೃತಿ : ಪಶ್ಚಾತ್ತಾಪ-ಕಾದಂಬರಿ (ಹಿಂದಿಯಿಂದ ಅನುವಾದ) 1967/138

(86) ಕುಮಟಾ ಆರ್.ಜಿ. ಕುಮಟಾ (ಜ: 12-6-1932, ಮ: 1980) S.S.L.C. ಶಿಕ್ಷಣ. ಹೈದರಾಬಾದ ಆಕಾಶವಾಣಿಯಲ್ಲಿ ಉದ್ಯೋಗಿ. ಚಲನಚಿತ್ರ ಸಾಹಿತ್ಯಕಾರ. ಮೇಘರಾಜ ಎಂಬ ಕಾವ್ಯನಾಮದಿಂದಲೂ ಬರೆಯುತ್ತಿದ್ದರಂತೆ. ಹೆಸರು ರಾಮಚಂದ್ರ. ತಂದೆ ಗೋವಿಂದರಾವ್ ಕುಮಟಾ. ತಾಯಿ ಗುಲಾಬಿ. ಪತ್ನಿ ಸುಶೀಲಾ.

ಪ್ರಕಟಿತ ಕೃತಿಗಳು:

1. ಕಪಟವ್ಯೂಹ-ಪತ್ತೇದಾರಿ ಕಾದಂಬರಿ .... 1953(5) 1977/144
2. ನಿರ್ದೋಷಿ-ಕಾದಂಬರಿ 1951/188
3. ಪ್ರತಿಫಲ-ನಾಟಕ 1956/28
4. ಮಹಾರಾಜಾ ಪುರು-ನಾಟಕ (ಸಿಕಂದರ-ಪೋರಸ್ ಕಥೆ) 1956/26

5. ಭೀಷ್ಮ ಪ್ರತಿಜ್ಞೆ-ಕಾದಂಬರಿ 1955/151
6. ರಕ್ತದ ಕಡಲು-ಕಾದಂಬರಿ 1954/168

(87) ಕುಮಟಾಕರ ಮಂಜುನಾಥ ಎಸ್. (ಸು.1900-1950)

ಪ್ರಕಟಿತ ಕೃತಿಗಳು:

1. ಎಲ್ಲವೂ ದುಡ್ಡಿನಲ್ಲಿದೆ-ಕಥೆ 1939/15
2. ಕಠೋರ ಸಂದೇಶ-ನೀಳ್ಗತೆ 1940/21
3. ಮಳೆಬಿಲ್ಲು-7 ಕವನಗಳು 1943/10

ಟಿಪ್ಪಣಿ: ಮೂರೂ ಪುಸ್ತಕಗಳ ಪ್ರಕಾಶಕರು: ಲೇಖಕ ಕುಮಟಾ.

(88) ಕುರಡಿ ಗಣೇಶ ಕರ್ಕಿ, ಹೊನ್ನಾವರ (ಜ: 1922/ಮ: 1986) ಬಿ.ಎ., ಎಲ್.ಎಲ್.ಬಿ. ಪದವೀಧರ. ಮುಂಬೈ, ಬೆಂಗಳೂರು, ಮದ್ರಾಸಗಳಲ್ಲಿ ಟ್ರೇಡ್ ಮಾರ್ಕ್ ರಜಿಸ್ಟ್ರೇಶನ್ ಕಚೇರಿ ಉದ್ಯೋಗಿ. ಸ್ವಯಂ ನಿವೃತ್ತಿ ನಂತರ ಮೈಸೂರಿನಲ್ಲಿ ಕಾರ್ಮಿಕ ಕಾನೂನು ಸಲಹೆಗಾರ.ತಂದೆ ನಾರಾಯಣ ಕುರಡಿ-ಗ್ರಂಥಕರ್ತ. ತಾಯಿ ಮಹಾಲಕ್ಷ್ಮಿ. ಪತ್ನಿ ಕಲಾವತಿ.

ಪ್ರಕಟಿತ ಕೃತಿಗಳು :

1. ಕೈಮಗ್ಗ ಕೈಗಾರಿಕೆ ಅಭಿವೃದ್ಧಿ 1977/32
2. ನಿಯಂತ್ರಿತ ಬಟ್ಟೆ-ಗುಣಮಟ್ಟದ ಏರಿಕೆ ಸಮರ್ಪಕ ಪೂರೈಕೆ 1977/32

(89) ಕುರಡಿ ನಾರಾಯಣ ವೆಂಕಟೇಶ, ಧಾರವಾಡ (ಜ: 1-1-1888/ ಮ: 13-12-1974) ಧಾರವಾಡದ ಶಿಕ್ಷಕ ತರಬೇತಿ ಕಾಲೇಜಿನಲ್ಲಿ ಶಿಕ್ಷಕ, ಪ್ರಾಚಾರ್ಯ. ತಂದೆ ವೆಂಕಟೇಶ ಕುರಡಿ ಕರ್ಕಿ ಹೊನ್ನಾವರ. ತಾಯಿ ಮಹಾಲಕ್ಷ್ಮಿ. ಪತ್ನಿ ವೆಂಕಮ್ಮ ಮತ್ತು ಸರಸ್ವತಿ.

ಪ್ರಕಟಿತ ಕೃತಿಗಳು :

1. ಅಹಲ್ಯೋದ್ಧಾರ-ಮರಾಠಿಯಿಂದ ಅನುವಾದ.............................. 1934/202
2. ಕರ್ನಾಟಕ ಕವಿತಾ ಕುಸುಮ ಮಂಜರಿ ಭಾಗ-1 ಸಂಪಾದಿತ ....
3. ಕರ್ನಾಟಕ ಕವಿತಾ ಕುಸುಮ ಮಂಜರಿ ಭಾಗ-2 ಸಂಪಾದಿತ.......... 1922/40
4. ಕರ್ನಾಟಕ ಕವಿತಾ ಕುಸುಮ ಮಂಜರಿ ಭಾಗ-3 ಸಂಪಾದಿತ.......... 1940/40
5. ಕವಿತಾ ಪಾಠಮಾಲೆ ....
6. ದಾಕ್ಷಾಯಿಣಿ (ಪ್ರಪಂಚ ಧರ್ಮ ಭಾಗ 1) ....(1)1921,(3)1931/70
7. ಧರ್ಮಪಾಲ-ಐತಿಹಾಸಿಕ ಕಾದಂಬರಿ..
8. ಧಾರವಾಡ ಜಿಲ್ಲೆಯ ವರ್ಣನೆ
   ಮುಂಬಯಿ ಕರ್ನಾಟಕ ಸಂಕ್ಷಿಪ್ತ ವರ್ಣನೆ ಸಹಿತ 1929/120
9. ಪದ್ಮಿನಿ-ಕಾದಂಬರಿ (ಸಚಿತ್ರ) 1915/158
10. ಪಾರ್ವತಿ-ಕಥೆ (ಪ್ರಪಂಚ ಧರ್ಮ-ಭಾ.2) 1920/72
11. ಮಹಾರಾಣಿ ಲಕ್ಷ್ಮೀಬಾಯಿ-ಕಥೆ(ಸಚಿತ್ರ) 1927/168
12. ರವೀಂದ್ರರು ಕಣ್ಮರೆಯಾದರು ....
13. ವಾಚನ ಪಾಠಮಾಲೆ ....
14. ಶ್ರೀಕೃಷ್ಣದೇವರಾಯ-ಕಾದಂಬರಿ ....

15. ಶ್ರೀಮಂತ ನಾನಾಸಾಹೇಬ ಪೇಶವೆ-ಕಥೆ 1933/184
16. ಶ್ರೀ ಹರ್ಷನ ನಾಟಕಗಳು: ನಾಗಾನಂದ, ಪ್ರಿಯದರ್ಶಿಕೆ, ರತ್ನಾವಳಿ (ಅನುವಾದಿತ)
17. ಸತ್ಕಥಾ ಕುಸುಮ ಮಂಜರಿ-
ಶ್ರೀ ರಾಮಕೃಷ್ಣ ಪರಮಹಂಸರ ನೀತಿಕಥೆಗಳು-ಭಾಗ 1 ....1948/90
18. ಸತ್ಕಥಾ ಕುಸುಮ ಮಂಜರಿ-
ಶ್ರೀ ರಾಮಕೃಷ್ಣ ಪರಮಹಂಸರ ನೀತಿಕಥೆಗಳು-ಭಾಗ 2 .... 1951/42
19. ಸತ್ಕಥಾ ಕುಸುಮ ಮಂಜರಿ-ಶ್ರೀ ರಾಮಕೃಷ್ಣ ಪರಮಹಂಸರ ನೀತಿಕಥೆಗಳು-ಭಾಗ 3
20. ಸತ್ಕಥಾ ಕುಸುಮ ಮಂಜರಿ-ಶ್ರೀ ರಾಮಕೃಷ್ಣ ಪರಮಹಂಸರ ನೀತಿಕಥೆಗಳು-ಭಾಗ 4
21. ಸಾವಿತ್ರಿ ಸತ್ಯವಾನ-ಸಚಿತ್ರ ನಾಟಕ 1917/110
22. ಹವ್ಯಕ ಸಮಾಜ 1952/30

ಟಿಪ್ಪಣಿ :1) ಧಾರವಾಡದಲ್ಲಿ ಕರ್ನಾಟಕ ಹಿತೈಷಿಣೀ ಗ್ರಂಥಮಾಲೆ, ಶ್ರೀ ಸರಸ್ವತೀ ಮುದ್ರಣಾಲಯಗಳ
ಸ್ಥಾಪಕ. 2) ಮಹಾರಾಣಿ ಲಕ್ಷ್ಮೀಬಾಯಿ ಮತ್ತು ಸಾವಿತ್ರಿ ಸತ್ಯವಾನ ಕೃತಿಗಳು ಮುಂಬಯಿ ಹಾಗೂ ಮದ್ರಾಸ ವಿಶ್ವ ವಿದ್ಯಾನಿಲಯಗಳಲ್ಲಿ ಪಠ್ಯವಾಗಿದ್ದವು.
3) ಕವಿತಾ ಕುಸುಮ ಮಂಜರಿಯ ಎರಡೂ ಭಾಗಗಳು ಮುಂಬಯಿ ವಿಶ್ವವಿದ್ಯಾನಿಲಯದ ಎಂ.ಎ. ತರಗತಿಯ ಪಠ್ಯವಾಗಿದ್ದವು.

(90) Kulkarni Ramakant Mumbai (B:16-12-1931, D:23-3-2005) IPS, DG of Police in Maharashtra Govt. Father-Sheshagiri Kulkarni, Aversa, Ankola. MotherRadha. Wife-Lili (Lalita)

Books Published:

1. Crime Criminals and Cops-Essays 1989/223
2+. Footprints on the Sands of Crime (True Stories) 2005/259
3. The Diary of Balasaheb Shastri-Unusual Stories of an Unsual cop ... 1995
+ The book is translated into Marathi by Rekha Dhole: .... qÉÉaÉÉåuÉÉ 2006/231

(91) ಕುಸಲೇಕರ ಆರ್.ಎ. (ಜ: ಡಿಸೆಂಬರ 1940, ಮ: 1-2-2002) B.A., T.C.H. ಪದವೀಧರ. ಪ್ರಾಥಮಿಕ ಶಾಲಾ ಶಿಕ್ಷಕ. ಹೆಸರು ರಾಮದಾಸ. ತಂದೆ ಅನಂತ ಕುಸಲೇಕರ ಕುಮಟಾ. ತಾಯಿ ರಾಧಾ. ಪತ್ನಿ ಪದ್ಮಾವತಿ.

ಪ್ರಕಟಿತ ಕೃತಿಗಳು:

1. ನಾಡಕಹಳೆ-ನಾಡುನುಡಿ ಕುರಿತ ಕವನಗಳು 1976/42
2. ನಾಡರತ್ನಗಳು-ಪರಿಚಯ 1988/35

(92) ಕೌಸರ ಜಾಫ್ರಿ ಶಾಬಂದ್ರಿ ಭಟ್ಕಳ (ಜ: 1933, ಮ: 16-6-2008) ಖಖಅ. ಶಿಕ್ಷಣ, ದುಬೈನಲ್ಲಿ ಉದ್ಯೋಗಿ, ನಂತರ ಭಟ್ಕಳದಲ್ಲಿ ವ್ಯಾಪಾರಿ. ತಂದೆ ಮೊಯಿದ್ದೀನ ಶಾಬಂದ್ರಿ. ತಾಯಿ ಶಹಾರಾಬಾನು. ಪತ್ನಿ ನಫೀಸಾ.

ಪ್ರಕಟಿತ ಕೃತಿಗಳು: ಉರ್ದು ಕವನ ಸಂಕಲನಗಳು

1. ಔಜ್-ಎ-ಸುಖಾನ 2000/128

2. ಜಲ್ವಾ-ಎ-ರಹಮತ 2002/288
3. ಮೌಜ್-ಎ-ಸುಖಾನ... 1996/144

(93) ಗಾಂವಕಾರ ಎಂ.ಎನ್. (ಡಾ.) ಹುಬ್ಬಳ್ಳಿ (ಜ: 1884, ಮ: 1935) ಆಯುರ್ವೇದ ವೈದ್ಯ ಶಿಕ್ಷಣ. ಶಾಲಾ ಶಿಕ್ಷಕ. ಹೆಸರು ಮೃಕಂಡು (ಮುರ್ಕುಂಡಿ). ತಂದೆ ನಾರಾಯಣ ಗಾಂವಕರ ಹಿರೇಗುತ್ತಿ. ತಾಯಿ ದೇವಮ್ಮ. ಪತ್ನಿ ಲಕ್ಷ್ಮಿ.

ಪ್ರಕಟಿತ ಕೃತಿ: ಜ್ಞಾನಪದ್ಯಮಾಲಾ 1929/40

(94) ಗಾಂವಕಾರ ಗೋಪಾಲ ಸುಬ್ರಾಯ, ಯಲ್ಲಾಪುರ (ಸು. 1860-1930)

ಪ್ರಕಟಿತ ಕೃತಿಗಳು :

1. ಆರತಿ ರಾಮಾಯಣ-12 ಪದ್ಯಗಳ ಹಾಡು 1922/7
2. ಪದ್ಯಸಂಗ್ರಹ-ನೀತಿ ಹಾಡುಗಳು .... /15
3. ವಿಷಯೆ ಕಲ್ಯಾಣ-ಹಾಡುಗಳು ....

(95) ಗಾಂವಕಾರ ತಿಮ್ಮಣ್ಣ ಹಮ್ಮಣ್ಣ ನಾಡುಮಾಸ್ಕೇರಿ ಕುಮಟಾ(ಜ: 21-6-1903,ಮ:17-8-1989) ಮೆಟ್ರಿಕ್ಯುಲೇಶನ್ ಶಿಕ್ಷಣ. ಊರಲ್ಲಿ ಗಾಂವಠಿ ಶಾಲಾ ಸ್ಥಾಪಕ, ಮುಖ್ಯ ಶಿಕ್ಷಕ, ಕೃಷಿಕ. ಯಕ್ಷಗಾನ ಕಲಾವಿದ. ತಂದೆ ಹಮ್ಮಣ್ಣ ನಾಯಕ ನಾಡುಮಾಸ್ಕೇರಿ. ತಾಯಿ ವೆಂಕಮ್ಮ. ಪತ್ನಿ ಜಟ್ಟು.

ಪ್ರಕಟಿತ ಕೃತಿಗಳು:

1. ಅಂಬರೀಶ ಚರಿತ್ರೆ-ಯಕ್ಷಗಾನ ಪ್ರಸಂಗ 1988/12
2. ಗುರುದಕ್ಷಿಣೆ-ಯಕ್ಷಗಾನ ಪ್ರಸಂಗ 1988/26
3. ಧರ್ಮವಿಜಯ-ಯಕ್ಷಗಾನ ಪ್ರಸಂಗ 1989/46
4. ಪದ್ಮಾವತಿ ಕಲ್ಯಾಣ-ಯಕ್ಷಗಾನ ಪ್ರಸಂಗ 1926/42
5. ಯಕ್ಷಗಾನ ಚಂದ್ರಾವಳೀ ಪ್ರಸಂಗ....................................... (2) 1952/38
6. ಶ್ರೀಮದ್ಭಗವತದೊಳಗಣ ದೇವಯಾನಿ ಕಲ್ಯಾಣ
   (ಕಚದೇವಯಾನಿ ಚರಿತೆ) 1931/56

ಟಿಪ್ಪಣಿ: ಇವರನ್ನು ಗಾಂವಕರ ತಿಮ್ಮಣ್ಣ ನಾಯಕ ಎಂದೂ ಕರೆಯಲಾಗುತ್ತಿತ್ತು.

(96) ಗಾಂವಕಾರ ಸ.ಪ. ತೊರ್ಕೆ ಕುಮಟಾ (ಜ: 11-1-1887, ಮ: 30-11-1972) B.A. ಪದವೀಧರ. ಹುಬ್ಬಳ್ಳಿಯಲ್ಲಿ ಸ್ಕೂಲ ಬೋರ್ಡಿನ ಆಡಳಿತಾಧಿಕಾರಿ. ನಿವೃತ್ತಿ ನಂತರ ಸ್ವಾತಂತ್ರ್ಯ ಹೋರಾಟಗಾರ. ಧಾರವಾಡ, ನಾಸಿಕ ಜೈಲುಗಳಲ್ಲಿ ಕಾರಾಗ್ರಹವಾಸ. ಸ್ವಾತಂತ್ರ್ಯಾ ನಂತರ 1952ರ ಚುನಾವಣೆಯಲ್ಲಿ ಆಯ್ಕೆ. ಮುಂಬಯಿ ಸರಕಾರದ ಬಿ.ಜಿ. ಖೇರ ಮಂತ್ರಿಮಂಡಳದಲ್ಲಿ ಉಪಮುಖ್ಯಮಂತ್ರಿ. ಗಾಂಧೀವಾದಿ. ಅಂಕೋಲೆಯಲ್ಲಿ ಗಾಂಧೀನಿವಾಸ ಸ್ಥಾಪಕ. ಅರವಿಂದಾಶ್ರಮ ವಸತಿನಿಲಯ ಸ್ಥಾಪಕ. ಅಂಕೋಲೆಯ ಶೆಟಗೇರಿ ಸತ್ಯಾಗ್ರಹ ಸ್ಮಾರಕ ಪ್ರೌಢಶಾಲಾ ಸ್ಥಾಪನೆಯಲ್ಲಿ ಸಕ್ರಿಯ. ಆರ್ಯ ಸಮಾಜದ ಸಕ್ರಿಯ ಕಾರ್ಯಕರ್ತ. ಹೆಸರು ಸಣ್ಣಪ್ಪ. ತಂದೆ ಪರಮೇಶ್ವರ, ತಾಯಿ ಲಕ್ಷ್ಮಿ. ಪತ್ನಿ ವೆಂಕಮ್ಮ.

ಪ್ರಕಟಿತ ಕೃತಿಗಳು:

1. ಗೀತಾಂಜಲಿ-ಅನುವಾದಿತ ಕಾವ್ಯ
   (ಮೂಲ: ರವೀಂದ್ರನಾಥ ಟಾಗೋರರ ಗೀತಾಂಜಲಿ) .... (3)1962/119
2. ಪ್ರಕೃತಿ ಪ್ರೀತಿ-ಕವನ ಸಂಕಲನ 1969/80

3. ಪ್ರೇರಣೆ ಶೋಧನೆ–ಕವನ ಸಂಕಲನ.. 1969/82

4. ಮುಗಿಲು–ಕವನ ಸಂಕಲನ 1933/80

ಅಪ್ರಕಟಿತ ಕೃತಿ: ನನ್ನ ಜೀವನ–ಆತ್ಮಚರಿತ್ರೆ

ಪ್ರಶಸ್ತಿ/ಗೌರವ:

1. ಅಂಕೋಲಾ ಕರ್ನಾಟಕ ಸಂಘದ ಸ್ಥಾಪಕಾಧ್ಯಕ್ಷ 1952
2. ಸಮರ್ಪಣ–ಅಭಿನಂದನ ಗ್ರಂಥ ಸಂ.ಜಿ.ಆರ್. ಪಾಂಡೇಶ್ವರ 1969
3. ಸ.ಪ. ಗಾಂವಕರ : ಲೇ. ಶಾಂತಾರಾಮ ನಾಯಕ 2013/64
4. ಉತ್ತರ ಕನ್ನಡದ ಯುಗಪುರುಷ ಸ.ಪ. ಗಾಂವಕರ
   ಲೇ.: ಜನಾರ್ಧನ ನಾಯಕ 2015/136

(97) ಗೋಕರ್ಣಕರ ರಾಮಕೃಷ್ಣ ಮಂಜುನಾಥ (ಸು.1860–1930) ಶಿಕ್ಷಕ.

ಪ್ರಕಟಿತ ಕೃತಿಗಳು:

1.+ ಹಳಿಯಾಳ ತಾಲೂಕಿನ ವರ್ಣನೆ 1906/22

2. Description of North Kanara... 1927

+ ಪ್ರಕಾಶಕ: Star of Kanara Press Kumta

(98) ಚಂದಾವರಕರ ಜಿ.ಎ. ಸಿದ್ದಾಪುರ (ಜ: 1883, ಮ: 1946) M.A. (Calcutta University) ಪದವೀಧರ. ಹೈದರಾಬಾದಿನಲ್ಲಿ ಕಾಲೇಜು ಪ್ರಾಧ್ಯಾಪಕ. ಹೆಸರು ಗೋಪಾಲಕೃಷ್ಣ. ತಂದೆ ಅನಂತಯ್ಯ ಮಲ್ಲಾಪುರ, ಹೊನ್ನಾವರ.

ಪ್ರಕಟಿತ ಕೃತಿ: A Manual of Hindu Ethics 1915 (3) 2012/150
(ಹಿಂದೂ ಧರ್ಮದ ಸಾರವನ್ನು 15 ಅಧ್ಯಾಯಗಳಲ್ಲಿ ವಿವರಿಸಿದೆ)

(99) ಚಂದಾವರಕರ ನಾರಾಯಣ ಗಣೇಶ ಮುಂಬಯಿ (ಜ: 1855 ಮ: 1923) ಮುಂಬಯಿ ಹೈಕೋರ್ಟಿನಲ್ಲಿ ನ್ಯಾಯವಾದಿ. ನ್ಯಾಯಾಧೀಶ. ಈ ಕೋರ್ಟಿನಲ್ಲಿ ಮೊಟ್ಟಮೊದಲ ಭಾರತೀಯ ಮುಖ್ಯ ನ್ಯಾಯಾಧೀಶ. ತಂದೆ ಗಣೇಶ ಚಂದಾವರಕರ ಚಂದಾವರ ತಾ. ಹೊನ್ನಾವರ.

ಪ್ರಕಟಿತ ಕೃತಿ: ನವೀನ ಹಿಂದೂದೇಶ. ಹೊಸ ತಿದ್ದುಪಡಿಗಳ ನವೀನ ವಿವರಣೆ
–ಅನುವಾದಿತ 1921/68

ಗೌರವ:

1. ಬ್ರಿಟಿಶ್ ಸರಕಾರದವರು ಇವರಿಗೆ **'ಸರ್'** ಪದವಿ ನೀಡಿದ್ದರು
2. 1901ರಲ್ಲಿ ಲಾಹೋರಿನಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ
3. 1920ರಲ್ಲಿ ಕಾರವಾರ ಜಿಲ್ಲಾ ಮೊದಲ ರಾಜಕೀಯ ಪರಿಷತ್ ಅಧ್ಯಕ್ಷ
4. ಇಂದೋರ್ ಸಂಸ್ಥಾನದ ದಿವಾನ
5. ಸರ್ ನಾರಾಯಣ ಗಣೇಶ ಚಂದಾವರಕರ: ಮರಾಠಿಯಲ್ಲಿ
   ಲೇ.: ದ್ವಾರಕಾನಾಥ ಗೋವಿಂದ ವೈದ್ಯ 1937/510
6. A Wrestling Soul ಸರ್ ನಾರಾಯಣ ರಾವ್ ಚಂದಾವರಕರ ಚರಿತ್ರೆ–ಲೇಖಕ ಜಿ.ಎಲ್. ಚಂದಾವರಕರ

ಟಿಪ್ಪಣಿ: ಇವರು ಶಾಮರಾವ್ ವಿಠ್ಠಲ ಕಾಯ್ಕಿಣಿ ಭಟ್ಕಳ (1841–1905) ಇವರ ತಂದೆಯ ತಂಗಿಯ ಮಗ. 1885 ಸೆಪ್ಟೆಂಬರ 8ರಂದು ಇಂಗ್ಲೆಂಡಿಗೆ ಹೋಗಿ 4 ತಿಂಗಳ ನಂತರ ಭಾರತಕ್ಕೆ ಬಂದಾಗ ಸಾರಸ್ವತ ಸಮಾಜ ಮತ್ತು ಮಠದಿಂದ 10 ವರ್ಷಕಾಲ ಬಹಿಷ್ಕಾರಕ್ಕೆ ಒಳಗಾಗಿದ್ದರಂತೆ.

(100) **ಚಿತ್ರಗಿ ನಾರಾಯಣ ಸುಬ್ರಾವ** (ಸು. 1890-1958) ಕುಮಟಾ ವ್ಯಾಯಾಮ ಶಾಲಾ ಶಿಕ್ಷಕ, ಸಾಮಾಜಿಕ ಕಾರ್ಯಕರ್ತ. ಅವಿವಾಹಿತ. ಚಿತ್ರಗಿಯವರು. ದತ್ತಮಾಸ್ತರ ಎಂದೇ ಪರಿಚಿತ.

ಕೃತಿ: ಸಂಗೀತ ಭಜನಾಮೃತ ಭಾಗ 1 ....1927/16

ಪ್ರಕಾಶಕ: ದೇವಪ್ಪ ಅಯ್ಯ ನಾಯ್ಕ ಕುಮಟಾ

(101) **ಚಿತ್ತಾಲ ಗಂಗಾಧರ ಮುಂಬಯಿ** (ಜ: 1923 ಮ: 1987) I.A. & A.S. ಪದವೀಧರ. ಕೇಂದ್ರ ಸರಕಾರದ ಆರ್ಥಿಕ ವಿಭಾಗದ ಅಧಿಕಾರಿಯಾಗಿ ಭಾರತ, ಅಮೇರಿಕಾ, ಇಂಗ್ಲೆಂಡ್‌ಗಳಲ್ಲಿ ಸೇವೆ. ತಂದೆ ವಿಠೋಬಾ ಚಿತ್ತಾಲ ಹನೇಹಳ್ಳಿ ಕುಮಟಾ. ತಾಯಿ ರುಕ್ಮಿಣಿ, ಪತ್ನಿ ಮೀರಾ.

ಪ್ರಕಟಿತ ಕೃತಿಗಳು:

1. ಎಪತ್ತೆರಡು ಕವನಗಳು-ಗಂಗಾಧರ ಚಿತ್ತಾಲರ ಸಂಪೂರ್ಣ ಕವನಗಳು 1948/45
2. ಕಾಲದ ಕರೆ-25 ಕವನಗಳು 1948/45
3. ಮನುಕುಲದ ಹಾಡು-19 ಕವನಗಳು 1961/86
4. ಸಂಪರ್ಕ-ಕವನ ಸಂಗ್ರಹ
5. ಹರಿವ ನೀರಿದು-ಕವನ ಸಂಗ್ರಹ

ಪ್ರಶಸ್ತಿ/ಗೌರವ:

1. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
2. ಗಂಗಾಧರ ಚಿತ್ತಾಲರ ಕಾವ್ಯಸೃಷ್ಟಿ-ಸಂಪಾದಕ: ಡಾ. ಶಾಂತಿನಾಥ ದೇಸಾಯಿ 1987/202
3. ಹರಿದ ನೀರಿದು-ಗಂಗಾಧರ ಚಿತ್ತಾಲರ ಕಾವ್ಯದ ಅವಲೋಕನ: ಲೇ. ಎಂ.ಎನ್. ಪ್ರಭು 1999/94

(102) **ಚಿತ್ತಾಲ ಯಶವಂತ ಮುಂಬಯಿ** (ಜ: 3-8-1928 ಮ: 22-3-2014) B.Sc.(Hon.) B.Sc. (Tech), M.E.(Chem) U.S.A. Empolyee in ackelite Hylem Company from 1953. Visiting professor in I.I.T. Bombay, Plastic and Rubber Institute for some period. Company Director. ತಂದೆ ವಿಠೋಬಾ ಚಿತ್ತಾಲ ಹನೇಹಳ್ಳಿ ಕುಮಟಾ. ತಾಯಿ ರುಕ್ಮಿಣಿ, ಪತ್ನಿ ಮಾಲತಿ.

ಪ್ರಕಟಿತ ಕೃತಿಗಳು: **(23)**

ಅ. ಕಥಾ ಸಂಕಲನಗಳು

1. ಆಟ-ಸಣ್ಣ ಕಥೆಗಳು 1969 (3) 2012/92
2. ಅಬೋಲೀನ 1960
3. ಆಯ್ದ ಕಥೆಗಳು 1976/50
4. ಓಡಿಹೋದಾ ಮುಟ್ಟಿಬಂದಾ (2 ಮುದ್ರಣಗಳು) 2001/170
5. ಕತೆಯಾದಳು ಹುಡುಗಿ .... 1980 (8)2009/147
6. ಕುಮಟೆಗೆ ಬಂದಾ ಕಿಂದರ ಜೋಗಿ (3 ಮುದ್ರಣ) 1997/164
7. ಕೋಳಿ ಕೂಗುವ ಮುನ್ನ...2012/89
8. ಪುಟ್ಟನ ಹೆಜ್ಜೆ ಕಾಣೋದಿಲ್ಲಾ .... 2006(2) 2012/121
9. ಪಯಣ 1982/150

10. ಬೇನ್ಯಾ 1983/114
11. ಯಶವಂತ ಚಿತ್ತಾಲರ ಸಮಗ್ರ ಕತೆಗಳು–
ಸಂಪುಟ.1 ....2009(2) 2012/688
12. ಯಶವಂತ ಚಿತ್ತಾಲರ ಸಮಗ್ರ ಕತೆಗಳು–
ಸಂಪುಟ.2 .... 2009(2) 2012/448
13. ಸಂದರ್ಶನ 1957/99
14. ಸಿದ್ದಾರ್ಥ 1988

ಆ. ಕಾದಂಬರಿಗಳು

1. ಕೇಂದ್ರ ವೃತ್ತಾಂತ .... 1996(2) 2009/303
2. ಛೇದ 1985 (4) 2008/165
3. ಪುರುಷೋತ್ತಮ .... 1998(4) 2014/591
4. ಮೂರು ದಾರಿಗಳು .... 1964(8) 2011/347
5. ಶಿಕಾರಿ .... 1979(9) 2014/368

ಇ. ಇತರ

1. ಅಂತಃಕರಣ–ಪ್ರಬಂಧಗಳು 2008
2. ದಣಪೆಯಾಚೆಯ ಓಣಿ ಲಬಸಾ (ಲಯಬದ್ಧಸಾಲು) ಸಂಗ್ರಹ 2005/56
3. ಸಾಹಿತ್ಯದ ಸಪ್ತಧಾತುಗಳು .... 2001(2) 2010/96
4. ಸಾಹಿತ್ಯ ಸೃಜನಶೀಲತೆ ಮತ್ತು ನಾನು (3 ಮುದ್ರಣಗಳು) 1981/137

ಅಪ್ರಕಟಿತ ಕೃತಿ:ದಿಗಂಬರ–ಕಾದಂಬರಿ (ಅಪೂರ್ಣ)

ಪ್ರಶಸ್ತಿ/ಗೌರವ:

1. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 'ಶಿಕಾರಿ ಕಾದಂಬರಿ'ಗಾಗಿ 1979
2. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 'ಕತೆಯಾದಳು ಹುಡುಗಿ'ಗಾಗಿ . 1980
3. ಯಶವಂತ ಚಿತ್ತಾಲ–ಕೆಲವು ಅಧ್ಯಯನಗಳು–
ಸಂಪಾದಕ: ಜಿ.ಎಸ್.ಭಟ್ಟ 1981/272
4. ಉ.ಕ. ಜಿಲ್ಲಾ 4ನೇ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷತೆ–ಶಿರಸಿ 1981
5. ಚಿತ್ತಾಲರ ಕಥೆಗಳು ಸಮಗ್ರ–1 1983
6. ಐವತ್ತೊಂದು ಕಥೆಗಳು–ಸಮಗ್ರ 2 1983
7. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–'ಕತೆಯಾದಳು ಹುಡುಗಿ' ಕೃತಿಗೆ ... 1983
8. ವರ್ಧಮಾನ ಪ್ರಶಸ್ತಿ–'ಶಿಕಾರಿ ಕಾದಂಬರಿ'ಗೆ 1983
9. ನಿರಂಜನ ಪ್ರಶಸ್ತಿ 2002
10. ಯಶವಂತ ಚಿತ್ತಾಲರ ಆಯ್ದ ಕತೆಗಳು.................................... 2006/107
11. ಪಂಪ ಪ್ರಶಸ್ತಿ 2007
12. ಯಶವಂತ ಚಿತ್ತಾಲ ಲೇ.: ಡಾ.ವಿ.ಡಿ. ಹೆಗಡೆ 2007/56
13. ಯಶವಂತ ಚಿತ್ತಾಲರ ಬದುಕು ಬರಹ–ಪಿಎಚ್.ಡಿ.
ಅಧ್ಯಯನ ಮತ್ತು ಗ್ರಂಥ ಲೇ.: ಡಾ. ಸುರೇಶನಾಯ್ಕ 2009/380
14. ಯಶವಂತ ಚಿತ್ತಾಲರ ಸಾಹಿತ್ಯಲೋಕ–ಆಹ್ವಾನಿತ ಲೇಖನ ಸಂಗ್ರಹ
–ಸಂ. ಡಾ. ರಾಜೇಂದ್ರ ಚೆನ್ನಿ 2014/556

ಇತರ ಪ್ರಶಸ್ತಿಗಳು: ಆರ್ಯಭಟ ಸಾಹಿತ್ಯಶ್ರೇಷ್ಠ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪುರಸ್ಕಾರ. ಗೋರೂರು ಸಾಹಿತ್ಯ ಪ್ರಶಸ್ತಿ, ಟಿ.ಎಂ.ಎ. ಪೈ ಫೌಂಡೇಶನ್ನಿನಿಂದ

ಔಟ್ ಸ್ಟಾಂಡಿಂಗ್ ಕೊಂಕಣಿ ಅವಾರ್ಡ್, ಭಾರತ ಭಾಷಾ ಪರಿಷತ್ತಿನ ಪ್ರಶಸ್ತಿ– 'ಪುರುಷೋತ್ತಮ' ಕೃತಿಗೆ, ಮಹಾರಾಷ್ಟ್ರ ಸರಕಾರದ ಗೌರವ, ಮಾಸ್ತಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಡಾ.ಶಿವರಾಮ ಕಾರಂತ ಪ್ರಶಸ್ತಿ, ಶ್ರೀ ಗುರುನಾರಾಯಣ ಪ್ರಶಸ್ತಿ.

(103) **ಜೋಶಿ ಗೋಪಾಲಕೃಷ್ಣ, ಕಡತೋಕಾ, ಹೊನ್ನಾವರ** (ಜ: 1903/ಮ: 16–3–1988) ಕೃಷಿಕ, ಸಮಾಜ ಸಂಘಟಕ, ಸ್ವಾತಂತ್ರ್ಯ ಹೋರಾಟಗಾರ, ಸಾಮಾಜಿಕ ಕಾರ್ಯಕರ್ತ. ತಂದೆ ಗೋಪಾಲ, ತಾಯಿ ಗಂಗಾ. ಪತ್ನಿ ಲಕ್ಷ್ಮಿ (ಸ್ವಾತಂತ್ರ್ಯ ಹೋರಾಟಗಾರ್ತಿ),ನಿಪುತ್ರಕ.

ಪ್ರಕಟಿತ ಕೃತಿಗಳು :

1. ನನ್ನ ಆತ್ಮಕಥನ..1984/36
2. ಸಮಾಜ ಕಾರ್ಯ 1985/40

(104) **ಜೋಶಿ ನರಸಿಂಹ, ಸೋಂದಾ, ಶಿರಸಿ** (ಜ: 1901/ಮ: 1983) ಪ್ರಾಥಮಿಕ ಶಿಕ್ಷಣ, ಪುರೋಹಿತ, ಕೃಷಿಕ. ತಂದೆ ರಾಮಚಂದ್ರ, ತಾಯಿ ಗೌರಿ, ಪತ್ನಿ ಸುಬ್ಬಿ.

ಪ್ರಕಟಿತ ಕೃತಿ : ಸೋಂದಾ ಕೈಪಿಡಿ..1962/35

(105) **ಜೋಶಿ ನಾ.ನಾ., ಸೋಂದಾ, ಶಿರಸಿ** (ಜ: 1922/ಮ: 1990) ಎಸ್.ಎಸ್.ಸಿ., ಟಿ.ಸಿ.ಎಚ್. ಶಿಕ್ಷಕ. ತಾಳಮದ್ದಲೆ ಅರ್ಥಗಾರ, ಹೆಸರು ನಾರಾಯಣ, ತಂದೆ ನಾಗಪ್ಪ, ತಾಯಿ ಪಾರ್ವತಿ. ಪತ್ನಿ ಲಕ್ಷ್ಮಿ.

ಪ್ರಕಟಿತ ಕೃತಿಗಳು :

1. ಕೇಳೋ ತಮ್ಮಾ–ಕಗ್ಗ 1989/184
2. ದಾನಶೂರ ಕರ್ಣ–ಯಕ್ಷಗಾನ ಪ್ರಸಂಗ 1952/55
3. ಮಹಾಕ್ಷತ್ರಿಯ–ಯಕ್ಷಗಾನ ಪ್ರಸಂಗ 1977/66
4. ಮುದ್ದುಕಂದ–ಯಕ್ಷಗಾನ ಪ್ರಸಂಗ ....
5. ಸತ್ಯ ಹರಿಶ್ಚಂದ್ರ–ಯಕ್ಷಗಾನ ಪ್ರಸಂಗ ....

(756) ಭಟ್ಟ ಶ್ರೀಧರ ಐನಕೈ (ಡಾ॥) ಕೆ.ಆರ್.ನಗರ, ಮೈಸೂರು (ಜ: 8-2-1970) ಅದ್ವೈತ ವೇದಾಂತ ವಿದ್ವದುತ್ತಮ, ಎಂ.ಎ., ಪಿಎಚ್.ಡಿ. ಪದವೀಧರ. ವೈದಿಕ, ಜ್ಯೋತಿಷಿ, ಸಂಶೋಧಕ, ನಿರ್ದೇಶಕ "ವೇದಾಂತ ಭಾರತೀ", ಸಂಪಾದಕ-"ಸಮೀಕ್ಷಾ" ಆಯುರ್ವೇದ ದ್ವೈಮಾಸಿಕ ಪತ್ರಿಕೆ. ತಂದೆ ರಾಮಚಂದ್ರ ಭಟ್ಟ, ಐನಕೈ, ಸಿದ್ದಾಪುರ. ತಾಯಿ ಶ್ರೀಗೌರಿ. ಪತ್ನಿ ಸುಮಂಗಲಾ.

ಪ್ರಕಟಿತ ಕೃತಿಗಳು :

1. ಮಾಧವೀಯ ವ್ಯಾಸಾಚಲೀಯ ಮತ್ತು ಅನಂತಾನಂದಗಿರಿಯ ಶಂಕರ
   ವಿಜಯಗಳ ತೌಲನಿಕ ಅಧ್ಯಯನ-ಪಿಎಚ್.ಡಿ. ಪ್ರಬಂಧ...............1997/574
2. ಶ್ರೀ ಶಿವಾನಂದ ಲಹರಿ-
   ಪ್ರತಿಪದಾರ್ಥ ತಾತ್ಪರ್ಯ, ಟಿಪ್ಪಣಿ ಸಹಿತ .... (1)2002,(2)2004/100

(757) ಭಟ್ಟ ಶ್ರೀಧರ ದೇವರು ಶಿರಸಿ (ಜ: 30-11-1966) ಬಿ.ಎಸ್ಸಿ.(ಅರಣ್ಯಶಾಸ್ತ್ರ) ಪದವೀಧರ. ಶಿರಸಿಯ ಅರಣ್ಯಕಾಲೇಜಿನಲ್ಲಿ ಉಪನ್ಯಾಸಕ. ತಂದೆ ದೇವರು ಭಟ್ಟ, ಕೆಕ್ಕಾರ, ಹೊನ್ನಾವರ. ತಾಯಿ ಸಾವಿತ್ರಿ. ಪತ್ನಿ ಲತಾ.

ಪ್ರಕಟಿತ ಕೃತಿ : ಜನಸಂಖ್ಯಾ ನಿಯಂತ್ರಣೆ ನಮ್ಮ ನಿಮ್ಮೆಲ್ಲರ ಹೊಣೆ............ 1998/18

(758) ಭಟ್ಟ ಶ್ರೀಪಾದ (ಡಾ|) ತುಮಕೂರು (ಜ: 19-2-1971) ಎಂ.ಎ.(ಕನ್ನಡ), ಎಂ.ಎ. (ಜಾನಪದ) ಪ್ರಥಮ ಸ್ಥಾನ. ಬಂಗಾರದ ಪದಕ ಸಮ್ಮಾನಿತ, ಪಿಎಚ್.ಡಿ. ಪದವೀಧರ. ಟೈಮ್ಸ್ ಗ್ರೂಪ್‌ನಲ್ಲಿ ಪತ್ರಿಕೋದ್ಯೋಗಿ, ತುಮಕೂರು ವಿಶ್ವವಿದ್ಯಾಲಯದಲ್ಲಿ ಅಸಿಸ್ಟಂಟ್ ಪ್ರೋಫೆಸರ್. ತಂದೆ ತಮ್ಮಯ್ಯ ಭಟ್ಟ, ಶೀಗೇಪಾಲ, ಯಲ್ಲಾಪುರ. ತಾಯಿ ತ್ರಿವೇಣಿ. ಪತ್ನಿ ಅಶ್ವಿನಿ.

ಪ್ರಕಟಿತ ಕೃತಿಗಳು :

1. ಒಲಿಂಪಿಕ್-ಒಂದು ಕೈಪಿಡಿ 2007/94
2. ಕರ್ನಾಟಕದ ಸಹ್ಯಾದ್ರಿ ಬೆಟ್ಟಗಳು 2011/126
3. ಕರಾವಳಿಯ ಸಿರಿಯೊಡಲು ಪಿಎಚ್.ಡಿ. ಪ್ರಬಂಧ........................2000/246
4. ಜನಪದ ಚಿತ್ತಾರ-ಲೇಖನ ಸಂಗ್ರಹ..2003/136
5. ಜನಪದ ವೈದ್ಯ 2004/35
6. ಜೀವ ಜಗತ್ತಿನ ಜೀವಾಳ-ಸಸ್ಯಗಳ ಕುರಿತ ಬರಹಗಳು 2002/80
7. ತುಮಕೂರು ಜಿಲ್ಲೆಯ ಸ್ಥಳನಾಮಗಳು (ಸಹಲೇಖಕ) 2011/186
8. ಬೇಂದ್ರೆ ಅವರ ಗರಿ-ವಿಮರ್ಶೆ 1996/48
9. ಬೇಂದ್ರೆ ಅವರ ಮೇಘದೂತ-ವಿಮರ್ಶೆ 1996/52
10. ಮಹಾಮಿಡಿತ-ಅನುವಾದಿತ (ಮೂಲ ಅಂಗ್ರೇಜೀ) 2007/83
11. ಶೋಧ ಪರಿಶೋಧ-ಲೇಖನ ಸಂಕಲನ 2015/350

ಪ್ರಶಸ್ತಿ : ಅತ್ಯುತ್ತಮ ವಾರ್ಷಿಕ ಲೇಖನ ಪ್ರಶಸ್ತಿ 2007

(759) ಭಟ್ಟ ಶ್ರೀಪಾದ ಮಾವಖಂಡ ಅದ್ವೈತ ವೇದಾಂತ ವಿದ್ವಾನ್. ಶಿರಸಿಯ ಭೈರುಂಭೆ ಸಂಸ್ಕೃತ ಪಾಠಶಾಲಾಧ್ಯಾಪಕ. ತಂದೆ ಗೋಪಾಲಭಟ್ಟ, ಮಾವಖಂಡ ಯಲ್ಲಾಪುರ. ತಾಯಿ ಮಹಾದೇವಿ.

ಪ್ರಕಟಿತ ಕೃತಿ : ಶ್ರೀಗುರುಗೀತಾ-ಸಹ ಸಂಪಾದಕ 2006/100

(760) ಭಟ್ಟ ಶ್ರೀಪಾದ ಮೂರೂರು ಕುಮಟಾ (ಜ: 17-5-1973): ಸಂಸ್ಕೃತದಲ್ಲಿ ವಿದ್ವಾನ್, ಎಂ.ಎ., ಬಿ.ಎಡ್. ಪದವೀಧರ. ಪಾಠಶಾಲಾ ಶಿಕ್ಷಕ. ತಂದೆ ಸುಬ್ರಾಯ ಭಟ್ಟ ಮೂರೂರು. ತಾಯಿ ಪಾರ್ವತಿ. ಪತ್ನಿ ಲತಾ.

ಪ್ರಕಟಿತ ಕೃತಿ: ಮಹರ್ಷಿ ಭಾರದ್ವಾಜ 2014/72

(761) ಭಟ್ಟ ಶ್ರೀಪಾದ (ಡಾ.) ಶಿರಸಿ (ಜ: 25-5-1969): ಎಂ.ಎ., ಎಂ.ಎಡ್., ಪಿಎಚ್.ಡಿ. ಪದವೀಧರ. ಹೈಸ್ಕೂಲು ಶಿಕ್ಷಕ. ನಾಟಕ ರಂಗಕರ್ಮಿ. ಯಕ್ಷಗಾನ ಕಲಾವಿದ. ತಂದೆ ಗಜಾನನ ಭಟ್ಟ ಧಾರೇಶ್ವರ ಕುಮಟಾ. ತಾಯಿ ತಾರಾ. ಪತ್ನಿ ಶಾಂತಲಾ.

ಪ್ರಕಟಿತ ಕೃತಿಗಳು:

1. ಉತ್ತರ ಕನ್ನಡ ಜಿಲ್ಲಾ ಜನಪದ ರಂಗಭೂಮಿ 2012/184
2. ದೇವರಕಾಡು ಮತ್ತು ಇತರ ನಾಟಕಗಳು.................................... 2014/50
3. ಬಹುಭೂಮಿಕೆ-ರಂಗಸಂಬಂಧಿ ಲೇಖನಗಳು 2011/104
4. ಯಕ್ಷಗಾನ-ಉತ್ತರ ಕನ್ನಡ ತಿಟ್ಟು 2013/76
5. ಶ್ರೀಧರ ಸ್ಮರಣೆ-ಡಾ.ಬಿ.ಎಚ್. ಶ್ರೀಧರ ವಾಚಿಕೆ 2010/128

ಪ್ರಶಸ್ತಿ/ಗೌರವ:

1. ರಾಜ್ಯ ನಾಟಕ ಎಕಾಡೆಮಿ ಪ್ರಶಸ್ತಿ 2007
2. ಸದಾನಂದ ಸುವರ್ಣ ಪ್ರಶಸ್ತಿ 2009
3. ಉತ್ತಮ ಶಿಕ್ಷಕ-ರಾಜ್ಯ ಪ್ರಶಸ್ತಿ 2010
4. ಶಿಕ್ಷಣ ಸಿರಿ ಪ್ರಶಸ್ತಿ 2005
5. ಉಡುಪಿಯ ಉದ್ಯಾವರ ಪ್ರಶಸ್ತಿ 2013

(762) ಭಟ್ಟ ಶ್ರೀರಾಮ (ಡಾ॥) ಬೆಂಗಳೂರು (ಜ: 28-5-1953) ಅದ್ವೈತ ವೇದಾಂತ ವಿದ್ವಾನ್. ಎಂ.ಎ.(ಕನ್ನಡ ಮತ್ತು ಸಂಸ್ಕೃತ), ಪಿಎಚ್.ಡಿ. ಪದವೀಧರ. ಬೆಂಗಳೂರು ಜಯನಗರದ ಎಸ್.ಎಸ್.ಎಂ.ಆರ್.ವಿ. ಕಾಲೇಜಿನಲ್ಲಿ ಪ್ರಾಧ್ಯಾಪಕ. ತಂದೆ ಸುಬ್ರಾಯ ಭಟ್ಟ, ಸಣ್ಣಗದ್ದೆ, ಶಿರಸಿ. ತಾಯಿ ಗೋದಾವರಿ. ಪತ್ನಿ ಶಶಿಕಲಾ.

ಪ್ರಕಟಿತ ಕೃತಿಗಳು :

1. ಅಭಿಮುಖಿ-ಲೇಖನ ಸಂಗ್ರಹ 2005/148
2. ಅಶ್ವಘೋಷ-ಜೀವನ ಚಿತ್ರಿಕೆ (ಅನುವಾದಿತ) 2001/60
3. ಕನ್ನಡ ಮಾರ್ಗಕಾವ್ಯದ ಮೇಲೆ ಕಾಳಿದಾಸನ ಪ್ರಭಾವ-
   ಪಿಎಚ್.ಡಿ. ಪ್ರಬಂಧ 1995/350
4. ಕನ್ನಡ ಸಾಹಿತ್ಯದಲ್ಲಿ ಕಾಳಿದಾಸ-ಕೃತಿಸೂಚಿ 1990/60
5. ಜಾಂಬವತಿ ಪರಿಣಯ-ಅನುವಾದ (ಮೂಲ ಸಂಸ್ಕೃತ) 2008/119
6. ದೀಪಧ್ವನಿ-ನೈತಿಕ ಶಿಕ್ಷಣ ಕೈಪಿಡಿ (ಸಂಪಾದಿತ)
7. ರಸಪ್ರಕಾಶ-ಪು.ತಿ.ನ. ರಚಿತ ಕಾರಿಕೆಗಳು..................................... 2001/120
8. ಶಬ್ದಮಾರ್ಗ-ಅಡಿಗರ ಕಾವ್ಯದಲ್ಲಿನ ಸಂಸ್ಕೃತ
   ಉಲ್ಲೇಖಗಳ ವಿವರಣ ಸೂಚಿ .... (1)1989, (2)1997/120
9. ಶ್ರೀರಾಮ ಸಂಭವ-ರಾಮಾಯಣ ಉಪನ್ಯಾಸ (ಸಂಪಾದಿತ) 1996/200

ಟಿಪ್ಪಣಿ : 'ಇಸ್ಕಾನ್' ಬೆಂಗಳೂರು ಪ್ರಕಾಶಿತ 'ಶ್ರೀಮದ್ಭಾಗವತ' ಕನ್ನಡ ಅವತರಣಿಕೆಯ ಭಾಗಶಃ ಕರ್ತೃ.

ಗೌರವ : UGC Post Doctral Research Fellowship 2002-05

(763) ಭಟ್ಟ ಸಂಜಯ ಬೆಣ್ಣೆ ಬಕ್ಕಳ ಶಿರಸಿ (ಜ: 25-10-1984) ಪತ್ರಿಕೋದ್ಯಮದಲ್ಲಿ ಪದವಿ. ಕಾನೂನು ವ್ಯಾಸಂಗ, ಜಾನಪದ ಅಧ್ಯಯನ, ಕೃಷಿಕ, ಹವ್ಯಾಸಿ ಛಾಯಾಗ್ರಾಹಕ. ನಾಣ್ಯ, ಅಂಚೆಚೀಟಿ ಇತ್ಯಾದಿ ಸಂಗ್ರಹಕಾರ. ತಂದೆ ಜನಾರ್ದನ ಭಟ್ಟ ಬಕ್ಕಳ ಶಿರಸಿ. ತಾಯಿ ಯಶೋದಾ. ಪತ್ನಿ ಶ್ರೀ.

ಪ್ರಕಟಿತ ಕೃತಿ: ಒಲವಿನ ಚಿಟ್ಟೆಯ ಕಂಬಳಿಹುಳು-ಕವನ ಸಂಕಲನ 2011/54

(764) ಭಟ್ಟ ಸಂದೀಪ ಹೊಸಾಕುಳಿ ಹೊನ್ನಾವರ (ಜ: 6-1-1984) ಎಂ.ಎ., ಬಿ.ಎಡ್. ಪದವೀಧರ. ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕ. ಯಕ್ಷಗಾನ ತಾಳಮದ್ದಲೆ ಅರ್ಥಗಾರ. ತಂದೆ ಶಂಭು ಭಟ್ಟ ಹೊಸಾಕುಳಿ. ತಾಯಿ ಮುಕಾಂಬಾ. ಪತ್ನಿ ಸರಸ್ವತಿ.

ಪ್ರಕಟಿತ ಕೃತಿಗಳು:

1. ಅಖಿಲ ಭಾರತ ನಾಯಿ ಸಮ್ಮೇಲನ-ನಗೆ ನಾಟಕ 2015/60
2. ಕಾಲ ಬದಲಾಗುತ್ತಿದೆ-ಅಂಗ್ರೇಜೀ ವ್ಯಾಕರಣ 2014/250
3. ನೂರಾರು ವಿಷಯ ನೂರೆಂಟು ಪ್ರಶ್ನೆ-ಸಮಾಜ ಅಧ್ಯಯನ 2014/200

4. ಬನ್ನಿ ಮಕ್ಕಳೆ ಇಂಗ್ಲೀಷ್ ಕಲಿಯೋಣ 2013/129
5. ಭಾವಗಳ ಚಳುವಳಿ (ಉಡಿಜ಼ಚಿಣ ಉಜಿಣ)-ನುಡಿಮುತ್ತು 2012/107
6. ಮಣ್ಣಿನ ಮನೆಯೊಳಗೆ-ಚುಟುಕುಗಳು 2014/110
7. ಮೌಲ್ಯಗಳು ಎಲ್ಲಿ ಸಿಗುತ್ತವೆ?-ಚಿಂತನಗಳು .... 2011 (2)2012/112
8. ಸಂದೇಶ ಸನ್ನಿಧಿ-ಚಿಂತನಗಳು 2012/130
9. ಹಂಗಾಮಿ ಬಿಡಾರದ ಸಂಗಾತಿಗಳು-ಆಶುಭಾಷಣ 2013/84
10. ಹೃದಯ ಹೇಳಿದ ಮಾತು (ಉಡಿಜ಼ಚಿಣ ಉಜಿಣ)-ನುಡಿಮುತ್ತು 2012/105

ಪ್ರಶಸ್ತಿ/ಗೌರವ:

1. ಸಂಸ್ಕೃತೋತ್ಸವದಲ್ಲಿ ಪ್ರಬಂಧಕ್ಕಾಗಿ ರಾಜ್ಯ ಪ್ರಶಸ್ತಿ................................. 2003
2. ಶಿಕ್ಷಣ ಕಲ್ಯಾ ನಿಧಿಯಿಂದ ಪ್ರಶಸ್ತಿ-ಆಶುಭಾಷಣಕ್ಕಾಗಿ 2013, 2014

(765) ಭಟ್ಟ ಸಿ.ಜಿ. ನರಸಿಂಹ, ಬೆಂಗಳೂರು (ಜ:20-6-1949) ವೇದಾಂತ, ಅಲಂಕಾರ ವಿದ್ವಾನ್, ಹಿಂದೀ ಭಾಷಾ ಪ್ರವೀಣ, ಎಂ.ಎ.(ಕನ್ನಡ), ಬಿ.ಎಡ್. ಪದವೀಧರ. ನಿವೃತ್ತ ಹೈಸ್ಕೂಲು ಮುಖ್ಯಾಧ್ಯಾಪಕ. Lecturer St. Germains P.U.College, Bangalore. ತಂದೆ ಗಣಪತಿ ಭಟ್ಟ, ಚಿಕ್ಕಡಿ, ಶಿರಸಿ. ತಾಯಿ ಗಿರಿಜಾ. ಪತ್ನಿ ಅನ್ನಪೂರ್ಣಾ.

ಪ್ರಕಟಿತ ಕೃತಿಗಳು :

1. ಗಿಳಿಗುಂಡಿರಹಸ್ಯ-ಮಕ್ಕಳ ಸಾಹಸ ಕಥೆಗಳು 2010/160
2. ಪ್ರಬಂಧ ಮಂಜರಿ-ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ 1998/90
3. ಯಾರಂತೆ......!-ಹರಟೆ.. 2013/120
4. ಯುರೋಪಿನ ನೆನಪುಗಳು-ಪ್ರವಾಸ ಕಥನ 2009/100
5. ವ್ಯಾಕರಣ ಪ್ರದೀಪ-ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ 2000/2000

(766) ಭಟ್ಟ ಸುಬ್ರಹ್ಮಣ್ಯ ಬೀರಂತಬೈಲು, ಕಾಸರಗೋಡು (ಜ: 1-6-1951) ಎಂ.ಎ., ಬಿ.ಎಡ್. ಪದವೀಧರ. ಶಿಕ್ಷಕ, ಉಪನ್ಯಾಸಕ, ಮುಖ್ಯೋಪಾಧ್ಯಾಯ. ಪ್ರಾಂಶುಪಾಲ. ನಿವೃತ್ತ ಸಹಾಯಕ ಶಿಕ್ಷಣಾಧಿಕಾರಿ. ಕನ್ನಡ ಸಾಹಿತ್ಯ ಪರಿಷತ್ತಿನ ಕೇರಳ ಗಡಿನಾಡು ಘಟಕ ಕಾಸರಗೋಡಿನ ಅಧ್ಯಕ್ಷ. ಸಂಘಟಕ, ಸಾಮಾಜಿಕ ಕಾರ್ಯಕರ್ತ. ತಂದೆ ವೆಂಕಟರಮಣ ಭಟ್ಟ, ಸಾಲಕೋಡು, ಹೊನ್ನಾವರ. ತಾಯಿ ಲಕ್ಷ್ಮಿ. ಪತ್ನಿ ತಾರಾ.

ಪ್ರಕಟಿತ ಕೃತಿಗಳು :

1. ಕಾವ್ಯಕುಸುಮ-ಕವನ ಸಂಕಲನ 2013/40
2. ಮಂದಾರ-ಕವನ ಸಂಕಲನ 2010/32

ಪ್ರಶಸ್ತಿ/ಗೌರವ: 'ಕುವೆಂಪು ಕನ್ನಡ ಸಾಹಿತ್ಯ ರತ್ನ ಪರಿಷತ್ ಪ್ರಶಸ್ತಿ' ಕಾಸರಗೋಡಿನಲ್ಲಿ ಪೌರಸನ್ಮಾನ

(767) ಭಟ್ಟ ಸುಬ್ರಾಯ ಎಮ್. ಚಿತ್ರಗಿ, ಕುಮಟಾ (ಜ: 24-9-1941) ಎಂ.ಎ., ಬಿ.ಎಡ್. ಪದವೀಧರ. ನಿವೃತ್ತ ಹೈಸ್ಕೂಲು ಶಿಕ್ಷಕ. ತಂದೆ ಮಂಜುನಾಥ ಭಟ್ಟ, ಮದ್ಗುಣಿ, ಕುಮಟಾ. ತಾಯಿ ಕಾಮಾಕ್ಷಿ. ಪತ್ನಿ ಸುಶೀಲಾ.

ಪ್ರಕಟಿತ ಕೃತಿಗಳು :

1. ಕನಸಿನ ಕೇದಾರ-ಪ್ರವಾಸ ಕಥನ 2010/47
2. ಪ್ರಬಂಧ ಸಂಗ್ರಹ 2011/188

(768) ಭಟ್ಟ ಸುಬ್ರಾಯ ಗಣೇಶ ಗಡಿಗೆಹೊಳೆ, ಶಿರಸಿ (ಜ: 1-5-1945) ಎಂ.ಎ., ಬಿ.ಎಡ್. ಪದವೀಧರ. ರೇಖಿ ಗ್ರಾಂಡ್ ಮಾಸ್ಟರ್, ಪ್ರಾಣಿಕ್ ಕ್ರಿಸ್ಟಲ್ ಹೀಲರ್, ಪುರೋಹಿತ, ಯಕ್ಷಗಾನ ಕಲಾವಿದ. ತಂದೆ ಗಣೇಶ ಭಟ್ಟ, ತಾಯಿ ಮಂಕಾಳ. ಪತ್ನಿ ಸುಶೀಲಾ.

ಪ್ರಕಟಿತ ಕೃತಿಗಳು :

1. ನಮ್ಮ ಭಾರತ 2012
2. ಮನಮಂಥನ-ವೈಚಾರಿಕ ಲೇಖನಗಳು 2010/310
3. ಮಹಾಪ್ರಸಾದ-ವಿಮರ್ಶೆ 1992/118
4. ಜ್ಞಾನಯಜ್ಞ-ಶೇಣಿಯವರ ಅರ್ಥಸಂಗ್ರಹ (ಸಹ ಸಂಪಾದಿತ) 1982/137
5. ಶ್ರೀ ಲಕ್ಷ್ಮೀ ಸಹಸ್ರನಾಮ (ಸಹಸಂಪಾದಿತ) 2005/68

(769) ಭಟ್ಟ ಸುಬ್ರಾಯ ವಿ. (ಡಾ||) ಶೃಂಗೇರಿ (ಜ: 1-6-1964) ಮೀಮಾಂಸಾ ಶಾಸ್ತ್ರದಲ್ಲಿ ಪಿಎಚ್.ಡಿ. ಪದವೀಧರ. ಶೃಂಗೇರಿಯ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠದಲ್ಲಿ ಮೀಮಾಂಸಾ ವಿಭಾಗದ ಮುಖ್ಯಸ್ಥ. ತಂದೆ ವೆಂಕಟರಮಣ ಭಟ್ಟ, ಗುಂಜಗೋಡು, ಸಿದ್ದಾಪುರ. ತಾಯಿ ಮಹಾದೇವಿ. ಪತ್ನಿ ಚೇತನಾ.

ಪ್ರಕಟಿತ ಕೃತಿ : ಕೂಷ್ಮಾಂಡ ಮಂತ್ರಾರ್ಥ ದೀಪಿಕಾ 2001/100

(770) ಭಟ್ಟ ಸೂರ್ಯನಾರಾಯಣ ನಾಗೇಂದ್ರ (ಡಾ.) ಬೆಂಗಳೂರು (ಜ: 7-1-1954) ವಿದ್ವಾನ್, ಎಂ.ಎ. ವಿದ್ಯಾವಾರಿಧಿ ಪದವೀಧರ. ಕೇರಳದ ಕಲ್ಲಿ ಕೋಟೆಯಲ್ಲಿ ಉಪನ್ಯಾಸಕ, ಪುದುಚೇರಿ ಮತ್ತು ಮೈಸೂರಿನಲ್ಲಿ ಸಂಶೋಧಕ. ತಂದೆ ನಾಗೇಂದ್ರ ಭಟ್ಟ, ಹಿತ್ಲಳ್ಳಿ, ಯಲ್ಲಾಪುರ. (ಗ್ರಂಥಕರ್ತ) ತಾಯಿ ಪಾರ್ವತಿ. ಪತ್ನಿ ಮಹಾಲಕ್ಷ್ಮಿ.

ಪ್ರಕಟಿತ ಕೃತಿಗಳು :

ಅ. ಸಂಸ್ಕೃತ ಕೃತಿಗಳು

1. ಕಾವ್ಯಶಾಸ್ತ್ರಂ (ಸಂಸ್ಕೃತ)... 2005/55
2. ಗುಂಜಗರ್ವಭಂಗ ಭಾಗ 1 ಸಂಸ್ಕೃತ 2007/124
3. ಛಾಂದೋಗ್ಯೋಪನಿಷತ್-ನಿತ್ಯಾನಂದ ಆಶ್ರಮರವರ 2007/190
   ಮಿತಾಕ್ಷರದೊಂದಿಗೆ-ಸಂಸ್ಕೃತ-ಸಂಪಾದಿತ
4. ನಿಗಮಾರ್ಥ ದೀಪಿಕಾ-ಸಂಸ್ಕೃತ-ಸಂಪಾದಿತ 2004/38
   (ಮೂಲ : ರಾಮೇಶ್ವರ ಸೂರಿ)
5. ಬೌಧಾಯನೀಯ ಸಂಕ್ಷಿಪ್ತ ಸಂಧ್ಯೋಪಾಸನೆ (ಸಂಕಲಿತ) 2011/40
6. ಭಟ್ಟ ನಯೋದ್ಯೋತ-ಸಂಸ್ಕೃತ-ಸಂಪಾದಿತ 2006/560
   (ಮೂಲ : ನಾರಾಯಣ ಸುಧಿ)
7. ಭಾಷಾಶಾಸ್ತ್ರ (ಸಂಸ್ಕೃತ) 2005/58
8. ಮಾಣಿಕ್ಯ ಮಂಜರಿ-ಸಂಸ್ಕೃತ ವ್ಯಾಖ್ಯಾನ ಸಹಿತ 2002/184
   (ಮೂಲ: ರಘುನಾಥ ಸೂರಿ)
9. ಯಾಜ್ಞಿಕೋಪನಿಷತ್ ಅಥವಾ ಮಹಾನಾರಾಯಣೋಪನಿಷತ್ 2007/200
   ವಿಜ್ಞಾನೇಶ್ವರರ ವಿವರಣೆ ಸಹಿತ-ಸಂಸ್ಕೃತ-ಸಂಪಾದಿತ
10. ಶುಕಾಷ್ಟಕ-ಶ್ರೀ ಗಂಗಾಧರೇಂದ್ರ ಸರಸ್ವತೀ ವ್ಯಾಖ್ಯಾನ ಸಹಿತ- 1992/64
    ಸಂಸ್ಕೃತ (ಸಂಪಾದಿತ)
11. ಶ್ರೀ ಲಲಿತಾ ಸಹಸ್ರನಾಮ ಚಂದ್ರಿಕಾ-ಸಂಸ್ಕೃತ-ಸಂಪಾದಿತ-
    ಮೂಲ ವೈದ್ಯನಾಥ .... (1)2007,(2)2010/318

12. ಸಹಸ್ರಚಂದ್ರದರ್ಶನ ಶಾಂತಿ-ಸಂಸ್ಕೃತ-ಸಂಗ್ರಹಿತ 2010/40
13. ಸಾಹಿತ್ಯಶಾಸ್ತ್ರೇತಿಹಾಸ-ಸಂಸ್ಕೃತ ....
14. ಸಿದ್ಧಾಂತ ಕೌಮುದಿ ಸಂಸ್ಕೃತ-ಸಂಪಾದಿತ 2005/196

ಬ. ಇತರ ಕೃತಿಗಳು

1. ಅರ್ಥಸಂಗ್ರಹ-ಸಾನುವಾದ 1986/74
2. ಆಚಾರ್ಯ ಬೃಹಸ್ಪತಿ 2014/85
3. ಕಪಿಲಾಶ್ರಮ ವೈಭವ 2012/130
4. ಕಾವ್ಯ ಪ್ರಕಾಶ 2005/155
   (1 ರಿಂದ 5 ಅಧ್ಯಾಯ. ಸಂಸ್ಕೃತ-ಕನ್ನಡ ಟಿಪ್ಪಣಿ ಸಹಿತ)
5. ಕೈವಲ್ಯಾಂಬಾ ಕ್ಷೇತ್ರ ಮಹಿಮೆ ಮತ್ತು ಪೂಜೆ-ಸಂಶೋಧಿತ ಕೃತಿ 2002/42
6. ಗುಂಜಗರ್ವಭಂಗ-ಭಾಗ 2 ಕನ್ನಡ 2007/180
7. ಚಂದ್ರಾಲೋಕ ಅನುವಾದಿತ (ಸಂಸ್ಕೃತ ಮೂಲ: ಜಯದೇವ) ....
8. ಚಂಪೂ ರಾಮಾಯಣ-ಸುಂದರಕಾಂಡ-ಅನುವಾದಿತ 1999/88
9. ನೃಸಿಂಹ ಸಹಸ್ರನಾಮ ಭಾಷ್ಯ-ಸಂಪಾದಿತ 1998/260
10. ಬೃಹದ್ಗಂಗಾಧರೇಂದ್ರರು-ಚರಿತ್ರೆ 2001/70
11. ಮಹರ್ಷಿಜೈಮಿನಿ 2014/67
12. ಮಾಣಿಕ್ಯ ಮಂಜರಿ-ಸಾನುವಾದ.. 2003/64
13. ಮೀಮಾಂಸಾ ಪರಿಭಾಷೆ-ಅನುವಾದಿತ 1996/64
14. ಯೋಗವಾಸಿಷ್ಠ-ಭಾಗ 8 (ಸಾನುವಾದ) 2014/376
15. ವಿದ್ವತ್ ಸ್ಫುರಣಂ 2011/72
16. ವಿದ್ಯಾಮಾಧವ ಪಂಡಿತರು-ಪರಿಚಯ 2011/66
17. ವಿದ್ಯಾಮಾಧವ ವಿರಚಿತ ಪಾರ್ವತೀರುಕ್ಮಿಣೀಯಂ-ಸಾನುವಾದ 2013/144
18. ಶ್ರೀ ಗಣೇಶ ಮಾನಸಪೂಜಾ 2012/30
19. ಶ್ರೀ ಗಣೇಶ ಮಾನಸ ಪೂಜೆ 2011/72
20. ಶ್ರೀ ಗುರುದೇವತಾ ಭಜನಾವಳಿ 2007/84
21. ಶ್ರೀಲಕ್ಷ್ಮೀನೃಸಿಂಹ ಕಲ್ಪೋಕ್ತ ಪೂಜಾವಿಧಿ-ಪ್ರಯೋಗ 2000/97
22. ಶ್ರೀ ಸತ್ಯನಾರಾಯಣ ಪೂಜಾವಿಧಿಃ 2011/200
23. ಶ್ರೀ ಸೂಕ್ತಭಾಷ್ಯ-ಅನುವಾದ (ಮೂಲ: ವಿದ್ಯಾಮಾಧವ ಪಂಡಿತ) ... 2015/68
24. ಶ್ರೀ ಹಸ್ತಾಮಲಕಾಚಾರ್ಯ 2014/88
25. ಸಂಧ್ಯಾವಂದನೆ 2011/8
26. ಹಾನಗಲ್ ಶ್ರೀ ವಿರೂಪಾಕ್ಷ ಶಾಸ್ತ್ರೀ 2013/66

(771) ಭಟ್ಟ ಹಂದಿಗೋಣ ಕೃಷ್ಣ, ಕುಮಟಾ (ಜ: 19-9-1934) 6ನೇ ಇಯತ್ತೆ ಶಿಕ್ಷಣ. ಮುದ್ರಣೋದ್ಯಮಿ. ಕೃಷಿಕ. ತಂದೆ ಪರಮೇಶ್ವರ ಭಟ್ಟ, ಹಂದಿಗೋಣ, ಕುಮಟಾ. ತಾಯಿ ಕಾಶಿ. ಪತ್ನಿ ಗೋದಾವರಿ, ಲಲಿತಾ.

ಪ್ರಕಟಿತ ಕೃತಿಗಳು :

1. ಈ ಮರದ ನೆರಳಿನಲಿ-ಕವನ ಸಂಕಲನ 2010/72
2. ಒಂದು ಮುಂಜಾನೆ-ಕವನ ಸಂಕಲನ 2010/60
3. ಸರ್ವ ತೀರ್ಥಾನಿ ಸಾಗರೇ-ಕವನ ಸಂಕಲನ 2011/64

(772) ಭಟ್ಟ ಹೇರಂಬ ಆರ್., ಬೆಂಗಳೂರು (ಜ: 5-4-1960) ವಿದ್ವಾನ್, ಎಂ.ಎ., ಬಿ.ಎಡ್. ಪದವೀಧರ. ಕೇಂದ್ರೀಯ ವಿದ್ಯಾಲಯದಲ್ಲಿ ಶಿಕ್ಷಕ. ಸಾಮಾಜಿಕ ಕಾರ್ಯಕರ್ತ, ಸಂಘಟಕ. ತಂದೆ ರಾಮಕೃಷ್ಣ ಭಟ್ಟ ಅಗ್ಗೆರೆ, ಸಿದ್ದಾಪುರ. ತಾಯಿ ಭುವನೇಶ್ವರಿ. ಪತ್ನಿ ಪಾರ್ವತಿ.

ಪ್ರಕಟಿತ ಕೃತಿಗಳು :

1. ಸನಾತನ ಸಂಸ್ಕಾರಗಳು 2001/64
2. ಕೆರೆಮನೆ ಶಿವರಾಮ ಹೆಗಡೆ-ವ್ಯಕ್ತಿ ಪರಿಚಯ 2012/64

(773) ಭಟ್ಟ ಹೋಬಳ ಗಣೇಶ, ಬೆಂಗಳೂರು (ಜ: 31-10-1959) ಅದ್ವೈತ ವೇದಾಂತ **ವಿದ್ವಾನ್. ಎಂ.ಎ., ಬಿ.ಎಡ್. ಪದವೀಧರ. ಸಂಯುಕ್ತ ವಿದ್ಯಾಲಯದಲ್ಲಿ ಸಂಸ್ಕೃತ ಶಿಕ್ಷಕ**. ತಂದೆ ದೇವರು ಭಟ್ಟ, ಹೋಬಳ ನೆಲೆಮಾವು, ಸಿದ್ದಾಪುರ. ತಾಯಿ ವೆಂಕು. ಪತ್ನಿ ಆಶಾ.

ಪ್ರಕಟಿತ ಕೃತಿಗಳು :

1. ಆತ್ಮಾರ್ಪಣಸ್ತುತಿ-ಅನುವಾದ 2010/110
2. ಮೋಹಮುದ್ಗರ-ಉಪನ್ಯಾಸ ಸಂಗ್ರಹ 2010/160
3. ಸೌಂದರ್ಯ ಲಹರೀ-ಅನುವಾದ .... (1)2002, (5)2013/130

ಪ್ರಶಸ್ತಿ/ಗೌರವ :

1. ಬೆಂಗಳೂರು ದಕ್ಷಿಣ ವಲಯದಿಂದ ಉತ್ತಮ ಶಿಕ್ಷಕ ಪ್ರಶಸ್ತಿ 2008
2. ಭಾರತೀಯ ಜೀವವಿಮಾ ನಿಗಮದಿಂದ ಉತ್ತಮ ಶಿಕ್ಷಕ ಪ್ರಶಸ್ತಿ 2013

(774) Bhandari Ramachandra Ganesha Mumbai (BOD: 29-7-1938): M.Sc. मह्रस्ुह्रड्डकह्रू ँ थह्रत्त्ञोह्ररह्रड्डम?ह्र ोह्रिोह्रह्र अहह्रत्त्षह्रड्डउ? म्रुञ्च?स्ष्म?ह्र शह्रड्डड्डलह्ररह्रू ्ह्रलउँह्रह्रड्डलह्रम? अड्डकह्रम?ह्रड्डू | ड्डमह्रहि्रह्रि ाह्रहह्ररुषह्र पह्रञ्च्.ह्रड्डू ोह्रतम्द्ध? ै.ह्ररुकूह्रह्रह्रू | थह्रह्रह्रि्रह्राशह्रत्त्ञस्ड्डू | मह्रड्डह्राअह्रषह्रह्र | मह्रश्चम?ड्डौ.ह्रि म्द्ध?ड्डह्रिरह्रह्रञ्च: म?ह्ररुञ्चम?ड्डहह्रथह्ररु

1. अह्रथै.ड्डरह्रड्ड लह्रह्रमह्रह्रशह्र ेह्रह्रससह्रड्डञ्चह्रिड्डाअह्रथिह्रचह्रड्डूह्र.................................2012/60
2. ाह्रत्त्चस्रुह्रह्रसह्रह्ररु ड्डह्रड्डषह्रक्र म?ह्रहरह्रह्ररुा-.ह्ररुप.ड्ड म?ै.ह्रड्डलह्ररह्रह्रञ्च 2011/76
3. पह्रञ्च्.ड्डू थह्रह्रथरह्रह्रसह्रह्ररु म?ह्रहरह्रह्ररुा-.ह्ररुप.ड्ड म?ै.ह्रड्डलह्ररह्रह्रञ्च 2012/62
4. ै.ह्रञ्चुह्रह्ररुड्डरह्र अथह्ररुड्डूम?ह्रम? ाह्ररुससह्ररुसह्रह्ररुञ्चाअलह्रत्त्ुह्रह्रड्डसह्रि 2012/86

(ಮೂಲ ಕನ್ನಡ: ನಾನೂ ಅಮೇರಿಕೆಗೆ ಹೋಗಿದ್ದೆ. ಲೇ: ಡಾ. ಕೃಷ್ಣಾನಂದ ಕಾಮತ) **ಟಿಪ್ಪಣಿ**: ಮೊದಲ ಮೂರು ಕೃತಿಗಳು ದೇವನಾಗರೀ ಲಿಪಿಯಲ್ಲಿದ್ದು ನಾಲ್ಕನೇ ಕೃತಿ ಕನ್ನಡ ಲಿಪಿಯಲ್ಲಿದೆ.

(775) ಭಂಡಾರಿ ವಿಠ್ಠಲ (ಡಾ.) ಕೆರೆಕೋಣ, ಹೊನ್ನಾವರ (ಜ: 27-6-1968): M.A., Ph .D. ಪದವೀಧರ. ಸಿದ್ದಾಪುರದ ಪದವಿ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ. ತಂದೆ-ಡಾ. ರೋಹಿದಾಸ ಭಂಡಾರಿ ಕೆರೆಕೋಣ (ಗ್ರಂಥಕರ್ತ) ತಾಯಿ-ಸುಬ್ಬಿ. ಪತ್ನಿ- ಯಮುನಾ ಗಾಂವ್ಕರ (ಗ್ರಂಥಕರ್ತೆ)

ಪ್ರಕಟಿತ ಕೃತಿಗಳು:

1. ಒಡಲ ಬೆಂಕಿ (ಹಸಿವಿನ ಕವಿತೆಗಳು)-ಸಂಪಾದಿತ 2009/110
2. ಜಾನಪದ : ಸಾಂಸ್ಕೃತಿಕ ಮುಖಾಮುಖಿ-ವೈಚಾರಿಕ 2013/100
3. ಮಕ್ಕಳ ಜಗತ್ತು-ವಿಮರ್ಶೆ-ಸಂಪಾದಿತ.. 2011/99
4. ಹಶ್ಮಿ ನಾಟಕಗಳು-ಬೀದಿ ನಾಟಕಗಳು-ಸಂಪಾದಿತ 2013/156
5. ಹಸಿವಿನ ಹಾಡು-ವೈಚಾರಿಕ ಲೇಖನಗಳು................................ 2011/146

ಟಿಪ್ಪಣಿ: ಡಾ. ರೋಹಿದಾಸ ಭಂಡಾರಿಯವರ ಮಕ್ಕಳ ನಾಟಕಗಳ ಸಂಗ್ರಹ 'ಪ್ರೀತಿಯ ಕಾಳು' ಕೃತಿ ಸಂಪಾದಕ 2011/196

(776) ಭರತನಹಳ್ಳಿ ನಾ.ಸು., ಯಲ್ಲಾಪುರ (ಜ: 21-7-1936) ಎಸ್.ಎಸ್.ಸಿ., ಎಚ್.ಡಿ.ಸಿ., ಹಿಂದೀ ವಿಶಾರದ. 'ಮುನ್ನಡೆ' ದೈನಿಕ ಪತ್ರಿಕಾ ಸಂಪಾದಕ, ಸ್ವರ್ಣವಲ್ಲಿ ಪ್ರಭಾ-ಸಂಪಾದಕ. ತಾಲೂಕು ಕಸಾಪ ಅಧ್ಯಕ್ಷ-3 ಅವಧಿಗೆ, ಸಾಹಿತ್ಯಕ-ಸಾಂಸ್ಕೃತಿಕ ಸಂಘಟಕ. ಯಲ್ಲಾಪುರ ತಾಲೂಕಾ ಸಾಹಿತ್ಯ ಭವನದ ರೂವಾರಿ. ಹೆಸರು ನಾರಾಯಣ. ತಂದೆ ಸುಬ್ರಾಯ ಹೆಗಡೆ, ತಾಯಿ ಕಾವೇರಿ. ಪತ್ನಿ ಮಹಾದೇವಿ.

ಪ್ರಕಟಿತ ಕೃತಿಗಳು : (36)

1.+ ಅಂತರ್ಜ್ಯೋತಿ (ಸಂಪಾದಿತ) 2006/108
2. ಅಂತರಂಗದೆಡೆಗೆ ಒಂದಿಷ್ಟು ಮಾತು-ವೈಚಾರಿಕ 2011/200
3. ಅರಿವಿನ ಬೆಳಕಿನೆಡೆಗೆ-ಸಂಪಾದಕೀಯ ಮತ್ತು ಅಂಕಣ ಬರಹಗಳು2008/168
4. ಅವಾಂತರ-ನಾಟಕ 1998/74
5. ಆಕಾಶ ಹರಿದು ಬೀಳುತ್ತದೆ-ಮಕ್ಕಳ ನಾಟಕ 2003/12
6. ಆಚಾರ್ಯ ಚಾಣಕ್ಯ-ಮಕ್ಕಳ ಸಾಹಿತ್ಯ 2011/64
7. ಉತ್ತರ ಕನ್ನಡದಲ್ಲಿ ಸ್ವಾತಂತ್ರ್ಯ ಪೂರ್ವ ಪತ್ರಿಕೆಗಳ ಹೆಜ್ಜೆ ಗುರುತು.....1996/16
8. ಏಳು ಪ್ರಶ್ನೆಗಳು : ಹಾತಿಮನ ಸಾಹಸ-ಮಕ್ಕಳ ಸಾಹಿತ್ಯ 2009/104
9. ಕಾಲ ದೇಶ ಧರ್ಮ-ವೈಚಾರಿಕ 2012/102
10. ಡಾ|| ಗೌರೀಶ ಕಾಯ್ಕಿಣಿ ಬದುಕು ಬರೆಹ 1997/118
11. ಚಿಂತನೆಯ ತುಣುಕು-ಮಿಣುಕು 1997/70
12. ತಾಲಿಬಾನ ಅಫಘಾನ ಮತ್ತು ನಾನು-ಅನುವಾದಿತ 2015/226
13. ದಶಕಂ ಧರ್ಮಲಕ್ಷಣಂ: ಲೇಖನಗಳು-ಸಂಪಾದಿತ 2009/184
14.+ಧರ್ಮಸಂದೇಶ (ಸಂಪಾದಿತ) 2003/128
15. ನಾಮ ಭಗವಂತನ ದಿವ್ಯ ಚರಿತ್ರೆ-ಅನುವಾದಿತ 2003/58
16. ನಿಷ್ಠೆಯ ಫಲ-ಮಕ್ಕಳ ಸಾಹಿತ್ಯ 2011/72
17. ಪಂಜರದಲ್ಲಿ ಹುಲಿ-ಮಕ್ಕಳ ನಾಟಕ 1996/24
18. ಪರಿವೃತ-ಐತಿಹಾಸಿಕ ಕಾದಂಬರಿ 2000/231
19. ಪೂರ್ವತಟದಿ ಪುಟ್ಟ ವಿಶ್ವ-ಕಥನ ಸಂಕಲನ 2008/152
20. ಪ್ರಕೃತಿ-ವಿಕೃತಿ ಕವನಗಳು (ಪ್ರಶಸ್ತಿ ಪುರಸ್ಕೃತ).................................2006/56
21. ಬದುಕು ಭಾವ-ಕವನಗಳು 2013/70
22. ಬಯಲು ಬೆತ್ತಲೆ-ಐದು ಸಣ್ಣ ಕತೆಗಳು 1980/60
23. ಭಾರತೀಯ ಸೌಂದರ್ಯಜ್ಞಾನ ಮತ್ತು ತುಲಸೀದಾಸ -ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿಯ ಅನುವಾದ 2013/630
24. ಭೂಮಿಕೆ-ಕಾದಂಬರಿ (ಭಾಗಶಃ ಹವಿಗನ್ನಡದಲ್ಲಿ) 1994/112
25. ರಾಕ್ಷಸ ಗೋಡೆ-ಮಕ್ಕಳ ನಾಟಕ 2009/60
26. ರೊಬೊಟೊ ಮತ್ತು ಚಿಹ್ನೆಗಳು-ಮಕ್ಕಳ ನಾಲ್ಕು ನಾಟಕಗಳು 2007/130
27. ವಿಜಯ-ಸಾಹಿತ್ಯ ಲೇಖನಗಳು (ಸಂಪಾದಿತ) 1960/106
28. ಶರಣೆಂಬೆ ತಾಯೆ-ಭಾವಗೀತೆಗಳು 2002/24
29. ಶಾಸ್ತ್ರಪ್ರಭಾ-ವಿವಿಧ ಲೇಖನಗಳು (ಸಂಪಾದಿತ) 2005/235

30. ಶ್ರೀನುಡಿಯೊಡಲು–ತತ್ವಾರ್ಥ 2007/152
31. ಸತ್ಯ ತಿಳಿಯಿತು–ಕಿರುನಾಟಕ 2002/18
32.+ಸಂದೇಶ ನುಡಿ (ಸಂಪಾದಿತ) 2001/90
33. ಸರ್ವಜ್ಞೇಂದ್ರ ದಿವ್ಯದರ್ಶನ–ಸಂಪಾದಿತ 2010/470
34. ಸೀಮಾದರ್ಶನ ಭಾಗ–1 ಚರಿತ್ರೆ (ಸಂಪಾದಿತ) 2008/164
35. ಸೀಮಾದರ್ಶನ ಭಾಗ–2 ಚರಿತ್ರೆ (ಸಂಪಾದಿತ) 2009/80
36. ಹನಿಹಂಬಲ–
ಉ.ಕ. ಜಿಲ್ಲಾ 14ನೇ ಕ.ಸಾ.ಸಮ್ಮೇಲನ ಅಧ್ಯಕ್ಷೀಯ ಭಾಷಣ 2008/40
+ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ ದಿವ್ಯವಚನ, ಲೇಖನಗಳ ಸಂಗ್ರಹಗಳು

ಪ್ರಶಸ್ತಿ/ಗೌರವ :

1. ಶಾಮರಾವ್ ದತ್ತಿ ಪ್ರಶಸ್ತಿ 1999
2. ಕರ್ನಾಟಕ ಮಾಧ್ಯಮ ಎಕಾಡೆಮಿ ಪ್ರಶಸ್ತಿ.. 2003
3. ಕರ್ನಾಟಕ ಶ್ರೀ ಪ್ರಶಸ್ತಿ–ಕಸಾಪದಿಂದ 2004
4. ಅವ್ಯಾಜ ಪ್ರೀತಿ–ನಾ.ಸು. ಬದುಕು ಬರಹ ಲೇ. ಟಿ.ಜಿ. ಭಟ್ಟ, ಹಾಸಣಗಿ 2006/70
5. ಸನ್ಮತಿ–ನಾಸು 70 ಅಭಿನಂದನ ಗ್ರಂಥ ಸಂ। ಮಹಾಂತೇಶ ಮೂಗಿ . 2006/200
6. ಯಲ್ಲಾಪುರ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ .. 2006
7. ಕಯ್ಯಾರ ಕಿಂಞಣ್ಣ ರೈ ಕಾವ್ಯ ಪ್ರಶಸ್ತಿ 2007
8. ರಾಜ್ಯ ಸಾಹಿತ್ಯ ಅಕಾಡೆಮಿ ಗ್ರಂಥ ಪ್ರಶಸ್ತಿ–
ರೊಬೊಟೋ ಮತ್ತು ಚಿಹ್ನೆಗಳು ಕೃತಿಗಾಗಿ 2008
9. ಉ.ಕ. ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.................. 2008
10. ಕರ್ಕಿ ಸೂರಿ ವೆಂಕಟರಮಣ ಶಾಸ್ತ್ರಿ ಪ್ರಶಸ್ತಿ 2010
11. ಉಪಾಯನ ಪ್ರಶಸ್ತಿ 2014
12. 'ಸಾಹಿತ್ಯ ರತ್ನಾಕರ' ಬಿರುದು–ಸ್ವರ್ಣವಲ್ಲಿ ಮಠದಿಂದ............................ 2015

(777) ಭಾಗವತ ಅಕ್ಷಯ, ಬೆಂಗಳೂರು (ಜ: 3–3–1986) ಬಿ.ಇ., ಪಿ.ಜಿ.ಡಿ.ಪಿ.ಆರ್. ಎಂ.ಬಿ.ಎ. ಪದವೀಧರ. ಎಸ್.ಬಿ.ಐ.ನಲ್ಲಿ ಉದ್ಯೋಗಿ. ತಂದೆ ರಾಮಕೃಷ್ಣ ಭಾಗ್ವತ, ದೊಡ್ಮನೆ, ಸಿದ್ದಾಪುರ. ತಾಯಿ ಪ್ರೇಮಾ. ಪತ್ನಿ ಅಶ್ವಿನಿ.

ಪ್ರಕಟಿತ ಕೃತಿಗಳು :

1. ಓದು ಯಶಸ್ಸು ಜೀವನ ಬುನಾದಿ–ವ್ಯಕ್ತಿತ್ವ ವಿಕಸನ.......................... 2005/52
2. ಸನ್‌ಟ್ಜುನ ಯುದ್ಧಕಲೆ–ಅನುವಾದಿತ 2007/56

(778) ಭಾಗವತ ಆರ್.ವಿ., ಶಿರಸಿಮಕ್ಕಿ, ಶಿರಸಿ (ಜ: 15–9–1946) ಎಂ.ಎ. ಪದವೀಧರ. ನಿವೃತ್ತ ಉಪನ್ಯಾಸಕ, ಕೃಷಿಕ. ಸಾಮಾಜಿಕ ಕಾರ್ಯಕರ್ತ. ಹೆಸರು ರಾಮಚಂದ್ರ. ತಂದೆ ವೆಂಕಟರಮಣ ಹೆಗಡೆ, ಶಿರಸಿಮಕ್ಕಿ, ತಾಯಿ ಸೌಭದ್ರೆ. ಪತ್ನಿ ಮಹಾದೇವಿ.

ಪ್ರಕಟಿತ ಕೃತಿಗಳು :

1. ಅಂಕಣ–ಲೇಖನ ಸಂಗ್ರಹ 2013/184
2. ಗುಚ್ಛ–ಕವನ ಸಂಕಲನ 2013/56
3. ತಾಯ್ನಾಡಿನಲ್ಲಿ ತಡಕಾಟ–ಪ್ರವಾಸ ಕಥನ 2012/130
4. ಪಾತಾಳ ಗರಡಿ–ವೈಚಾರಿಕ 2012/148

5. ಬುಡಕಟ್ಟು ಹಾಗೂ ಅರಣ್ಯ ವಾಸಿಗಳ ಪಾರಂಪರಿಕ
ಹಕ್ಕು ಮಾನ್ಯತೆ ಕಾನೂನು-2006 (ಇತರರೊಡನೆ) 2008/52
6. ಬ್ರಹ್ಮಪುತ್ರೆ-ಲೇಖನ ಸಂಗ್ರಹ 2011/262
7. ಮಾನಸ ಸರೋವರ ಯಾತ್ರೆ-ನಿರೂಪಣೆ 1976/60
8. ಮೆಲುಕು-ವೈಚಾರಿಕ 2013/172
9. ಸಂಕಲನ-ವೈಚಾರಿಕ... 2011/206
10. ಅಂತರಂಗದ ಅಲೆಗಳು
11. ಹಳೇ ಹೈರಾಣ
12. ಗ್ರಾಸ
13. ಭಾರತ ಪರಿಭ್ರಮಣ
14. ಹಳೇ ನೀರಿನ ಹರಿವು

(779) **ಭಾಗವತ ಎಸ್.ಜಿ. (ಬ್ರಿಗೇಡಿಯರ್) ಧಾರವಾಡ** (ಜ: 21-10-1942) ಬಿ.ಇ. ಪದವೀಧರ. ನಿವೃತ್ತ ಮುಖ್ಯ ಎಂಜಿನಿಯರ್ (ಮೇಂಟೆನೆನ್ಸ್)-ಭಾರತೀಯ ಸೇನಾದಳದಲ್ಲಿ ಬ್ರೀಗೇಡಿಯರ್. ಸಾಮಾಜಿಕ ಕಾರ್ಯಕರ್ತ. ಹೆಸರು ಸುಬ್ಬಯ್ಯ. ತಂದೆ ಗಣಪತಿ ಭಾಗವತ ಕರ್ಕಿ, ಹೊನ್ನಾವರ. ತಾಯಿ ಕೃಷ್ಣವೇಣಿ. ಪತ್ನಿ ಅನುಸೂಯ.

ಪ್ರಕಟಿತ ಕೃತಿಗಳು :

1. ಅಂತರಂಗದ ಮೃದಂಗ 2015/102
2. ಗನ್ನು ಹಿಡಿದ ಕೈಯಲ್ಲಿ ಪೆನ್ನು-ಜೀವನ ವೃತ್ತಾಂತ 2007/148

(780) **ಭಾಗವತ ಕೃಷ್ಣ ವೆಂಕಟರಮಣ ಐತಾಳಮನೆ, ಶಿರಸಿ** (ಜ: 1942) ಕೃಷಿಕ. ಯಕ್ಷಗಾನ **ಭಾಗವತ. ತಂದೆ ವೆಂಕಟರಮಣ ಭಾಗವತ, ಐತಾಳಮನೆ, ಮೆಣಸಿ ಸೀಮೆ, ಶಿರಸಿ**. ತಾಯಿ ಪಾರ್ವತಿ. ಪತ್ನಿ ಗಂಗಾ ಮತ್ತು ಶ್ರೀಮತಿ.

ಪ್ರಕಟಿತ ಕೃತಿ :

ಭವಲೀಲಾ ವಿಲಾಸ ಅರ್ಥಾತ್ ಶಿವವೃತ ಮಹಾತ್ಮೆ-ಯಕ್ಷಗಾನ ಪ್ರಸಂಗ 1976/32

(781) **ಭಾಗವತ ಗಣಪತಿ ರಾಮಕೃಷ್ಣ ತ್ಯಾರಗಲ್ ಸಿದ್ದಾಪುರ** (ಜ: 21-5-1948) ಎಂ.ಎ., ಎಂ.ಎಡ್. ಪದವೀಧರ. ಹೈಸ್ಕೂಲು ಶಿಕ್ಷಕ. ತಂದೆ ರಾಮಕೃಷ್ಣ ಭಾಗವತ ತ್ಯಾರಗಲ್**, ತಾಯಿ ಲಕ್ಷ್ಮಿ, ಪತ್ನಿ ಪದ್ಮಾ.**

ಪ್ರಕಟಿತ ಕೃತಿ : ಪಂಚಾಯತನ ಸ್ತುತಿನಮನ-ಭಕ್ತಿಗೀತೆಗಳು 2015/80

(782) **ಭಾಗವತ ಗೋಪಾಲಕೃಷ್ಣ, ಕಡತೋಕಾ, ಹೊನ್ನಾವರ** (ಜ: 8-4-1972) ಬಿ.ಎ., ಎಲ್.ಎಲ್.ಬಿ. ಪದವೀಧರ. ನ್ಯಾಯವಾದಿ, ಯಕ್ಷಗಾನ ಭಾಗವತ, ತಾಳಮದ್ದಲೆ ಅರ್ಥಗಾರ. ಸಂಪಾದಕ 'ಯಕ್ಷರಂಗ' ಮಾಸಪತ್ರಿಕೆ, ಹಳದೀಪುರ, ಹೊನ್ನಾವರ. ತಂದೆ ಕಡತೋಕಾ ಮಂಜುನಾಥ ಭಾಗ್ವತ-ಗ್ರಂಥಕರ್ತ, ತಾಯಿ ಗೋದಾವರಿ.
ಪ್ರಕಟಿತ ಕೃತಿ : ಯಕ್ಷವನ ವಿಹಾರ-ಕಡತೋಕಾ ಮಂಜುನಾಥ ಭಾಗವತರ ಆತ್ಮಕಥನ ನಿರೂಪಣೆ 2010/150

(783) **ಭಾಗವತ ಪ್ರಕಾಶ ಶಿರಸಿ** (ಜ: 20-7-1969) ಬಿ.ಎ. ಹಾಗೂ ಕಾನೂನು ಪದವೀಧರ. ಪತ್ರಿಕೋದ್ಯಮಿ-ಸಂಪಾದಕ 'ಜನಮಾಧ್ಯಮ' ಶಿರಸಿ. ಕೃಷಿಕ. ತಂದೆ ರಾಮಕೃಷ್ಣ ಭಾಗವತ ತ್ಯಾರಗಲ್ ಸಿದ್ದಾಪುರ. ತಾಯಿ ಲಕ್ಷ್ಮಿ. ಪತ್ನಿ ಸುವರ್ಣ.

ಪ್ರಕಟಿತ ಕೃತಿಗಳು:

1. ಅಗ್ರಪೂಜೆ-ಪೌರಾಣಿಕ ನಾಟಕ 2012/126
2. ಬಹುತಾರಿ-ಕವನ ಸಂಕಲನ 2013
3. ಶರಶಯ್ಯೆ-ಪೌರಾಣಿಕ ನಾಟಕ 2012/126

ಪ್ರಶಸ್ತಿ/ಗೌರವ:

1. ಚೊಚ್ಚಲ ಕವನ ಸಂಕಲನಕ್ಕೆ ಕ.ಸಾ.ಪ.ದ ನಾ.ಕು. ಗಣೇಶ ದತ್ತಿ ಪುರಸ್ಕಾರ 2013
2. ಭಕ್ತಿ ದೀವಿಗೆ-ಧ್ಯಾನಗಾನಗಳ ಧ್ವನಿಸುರಳಿ 2003ರಲ್ಲಿ ಬಿಡುಗಡೆಯಾಗಿದೆ.
3. ವಿದ್ಯಾರ್ಥಿ ಜೀವನದಲ್ಲಿ ರಂಗನಟ, ಸಂಸ್ಕೃತ ನಾಟಕಗಳಲ್ಲಿ ಪ್ರಮುಖ ಪಾತ್ರಧಾರಿಯಾಗಿ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಸತತ 3 ಸಲ ಪ್ರಥಮ ಸ್ಥಾನ. ಶ್ರೇಷ್ಠನಟ ಪುರಸ್ಕಾರ. ಅಂತರ ಮಹಾವಿದ್ಯಾಲಯ ಕೈ ಬರಹದ ವಾರಪತ್ರಿಕೆ ರೂವಾರಿ.'ಸ್ನೇಹ ಕಲಾ ಕುಂಚ' ಸಂಗೀತ ಸಂಘಟನೆ ರೂವಾರಿ. ಹಲವು ಹಿರಿ-ಕಿರಿಯ ಸಂಗೀತ ಸಾಧಕರಿಗೆ ಸನ್ಮಾನ. ಪ್ರಕಟಿತ ನಾಟಕಗಳು ರಂಗಪ್ರಯೋಗಗೊಂಡಿವೆ.

(784) **ಭಾಗವತ ಸುಬ್ರಹ್ಮಣ್ಯ ಕುಮಟಾ** (ಜ: 18-7-1983) ಬಿ.ಇ., ಎಂ.ಟೆಕ್. ಪದವೀಧರ. ಭಟ್ಕಳ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕ. ಜ್ಯೋತಿಷಿ. ತಂದೆ ಗಜಾನನ ಭಾಗವತ, ಕರ್ಕಿ. ತಾಯಿ ಭವಾನಿ. ಪತ್ನಿ ಪೂಜಾ.

ಪ್ರಕಟಿತ ಕೃತಿಗಳು :

1. ಇಂಟರವ್ಯೂ 2009/78
2. ಈ ಬದುಕೇ ಒಂದು ಚಾಲೇಂಜ್... 2009/125
3. ಈ ಬದುಕೇ ಹಾಗೆ ಟೇಕ್ ಇಟ್ ಈಸೀ 2009/45
4. ಐಡಿಯಾಗಳು.. 2009/25
5. ಓ ಮನಸ್ಸೇ ಬಿ ಕೂಲ್ 2009/250
6. ಕ್ಷಿಪ್ರ ಜ್ಯೋತಿಷ್ಯಾಸ್ತ್ರ 2009/100
7. ಚಿಂತೆಯೇಕೆ? ಸ್ಮಾಯಿಲ್ ಪ್ಲೀಜ್ 2009/100
8. ಜನ ಸಾಮಾನ್ಯರಿಗಾಗಿ ವಾಸ್ತು 2009/200
9. ಜ್ಯೋತಿಷ್ಯ ಫಲಶಾಸ್ತ್ರ 2007/125
10. ಜ್ಯೋತಿಷ್ಯ ಶಾಸ್ತ್ರದಲ್ಲಿ ಯೋಗಗಳು 2009/200
11. ಜ್ಯೋತಿಷ್ಯಾಸ್ತ್ರ 2009/250
12. ಜ್ಯೋತಿಷ್ಯಾಸ್ತ್ರ ರಹಸ್ಯ 2009/125
13. ನೆಮ್ಮದಿಯ ಬದುಕಿಗಾಗಿ 2012/84
14. ಬದುಕಿಗೆ ಹಿಡಿದ ಕನ್ನಡಿ 2009/120
15. ಬದುಕಿನ ಯಶಸ್ಸಿಗೆ ಮಂತ್ರಗಳು 2009/125
16. ಬಹುಕಾಲ ಬಾಳಬೇಕೇ? 2009/100
17. ಬಾಳಿನ ಹೋರಾಟದಲ್ಲಿ ನೀನು 2009/125
18. ಬ್ಯಾಂಕ್ ನೌಕರಿ ಪಡೆಯುವುದು ಹೇಗೆ?.................................... 2009/125
19. ಮಂತ್ರಶಕ್ತಿ ಮತ್ತು ಆಧ್ಯಾತ್ಮ ಪ್ರಭಾವ 2009/200
20. ಮಂತ್ರಶಕ್ತಿ ಮಹತ್ವ 2007/200
21. ಮೆಂಟಲ್ ಎಬಿಲಿಟಿ 2009/250
22. ವಾಸ್ತು ಟಿಪ್ಸ್ 2009/100
23. ವಾಸ್ತು ಶಾಸ್ತ್ರ 2008/100
24. ಶ್ರೀಘ್ರ ಜ್ಯೋತಿಷ್ಯ ಫಲಶಾಸ್ತ್ರ 2009/250
25. ಸಮಸ್ಯೆಗಳು-ಪರಿಹಾರ (ಜ್ಯೋತಿಷ್ಯಾಸ್ತ್ರ) 2009/250
26. ಸಾಫ್ಟವೇರ್ ಎಂಜಿನಿಯರ್ ಆಗುವುದು ಹೇಗೆ? 2009/125
27. 21ನೇ ಶತಮಾನದಲ್ಲಿ ಕಂಪ್ಯೂಟರ್ ಕಲಿಯಿರಿ 2009/125
28. ADA Lab Manual-for 5th Sem. Computer Engg. 2009/45
29. CGI Lab Manual-for 7th Sem. Computer Engg. 2009/45
30. DBMS Book for Diploma..2009/88
31. Logistic Design 2009/90
32. OOPS Book for Diploma. 2009/80
33. OOPS Lab Manual for Computer Engg.. ....2009/80

ಪ್ರಶಸ್ತಿ :

ಅಮೋಘವರ್ಷ ನೃಪತುಂಗ ಪ್ರಶಸ್ತಿ-ಕರ್ನಾಟಕ ಮಾಧ್ಯಮ ಎಕಾಡೆಮಿಯಿಂದ ..2010

(785) ಭಾಗವತ ಹೊಸ್ತೋಟ ಮಂಜುನಾಥ, ಶಿರಸಿ (ಜ: 1938) ಅಲ್ಪ ಶಿಕ್ಷಣ. ಅವಿವಾಹಿತ. ಯಕ್ಷಗಾನ ಕಲಾವಿದ, ಭಾಗವತ, ಯಕ್ಷಗಾನ ಶಿಕ್ಷಕ. ಸಂಶೋಧಕ. ತಂದೆ ಗಣಪತಿ ಭಟ್ಟ,ತಾಯಿ ಮಹಾದೇವಿ.

ಪ್ರಕಟಿತ ಕೃತಿಗಳು :

ವೀರಾಂಜನೇಯ ವೈಭವ(ಹನುಮಾಯಾನ)ದ ಪ್ರಸಂಗಗಳು(25), ಮಹಾಭಾರತ ಪ್ರಸಂಗಗಳು (49), ಶ್ರೀರಾಮಕೃಷ್ಣ ಮಹಿಮಾಸಾರ(25), ಅಕ್ಕಮಹಾದೇವಿ,ಅಕ್ಷರವಿಜಯ, ಆವಿಕ್ಷಿತ ವಿಜಯ, ಅಶ್ವಮೇಧ, ಅಶ್ವಮೇಧ ಜ್ವಾಲೆ, ಅಮ್ರಪಾಲಿ, ಏಕಲವ್ಯ, ಕಾಂತಿಮತಿ ಪರಿಣಯ, ಕಾಳಿಂಗಮರ್ದನ, ಗಿರಿಜಾ ಕಲ್ಯಾಣ, ಗೀತಾನು ಸಂಧಾನ, ಗುಣಫಣ ಕಲ್ಯಾಣ, ಚಂಡಮಹಾಸೇನ, ಚಂಡಶಾಸನ ಚರಿತ್ರೆ, ಚಿತ್ರಪಟ ರಾಮಾಯಣ, ಚಿತ್ರಾಂಗದಾ, ಜೀಮೂತವಾಹನ, ತ್ಯಾಗಶಿಲೆ,ಉಲ್ಲಾಸದತ್ತ ಚರಿತ್ರೆ-ತ್ರಯಾದ್ರಿವಿಜಯ, ದ್ವೀಪದಿಗ್ವಿಜಯ, ಸಾಮ್ರಾಜ್ಯ ವಿಜಯ, ದಯಾಮಯ ಸಿದ್ಧಾರ್ಥ, ದ್ರೋಣದ್ರುಪದ, ಧರ್ಮಗುಪ್ತ ವಿಜಯ, ಧ್ರುವ ಚರಿತ್ರೆ, ನಹುಷ ವಿಜಯ, ನಾಗಾನಂದ, ನಿಸರ್ಗ ಸಂಧಾನ, ನಿಸರ್ಗ ಸಂಧಾನ್(ಹಿಂದಿ), ಪಾಂಡುರಾಜ ವಿಜಯ, ಪ್ರತಿಜ್ಞಾಯೌಗಂಧರಾಯಣ, ಬಸವೇಶ್ವರಚರಿತ್ರೆ, ಭದ್ರಾಯುವಿಜಯ, ಭಸ್ಮಾಸುರ ಮೋಹಿನಿ, ಭಾಮಿನಿ ಪರಿಣಯ, ಭಾಸಮತಿ, ಕೋಲಾಹಲ, ಮಾರಿಕಾಂಬಾ ಮಹಾತ್ಮೆ, ಮಿತ್ರಭೇಧ, ಮೂಕಾಸುರ ವಧೆ, ಮೃತ್ಯುಮಾಂಗಲ್ಯ, ಮೇಘಕೇತ, ಮೇಘದೂತ, ಯಜ್ಞರಕ್ಷಣೆ, ಯಶೋಮತಿ ಕಲ್ಯಾಣ, ಭೈರವಲೀಲೆ, ರತ್ನಾಂಗದ ದಿಗ್ವಿಜಯ, ಲವಕುಶ, ವಸುಂಧರಾ ಪರಿಣಯ, ವಾರಾಯಿ ವಿಲಾಪ, ವಾರಾಯಿ ವಿಲಾಪ, ವಿಶಾಲಾಕ್ಷಿ ಪರಿಣಯ, ವೀರವರ್ಮ ವಿಜಯ, ವೃಷಸೇನ, ಶಕುಂತಲಾ ಪರಿಣಯ, ಶನಿಮಹಾತ್ಮ್ಯೆ, ಶಿವಾಜಿ ಚರಿತ್ರೆ, ಶೂದ್ರಸಂಕಲ್ಪ, ಸತಿಸಾವಿತ್ರಿ, ಸತೀಸೀಮಂತಿನಿ, ಸತ್ಯನಾರಾಯಣ ವ್ರತಕಥಾ, ಸತ್ಯಪಾಲ ಚರಿತ್ರೆ, ಸಸ್ಯಸಂಧಾನ, ಸ್ವರ್ಣಕಮಲ ಹಂಸಾವಳಿ, ದಕ್ಷಯಜ್ಞ, ಭ್ರಷ್ಟಾಚಾರ ದಮನ,

1. ಕೆರೆಮನೆ ಗಜಾನನ ಹೆಗಡೆ (ಸಹಲೇಖಕ) 2013/64
2. ಗೋಮಹಿಮಾಯನ 2014
3. ನಿಸರ್ಗಸಂಧಾನ-ಯಕ್ಷಗಾನ ಪ್ರಸಂಗ 1989/59
4. ಪಾಂಡುರಾಜಾವಸಾನ (ಮಾರವಿಜಯ)-ಯಕ್ಷಗಾನ ಪ್ರಸಂಗ 1999/19
5. ಭಾಸವತಿ-ಯಕ್ಷಗಾನ ಪ್ರಸಂಗ ....
6. ಭೈರವ ಲೀಲೆ-ಯಕ್ಷಗಾನ ಪ್ರಸಂಗ 1962
7. ಮೂಲಕಾಸುರ ವಧೆ (ವೈಜಯಂತಿ ಪರಿಣಯ)-ಯಕ್ಷಗಾನ ಪ್ರಸಂಗ....... 1996
8. ಯಕ್ಷಗಾನದಲ್ಲಿ ತಾಳಗಳು-ಸಂಶೋಧನೆ 28
9. ಯಕ್ಷಗಾನ-ಸಂಕ್ಷಿಪ್ತ ಪರಿಚಯ 1987/52
10. ರಾಮಕೃಷ್ಣ ಚರಿತೆ-ಯಕ್ಷಗಾನ ಪ್ರಸಂಗ 2014
11. ಯಕ್ಷಗಾನ ಹಸ್ತ ಪ್ರತಿಗಳು-ವಿಕಾಸದ ಹಿನ್ನೆಲೆಯಲ್ಲಿ (ಸಂಶೋಧನೆ)2007/152
12. ರಾಮನಿರ್ಯಾಣ-ಯಕ್ಷಗಾನ ಪ್ರಸಂಗ 1977/12
13. ಶ್ಯಮಂತಕ ರತ್ನ ಪ್ರಕರಣ-ಯಕ್ಷಗಾನ ಪ್ರಸಂಗ ....
14. ಶ್ರೀಕೃಷ್ಣ ಮಹಿಮೆ-ಭಾಗವತ ದಶಮ ಸ್ಕಂದ ಆಧಾರಿತ
20 ಯಕ್ಷಗಾನ ಪ್ರಸಂಗಗಳು 2000/158
15. ಶ್ರೀರಾಮ ಮಹಿಮೆ-ರಾಮಾಯಣ ಆಧರಿತ
19 ಯಕ್ಷಗಾನ ಪ್ರಸಂಗಗಳು 1994/187
16. ಸ್ವರ್ಣಕಮಲ--ಯಕ್ಷಗಾನ ಪ್ರಸಂಗ-ಅರ್ಥಸಹಿತ

ಪ್ರಶಸ್ತಿ/ಗೌರವ :

1. ಕರ್ನಾಟಕ ರಾಜ್ಯ ಪ್ರಶಸ್ತಿ 1987
2. ಮಹಾಕವಿ ಪರಮದೇವ ಪ್ರಶಸ್ತಿ-ಅಗ್ನಿಸೇವಾ ಟ್ರಸ್ಟಿನಿಂದ 2007
3. ಪಾರ್ತಿಸುಬ್ಬ ಪ್ರಶಸ್ತಿ-ರಾಜ್ಯ ಯಕ್ಷಗಾನ ಎಕಾಡೆಮಿಯಿಂದ 2010
4. ಕೇಂದ್ರ ಸಂಗೀತ ನೃತ್ಯ ನಾಟಕ ಅಕಾಡೆಮಿ ಪ್ರಶಸ್ತಿ 2014

(786) ಮಂಗರಸಿ ದಿವಾಕರ ಪರಮೇಶ್ವರ ಶಿರಸಿ (ಜ: 29-4-1935): ಬಿ.ಎ. (ಖಾಟ.) ಪದವೀಧರ. ಜಂಟಿ ನಿರ್ದೇಶಕ-ಮಾರುಕಟ್ಟೆ ಇಲಾಖೆ. ಗ್ರಾಮೀಣ ವೈದ್ಯ. ತಂದೆ-ಪರಮೇಶ್ವರ ಮಂಗರಸಿ ಗೋಕರ್ಣ, ತಾಯಿ-ಪಾರ್ವತಿ, ಪತ್ನಿ-ಸುಮನಾ.

ಪ್ರಕಟಿತ ಕೃತಿಗಳು:

1. ಪ್ರತೀಕಾರ-ಪತ್ತೇದಾರಿ ಕಾದಂಬರಿ 1960/160
2. ಭೂತಗೃಹದ ರಹಸ್ಯ-ಪತ್ತೇದಾರಿ ಕಾದಂಬರಿ 1957/150
3. ಮೂರು ಮುಖಗಳು-ಸಾಮಾಜಿಕ ಕಾದಂಬರಿ 1967/200
4. ವನೌಷಧಿ ಚಿಕಿತ್ಸಾಸಾರ-(4 ಮುದ್ರಣಗಳು) 1980/150
5. ಸೇಡು-ಪತ್ತೇದಾರಿ ಕಾದಂಬರಿ 1958/180
6. ಹಿತೈಷಿ-ಪತ್ತೇದಾರಿ ಕಾದಂಬರಿ 1960/175

ಪ್ರಶಸ್ತಿ/ಗೌರವ:

1. ಸರಕಾರೀ ಪತ್ರವ್ಯವಹಾರದಲ್ಲಿ ಸಂಪೂರ್ಣ ಕನ್ನಡ ಉಪಯೋಗಿಸಿದ್ದಕ್ಕೆ ಸರಕಾರದಿಂದ ಪ್ರಶಸ್ತಿ 1977
2. ಉ.ಕ. ಜಿಲ್ಲಾ ಸಾಹಿತ್ಯ ಪ್ರವರ್ತಕ ಸಂಘದ ಅಧ್ಯಕ್ಷ 1982-90
3. ಶಿರಸಿ ತಾಲೂಕಾ ಕಸಾಪ ಘಟಕದ ಅಧ್ಯಕ್ಷ 1982-84
4. ಇಳಕಲ್ ಶ್ರೀ ಮಹಾಂತೇಶ ಸ್ವಾಮಿಗಳಿಂದ ಸನ್ಮಾನ
5. ಅ.ಭಾ. ಕಥಾಸ್ಪರ್ಧೆಯಲ್ಲಿ ಬಹುಮಾನ
6. ಹಲವಾರು ಸ್ಥಳೀಯ ಸಂಘಸಂಸ್ಥೆಗಳಿಂದ ಸನ್ಮಾನ

(787) ಮಂಜಗುಣಿ ನಾಗರಾಜ ಅಂಕೋಲಾ (ಜ: 18-3-1983): B.A. ಪದವೀಧರ. ಪತ್ರಿಕಾ ವರದಿಗಾರ. ತಂದೆ-ಹನುಮಂತ ಮಂಜಗುಣಿ ಅಂಕೋಲಾ. ತಾಯಿ-ಗಿರಿಜಾ.

ಪ್ರಕಟಿತ ಕೃತಿಗಳು:

1. ಮರುಹುಟ್ಟು-ನಾಟಿ ಔಷಧ ಕುರಿತ ಮಾಹಿತಿ.............................. 2010/52
2. ಸಿಂಚನ-ಕವನ ಸಂಕಲನ 2007/32

(788) ಮಂಜುನಾಥ ಎನ್.ವಿ. ಉಪ್ಪಳೇಕೊಪ್ಪ ಶಿರಸಿ (ಜ: 1-7-1974): S.S.C. ಶಿಕ್ಷಣ. ಛಾಯಾಗ್ರಾಹಕ, ಕೃಷಿಕ. ತಂದೆ-ವೆಂಕಟರಮಣ ನಾಯ್ಕ ಉಪ್ಪಳೇಕೊಪ್ಪ. ತಾಯಿ- ರಾಧಾ. **ಪ್ರಕಟಿತ ಕೃತಿ**: ಹೊಸನಾಳೆಗೆ-ಕವನಗಳು.. 2011/74

(789) ಮಂಜುಸುತ ಜಲವಳ್ಳಿ ಹೊನ್ನಾವರ (ಜ: 15-10-1946): 5ನೇ ತರಗತಿ **ಶಿಕ್ಷಣ. ಕೃಷಿಕ. ಹೆಸರು-ಕೃಷ್ಣ. ತಂದೆ-ಮಂಜುನಾಯ್ಕ ಜಲವಳ್ಳಿ. ತಾಯಿ-ನಾಗಮ್ಮ**. ಪತ್ನಿ-ಭಾಗೀರಥಿ.

ಪ್ರಕಟಿತ ಕೃತಿಗಳು:

1. ಅರಿವಿನ ಬೆಳಕು-ಅನುಭವಗೀತೆ 2013/112
2. ಕಲ್ಪವೃಕ್ಷ-ಭಕ್ತಿಗೀತೆಗಳು 2008/16
3. ಕುಲವರದ-ಭಕ್ತಿಗೀತೆಗಳು 2009/12
4. ಚಕ್ರವರ್ತಿ-ಭಕ್ತಿಗೀತೆಗಳು 2012/16
5. ದಾಸವಾಳ-ಭಕ್ತಿಗೀತೆಗಳು 2005/12
6. ನೀಲಗೋಡೇಶ್ವರಿ-ಭಕ್ತಿಗೀತೆಗಳು... 2013/24

7. ಭಕ್ತಿ ಕುಸುಮ-ಭಕ್ತಿಗೀತೆಗಳು 2003/12
8. ರಸಋಷಿ-ಭಕ್ತಿಗೀತೆಗಳು 2014/32
9. ಲೀಲಾಗಣೇಶ-ಭಕ್ತಿಗೀತೆಗಳು 1997/60
10. ಶ್ರೀ ಕೊಳಗದ್ದೆ ವಿನಾಯಕ-ಭಕ್ತಿಗೀತೆಗಳು 2001/8
11. ಶ್ರೀ ಗುರುದರ್ಶನ-ಭಕ್ತಿಗೀತೆಗಳು 1995/260
12. ಶ್ರೀ ಧರಿತ್ರಿ-ಭಕ್ತಿಗೀತೆಗಳು 2010/20
13. ಶ್ರೀಪಾದ ಸನ್ನಿಧಿ-ಭಕ್ತಿಗೀತೆಗಳು 2004/12
14. ಶ್ರೀಸುಬ್ರಹ್ಮಣ್ಯ ಸ್ತುತಿ-ಭಕ್ತಿಗೀತೆಗಳು.. 2004/32
15. ಸವಿ ನೆನಪು-ಭಕ್ತಿಗೀತೆಗಳು 2010/24
16. ಹನುಮದ್ವಿಲಾಸ-ಭಕ್ತಿಗೀತೆಗಳು 1998/60

ಪ್ರಶಸ್ತಿ/ಗೌರವ:
1. ಮುಗ್ವಾ ನಾಮಧಾರಿ ಸಂಘದಿಂದ ಸನ್ಮಾನ. 2. ಕದಂಬ ಪ್ರತಿಷ್ಠಾನ ಅಳ್ಳಂಕಿ-ಇವರಿಂದ ಸನ್ಮಾನ. 3. ಹೊನ್ನಾವರ ತಾಲೂಕಾ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ

(790) ಮಡಗಾಂವಕರ ಪದ್ಮಾಕರ ರಾಮಚಂದ್ರ ಬಿಳಗಿ ಸಿದ್ದಾಪುರ (ಜ: 22-10- 1943): B.Sc., B.Ed. ಪದವೀಧರ. ಪ್ರೌಢಶಾಲಾ ಶಿಕ್ಷಕ. ತಂದೆ-ರಾಮಚಂದ್ರ ಟಿಮಡಗಾಂವಕರ ಬಿಳಗಿ-ಸ್ವಾತಂತ್ರ್ಯ ಹೋರಾಟಗಾರ. ತಾಯಿ-ಸೀತಾಬಾಯಿ. ಪತ್ನಿ-ಪ್ರತಿಭಾ.
ಪ್ರಕಟಿತ ಕೃತಿ: ಬಿಳಗಿ ಸಂಸ್ಥಾನ-ಇತಿಹಾಸ 2010/158
ಪ್ರಶಸ್ತಿ/ಗೌರವ: ಸಿದ್ದಾಪುರ ತಾಲೂಕಾ ಕ.ಸಾ.ಪ. ಘಟಕದಿಂದ ಸನ್ಮಾನ 2011

(791) ಮಡಿವಾಳ ಉದಯ ಹೆಗಡೆ ಕುಮಟಾ (ಜ: 23-7-1981): B.A., B.Ed. ಪದವೀಧರ. **ಜಲನಿರ್ಮಲ ಸಂಯೋಜನಾ ಖಾತೆ ಉದ್ಯೋಗಿ. ತಂದೆ-ಶಿವಪ್ಪ ಮಡಿವಾಳ ಹೆಗಡೆ** ಕುಮಟಾ. ತಾಯಿ-ಸುಮಿತ್ರಾ.

ಪ್ರಕಟಿತ ಕೃತಿಗಳು:
1. ನನ್ನೂರಿನ ಹಾಡು-ಜಾನಪದ (ಸಂಪಾದಿತ) 2012/128
2. ನಂಬಿಕೆಯ ಪಾಶಾಣ-ನಾಟಕ 2011/145

ಪ್ರಶಸ್ತಿ/ಗೌರವ: ಜಿಲ್ಲಾ ಯುವ ಪ್ರಶಸ್ತಿ-ಯುವಜನ ಸೇವಾ ಕ್ರೀಡಾ ಇಲಾಖೆಯಿಂದ

(792) ಮಧ್ಯಸ್ಥ ನಾರಾಯಣ (ಡಾ||) ಮುರ್ಡೇಶ್ವರ (ಜ: 15-6-1967) ಎಂ.ಎ., ಎಂ.ಫಿಲ್. ಪಿಎಚ್.ಡಿ. ಪದವೀಧರ. ಆರ್.ಎನ್.ಎಸ್. ಪ.ಪೂ. ಕಾಲೇಜಿನ ಉಪನ್ಯಾಸಕ. ಯಕ್ಷಗಾನ ಕಲಾವಿದ. ತಂದೆ ಕುಪ್ಪಯ್ಯ ಮಧ್ಯಸ್ಥ ಬೇಂಗ್ರೆ, ಭಟ್ಕಳ. ತಾಯಿ ವಿಶಾಲಾಕ್ಷಿ. ಪತ್ನಿವಿಜಯಾ.
ಪ್ರಕಟಿತ ಕೃತಿ : ಕರ್ಕಿ ಹಾಸ್ಯಗಾರ ಮೇಳ (ಪಿಎಚ್.ಡಿ. ಪ್ರಬಂಧ) 2007/140

(793) ಮನೋಹರ ಜನ್ನು [ಮಜನ್ನು] ದಾಂಡೇಲಿ (ಜ: 25-12-1953): M.A. ಕನ್ನಡ **ಪದವೀಧರ. ಕಾಗದ ಕಾರ್ಖಾನೆಯ ಉದ್ಯೋಗಿ. ಕಾರ್ಮಿಕ ಹೋರಾಟದಲ್ಲಿ** ಜೈಲುವಾಸ. ಹಲವಾರು ಸಾಮಾಜಿಕ ಹೋರಾಟದಲ್ಲಿ ಸಕ್ರಿಯ. ತಂದೆ-ಜನಾರ್ದನ ಜನ್ನು ಬಂಕಿಕೊಡ್ಲು ಕುಮಟಾ, ತಾಯಿ ವತ್ಸಲಾ, ಪತ್ನಿ-ನಯನಾ.

ಪ್ರಕಟಿತ ಕೃತಿಗಳು:
1. ಚುಕ್ಕಿಯ ಚಿತ್ತಾರ-ಮಕ್ಕಳ ಕವನಗಳು 2004/92

2. ಚುಟುಕು ಮಾಲೆ-ಚೌಪದಿಗಳು 2011/102
3. ಚೈತ್ರಯಾತ್ರೆ-ಕಥಾ ಸಂಕಲನ.. 2004/131
4. ಪರಿಷತ್ತಿಗೆ ಆಗದಿರಿ ಶಾಪ-ಲೇಖನ ಸಂಗ್ರಹ.............................. 2015/56

ಪ್ರಶಸ್ತಿ/ಗೌರವ:

1. 1000ಕ್ಕೂ ಮಿಕ್ಕ ಚುಟುಕು ರಚನೆಗಾಗಿ ಹಳಿಯಾಳ ತಾಲೂಕು ಕ.ಸಾ.ಪ.ದಿಂದ ಗೌರವ...2001
2. ಕ.ರಾ. ಕನ್ನಡ ಲೇಖಕರ, ಪ್ರಕಾಶಕರ ಸಂಘದಿಂದ ಗೌರವ................ 2004
3. ಬೆಂಗಳೂರಿನ ಪತ್ರಕರ್ತರ ವೇದಿಕೆಯಿಂದ ರುಕ್ಮಿಣಿಬಾಯಿ ಸ್ಮಾರಕ ಪ್ರಶಸ್ತಿ... 2004
4. ಕನ್ನಡ ಸಂಸ್ಕೃತಿ ಇಲಾಖೆಯಿಂದ ಸಾಹಿತ್ಯಚೇತನ ಪ್ರಶಸ್ತಿ 2010

(794) **ಮನೋಹರ ಮಲ್ಮನೆ ಶಿರಸಿ** (ಜ: 27-12-1954): ಃ.ಂ., ಃ.ಅಡು **ಪದವೀಧರ. ಸಹಕಾರಿ ಬ್ಯಾಂಕ್‌ನ ವ್ಯವಸ್ಥಾಪಕ ಹುದ್ದೆಯಿಂದ ಸ್ವಯಂ ನಿವೃತ್ತ**. ಸಂಘಟಕ. ಸಾಮಾಜಿಕ ಕಾರ್ಯಕರ್ತ. ತಂದೆ-ಗೋವಿಂದ ಶೆಟ್ಟಿ ಭಾವಿಕೇರಿ ಅಂಕೋಲಾ. ತಾಯಿ-ರಾಧಾಬಾಯಿ, ಪತ್ನಿ-ಸುಧಾ ಮಲ್ಮನೆ.

ಪ್ರಕಟಿತ ಕೃತಿ: ಕಲ್ಪನಾ ತರಂಗ-ಕವನಗಳು 1984/74

ಗೌರವ: ಶಿರಸಿ ತಾಲೂಕಾ ಕ.ಸಾ.ಪ. ಘಟಕದ ಅಧ್ಯಕ್ಷ.

(795) **ಮರಾಠಿ ರಾಜೇಶ ದೇವಕಾರ ಕಾರವಾರ** (ಜ: 20-9-1991): ಃ.ಂ., ಒ.ಂ. ಪದವೀಧರ. ತಂದೆ ಉಲ್ಲಾಸ ಮರಾಠಿ ದೇವಕಾರ ಕಾರವಾರ. ತಾಯಿ ಲಕ್ಷ್ಮಿ.

ಪ್ರಕಟಿತ ಕೃತಿ: ರಾಮರಸಾಳೊ-ಕೊಂಕಣಿ ಲೋಕವೇದ.......................... 2015/60

(796) **ಮಹಮ್ಮದ ಹುಸೇನ ಫಿತ್ರತ್ (ಡಾ||) ಭಟ್ಕಳ** (ಜ: 6-6-1932): ಹೋಮಿಯೋಪಥಿ ವೈದ್ಯ.

ಪ್ರಕಟಿತ ಕೃತಿಗಳು:

1. ಗುಲ್‌ಬಾಂಗೇ ಫಿತ್ರತ್-ಉರ್ದು ಕವಿತೆಗಳು ....
2. ನೂರುನ್ ಅಲಾ ನೂರ್-ಉರ್ದು ಕವಿತೆಗಳು..
3. ಸಾಗರೇ ಇರ್ಫಾನ್-ಉರ್ದು ಕವಿತೆಗಳು ....

(797) **ಮಹಾಬಲ ಸೀತಾಳಭಾವಿ ಬೆಂಗಳೂರು** (ಜ: 1.6.1983) ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ. ಸಂಸ್ಕೃತ ವಿದ್ವತ್ ಮಾಧ್ಯಮ (ತರ್ಕಶಾಸ್ತ್ರ), ಫೋಟೊಗ್ರಾಫಿ ಡಿಪ್ಲೋಮಾ ಪದವೀಧರ. ಉದಯವಾಣಿ ಪತ್ರಿಕಾ ಮುಖ್ಯ ಉಪಸಂಪಾದಕ. ತಂದೆ ವಿಶ್ವೇಶ್ವರ ಭಟ್ಟ, ಸೀತಾಳಭಾವಿ, ಸಿದ್ದಾಪುರ. ತಾಯಿ ಶ್ರೀಮತಿ ಪತ್ನಿ ರೇಖಾ.

ಪ್ರಕಟಿತ ಕೃತಿಗಳು :

1. ಅಭಿಜ್ಞಾನ ಶಾಕುಂತಲ-ಅನುವಾದಿತ 2013/138
2. ಆಂಟಿನ್ ಚೆರಾಫ್ ಕತೆಗಳು-ಅನುವಾದಿತ 2009/112
3. ಚಾಟು ಕವಿತೆಗೆ ಚುಟುಕು ಕತೆ 2013/112
4. ಚಾಣಕ್ಯನೀತಿ-ವ್ಯಾಖ್ಯಾನ 2011/174
5. ನಾಯಕತ್ವದ ದಾರಿ-ಪಂಚತಂತ್ರದ ಮಾದರಿ-ಅನುವಾದ 2011/162
6. ಭಾಸನ ಐದು ನಾಟಕಗಳು-ಅನುವಾದ 2014/250

7. ನಿತ್ಯಜೀವನಕ್ಕೆ ಹತ್ತಿರದ ಸುಭಾಷಿತಗಳು 2007/208
8. ನೂರೆಂಟು ಸುಭಾಷಿತಗಳು 2009/120
9. ಮ್ಯಾನೇಜಮೆಂಟ್ ಕತೆಗಳು 2012/88
10. ಮ್ಯಾನೇಜಮೆಂಟ್ ಭಗವದ್ಗೀತೆ 2013/132
11. ಲೋಕಪಾಲ: ಯಾಕಿಷ್ಟು ಗೊಂದಲ 2011/92
12. ವಂದನಾಶಿವ-ಜೀವನ ಚರಿತ್ರೆ 2010/90
13. ವಾರನ್ ಬಫೆಟ್-ವ್ಯಕ್ತಿ ಚಿತ್ರ 2011/74
14. ಸುಂದರಲಾಲ ಬಹುಗುಣ-ವ್ಯಕ್ತಿಚಿತ್ರ 2011/74

(798) ಮಹಾಬಲಮೂರ್ತಿ ಕೊಡ್ಲಕೆರೆ, ಬೆಂಗಳೂರು (ಜ: 1-4-1954) ಎಂ.ಎ., ಸಿ.ಎ.ಐ.ಐ.ಬಿ. ಪದವೀಧರ. ನಿವೃತ್ತ ಬ್ಯಾಂಕ್ ಮ್ಯಾನೇಜರ್, ಟ್ರೇಡಿಂಗ್ ಸಲಹೆಗಾರ. ಯಕ್ಷಗಾನ ವಿಮರ್ಶಕ, ಸಂಯೋಜಕ. ತಂದೆ ಗಜಾನನ ಕೊಡ್ಲಕೆರೆ, ಗೋಕರ್ಣ. ತಾಯಿ ಭೂದೇವಿ, ಪತ್ನಿ ಮೀನಾ.

ಪ್ರಕಟಿತ ಕೃತಿಗಳು :

1. ಅವನ ಜಗತ್ತಿನ ಹಗಲು-ಸಣ್ಣ ಕತೆಗಳು 2001/130
2. ಒಂದು ಗಿಳಿ-ಕವಿತೆಗಳು 1992/85
3. ಚಂದ್ರಾಸ್ತಮಾನ-ಕಾದಂಬರಿ 1984/102
4. ಜೀವ-ಕವಿತೆಗಳು 1989/80
5. ನೆರಳು-ಸಣ್ಣ ಕತೆಗಳು 2002/130
6. ಮತ್ತೆ ಏಳಲು ಪೂರ್ವದಿಂದ-ಕವಿತೆಗಳು 1990/84
7. ಮತ್ತೊಂದು ಮೌನ-ಸಣ್ಣ ಕತೆಗಳು 1991/111
8. ಮಾತು ಮತ್ತು ಪರಸ್ಪರ-ಕವಿತೆಗಳು 1984/85
9. ಯಕ್ಷಸೃಷ್ಟಿ-ಸಣ್ಣಕತೆಗಳು 1995/121
10. ಸದ್ದು-ಕಾದಂಬರಿ 2001/128

ಪ್ರಶಸ್ತಿ/ಗೌರವ :

1. ಮುದ್ದಣ ಕಾವ್ಯ ಪ್ರಶಸ್ತಿ.. 1989
2. ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಶಸ್ತಿ 1994
3. ಆರ್ಯಭಟ ಪ್ರಶಸ್ತಿ 1995
4. ಸರ್. ಎಂ.ವಿ. ಪ್ರಶಸ್ತಿ 1995
5. ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ನಿಧಿ ಪುರಸ್ಕಾರ.....................................1995

(799) ಮಹಾಬಲೇಶ್ವರ ಹೊನ್ನೆಮಡಿಕೆ, ಬೆಂಗಳೂರು (ಜ: 20-6-1971) ಎಂ.ಎಸ್ಸಿ. ಪದವೀಧರ. ಪತ್ರಿಕೋದ್ಯೋಗಿ-ವಿಜಯ ಕರ್ನಾಟಕದಲ್ಲಿ. ತಂದೆ ಗಣಪತಿ ಹೆಗಡೆ ಹೊನ್ನೆಮಡಿಕೆ, ಸಿದ್ದಾಪುರ. ತಾಯಿ ಮಾದೇವಿ. ಪತ್ನಿ ಭಾಗ್ಯಶ್ರೀ.

ಪ್ರಕಟಿತ ಕೃತಿಗಳು :

1. ಬರ ತರದಿರಲಿ ಬಡತನ 2010/85
2. ವಿಜ್ಞಾನ ಸಾಹಿತ್ಯ 2000-ಲೇಖನ ಸಂಗ್ರಹ 2001

(800) ಮಹೇಶ ಕೆ. ಶಿರಸಿ (ಜ: 20-7-1964): ಎಸ್.ಎಸ್.ಸಿ. ಹಾಗೂ ವೃತ್ತಿ ಶಿಕ್ಷಣ. ಪತ್ರಿಕಾ ವರದಿಗಾರ. 6 ವರ್ಷ ಶಿರಸಿಯ 'ಕದಂಬವಾಣಿ' ಸಂಪಾದಕ. ತಂದೆ ಗಜಾನನ ಹೆಗಡೆ ಕುಂಟೆಮನೆ ಶಿರಸಿ. ತಾಯಿ ಭಾಗೀರಥಿ. ಪತ್ನಿ ಸುಲೇಖಾ.

ಪ್ರಕಟಿತ ಕೃತಿಗಳು:

1. ಒಂದು ನಿಶ್ಶಬ್ದದ ಹುಟ್ಟು-ಕಥಾ ಸಂಕಲನ 2013/164
2. ಸಂಜೆಮೆಟ್ಟಿಲು-ಕಥಾಸಂಕಲನ.. 2011/120

ಗೌರವ: ಶಿರಸಿ ತಾಲೂಕಾ ಕ.ಸಾ.ಪ. ಅಧ್ಯಕ್ಷ 2012-13

(801) ಮಾರ್ಕಾಂಡೇಯ ಬಿ.ವಿ. ಶಿರ್ವಾ, ಉಡುಪಿ (ಜ: 28-10-1946) ಎಂ.ಎ. ಪದವಿ-ನಾಲ್ಕು ವಿಷಯಗಳಲ್ಲಿ. ರಿಸರ್ಚ್ ಫೆಲೋ. 2 ವಿಷಯಗಳಲ್ಲಿ ಡಾಕ್ಟರೇಟ್. ನಿವೃತ್ತ ಪ್ರಾಧ್ಯಾಪಕ ಹಿಂದೂಪದವು ಕಾಲೇಜು ಶಿರ್ವಾ. ಹೆಸರು ಬಾಲಸುಬ್ರಹ್ಮಣ್ಯ. ತಂದೆ ವೆಂಕಟರಮಣ ಮಾರ್ಕಾಂಡೇಯ ಗೋಕರ್ಣ. ಪತ್ನಿ ಉಮಾ.

ಪ್ರಕಟಿತ ಕೃತಿಗಳು :

1. ಆರೋಗ್ಯ ಭಾಗ್ಯ 1999/60
2. ಕಥಾ ಸುಗಂಧಿ 1996/80
3. ಕಥಾಸುಧಾ 2008/105
4. ಕುಸುಮಾಂಬುಧಿ-ಕವನ ಸಂಕಲನ 1999/52
5. ಕೃಷಿ ಸಂಪತ್ತು.. 2001/80
6. ಗುಟುಕು ಬಾಣ-ಚುಟುಕುಗಳು 2000/80
7. ಚುಟುಕು-ಮದ್ದು 1999/60
8. ಜೀವನ ಮಾರ್ಗದರ್ಶಿ 1996/60
9. ದೇಶಭಕ್ತಿ ಪ್ರಬಂಧಗಳು - 1 .... 1996/80
10. ದೇಶಭಕ್ತಿ ಪ್ರಬಂಧಗಳು - 2 .... 1997/70
11. ಬಾಲಕಥಾಕುಂಜ.. 1996/70
12. ಬಾಲಕುಸುಮ ಸಾಗರ-ಪದ್ಯಗಳು 1996/80
13. ಭಾಗವತ ಚರಿತಂ-ಕಾವ್ಯ 2002/160
14. ಯಶಸ್ವೀ ಜೀವನದ ಸುಲಭ ಸೂತ್ರಗಳು 2000/60
15. ರಾಷ್ಟ್ರ ಪ್ರಗತಿ-ವೈಚಾರಿಕ 2002/90
16. ರಾಷ್ಟ್ರ ಭಕ್ತಿ-ದೇಶಭಕ್ತಿ... 1999/100
17. ರಾಷ್ಟ್ರಾಭಿಮಾನ-ವೈಚಾರಿಕ 2002/90
18. ವಚನ ಸಾಹಿತ್ಯಾಮೃತ 2000/80
19. ವಿಜಯ ದುಂದುಬಿ-ಜನಪರ ಕಾವ್ಯ 2000/150
20. ಸರ್ಕಾರದ ಮೂಲ ಅಂಶಗಳು 2001/160
21. ಸಮಾಜ ಶಾಸ್ತ್ರ 1984/150
22. ಸುಂದರ ಜೀವನದ ಸುಲಭ ಸೂತ್ರಗಳು 2000/80
23. ಸುಮಾಂಜಲಿ-ಕವನಗಳು 1996/70
24. ಸೇಡಿಯಾಪು ಬದುಕು-ಬರಹ (ಪಿಎಚ್.ಡಿ. ಪ್ರಬಂಧ) 2010/500
25. ಹಾಸ್ಯಸುಧಾ 1998/80
26. The life and culture of Halakki Gowda's (Ph.D. Thesis)................ 2014/200

ಪ್ರಶಸ್ತಿ/ಗೌರವ :

1. ಅತ್ಯುತ್ತಮ ಕಥೆಗಾರ-ಉ.ಕ.ಜಿಲ್ಲಾ ಕ.ಸಾ.ಪ.ದಿಂದ 1992
2. ಅತ್ಯುತ್ತಮ ಚಿಂತನಕಾರ-ಕುಂದೇಶ್ವರ ಟ್ರಸ್ಟಿನಿಂದ 1994

3. ಅತ್ಯುತ್ತಮ ಪ್ರಾಧ್ಯಾಪಕ–ಕರ್ನಾಟಕ ಸರಕಾರದಿಂದ 1996
4. ಜಿ.ಪಿ. ರಾಜರತ್ನಂ ಪ್ರಶಸ್ತಿ–ಕ.ಸಾ.ಪ.ದಿಂದ 1997
5. ಗೋರೂರು ಸಾಹಿತ್ಯ ಪ್ರಶಸ್ತಿ 1998
6. ಅತ್ಯುತ್ತಮ ಪೌರ ಪ್ರಶಸ್ತಿ–ಅತ್ತಿಮಬ್ಬೆ ಪ್ರತಿಷ್ಠಾನದಿಂದ.............................. 1999
7. ರನ್ನ ಪ್ರಶಸ್ತಿ 2000
8. Hon. Doctorate by Columbia University-America

(802) **ಮಾರುತಿ ಅಂಕೋಲೇಕರ (ಮೂರ್ತಿ) ಶಿರಸಿ** (ಜ: 2–11–1952) ಬಿ.ಎಸ್ಸಿ., ಎಂ.ಎ. ಪದವೀಧರ. ಜೀವವಿಮಾ ನಿಗಮದ ನಿವೃತ್ತ ಅಧಿಕಾರಿ. ತಂದೆ ರಾಮಚಂದ್ರ ಅಂಕೋಲೇಕರ ಶಿರಸಿ. ತಾಯಿ ಸೀತಾ, ಪತ್ನಿ ಶಕುಂತಲಾ.
ಪ್ರಕಟಿತ ಕೃತಿ: ಆಖ್ಯಾನ–ಕಥಾಸಂಕಲನ 2015/224
ಪ್ರಶಸ್ತಿ/ಗೌರವ:ನಿಯತಕಾಲಿಕಗಳ ಕಥಾಸ್ಪರ್ಧೆಯಲ್ಲಿ ಸತತ ಐದು ವರ್ಷ ಬಹುಮಾನ ವಿಜೇತ.

(803) **ಮಾನಾಸುತ ಮುರುಡೇಶ್ವರ ಭಟ್ಕಳ** (ಜ: 20–1–1961) ಬಿ.ಕಾಂ. ಪದವೀಧರ. ಭಟ್ಕಳ ಅರ್ಬನ್ ಸಹಕಾರಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ. ಸಾಂಸ್ಕೃತಿಕ ಸಂಘಟಕ. ಹೆಸರು ಶಂಭು ಹೆಗಡೆ. ತಂದೆ ನಾರಾಯಣ ಹೆಗಡೆ ಮಾಳ್ಕೋಡ. 'ಮಾನಾ' (ಗ್ರಂಥಕರ್ತ) ತಾಯಿ ಮೂಕಾಂಬೆ. ಪತ್ನಿ ವನಿತಾ.
ಪ್ರಕಟಿತ ಕೃತಿ: ಚುಟುಕು ಬಳ್ಳಿ–ಚುಟುಕುಗಳು....................................... 2015/84
ಪ್ರಶಸ್ತಿ/ಗೌರವ: ಹೊನ್ನಾವರ ತಾಲೂಕಾ ಕ.ಸಾ.ಪ.ದಿಂದ ಸನ್ಮಾನ 2013

(804) **ಮಾರುತಿ ಎಚ್.ಎಂ. ಹಾಡಗೇರಿ ಹೊನ್ನಾವರ** (ಜ: 14–9–1978): M.A. ಪದವೀಧರ. ಪತ್ರಿಕೋದ್ಯಮಿ. ಮುದ್ರಣೋದ್ಯಮಿ. ತಂದೆ–ಮಹಾಬಲೇಶ್ವರ ಹಾಡಗೇರಿ ಹೊನ್ನಾವರ. ತಾಯಿ–ನಾಗವೇಣಿ.
ಪ್ರಕಟಿತ ಕೃತಿಗಳು:
1. ದೀಪಕ್ರಾಂತಿ–ಕವನಗಳು 2010/60
2. ಮಾರ್ದನಿ–ಲೇಖನಗಳು 2013/100

(805) **ಮಾರುತಿ ಗುರೂಜಿ ಬಂಗಾರಮಕ್ಕಿ ಹೊನ್ನಾವರ** (ಜ: 11–2–1978): ಹೈಸ್ಕೂಲು ಶಿಕ್ಷಣ. ಬಂಗಾರಮಕ್ಕಿ ಮಾರುತಿ ದೇವಾಲಯದ ಅರ್ಚಕ. ಆಡಳಿತ ಮುಖ್ಯಸ್ಥ. ಹೆಸರು ಮಾರುತಿ ಭಟ್ಟ. ತಂದೆ ಗಣೇಶ ಭಟ್ಟ, ತಾಯಿ ಗಂಗಾ, ಪತ್ನಿ ಅರ್ಪಿತಾ.
ಪ್ರಕಟಿತ ಕೃತಿಗಳು:
1. ದಾರ್ಶನಿಕ ಸಚ್ಚಿಂತನ ಭಾಗ–1 .... 2010/70
2. ದಾರ್ಶನಿಕ ಸಚ್ಚಿಂತನ ಭಾಗ–2 .... 2012/120
3. ದಾರ್ಶನಿಕ ಸಚ್ಚಿಂತನ ಭಾಗ–3 .... 2014/160

ಟಿಪ್ಪಣಿ: ಮಾರುತಿ ದೇವಾಲಯದಲ್ಲಿ ನಿತ್ಯ ಅನ್ನಸಂತರ್ಪಣೆ ವ್ಯವಸ್ಥೆ ಇದೆ. ದೇವಾಲಯದ ಆವರಣದಲ್ಲಿ ಶಾಲೆ ನಡೆಯುತ್ತಿದೆ. ಶಾಲಾ ವಾಹನ ಸೌಕರ್ಯ ಇದೆ.

(806) **ಮಾಸ್ಕೇರಿ ಎಂ.ಕೆ. ನಾಯಕ ದಾಂಡೇಲಿ** (ಜ: 2–1–1954): ಒ.ಂ. ಪದವೀಧರ. **ಸಮಾಜ ಸೇವಕ. ಸಾಂಸ್ಕೃತಿಕ ಸಾಹಿತ್ಯಕ ಸಂಘಟಕ. ಹೆಸರು–ಮಹದೇವ. ತಂದೆ–ಕೃಷ್ಣ** ನಾಯಕ ನಾಡುಮಾಸ್ಕೇರಿ ಕುಮಟಾ. ತಾಯಿ–ದೇವಮ್ಮ. ಪತ್ನಿ–ಭಾರತಿ.

ಪ್ರಕಟಿತ ಕೃತಿಗಳು: (50)

ಅ. ಕವನ ಸಂಕಲನ

1. ೬೦ರ ಮುಗುಳು 2006/68
2. ಅದೇ ಹಾಡು 2001/36
3. ಉದಯರಾಗ 1992/44
4. ಋಣ 1991/72
5. ಒಂದು ಕವಿತೆಯ ಸುತ್ತ-ಆಯ್ದ ಭಾವಗೀತೆಗಳು 2014/212
6. ಕರಾವಳಿ... 1997/68
7. ಕರುಣಾಳು 2008/64
8. ಚಿಗುರು-ಶಿಶುಗೀತೆಗಳು 1996/72
9. ನೂರೊಂದು ಭಾವಗೀತೆಗಳು 2003/184
10. ಬಂಗಾರಮಕ್ಕಿ ಬೆಡಗು 2006/48
11. ಭಾವ ವೈಭವ (ಸಮಗ್ರ ಭಾಗ 1) 2007/416
12. ಭೂದೇವಿ 1996/80
13. ಮೌನ ದುಡಿಮೆ 2001/80
14. ಸಂಬಂಧ 2009/36
15. ಸಮೀರ ಹೃದಯ... 2009/36
16. ಸ್ವರ್ಗದ ಇಶ್ಟೊಂದು ಮತ್ತು ಬಾಲಿಶ ಕವನಗಳು 2008/30
17. ಹಾಡುಹಕ್ಕಿ..2000/200
18. ಹೂದಂಡೆ 1993/68

ಬ. ಸಮೀಕ್ಷಾ ಕೃತಿಗಳು

1. ಅಮ್ಮನವರ ಅಂಗಳದಲ್ಲಿ 2006/20
2. ಅವಿರೋಧ ಸಂಸ್ಕೃತಿ? ಭಾಗ-1.. 2012/80
3. ಕಾವ್ಯಗುರು ಪ್ರಕಾಶನ ಮತ್ತು ಸಾಹಿತ್ಯಾರಾಧನ 1998/108
4. ಗವಾಯೀಶ್ವರರು ಮತ್ತು ಪಂಚಗಾನ ವೈಭವ 2003/70
5. ಪುಷ್ಪಾದ್ರಿ 2003/88
6. ಬೆಳಕು 2001/64
7. ಸಮಾರಂಭ 2001/118
8. ಸಹೃದಯ ಸಾಹಿತಿಗಳ ಬೀಡು ಈ ನಾಡು 2005/82

ಕ. ನಾಟಕ

1. ಅಂಧಕನಾದುದಕಿಲ್ಲ ಚಿಂತೆ 2006/64
2. ಎಲೆ ಅಡಿಕೆ ಪ್ರಹಸನ 2003/40
3. ಕರಿಕಂಬಳಿ.. 2009/96
4. ಜನದಿವ್ಯ 2012/149

ಡ. ಸಂಪಾದಿತ

1. ಅಧ್ಯಕ್ಷೀಯ ಭಾಷಣ 2010/46
2. ಆ ಚಿಗುರು ಮೊಗ್ಗು ಪುಷ್ಪ 2003/72
3. ಉತ್ತರ ಕನ್ನಡ-2 .... 2012/118

4. ಕನಕದಾಸರ ಜನಪ್ರಿಯ ಹಾಡುಗಳು 1997/40
5. ಗ್ರಂಥಭಾಗ-2:ಉತ್ತರಕನ್ನಡ ಕುರಿತ ವಿವಿಧ ಲೇಖನ ಸಂಗ್ರಹ .. 2014/114
6. ಜಗದಗಲ ಕವಿ ಕುವೆಂಪು 2005/60
7. ಜನಪ್ರಿಯ ಜಾನಪದ ಪ್ರೇಮಗೀತೆಗಳು 1997/88
8. ಜ್ಞಾನದೀಪ 2015/300
9.+ ದಾರ್ಶನಿಕ ಸಚ್ಚಿಂತನ ಭಾಗ 1 (ಸಂಪಾದಿತ) 2010/70
10.+ದಾರ್ಶನಿಕ ಸಚ್ಚಿಂತನ ಭಾಗ 2 (ಸಂಪಾದಿತ)........................ 2012/120
11.+ದಾರ್ಶನಿಕ ಸಚ್ಚಿಂತನ ಭಾಗ 3 (ಸಂಪಾದಿತ)........................ 2014/160
12. ಪುಷ್ಪಗಂಧಿ 2004/80
13. ಬೆಳೆಯೋಣ ಬನ್ನಿ 1999/88
14. ಮಾಸ್ಕೇರಿ ಅವ್ವನ ಜಾನಪದಗಳು 2006/102
15. ವಿಶ್ವಾತ್ಮಜ: ಪದ್ಮಭೂಷಣ ಡಾ. ಪುಟ್ಟರಾಜ ಗವಾಯೀಶ್ವರರ ಕುರಿತ
ಸಮಗ್ರ ಚಿಂತನ ಕೃತಿ 2008/220

ಇ. ಇತರ

1. ಗಂಗಾವಳಿ ದರ್ಶನ-ಪ್ರವಾಸ ಕಥನ.. 1994/72
2. ಗದುಗಿನ ಗವಾಯಿಗಳು-ಪರಿಚಯ 1991/94
3. ನ್ಯಾಯವಾದಿ ದೇಶಪಾಂಡೆ-ಪರಿಚಯ 2001/32
4. ಬಾನುಲಿ ಚಿಂತನ ಮತ್ತು ಭಾಷಣ 2005/40
5. ಸಾಹಿತ್ಯ ತೀರ್ಥ ಡಾ. ಗೌರೀಶ ಕಾಯ್ಕಿಣಿ 2002/48
6. ನೈತಿಕ ಪರಮೋಚ್ಚ-ಕೆ.ಎಲ್. ಚಂಡಕರ ಪರಿಚಯ 2006/92

ಉ. ಧ್ವನಿಸುರಳಿಗಳು: ಉದಯಗಾನ (1992) ಹೂದಂಡೆ (2000) ನಂಬಿದೆ ಗುರು (2007) ಚಿಗುರು (2008) ವೆಂಕಟೇಶ್ವರ ಸುಪ್ರಭಾತ (2009) ಕರುಣಾಳು (2009) ವೀರಾಂಜನೇಯ ಸುಪ್ರಭಾತ (2010) ಶರಣು ಬಂದಿಹೆ (2011)

ಟಿಪ್ಪಣಿ: ಇವರ ಕೆಲವು ಕವಿತೆಗಳ ಅಂಗ್ರೇಜಿ ಅನುವಾದ ಸಂಗ್ರಹ ಪ್ರಕಟವಾಗಿದೆ.

My Poems ಅನು: ಟಿ.ಎಸ್. ರಾಮಚಂದ್ರ ರಾವ್ 2015/70

ಪ್ರಶಸ್ತಿ/ಗೌರವ:

1. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 2010
2. ಬೆವರು ಬೆಳಕು: ಅಭಿನಂದನ ಗ್ರಂಥ ಸಂ.: ವಿ.ಬಿ. ಹಿರೇಮಠ . 2006/680
3. ಬಳುವಳಿ: ಮಾಸ್ಕೇರಿ ಸಮಗ್ರ ಚಿಂತನಾಭಿನಂದನ ಗ್ರಂಥ
   ಸಂ.: ರೋಶನ ನೇತ್ರಾವಳಿ 2012/212
4. ಅಭಿಮಾನ: ಮಾಸ್ಕೇರಿ ನಾಯಕರ ಅಭಿನಂದನ ಕೃತಿ
   ಸಂ.: ಡಾ. ಪ್ರಕಾಶ ನಾಯಕ 2014/228
5. ಸಂಘಟನೆಯ ನಾಯಕ ಕವಿ ಮಾಸ್ಕೇರಿ ಎಂ.ಕೆ. ನಾಯಕ
   ಸಂ.: ಮೋಹನ ಹಾರವಾಡೇಕರ 2004/32
6. ಆರ್ತ: ಮಾಸ್ಕೇರಿ ಎಂ.ಕೆ. ನಾಯಕರ ನಾಲ್ಕು ನಾಟಕಗಳ ಒಳನೋಟ
   ಲೇ: ಮಂಗಲಾ ಹಾರವಾಡೇಕರ 2010/80
7. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ಮಾಸ್ಕೇರಿ ಎಂ.ಕೆ. ನಾಯಕರ
   ಸಮಗ್ರ ಕಿರುಪರಿಚಯ ಲೇ.: ಶಂಕರ ಮುಂಗರವಾಡಿ 2012/48
8. ಮಾಸ್ಕೇರಿಯಾನ: ಮಾಸ್ಕೇರಿ ಎಂ.ಕೆ. ನಾಯಕರ ಆತ್ಮವೃತ್ತಾಂತ ನಿರೂಪಣೆ

ನಿರೂಪಕ: ಮಂಜುನಾಥ ಗಾಂವಕರ 2014/40

ಇತರ: ಮಾಸ್ಕೇರಿ ಸಾಹಿತ್ಯಾರಾಧನ ವೇದಿಕೆಯ ರೂವಾರಿ. ಇದೇ ಸಂಸ್ಥೆಯಿಂದ 30ಕ್ಕೂ ಹೆಚ್ಚು ಕೃತಿಗಳ ಪ್ರಕಟಣೆ. 100ಕ್ಕೂ ಹೆಚ್ಚು ಸಾಹಿತ್ಯಕ ಸಾಂಸ್ಕೃತಿಕ, ಗಣ್ಯರಿಗೆ ಕಾರುಣ್ಯ, ಶ್ರೀಗಂಧಹಾರ, ಸಾಹಿತ್ಯ ಚೇತನ ಇತ್ಯಾದಿ ಪ್ರಶಸ್ತಿ ಪ್ರದಾನ.

(807) ಮುಂಡಳ್ಳಿ ಉಮೇಶ ಭಟ್ಕಳ (ಜ: 1-6-1982): M.A., M.S.W. ಪದವೀಧರ. ತಾಲೂಕಾ ಸಾಮಾಜಿಕ ಲೆಕ್ಕ ಪರಿಶೋಧಕ. ಸಾಮಾಜಿಕ ಕಾರ್ಯಕರ್ತ. ಜಿಲ್ಲಾ ಸಂಪನ್ಮೂಲ ವ್ಯಕ್ತಿ. ತಂದೆ-ದೇವಯ್ಯ ನಾಯ್ಕ ಮುಂಡಳ್ಳಿ. ತಾಯಿ-ವೆಂಕಟಮ್ಮ. ಪತ್ನಿ ರೇಷ್ಮಾ.

ಪ್ರಕಟಿತ ಕೃತಿಗಳು:

1. ಕರುನಾಡ ಕುಡಿಗಳು-ಸಂಪಾದಿತ ಕವನ ಸಂಕಲನ 2007/40
2. ನಾನೂ ಶಿಲ್ಪವಾಗಬೇಕು-ಕವನ ಸಂಕಲನ 2013/52
3. ಬೆಂಕಿ ಬಿದ್ದಿದೆ ಹೊಳೆಗೆ-ಕಥಾ ಸಂಕಲನ 2012/48
4. ಭಾವಕುಸುಮ-ಕವನ ಸಂಕಲನ 2005/50
5. ಮೌನಗೀತೆ-ಕವನ ಸಂಕಲನ 2003/48

ಪ್ರಶಸ್ತಿ/ಗೌರವ:

1. 'ಭಾವಕುಸುಮ' ಕವನ ಸಂಕಲನಕ್ಕೆ ಸುವರ್ಣ ಕರ್ನಾಟಕ ಸೇವಾ ಪ್ರಶಸ್ತಿ...2007
2. ರಾಜ್ಯ ಯುವಜನ ಸೇವಾ ಇಲಾಖೆಯಿಂದ ಭಾವಗೀತೆ ಗಾಯನಕ್ಕೆ ರಾಜ್ಯಪ್ರಶಸ್ತಿ 2008
3. ತಾಲೂಕು ಆಡಳಿತವತಿಯಿಂದ ತಾಲೂಕು ಮಟ್ಟದ ರಾಜ್ಯೋತ್ಸವ ಪ್ರಶಸ್ತಿ 2011
4. ಇತರ ಸಂಘ ಸಂಸ್ಥೆಗಳಿಂದ ಪುರಸ್ಕಾರ.
5. ಹತ್ತು ವರ್ಷ ಕಾಲ ಭಟ್ಕಳ ತಾಲೂಕಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ.
6. ಭಟ್ಕಳದ 'ಶರಣು ದುರ್ಗಾ ಪ್ರಕಾಶನ' ದ ರೂವಾರಿ.

ಇತರ: ಉದಯ ಟಿ.ವಿ. ಅಕ್ಷರಮಾಲಾದಲ್ಲಿ ದ್ವಿತೀಯಸ್ಥಾನ (2003), ಬಿಜಾಪುರದಲ್ಲಿ ವಿಭಾಗಮಟ್ಟದ ಯುವಜನ ಮೇಳದಲ್ಲಿ ರಂಗಗೀತೆ ಗಾಯನದಲ್ಲಿ ಪ್ರಥಮ ಸ್ಥಾನ (2003), ಗೋಕಾಕದಲ್ಲಿ ವಿಭಾಗಮಟ್ಟದ ಯುವಜನ ಮೇಳದಲ್ಲಿ ಭಾವಗೀತೆ ಗಾಯನದಲ್ಲಿ ಪ್ರಥಮ ಸ್ಥಾನ (2006) ರಾಜ್ಯಮಟ್ಟದ ಯುವಜನ ಮೇಳದಲ್ಲಿ ಭಾವಗೀತೆ ಗಾಯನಕ್ಕೆ ರಾಜ್ಯ ಪ್ರಶಸ್ತಿ (2008).

(808) ಯಲ್ಲಾಪುರ ಕೃಷ್ಣ ಶರ್ಮಾ, ಬೆಂಗಳೂರು (ಜ: 28-8-1938) ಸಂಸ್ಕೃತ ವಿದ್ವಾನ್, ಕನ್ನಡ ಪಂಡಿತ, ಹಿಂದೀ ರತ್ನ. ಅರ್ಚಕ. ತಂದೆ ಗಣೇಶ ಭಟ್ಟ, ಬೀಸಗೋಡು, ಯಲ್ಲಾಪುರ. ತಾಯಿ ತಂಗಮ್ಮ. ಪತ್ನಿ ಕುಸುಮಾ.

ಪ್ರಕಟಿತ ಕೃತಿಗಳು :

1. ಅಷ್ಟೋತ್ತರ ಶತನಾಮಾವಲಿಃ (ಸಂಕಲಿತ) 2000
2. ಅಲಂಕಾರಾಂತರ್ಭಾವವಾದ-ವಿಮರ್ಶೆ 1991/128
3. ಋತುಶಾಂತಿಕತೃತ್ವಾಧಿಕಾರ ಜಿಜ್ಞಾಸೆ (ವಿದ್ವದಭಿಪ್ರಾಯ ಸಂಗ್ರಹ) 1985/52
4. ಋತುಶಾಂತ್ಯನುಷ್ಠಾನ-(ವಿದ್ವದಭಿಪ್ರಾಯ ಸಂಗ್ರಹ) 1986/112
5. ಎರಡು ಹಕ್ಕಿಗಳು-ಅನುವಾದಿತ ಕಾದಂಬರಿ 1979/81
6. ಕವಿರಾಜಮಾರ್ಗನ ಧ್ವನಿಕಂದ-ಧ್ವನಿಯೆಂಬುದಳಂಕಾರಂಕಂದಪದ್ಯದ ಅರ್ಥಮೀಮಾಂಸೆ 2013/64

7. ಕವಿರಾಜ ಮಾರ್ಗದ ಧ್ವನಿಯೆಂಬುದಳಂಕಾರಂ 1990/134
(ವಿವಿಧ ಲೇಖನ ಸಂಗ್ರಹ)
8. ಚಾತುರ್ವರ್ಣ್ಯ ಸಮೀಕ್ಷಾ-ಸಾನುವಾದ 2011/104
9. ಚಿಕ್ಕವರಿಗೆ ಚೊಕ್ಕಕತೆಗಳು 1989/41
10. ದೇವಪೂಜಾ ಉಪಚಾರ ಶ್ಲೋಕ ಮಂತ್ರ ಸಂಕಲನ 2008/88
11. ಪಂಚಾಯತನ ಪೂಜಾ ಪ್ರಯೋಗ (ಪದಾರ್ಥಾನುಸಮಯಃ) 2010/120
12. ಶ್ರೀ ಶಿವಪೂಜಾ ಪ್ರಯೋಗಃ 2010/80
13. ಸಂಕ್ಷಿಪ್ತ ಸಂಧ್ಯಾವಂದನೆ ದೇವರ ಪೂಜೆ 2008
14. ಸೂರ್ಯ ಪೂಜಾ ಪ್ರಯೋಗಃ 2014/104
15. ಸ್ತುತಿಕುಸುಮಾಂಜಲಿಃ (ಸ್ತೋತ್ರ ಸಂಕಲನ) 1983/90
16. ಹವ್ಯಾಸದ ಬರಹಗಳು 1985/84

ಪ್ರಶಸ್ತಿ/ಗೌರವ :

1. ವೇದಧರ್ಮ ಪರಿಪಾಲನಾ ಸಭಾ ಮಲ್ಲೇಶ್ವರಂ ಇವರಿಂದ 1989
2. ಕೆಳದಿ ಪ್ರಾಚ್ಯವಸ್ತು ಸಂಗ್ರಹಾಲಯದಿಂದ ಪ್ರಶಸ್ತಿ 1971
3. ಕುವೆಂಪು ಶ್ರೀ ಪ್ರಶಸ್ತಿ 2004
4. ರಾಜ್ಯೋತ್ಸವ ಪ್ರಶಸ್ತಿ 2005
5. ಕಂಚಿ ಕಾಮಕೋಟಿ ಪೀಠದ ಪ್ರಶಸ್ತಿ ಪತ್ರ 2007
6. ಶಾಸ್ತ್ರವಿದ್ಯಾನಿಧಿ ಪ್ರಶಸ್ತಿ-ವೇದಶಾಸ್ತ್ರ ಪೋಷಿಣಿಸಭಾ ಮೈಸೂರು
ಇವರಿಂದ...2013
7. ಸ್ವರ್ಣವಲ್ಲಿ ಮಠದಿಂದ ಪ್ರಶಸ್ತಿ 2014

(809) **ರಮಾನಂದ ಐನಕೈ ಶಿರಸಿ** (ಜ: 1-6-1961)**:** ಬಿ.ಕಾಂ., ಎಲ್.ಎಲ್.ಬಿ., ಎಂ.ಸಿ.ಜೆ., ನೀನಾಸಂ ಡಿಪ್ಲೋಮಾ ಪದವೀಧರ. 8 ವರ್ಷ ನ್ಯಾಯವಾದಿ. ನಂತರ ಕೃಷಿಕ. 'ಐನಕೈ ರಾಯಭಾರಿ' ಪತ್ರಿಕಾ ಸ್ಥಾಪಕ ಸಂಪಾದಕ. ಪತ್ರಿಕೋದ್ಯಮಿ (2 ವರ್ಷ). ತಂದೆ ರಾಮಪ್ಪ ಹೆಗಡೆ ಐನಕೈ, ತಾಯಿ ಸುಬ್ಬಲಕ್ಷ್ಮಿ, ಪತ್ನಿ ಉಷಾ.

ಪ್ರಕಟಿತ ಕೃತಿ: ನಮಗೆ ನಾವೇ ಪರಕೀಯರು 2013/200

(810) **ರಾಘವೇಂದ್ರ ಬೆಟ್ಟಕೊಪ್ಪ, ಶಿರಸಿ** (ಜ: 1-5-1978) ಬಿ.ಎ. ಪದವೀಧರ. ತಂದೆ ಸೀತಾರಾಮ ಹೆಗಡೆ, ಬೆಟ್ಟಕೊಪ್ಪ, ಕಾನಗೋಡು, ಶಿರಸಿ. ತಾಯಿ ಸರೋಜಾ. ಪತ್ನಿ ಗಾಯತ್ರಿ. (ಗ್ರಂಥಕರ್ತೆ).

ಪ್ರಕಟಿತ ಕೃತಿಗಳು :

1. ಜವಾರಿ-ಕೃಷಿಲೇಖನಗಳ ಸಂಕಲನ 2013/114
2. ನಿಮ್ಮೂರ ಚಿತ್ರಕಥೆಗಳು 2013/164
3. ರಾಗಾ-ಗದ್ಯ ಪದ್ಯ ಸಂಗ್ರಹ 2006/20
4. ಹಸಿರು ಹೆಜ್ಜೆ-ಪರಿಸರ ಲೇಖನಗಳು.. 2009/60

ಪ್ರಶಸ್ತಿ/ಗೌರವ:

1. ಜಿ.ಎಸ್. ಹೆಗಡೆ ಅಜ್ಜೀಬಳ ಪ್ರಶಸ್ತಿ ಉ.ಕ. ಜಿಲ್ಲಾ ಪತ್ರಕರ್ತರಸಂಘದಿಂದ . 3ಸಲ
2. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ರಾಜ್ಯಮಟ್ಟದ
ಅತ್ಯುತ್ತಮ ಚಿತ್ರ ಲೇಖನ ಪ್ರಶಸ್ತಿ .... 6 ಸಲ

3. ಸಾಗರ ಫೋಟೋಗ್ರಾಫಿಕ್ ಸೊಸೈಟಿಯಿಂದ ರಾಜ್ಯಮಟ್ಟದ ಪ್ರಶಸ್ತಿ

ಟಿಪ್ಪಣಿ : 'ರಾಗಾ' ದಲ್ಲಿನ ಪದ್ಯಗಳು ಪತ್ನಿ ಗಾಯತ್ರಿಯಿಂದ. ಇವರ ಮದುವೆಯ ದಿನದಂದು ಆಮಂತ್ರಿತರಿಗೆ 'ರಾಗಾ' ನೆನಪಿನ ಕಾಣಿಕೆಯಾಗಿ ಸಂದಿದೆ.

(811) **ರಾಜಶೇಖರ ಜೋಗಿನ್ಮನೆ, ಬೆಂಗಳೂರು** (ಜ: 10-7-1970) ಬಿ.ಎ. ಪದವೀಧರ. ಉದಯವಾಣಿ ಪತ್ರಿಕೆಯಲ್ಲಿ ಪತ್ರಿಕೋದ್ಯೋಗಿ. ಕಿರುತೆರೆ ಕಲಾವಿದ. ತಂದೆ ಅಣ್ಣಪ್ಪ ಹೆಗಡೆ, ಜೋಗಿನ್ಮನೆ, ಸಿದ್ದಾಪುರ. ತಾಯಿ ಕಾಮಾಕ್ಷಿ. ಪತ್ನಿ ಗೀತಾ.

ಪ್ರಕಟಿತ ಕೃತಿ :

1. ಬಿಂಗಿ-ಕಥೆಗಳು 2000/103
2. ಬಿಂಗಿ -ಕಥಾಸಂಕಲನ (2000)
3. ಬಿಸ್ಮಿಲ್ಲಾಖಾನ್ -ವ್ಯಕ್ತಿ ಚಿತ್ರ -2015
4. ಇಗ್ಗಪ್ಪಣ್ಣನ ವಿಗ್ರಹಾನ್ವೇಷಣೆ - ಕಥಾಸಂಕಲನ – 2019

(812) **ರಾಜೀವ ಅಜ್ಜೀಬಳ, ಶಿರಸಿ** (ಜ: 9-1-1951) ಎಂ.ಎ., ಬಿ.ಎಡ್. ಪದವೀಧರ. ಹೈಸ್ಕೂಲು ಅಧ್ಯಾಪಕ. ಶಿರಸಿ ತಾಲೂಕಾ ಕಸಾಪ ಅಧ್ಯಕ್ಷ. ತಂದೆ ಗಣಪತಿ, ತಾಯಿ ಗೋದಾವರಿ. ಪತ್ನಿ ಪ್ರೇಮಾ.

ಪ್ರಕಟಿತ ಕೃತಿಗಳು :

1. ಅಕದಾಸ ದಂಪತಿಗಳ ವಿಧವಾ ವಿವಾಹ ಆಂದೋಲನ.................. 1992/45
2. ಉ.ಕ. ಪತ್ರಿಕೋದ್ಯಮ-ಶತಮಾನದ ಹೆಜ್ಜೆ ಗುರುತು (ಸಂಪಾದಿತ) ... 2006/45
3. ಕರ್ನಲ್ ಮೆಕೆಂಜಿ-ಸಂಪಾದಿತ 1984/35
4. ಕಾವ್ಯಬಿಂದು-ಸಂಪಾದಿತ 2014/64
5. ಚಿಕು-ಕಥಾಸಂಕಲನ 2013/126
6. ಚೆಂದಳಿರು-ಗೀತೆಗಳು 2014/68
7. ನಮ್ಮ ನಿಮ್ಮೊಳಗೆ-ಕವನಗಳು 2004/60
8. ನಲ್ಮೆ-ಕವನ ಸಂಕಲನ 1981/66
9. ಪದ್ಯಗಂಧಿ-ಸಂಪಾದಿತ 2013/92
10. ಬೆಳಕು ಬಳ್ಳಿ-ಕವನ ಸಂಕಲನ 1983/38
11. ಮೇದಿನಿ-ಪರಿಸರ ಗೀತೆಗಳು 1992/40
12. ಮೌನೋತ್ಸವ-ಕವನ ಸಂಕಲನ 1996/46
13. On The Wings of Dove-Anthology.......................... 2006/48

ಪ್ರಶಸ್ತಿ/ಗೌರವ :

1. ಸಂಕ್ರಮಣ ಸಾಹಿತ್ಯ ಪ್ರಶಸ್ತಿ 1987
2. ಮಂಗಳಾ ವರ್ಗೀಸ್ ಪ್ರಶಸ್ತಿ 1997
3. ದಸರಾ ಕವಿಗೋಷ್ಠಿಯಲ್ಲಿ ಪ್ರಶಸ್ತಿ ಪತ್ರ 1999
4. ಜನಮೆಚ್ಚಿದ ಶಿಕ್ಷಕ-ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 2002

(813) **ರಾಜು ಅಡಕಳ್ಳಿ, ಬೆಂಗಳೂರು** (ಜ: 22-3-1967) ಎಂ.ಎ. ಪದವೀಧರ. ಪತ್ರಿಕೋದ್ಯೋಗಿ. ಮೀಡಿಯಾ ಸಲಹೆಗಾರ. ಹೆಸರು ರಾಮಚಂದ್ರ, ತಂದೆ ಸುಬ್ರಾಯ ಹೆಗಡೆ, ಅಡಕಳ್ಳಿ, ಸಿದ್ದಾಪುರ. ತಾಯಿ ವಿಲಾಸಿನಿ. ಪತ್ನಿ ಮಮತಾ.

ಪ್ರಕಟಿತ ಕೃತಿಗಳು :

1. ಭಯಂಕರ ಭಯೋತ್ಪಾದಕ-ಒಸಾಮಾ ಬಿನ್ ಲಾಡೆನ್ 2002/160

2. ಶ್ರೀಲ ಪ್ರಭುಪಾದ-ಜೀವನ ಚರಿತ್ರೆ 2002/52

ಪ್ರಶಸ್ತಿ/ಗೌರವ : ಗೋರೂರು ಸಾಹಿತ್ಯ ಪ್ರಶಸ್ತಿ 2002

(814) ರಾಮಕೃಷ್ಣ ಗುಂದಿ (ಡಾ॥) ಅಂಕೋಲಾ (ಜ: 23-3-1953): M.A., Ph.D. ಪದವೀಧರ. ಅಂಕೋಲಾ ಜಿ.ಸಿ. ಕಾಲೇಜಿನಲ್ಲಿ 3 ದಶಕಗಳ ಕಾಲ ಕನ್ನಡ ಅಧ್ಯಾಪಕ. ಕಾರವಾರದ ವಾಣಿಜ್ಯ ಕಾಲೇಜಿನ ನಿವೃತ್ತ ಪ್ರಾಚಾರ್ಯ. ಯಕ್ಷಗಾನ ಕಲಾವಿದ. ತಂದೆ-ಗಣಪ ಮಾಸ್ತರ ನಾಡು ಮಾಸ್ಕೇರಿ ಕುಮಟಾ. ತಾಯಿ-ತುಳಸಿ. ಪತ್ನಿ-ನಿರ್ಮಲಾ.

ಪ್ರಕಟಿತ ಕೃತಿಗಳು:

1. ಅತಿಕ್ರಾಂತ-ಕಥಾ ಸಂಕಲನ 2008/100
2. ಅವಾರಿ-ಕಥಾ ಸಂಕಲನ 1984/90
3. ಆಗೇರ ಜನಾಂಗದ ಬಾಳಿಗೆ ಆರಂಭದ ಬೆಳಕು-
   ಸುಕ್ರು ಮಾಸ್ತರರ ಜೀವನ ಚರಿತ್ರೆ 2001/30
4.+ ಆಗೇರರ ಸಂಸ್ಕೃತಿ-'ಸಂಸ್ಕೃತಿ ಸಮೀಕ್ಷೆ' 1986/100
5. ಕಡಲ ಬೆಳಕಿನ ದಾರಿಗುಂಟ-ಕಥಾ ಸಂಕಲನ 1995/95
6. ನಾಗಲೋಕ ವಿಜಯ-ಯಕ್ಷಗಾನ ಪ್ರಸಂಗ 1990/60
7. ವಂದೇ ಮಾತರಂ-ಬೀದಿನಾಟಕ 1996/30

ಪ್ರಶಸ್ತಿ/ಗೌರವ:

1. ಆಗೇರ ಸಮಾಜದ ಪ್ರಪ್ರಥಮ ಸ್ನಾತಕೋತ್ತರ ಪದವೀಧರ
2. ಅಂಕೋಲಾ ಕಾಲೇಜಿನಲ್ಲಿ ಅಭಿನಯ ಮಂಟಪ ಸಾಂಸ್ಕೃತಿಕ ವೇದಿಕೆ ರೂವಾರಿ.
3.+ 'ಉತ್ತರ ಕನ್ನಡ ಜಿಲ್ಲೆಯ ಆಗೇರರು-ಒಂದು ಅಧ್ಯಯನ' ಮಹಾಪ್ರಬಂಧಕ್ಕೆ
   ಕರ್ನಾಟಕ ವಿ.ವಿ.ಯಿಂದ ಪಿಎಚ್.ಡಿ. ಪದವಿ.
4. ಜಗದ್ಗುರು ಶಂಕರಾಚಾರ್ಯ ಆದರ್ಶ ಶಿಕ್ಷಕ ಪ್ರಶಸ್ತಿ
   ಕಾರವಾರದ ಯುವಸೇವಾ ಸಂಸ್ಥೆಯಿಂದ 2005
5. ಯಲ್ಲಾಪುರದ ಸಂಕಲ್ಪ ಸೇವಾ ಸಂಸ್ಥೆಯಿಂದ ಸನ್ಮಾನ 2005
6. ಕಾಸರಗೋಡು ಎಡನೀರು ಮಠದಿಂದ ಸನ್ಮಾನ-ಪ್ರಶಸ್ತಿ 2006
7. ವಿಶುಕುಮಾರ ದತ್ತಿನಿಧಿ ಪ್ರಶಸ್ತಿ-ಅತಿಕ್ರಾಂತ ಕಥಾಸಂಕಲನಕ್ಕೆ. ಹಾರವಾಡಾದ
   ಸುಕ್ರುಮಾಸ್ತರ ಪ್ರತಿಷ್ಠಾನದಿಂದ 'ಯಕ್ಷಕಣ್ಮಣಿ' ಬಿರುದು. 'ನಾಗಲೋಕ ವಿಜಯ'
   ಯಕ್ಷಗಾನ ಪ್ರಸಂಗ ಧ್ವನಿಸುರಳಿಯಾಗಿ ಹೊರಬಂದಿದೆ.
8. ಇವರ ಕುರಿತ ಸಾಕ್ಷಚಿತ್ರ ತಯಾರಾಗಿದೆ 2015

(815) ರಾಮಚಂದ್ರ ಮಹಾದೇವ, ಹೊಸಮನೆ, ಗೋಕರ್ಣ (ಜ: 6-4-1968) ಎಂ.ಎ.,ಪದವೀಧರ. ಪುರೋಹಿತ, ಪುಸ್ತಕೋದ್ಯಮಿ. ತಂದೆ ಮಹಾದೇವ ಹೊಸಮನೆ, ತಾಯಿ ಸರಸ್ವತಿ.

ಪ್ರಕಟಿತ ಕೃತಿಗಳು : (ಎಲ್ಲವೂ ಸಂಪಾದಿತ/ಸಂಕಲಿತ ಕೃತಿಗಳು)

1. ಉದ್ಯಾಪನ ವಿಧಿಸಹಿತ ಸಂಕಷ್ಟಹರ ಮಹಾಗಣಪತಿ ವ್ರತಕಥಾ 2005/24
2. ಉದ್ಯಾಪನ ಸಹಿತ ಸತ್ಯಗಣಪತಿ ವ್ರತ ಕಥಾ 1999/80
3. ಉದ್ಯಾಪನ ಸಹಿತ ಸತ್ಯನಾರಾಯಣ ವ್ರತಕಥಾ 1997/70
4. ಋಗ್ವೇದೀಯ ನಿತ್ಯಕರ್ಮ 2003/80
5. ನವರಾತ್ರಿ ವ್ರತ-ಹಾಡುಗಳು...2000/70
6. ಬೋಧಾಯನೀಯ ಪೂರ್ವಪ್ರಯೋಗ....................................... 1998/320
7. ಯಜುರ್ವೇದೀಯ ಸಂಧ್ಯಾ 2003/30

8. ಲಕ್ಷ್ಮೀನಾರಾಯಣ ಹೃದಯಂ 1997/20
9. ಸ್ತೋತ್ರ ರತ್ನ .... /150

(816) **ರಾಮಚಂದ್ರ ಶರ್ಮಾ ತ್ಯಾಗಲಿ, ಬೆಂಗಳೂರು** (ಜ: 30-3-1940) ಅದ್ವೈತ ವೇದಾಂತ **ವಿದ್ವಾನ್, ಹಿಂದೀ ಸಾಹಿತ್ಯ ರತ್ನ. ನಿವೃತ್ತ ಅಧ್ಯಾಪಕ, ಜ್ಯೋತಿಷಿ, ಗಮಕ** ವ್ಯಾಖ್ಯಾನಕಾರ, ಪುರಾಣ ಪ್ರವಚನಕಾರ, ಸಂಪಾದಕ-'ಹವ್ಯಕ', 'ಶಿವರಾಮ ಕೃಷ್ಣದರ್ಶನ' ಮಾಸಪತ್ರಿಕೆಗಳು. ಯಕ್ಷಗಾನ ತಾಳಮದ್ದಲೆ ಅರ್ಥಗಾರ, ರಾಜ್ಯಪಠ್ಯಪುಸ್ತಕ ಸಮಿತಿ ಸದಸ್ಯ. ತಂದೆ ಗಣೇಶ ಭಟ್ಟ, ತ್ಯಾಗಲಿ, ಸಿದ್ದಾಪುರ. ತಾಯಿ ಗಂಗಾ. ಪತ್ನಿ ನೇತ್ರಾವತಿ.

ಪ್ರಕಟಿತ ಕೃತಿಗಳು :

1. ಇದು ನನ್ನ ಮನಸ್ಸು-ಕವನ ಸಂಕಲನ 1969/50
2. ಮಹರ್ಷಿ ಕಶ್ಯಪ 2014/80
3. ಮಹರ್ಷಿವ್ಯಾಸ 2014/80
4. ವಾಲ್ಮೀಕಿ-ರಾಮಾಯಣದ ಸೂಕ್ತಿರತ್ನಗಳು 2006/71
5. ಶ್ರೀಗೌಡಪಾದಾಚಾರ್ಯ ವಿರಚಿತ ಸುಭಗೋದಯ ಸ್ತೋತ್ರಂ-ಸಾನುವಾದ 2003/26
6. ಶ್ರೀ ದೇವೀ ಭಾಗವತ.. 2001/50
7. ಶ್ರೀಮದಯ್ಯಪ್ಪ ಗೀತಾ-ಸಾನುವಾದ 1980/150
8. ಶ್ರೀ ವಿದ್ಯಾರತ್ನ ಸೂತ್ರಾಣಿ-ಸಾನುವಾದ (ಮೂಲ ಗೌಡಪಾದಾಚಾರ್ಯ) 2010/75

ಪ್ರಶಸ್ತಿ/ಗೌರವ :

1. 'ವ್ಯಾಖ್ಯಾನ ವೈಜಯಂತಿ' ಬಿರುದು-ರಾಜಾಜಿನಗರ ಕುಮಾರವ್ಯಾಸ ಮಂಟಪದಲ್ಲಿ 15 ವರ್ಷಕಾಲ 'ಕುಮಾರವ್ಯಾಸ ಭಾರತ'ದ ಮೇಲೆ ಗಮಕ ವ್ಯಾಖ್ಯಾನಕ್ಕಾಗಿ.
2. 1970ರ ದಶಕ : ಉಜ್ಜೈನಿಯಲ್ಲಿ ನಡೆದ ಅಖಿಲಭಾರತಮಟ್ಟದ ವಾಕ್ಯಾರ್ಥದಲ್ಲಿ ಸತತ ಮೂರು ಚಿನ್ನದ ಪದಕಗಳು.

(817) **ರಾಮಾನಂದ ಅವಧೂತರು ದೀವಗಿ, ಕುಮಟಾ** (ಜ: ರಥಸಪ್ತಮಿ 1930) ಪೂರ್ವಾಶ್ರಮದ ಹೆಸರು ರಾಮಚಂದ್ರ. ತಂದೆ ನಾರಾಯಣ ಕೇಶವ ಹೆಗಡೆ, ಜಾಗನಳ್ಳಿ, ಶಿರಸಿ (ಸಹಜಾನಂದ ಅವಧೂತರು, ಕೊಳಗೀಬೀಸ, ಶಿರಸಿ). ತಾಯಿ ಲಕ್ಷ್ಮಿ.

ಪ್ರಕಟಿತ ಕೃತಿಗಳು :

1. ಸಂಕ್ಷಿಪ್ತ ಶ್ರೀ ದತ್ತಗುರು ಚರಿತ್ರೆ-ಕಾವ್ಯ.. 2010/18
2. ಸದ್ಗುರು ಚರಿತಾಮೃತಂ-ಕಾವ್ಯ 2009/28

ಪ್ರಶಸ್ತಿ/ಗೌರವ :

1. ಅವಧೂತ ಶ್ರೀರಾಮಾನಂದರು-ಲೇ. ಡಾ.ಜಿ.ಎಸ್. ಹೆಗಡೆ 2012/80
2. ಕಾರುಣ್ಯ ಸಿಂಧು ಸದ್ಗುರು ಶ್ರೀರಾಮಾನಂದರು ಲೇ.: ಸವಿತಾ ಧಾರೇಶ್ವರ 2014/18

(818) **ರೇವಣಕರ ಸುರೇಂದ್ರ [ಸತ್ಯಪ್ರಿಯ] ಶಿರಸಿ** (ಜ: 10-4-1949): B.Sc., M.A. (Kannada, Hindi, Sanskrit, English), D.E.M., M.B.A., M.S. (Psy.) ಪದವೀಧರ. ಬಿ.ಎಸ್.ಎನ್.ಎಲ್. ಡಿವಿಜನಲ್ ಎಂಜಿನಿಯರ್. 2005 ರಿಂದ ಪತ್ರಿಕೋದ್ಯಮಿ. ಸ್ಫೂರ್ತಿಯ ಸೆಲೆ-ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಮಾಸಪತ್ರಿಕೆ ಪ್ರಕಟಣೆ. ತಂದೆ-ಜಾಜು ರೇವಣಕರ ಶಿರಸಿ, ತಾಯಿ-ಸರೋಜಿನಿ. ಪತ್ನಿ-ಮೀರಾ.

ಪ್ರಕಟಿತ ಕೃತಿಗಳು (28):

ಅ. ಸಂಗ್ರಹಿತ ಕೃತಿಗಳು (13)

1. ಅಮೃತ ಬಿಂದುಗಳು ಭಾಗ–1 .... 2007/66
2. ಕಂಠಪಾಠ ಸ್ತೋತ್ರ ಸಂಗ್ರಹ 2007/44
3. ಗೀತಾಮೃತ 2005/50
4. ಜಗತ್ತಿನ ಮಹಾಸತ್ಯಗಳು–ಆಧ್ಯಾತ್ಮಿಕ 2004/44
5. ಜೀವನ ಮೌಲ್ಯಗಳು ಭಾಗ–1 ....2007/48
6. ಜೀವನ ಮೌಲ್ಯಗಳು ಭಾಗ–2 ....2009/40
7. ನರಕೇಸರಿ ಸ್ವಾಮಿ ವಿವೇಕಾನಂದರ ನುಡಿಮುತ್ತುಗಳು–ಸಂಗ್ರಹಿತ .. 2002/24
8. ನಿತ್ಯ ಪ್ರಾರ್ಥನೆ–ಆಧ್ಯಾತ್ಮಿಕ–ಸಂಗ್ರಹಿತ 2010/40
9. ಪತಂಜಲಿಯ ಯೋಗಸೂತ್ರಗಳು–ಸಂಗ್ರಹಿತ 2009/20
10. ಮಹಾಪುರುಷರು–ಚರಿತ್ರೆ 2007/76
11. ರಾಮರಕ್ಷಾ ಸ್ತೋತ್ರ–ಸಂಗ್ರಹಿತ 2008/22
12. ವಿಶ್ವಪ್ರೇಮ–ಆಧ್ಯಾತ್ಮಿಕ 2005/26
13. ಹನುಮಾನ ಚಾಲೀಸ–ಸಂಗ್ರಹಿತ 2008/25

ಬ. ಅನುವಾದಿತ ಕೃತಿಗಳು: (12)

14. ಅದ್ಭುತ ಬಾಲಕರು–ಮೂಲ ಹಿಂದಿ : ಗೀತಾಪ್ರೆಸ್ ಗೋರಖಪುರ2005/56
15. ಕರ್ಮಸಿದ್ಧಾಂತ ಮತ್ತು ಪುನರ್ಜನ್ಮ–(ಮೂಲ ಅಂಗ್ರೇಜೀ
    ಸ್ವಾಮಿ ಚಿದಾನಂದಜಿ ಹೃಷಿಕೇಶ) 2008/30
16. ಗುರು ಮತ್ತು ಪಾಲಕರ ಭಕ್ತ ಬಾಲಕರು
    (ಮೂಲ ಹಿಂದಿ : ಹನುಮಾನ ಪ್ರಸಾದ ಪೋದ್ದಾರ) 2008/85
17. ಜಾನ್ ರಸ್ಕಿನ್–(ಮೂಲ ಅಂಗ್ರೇಜೀ : ಮಹಾತ್ಮಾಗಾಂಧಿ) 2008/36
18. ತಮಿಳುನಾಡಿನ ಮಹಿಳಾ ಸಂತರು–(ಮೂಲ ಅಂಗ್ರೇಜೀ :
    ಎಂ. ಅರುಣಾಚಲಂ) 2003/60
19. ದಶಾವತಾರಿ ಭಗವಾನ್ ವಿಷ್ಣು
    (ಮೂಲ ಹಿಂದಿ : ಗೀತಾ ಪ್ರೆಸ್ ಗೋರಖಪುರ) 2006/
20. ನವದುರ್ಗೆ–(ಮೂಲ ಹಿಂದಿ) 2006/
21. ಭಾರತದ ಪ್ರಮುಖ ಸಾಧು ಸಂತರು–(ಮೂಲ ಹಿಂದಿ) 2006/36
22. ಭಾರತೀಯ ಆದರ್ಶ ಸಂತರು
    (ಮೂಲ ಹಿಂದಿ : ಟಿ. ಸುದರ್ಶನ ಸಿಂಹ) 2007/52
23. ರಮಾಬಾಯಿ ಅಂಬೇಡಕರ–(ಮೂಲ ಹಿಂದಿ) 2009/55
24. ರಾಮಾಯಣದ ಆದರ್ಶ ಪಾತ್ರಗಳು
    (ಮೂಲ ಹಿಂದಿ : ಗೀತಾ ಪ್ರೆಸ್ ಗೋರಖಪುರ) 2006/56
25. ಸತ್ಯ ಹಾಗೂ ಪ್ರಾಮಾಣಿಕ ಬಾಲಕರು
    (ಮೂಲ ಹಿಂದಿ : ಗೀತಾಪ್ರೆಸ್ ಗೋರಖಪುರ) 2010/59

ಕ. ಅಂಗ್ರೇಜೀ (3)

26. Burning words of great soul-collected 2004/22
27. Gems of words of Swami Vivekanand-collected 2011/40
28. So says Swami Vivekanand-collected.. 2008/36

ಪ್ರಶಸ್ತಿ/ಗೌರವ:

ಅಖಿಲ ಭಾರತ ದಲಿತ ಸಾಹಿತ್ಯ ಅಕಾಡೆಮಿ ನವದೆಹಲಿಯಿಂದ ರಾಷ್ಟ್ರೀಯ
“ಮಹಾತ್ಮಾ ಜ್ಯೋತಿಬಾ ಫುಲೆ” ಪ್ರಶಸ್ತಿ 2007

(819) **ರೋಶನ್ ನೇತ್ರಾವಳ ದಾಂಡೇಲಿ**(ಜ: 18-6-1973)M.A. ಪದವೀಧರ. ಸ್ಥಳೀಯ ಕಾಗದ ಕಾರಖಾನೆ ಉದ್ಯೋಗಿ. ತಂದೆ ಶಿವರಾಮ ನೇತ್ರಾವಳ ಸುಪಾ. ತಾಯಿ ಗೀತಾ. ಪತ್ನಿ ಶಾಂತಲಾ.

ಪ್ರಕಟಿತ ಕೃತಿ: ದಾಂಡೇಲಿ ಸಾಹಿತ್ಯ ಪಡೆ 2012/220

ಪ್ರಶಸ್ತಿ/ಗೌರವ: ಬಂಗಾರಮಕ್ಕಿ ಕಾರುಣ್ಯ ಪ್ರಶಸ್ತಿ 2015

(820) **ವನರಾಗ ಶರ್ಮಾ, ವಜ್ರಳ್ಳಿ, ಯಲ್ಲಾಪುರ** (ಜ: 3-12-1951) ಎಂ.ಎ., ಬಿ.ಎಡ್. ರಾಷ್ಟ್ರಭಾಷಾ ವಿಶಾರದ, ಕೃಷಿವಿಜ್ಞಾನ ಡಿಪ್ಲೋಮಾ ಪದವೀಧರ, ಮುಖ್ಯಾಧ್ಯಾಪಕ ಸರ್ವೋದಯ ಪ್ರೌಢಶಾಲೆ, ವಜ್ರಳ್ಳಿ. ಹೆಸರು ಗಣಪತಿ. ತಂದೆ ರಾಮಚಂದ್ರ ಭಟ್ಟ, ವಜ್ರಳ್ಳಿ, ಯಲ್ಲಾಪುರ. ತಾಯಿ ಗೌರಿ, ಪತ್ನಿ ಸುಶೀಲಾ.

ಪ್ರಕಟಿತ ಕೃತಿಗಳು :

1. ಅಗ್ನಿಪಥ-ಕವನ ಸಂಕಲನ 2012/202
2. ಅರೆ! ಇದು ಎಂಥ ಮನಸು ! (ಅನುವಾದಿತ ಕಾದಂಬರಿ) 2015/170
3. ಇಬ್ಬನಿಯ ಕನ್ನಡಿ-ಹನಿಗವನ ಚುಟುಕು ಸಂಗ್ರಹ 2015
4. ಕಣ್ಣ ಹನಿಗಳ ಕಾಣಿಕೆ-ಕಥಾ ಸಂಕಲನ 2011/152
5. ಕಾರ್ಗಿಲ್ ವಿಜಯ ಮತ್ತು ಇತರ ನಾಟಕಗಳು 2011/72
6. ಚಲುವನಾರೆ ಬಂದವ-ಭಾವಗೀತಾ ಸಂಕಲನ 2013/124
7. ಚೈತ್ರ ಸಂಗಮ-ಕಥಾ ಸಂಕಲನ 2010/174
8. ನೆಲದ ನೆಲೆ-ಕಥಾ ಸಂಕಲನ 2015/200
9. ಬಣ್ಣದ ಕಾರಂಜಿ-ಮಕ್ಕಳ ಕವನ ಸಂಕಲನ 2011/64
10. ಬಣ್ಣದ ಕೊಳಲು-ಮಕ್ಕಳ ಕವನಗಳು 1984/84
11. ಭಜನ ಮಂಜರಿ ಮತ್ತು ಆರತಿ ಪದಗಳು .... 2009 (4)2014/96
12. ಮಂದಾರನ ಕಗ್ಗ-ಚೌಪದಿ ಸಂಕಲನ 2015/136
13. ಮಳೆಯೆ ಮಳೆಯೆ ಬಾ-ಮಕ್ಕಳ ಕವನ ಸಂಕಲನ 2015/84
14. ಯಶಸ್ವಿ ಬದುಕಿನ ಮಾರ್ಗಮಿಂಚು ಭಾಗ-1 (ಚಿಂತನ ಬರಹಗಳು) 2012/164
15. ಯಶಸ್ವಿ ಬದುಕಿನ ಮಾರ್ಗಮಿಂಚು ಭಾಗ-2 (ಚಿಂತನ ಬರಹಗಳು) 2013/168
16. ಯಶಸ್ಸಿನ ಚಿಂತನ ಮಂದಾರ-(ಚಿಂತನ ಬರಹ).................................. 2015
17. ಸಾಹಸಯಾತ್ರೆ-ಮಕ್ಕಳ ಕಥೆಗಳು 2008/72
18. ಹಾಲುಮಾರುವ ಹುಡುಗಿ-ನವ್ಯಕವಿತೆ, ಭಾವಗೀತೆಗಳು 2000/70

ಪ್ರಶಸ್ತಿ/ಗೌರವ :

1. ಜನಮೆಚ್ಚಿದ ಶಿಕ್ಷಕ ಪ್ರಶಸ್ತಿ 2003
2. ಸಾಂಸ್ಕೃತಿಕ ಶ್ರೀ, ಕಥಾ ಪ್ರತಿಭಾರತ್ನ ಪ್ರಶಸ್ತಿಗಳು
3. ದಿನಪತ್ರಿಕೆ, ನಿಯತಕಾಲಿಕಗಳ ಕಥಾ-ಕಾವ್ಯ ಸ್ಪರ್ಧೆಗಳಲ್ಲಿ 10 ಬಹುಮಾನಗಳು

(821) **ವರದೇಶ ಹಿರೇಗಂಗೆ ಮಣಿಪಾಲ** (ಜ: 14-12-1965) ಎಂ.ಎ., (ಇತಿಹಾಸ), ಎಂ.ಎ.(ಪತ್ರಿಕೋದ್ಯಮ), ಎಂ.ಎ.(ಇಂಗ್ಲೀಷ್) ಪದವೀಧರ. ಕೆಲಕಾಲ ಪತ್ರಿಕೋದ್ಯೋಗಿ. ಮಣಿಪಾಲ ಇನ್ಸ್‌ಟಿಟ್ಯೂಟ್ ಆಫ್ ಕಮ್ಯೂನಿಕೇಶನ್‌ನಲ್ಲಿ ಡೈರೆಕ್ಟರ ಇನ್‌ಚಾರ್ಜ್. ತಂದೆ ಡಾ। ತಿಮ್ಮಪ್ಪ ಹಿರೇಗಂಗೆ, ಗೋಕರ್ಣ-ಗ್ರಂಥಕರ್ತ. ತಾಯಿ ಲಲಿತಾ. ಪತ್ನಿ ಅನಿತಾ.

ಪ್ರಕಟಿತ ಕೃತಿ : ಯಾವ ಶಬ್ದದ ಮಾಯೆ 2000/52

(822) **ವಾಸರೆ ಬಿ.ಎನ್. ದಾಂಡೇಲಿ** (ಜ: 1-7-1975) Diploma in Journalism. **ಪದವೀಧರ. 15 ವರ್ಷದಿಂದ ಪತ್ರಕರ್ತ. ದಾಂಡೇಲಿಯ ಸಹ್ಯಾದ್ರಿ ಶಿಕ್ಷಣ ಸಂಸ್ಥೆ** ಅಧ್ಯಕ್ಷ. 2008ರಿಂದ ಹಳಿಯಾಳ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ಘಟಕದ ಅಧ್ಯಕ್ಷ. ಹೆಸರು ಬೊಮ್ಮಯ್ಯ. ತಂದೆ ನಾರಾಯಣ ನಾಯಕ ವಾಸರೆ ಅಂಕೋಲಾ. ತಾಯಿ ಮಹಾದೇವಿ. ಪತ್ನಿ ಜಲಜಾ. **ಪ್ರಕಟಿತ ಕೃತಿ**: ಎಷ್ಟೊಂದು ಮನುಷ್ಯರು-ಕವನ ಸಂಕಲನ...................... 2015/77

(823) **[ವಿಡಂಬಾರಿ] ಇಡಗುಂಜಿ ಹೊನ್ನಾವರ** (ಜ: 21-2-1925): ಕನ್ನಡ 3ನೇ ತರಗತಿ **ಶಿಕ್ಷಣ. ಅಂಚೆ ಇಲಾಖೆ ನಿವೃತ್ತ ಉದ್ಯೋಗಿ. ಹೆಸರು-ವಿಷ್ಣು. (ದೇವದಾಸಿಯ ಮಗ)**. ತಾಯಿ-ಗಣಪಿ. ಪತ್ನಿ-ಸುಮಿತ್ರಾ.

ಪ್ರಕಟಿತ ಕೃತಿಗಳು:

1. ಅಂಚೆ ಪೇದೆಯ ಆತ್ಮಕಥನ 1995/70
2. ಒಗ್ಗರಣೆ-500 ಚುಟುಕುಗಳ ಸಂಕಲನ 1981/102
3. ಕವಳ-1000 ಚುಟುಕುಗಳ ಸಂಕಲನ 1980/220
4. ಕುದಿಬಿಂದು-500 ಚುಟುಕುಗಳ ಸಂಕಲನ 2004/110
5. ವಿಡಂಬಾರಿ ಕಂಡದ್ದು-650 ಚುಟುಕುಗಳ ಸಂಕಲನ................2007/120

ಪ್ರಶಸ್ತಿ/ಗೌರವ:

1. ಹಲವಾರು ಸ್ಥಳೀಯ ಸಂಘ ಸಂಸ್ಥೆಗಳಿಂದ ಸನ್ಮಾನ.
2. ಉ.ಕ. ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ-ಮುಂಡಗೋಡ 2013
3. ಕನ್ನಡ ರಾಜ್ಯೋತ್ಸವ ಪ್ರಶಸ್ತಿ 2014

(824) **ವಿಠ್ಠಲ ಎಂ. ಅವರಗುಪ್ಪ ಸಿದ್ದಾಪುರ** (ಜ: 22-7-1962): M.A. (Kannada) and D.F.A. ಪದವೀಧರ. ಕೃಷಿಕ. ಸಾಮಾಜಿಕ ಕಾರ್ಯಕರ್ತ. ತಂದೆ-ಮೈಲಪ್ಪ ಅವರಗುಪ್ಪ. ತಾಯಿ-ಮುಕಮ್ಮ. ಪತ್ನಿ-ಪದ್ಮಶ್ರೀ.

ಪ್ರಕಟಿತ ಕೃತಿಗಳು:

1. ಡಂಗುರ-ಕವನಗಳು 2013/92
2. ಹಸಿರು ಹಾಗಲ-ಕವನಗಳು 2013/96

(825) **ವಿರೂಪಾಕ್ಷ ಜಡ್ಡೀಪಾಲ (ಡಾ.) ತಿರುಪತಿ** (ಜ: 21-7-1970): ಅಲಂಕಾರ ಶಾಸ್ತ್ರದಲ್ಲಿ ವಿದ್ವಾನ್, ವಿದ್ಯಾವಾರಿಧಿ (ಋ.ಆ.), ವಿದ್ಯಾವಾಚಸ್ಪತಿ (ಆ.ಋಾ), ಎಂ.ಎ. (ಸಂಸ್ಕೃತ), ಎಂ.ಎ. (ಅಂಗ್ರೇಜೀ ಸಾಹಿತ್ಯ), ಎಂ.ಎ. (ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಪ್ರಾಕ್ತನ ಶಾಸ್ತ್ರ), ಶಿಕ್ಷಾ ಶಾಸ್ತ್ರೀ (ಃ.ಇಜ.), ಮಾಸ್ಟರ್ ಆಫ್ ಪಬ್ಲಿಕ್ ಮ್ಯಾನೇಜಮೆಂಟ್, ಪಿ.ಜಿ. ಡಿಪ್ಲೋಮಾ-ಯೋಗವಿಜ್ಞಾನ ಮತ್ತು ಮಾನವ ಸಂಪನ್ಮೂಲ ನಿರ್ವಹಣೆ, ಜರ್ಮನ್ ಭಾಷೆಯಲ್ಲಿ ಸರ್ಟಿಫಿಕೇಟ್, ಹಿಂದಿ-ರಾಷ್ಟ್ರಭಾಷಾ ಪ್ರವೀಣ ಪದವೀಧರ. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದಲ್ಲಿ ಅಸೋಸಿಯೇಟ್ ಪ್ರೊಫೆಸರ್. ತಂದೆ ವಿಶ್ವೇಶ್ವರ ಜಡ್ಡಿಪಾಲ ಹೊಸ್ಮನೆ ಬಿಸಗೋಡ ಯಲ್ಲಾಪುರ. ತಾಯಿ ಗಿರಿಜಾ.

ಪ್ರಕಟಿತ ಕೃತಿಗಳು:

1. ಕೃಷ್ಣಬುಧವಿರಚಿತಮ್ ಅಲಂಕಾರಸರ್ವಸ್ವಮ್ 2010
2. ಭಾರತೀಯ ಗ್ರಂಥಸಂಪಾದನಶಾಸ್ತ್ರ ಪ್ರವೇಶಿನೀ (ಸಹಾನುವಾದಿತ) 2002
3. ಮೀಮಾಂಸಾಯಾಂ ಸಾಹಿತ್ಯಶಾಸ್ತ್ರೇ ಚ ಶಬ್ದ ಶಕ್ತಿಃ 2002
4. ವಿಚಾರವೀಥಿಕಾ 2000
5. Kiratarjuneeya with three Unpublished commentaries 2008
6. Nanarthashabdaratnam of Kalidasa with a commentary and Unadivyutpatti 2008
7. Teaching of Sanskrit-An Approach 2000

ಸಂಪಾದಿತ ಕೃತಿಗಳು:

1. ತರ್ಕಶಾಸ್ತ್ರಪ್ರಭಾವಮೀಮಾಂಸಾ 2000
2. ವಾಕ್ಯಪದೀಯಸಾಧನಸಮುದ್ದೇಶವಿಮರ್ಶಃ 2002
3. ಸಂಸ್ಕೃತವಿಜ್ಞಾನವೈಭವಂ: ಸಂಪುಟ–2 2000
4. ಸಂಸ್ಕೃತವಿಜ್ಞಾನವೈಭವಂ: ವಿಶೇಷ ಸಂಪುಟ 2002

ಟಿಪ್ಪಣಿ: (1) ಒಂಬತ್ತು ಭಾಷೆಗಳಲ್ಲಿ ಪರಿಣತಿ: ಕನ್ನಡ, ಹಿಂದಿ, ಸಂಸ್ಕೃತ, ಅಂಗ್ರೇಜೀ, ತೆಲುಗು, ಕೊಂಕಣಿ, ಓರಿಯಾ, ಪಾಲಿ ಮತ್ತು ಪ್ರಾಕೃತ. (2) ಐದು ಪ್ರಾಚೀನ ಲಿಪಿ–ಬ್ರಾಹ್ಮಿ, ಶಾರದಾ, ಗ್ರಂಥ, ನಂದಿನಾಗರಿ ಮತ್ತು ತಿಗಳಾರಿಗಳಲ್ಲಿ ಓದಿ ಬರೆಯುವ ಸಾಮರ್ಥ್ಯ. (3) ಜರ್ಮನ್ ಮತ್ತು ಇಂಡೋನೇಶಿಯಾದ ಬಹಾಸಾ ಭಾಷೆಗಳಲ್ಲಿ ಓದಿ ಬರೆಯುವ ಸಾಮರ್ಥ್ಯ. (4) ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಿದ 17 ಜನರಿಗೆ ಪಿಎಚ್.ಡಿ., 16 ಜನರಿಗೆ ಎಂ.ಫಿಲ್. ಮತ್ತು 3 ಜನರಿಗೆ ಪಿ.ಜಿ. ಡಿಪ್ಲೋಮಾ ಪದವಿ ಸಂದಿದೆ. ಕೆಲವರು ಸಂಶೋಧನೆ ಮಾಡುತ್ತಿದ್ದಾರೆ.

ಪ್ರಶಸ್ತಿ/ಗೌರವ:

1. ದೇಶ–ವಿದೇಶಗಳ ಹಲವಾರು ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನೆ.
2. ಸಂಸ್ಕೃತ ಮತ್ತು ಅಂಗ್ರೇಜಿಯಲ್ಲಿ ಹಲವಾರು ಸಂಶೋಧನಾ ಪ್ರಬಂಧಗಳ ಪ್ರಕಟಣೆ.
3. ರಾಷ್ಟ್ರೀಯ/ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿ/ಗೋಷ್ಠಿಗಳ ಅಧ್ಯಕ್ಷತೆ.
4. ದೇಶ–ವಿದೇಶಗಳಲ್ಲಿ ಸಂದರ್ಶಕ ಪ್ರಾಧ್ಯಾಪಕ.

(826) **ವೀಣಾಕರ ಪತಂಜಲಿ ಹೊನ್ನಾವರ** (ಜ: 31–3–1971): ಸ್ನಾತಕೋತ್ತರ ಪದವೀಧರ. ಶ್ರೀ ರಾ.ಭಾ.ಸ. ಸಂಸ್ಕೃತ ಸ್ನಾತಕ – ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕ. ತಂದೆ–ವೆಂಕಟೇಶ ವೀಣಾಕರ ಹೊನ್ನಾವರ (ಗ್ರಂಥಕರ್ತ). ತಾಯಿ–ಲಕ್ಷ್ಮಿ. ಪತ್ನಿ–ಪಶ್ಯಂತಿ.

ಪ್ರಕಟಿತ ಕೃತಿಗಳು:

1. ಬ್ರಹ್ಮೋಪದೇಶ–ಸಂಸ್ಕಾರ ವೈಶಿಷ್ಟ್ಯ ವಿವೇಚನೆ 2009/25
2. ಶ್ರೀಕೃಷ್ಣ ಶರಣಂ ಮಮ–ಭಾಗವತ ಕೃತಿ ವಿವೇಚನೆ 2008/42

(827) **ವೆಂಕಣ್ಣ ಜಾಲಿಮನೆ, ಹಿತ್ಲಳ್ಳಿ, ಯಲ್ಲಾಪುರ** (ಜ: 23–7–1956) ಎಸ್.ಎಸ್.ಎಲ್.ಸಿ. ಶಿಕ್ಷಣ. ಕೃಷಿಕ, ಕರಕುಶಲ ಕಲಾಕಾರ, 'ಸ್ವಸ್ತಿಕ್ ಆರ್ಟ್ಸ್ ಗ್ಯಾಲರಿ' ಹಿತ್ಲಳ್ಳಿ ಸ್ಥಾಪಕ. ಹೆಸರು ವೆಂಕಟರಮಣ. ತಂದೆ ಗಜಾನನ ಹೆಗಡೆ, ತಾಯಿ ಭಾಗೀರಥಿ. ಪತ್ನಿ ಮಹಾದೇವಿ.

ಪ್ರಕಟಿತ ಕೃತಿ : ಅಂಕುರ–ಕಲಾಕೃತಿಗಳ ತಯಾರಿಕಾ ವಿಧಾನ 2003/108

ಪ್ರಶಸ್ತಿ/ಗೌರವ :

1. ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪ್ರಶಸ್ತಿ...................................1985
2. ಉ.ಕ.ಜಿಲ್ಲಾ ಚಿತ್ರಕಲಾ ಪರಿಷತ್ತಿನಿಂದ ಗೌರವ-2000 ಅಶ್ವತ್ಥ ಎಲೆಗಳ ಮೇಲೆ 2000 ವಿವಿಧ ಚಿತ್ರಕಲೆಗಳ ಸಂಗಮ ರಚನೆಗಾಗಿ 2000

(828) ವೆರ್ಣೇಕರ ಮೋಹನ ಬೆಂಗಳೂರು (ಜ: 22-6-1950): B.A. ಪದವೀಧರ. ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ತರಬೇತಿ. ಕರ್ನಾಟಕ ವಿಧಾನಸಭೆಯ ಅಭಿಲೇಖನಾಧಿಕಾರಿ. ಪತ್ರಕರ್ತ-ಅಂಕಣಕಾರ. ಚುಕ್ಕಿ ಚಿತ್ರಕಾರ. ತಂದೆ-ವಾಸುದೇವ ಶೇಟ ಹೊಸಪಟ್ಟಣ ಹೊನ್ನಾವರ. ತಾಯಿ-ತುಳಸೀಬಾಯಿ. ಪತ್ನಿ-ಡಿ.ಶ್ರೀದೇವಿ.

ಪ್ರಕಟಿತ ಕೃತಿಗಳು: (54)

ಅ. ಮಕ್ಕಳ ಸಾಹಿತ್ಯ (13)

1. ಅಜ್ಜಿ ಹೇಳದ ಕತೆಗಳು-ಅನುವಾದಿತ, ಪರಿಷ್ಕೃತ 2012/88
2. ಆದರ್ಶ ಗೆಳೆಯ-ಮಕ್ಕಳ ನಾಟಕ 1970/20
3. ಏಕಲವ್ಯ 1999/32
4. ಜಾಣಮರಿ-ಶಿಶುಗೀತೆಗಳು 1994/26
5. ದ್ವೀಪದಲ್ಲಿ ಮಕ್ಕಳು-ಸಾಹಸ ಪ್ರಧಾನ ಮಕ್ಕಳ ಕಾದಂಬರಿ 2013/192
6. ದಶಾವತಾರಗಳು 1994/44
7. ಧೀರ ಪುಟಾಣಿ-ಸಾಹಸ ನೀಳ್ಗತೆ 1992/32
8. ನಮ್ಮ ಅಕ್ಕ-ನಾಟಕ 1972/20
9. ನೀತಿ ಬೋಧಕ ಮಕ್ಕಳ ರಾಮಾಯಣ-ಸಚಿತ್ರ ....2007 (2)2011/152
10. ಪ್ರಚಂಡ ಪೋರರು-ಕತೆಗಳು .... 1989 (2)2012/32
11. ಬಂಗಾರದ ಪೆಟ್ಟಿಗೆ-ಕತೆಗಳು (ಸಹಲೇಖಕ) 1996/88
12. ಬಹುಮಾನ-ನಾಟಕ 1984/24
13. ಮೂರು ಮಕ್ಕಳ ನಾಟಕಗಳು .... 1999 (2)2012/64

ಆ. ಕಥಾ ಸಂಕಲನಗಳು (5)

14. ಅವಳು ಕ್ಷಮಾತೀತಳು 2010/120
15. ನರಸಿಂಹ ದೇವರಿಗೆ ಚಿನ್ನದ ಕಿರೀಟ 2011/184
16. ಪ್ರಶಸ್ತಿ 1988/128
17. ಪ್ರಾಪ್ತಿ 1992/102
18. ಪ್ರೇಮಿಸಿದವರು... 1983/100

ಇ. ಆಹಾರ-ಆರೋಗ್ಯ (12)

19. ಆತಂಕದಿಂದ ಹೊರಬನ್ನಿ (Anxiety Disorders) 2005/92
20. ಉತ್ತಮ ಆರೋಗ್ಯಕ್ಕಾಗಿ ನಗು.. 2012/88
2. ಸತ್ಯಸಾಯಿ ಲೋಕಾಸೇವಾ ಟ್ರಸ್ಟ್ ಮುದ್ದೇನಹಳ್ಳಿ ಇವರಿಂದ 2010

(947) ಹೆಗಡೆ ಗಣಪತಿ ರಾಮಕೃಷ್ಣ (ಡಾ।) ಧಾರವಾಡ (ಜ: 2-1-1927) ಬಿ.ಎಸ್ಸಿ.(vet.) NDPH, DASc (Denmark) ಪದವೀಧರ. ಪಶು ವೈದ್ಯ. ಸಲಹೆಗಾರ. 'ಪರಿಸರ' ತ್ರೈಮಾಸಿಕ ಪತ್ರಿಕಾ ಸಂಪಾದಕ. ಸಾಮಾಜಿಕ ಕಾರ್ಯಕರ್ತ. ತಂದೆ ರಾಮಕೃಷ್ಣ ಹೆಗಡೆ, ಹೊಲನಗದ್ದೆ, ಕುಮಟಾ. ತಾಯಿ ಸರಸ್ವತಿ. ಪತ್ನಿ ಶಾಲಿನಿ.

ಪ್ರಕಟಿತ ಕೃತಿಗಳು :

1. ಕಾಮಧೇನು ಕೈಪಿಡಿ 1998/143
2. ನಾಡಹಸುಗಳ ಸುಧಾರಣೆಯಿಂದ ಕ್ಷೀರೋತ್ಪಾದನೆ.......................... 1994/42
3. ಬಂಜರು ಭೂಮಿ ಅಭಿವೃದ್ಧಿ ಕೈಪಿಡಿ-ಅನುವಾದ
   (ಮೂಲ: ಅಂಗ್ರೇಜೀ) 1987/123
4. ಮೊಟ್ಟೆಯೊಳಗಿನ ಗುಟ್ಟು-ಕೈಪಿಡಿ 1968
5. ಮಿಶ್ರತಳಿ ಹಸುಗಳ ನಿರ್ವಹಣೆ-ಕೈಪಿಡಿ (ಸಹಲೇಖಕ) 1990
6. ಸುಧಾರಿತ ಪಶುಸಂಗೋಪನಾ ಪದ್ಧತಿ 2000/287
7. Manual on Crossbred Cow... 1990/188

(948) ಹೆಗಡೆ ಗಣಪತಿ ರಾಮಚಂದ್ರ, ತುಮಕೂರು (ಜ: 20-7-1961) ಬಿ.ಎ. ಪದವೀಧರ. ಜಿಲ್ಲಾ ಖಜಾನೆಯಲ್ಲಿ ಗುಮಾಸ್ತ. ತಂದೆ ರಾಮಚಂದ್ರ ಹೆಗಡೆ, ಕೆಳಗಿನ ಮನೆ, ಸಿದ್ದಾಪುರ. ಸ್ವಾತಂತ್ರ್ಯ ಹೋರಾಟಗಾರ. ತಾಯಿ ಗಂಗಾ.

ಪ್ರಕಟಿತ ಕೃತಿ : ಶಿಶಿರ ಬಾಲೆ-ಕಾವ್ಯ 2000/112

(949) ಹೆಗಡೆ ಗಣಪತಿ (ಡಾ.) ಶಿರಸಿ (ಜ: 30-11-1957) ಎಂ.ಎಸ್ಸಿ., ಪಿಎಚ್.ಡಿ. (ಭೂಗರ್ಭಶಾಸ್ತ್ರ). ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಸ್ವಯಂ ನಿವೃತ್ತ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯತಕಾಲಿಕಗಳಲ್ಲಿ 45ಕ್ಕೂ ಹೆಚ್ಚು ವೈಜ್ಞಾನಿಕ ಲೇಖನಗಳು ಪ್ರಕಟ. ತಂದೆ ವೆಂಕಟರಮಣ ಹೆಗಡೆ ಯಡಳ್ಳಿ ಶಿರಸಿ. ತಾಯಿ ಅನ್ನಪೂರ್ಣ. ಪತ್ನಿ ಕೋಮಲಾ ಭಟ್ಟ (ಗ್ರಂಥಕರ್ತೆ).

ಪ್ರಕಟಿತ ಕೃತಿ: Bangalore Water Resources Management : Challanges and Remidies (co-authored) 2015/135

(950) ಹೆಗಡೆ ಗಣೇಶ ಎಸ್. ಬೆಂಗಳೂರು (ಜ: 22-5-1964) ಎಂ.ಇ. ಪದವೀಧರ. ಬೆಂಗಳೂರಿನ ವಿವೇಕಾನಂದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕ. ತಂದೆ ಶಾಂತಾರಾಮ ಹೆಗಡೆ, ಹಂದಿಗೋಣ, ಕುಮಟಾ. ತಾಯಿ ಸರಸ್ವತಿ. ಪತ್ನಿ ಗೀತಾ.

ಪ್ರಕಟಿತ ಕೃತಿಗಳು :

1. Fluid Mechanics Text Book 2003/500
2. Mechanical Engineering Design-1 .... 2003/484

(951) ಹೆಗಡೆ ಗಣೇಶ ಮಂ. (ಡಾ।) ಶಿರಸಿ (ಜ: 23-7-1973) ಎಂ.ವಿ.ಎಸ್ಸಿ. ಡಿ.ಸಿ.ಎ.ಎಂ., ಪಿ.ಜಿ.ವಿ.ಸಿ.ಎಲ್.ಡಿ., ಪಿ.ಜಿ.ಡಿ.ವಿ.ಸಿ.ಎಂ. ಪದವೀಧರ. ಪಶುವೈದ್ಯ, ಪಶುವೈದ್ಯಾಧಿಕಾರಿ ಪ್ರಾದೇಶಿಕ ಸಂಶೋಧನಾಧಿಕಾರಿ, ಶಿರಸಿ. ತಂದೆ ಮಂಜುನಾಥ ಹೆಗಡೆ, ನೀಲೇಸರ, ಶಿರಸಿ. ತಾಯಿ ಸೌಭದ್ರೆ. ಪತ್ನಿ ವಿನುತಾ.

ಪ್ರಕಟಿತ ಕೃತಿಗಳು :

1. ಓರ್ವ ಪಶುವೈದ್ಯನ ಅಪೂರ್ವ ಅನುಭವಗಳು (ಅನುವಾದಿತ ಆತ್ಮಕಥೆ) 2005/157
2. ಡೇರಿ ಡಾಕ್ಟರ್ ಹೋರಿ ಮಾಸ್ಟರ್-ಪಶುವೈದರ ಸ್ವಾರಸ್ಯಕರ ಅನುಭವಗಳು- ಅನುವಾದಿತ 2013/120
3. ಸುಸ್ಥಿರ ಕೃಷಿಗೆ ಹತ್ತಾರು ಹಾದಿ-ಕೃಷಿ ಸಾಧಕರೊಬ್ಬರ ಕುರಿತು 2013/32
4. ಹೈನು ಹೊನ್ನು : ಹೈನುಗಾರಿಕೆ, ಪಶು ಆಸಕ್ತರಿಗೆ ಅಗತ್ಯ ಮಾಹಿತಿ. (ಸಹಲೇಖಕ) 2013/440

ಪ್ರಶಸ್ತಿ/ಗೌರವ:

1. ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪುರಸ್ಕಾರ 2013
2. ತಾಲೂಕಾ ಮಟ್ಟದಲ್ಲಿ ಉತ್ತಮ ಸಾಧನೆಗಾಗಿ ಪುರಸ್ಕಾರ 2013
3. 'ಹೈನು ಹೊನ್ನು' ಕೃತಿಗೆ ಅತ್ಯುತ್ತಮ ಕೃಷಿ ಪುಸ್ತಕ ಪ್ರಶಸ್ತಿ 2015
4. ಕನ್ನಡ ಪಶುವೈದ್ಯ ಸಾಹಿತ್ಯ ಪರಿಷತ್ತಿನ 'ಪಶುವೈದ್ಯ ಸಾಹಿತ್ಯ ಲೋಕ' ಮತ್ತು ಕರ್ನಾಟಕ ಪಶುವೈದ್ಯಕೀಯ ಸಂಘದ 'ಪಶುವೈದ್ಯ ಧ್ವನಿ' ಪತ್ರಿಕೆಗಳ ಸಂಪಾದಕ

(952) ಹೆಗಡೆ ಗಣೇಶ ರಾ. ಹುಬ್ಬಳ್ಳಿ (ಜ: 25-1-1955) ಬಿ.ಎಸ್ಸಿ., ಎಂ.ಎ., ಬಿ.ಎಡ್. ಪದವೀಧರ. ವ್ಯಾಪಾರಿ, ಜ್ಯೋತಿಷಿ, ವಾಸ್ತು ಸಲಹೆಗಾರ, ಸಂಪಾದಕ-ಜ್ಯೋತಿರ್ವಿಜ್ಞಾನ ಮಾಸಪತ್ರಿಕೆ, ಹುಬ್ಬಳ್ಳಿ. ತಂದೆ ರಾಮಕೃಷ್ಣ ಹೆಗಡೆ, ಕಂಪ್ಲಿ, ಯಲ್ಲಾಪುರ. ತಾಯಿ ಗಣಪಿ. ಪತ್ನಿ ಸುನಂದಾ.

ಪ್ರಕಟಿತ ಕೃತಿಗಳು :

1. ಆಧುನಿಕ ಕೈಗಾರಿಕೆ ಕೈಪಿಡಿ 1999/214
2. ಆಧುನಿಕ ವಾಸ್ತು ಶಾಸ್ತ್ರ ಪರಿಚಯ 1995/173
3. ಜನಸಂಖ್ಯಾ ಶಿಕ್ಷಣ.. 1997/124
4. ಜ್ಯೋತಿಷ್ಯ ಪ್ರವೇಶಿಕಾ-ಪಥ್ಯ 2003/177
5. ಸರಳ ಜ್ಯೋತಿಃಶಾಸ್ತ್ರ ಪರಿಚಯ 1995/144

ಪ್ರಶಸ್ತಿ/ಗೌರವ :

1. 'ಜ್ಯೋತಿಷ್ಯ ಕೋವಿದ' ಪ್ರಶಸ್ತಿ ಐ.ಸಿ.ಎ.ಎಸ್. ಬೆಂಗಳೂರು ಇವರಿಂದ 1999
2. ಜ್ಯೋತಿಷ್ಯ ಸಾಗರ-ಅಂಗಸುಗೂರಿನ ಪಂಚಪೀಠದಿಂದ 2003

(953) **ಹೆಗಡೆ ಗಣೇಶ ವಿ. ಓಣಿಕೇರಿ ಶಿರಸಿ** (ಜ: 3-9-1943): ಬಿ.ಎ., ಬಿ.ಎಡ್., ಎಂ.ಎ. ಪದವೀಧರ. ಹೈಸ್ಕೂಲು ಶಿಕ್ಷಕ (ಸ್ವಯಂ ನಿವೃತ್ತ) ತಂದೆ ವೆಂಕಟೇಶ ಹೆಗಡೆ, ತಾಯಿ ಮಂಜುಳಾ, ಪತ್ನಿ ಗೌರಿ.

ಪ್ರಕಟಿತ ಕೃತಿ: ಪ್ರೇರಣೆ-ಕವನ, ಚುಟುಕು ಸಂಕಲನ 2015/200

(954) **ಹೆಗಡೆ ಗುರುಪಾದ ಕೆ. ಮೈಸೂರು** (ಜ: 18-5-1941) ಎಂ.ಎ.(ಸಂಸ್ಕೃತ), ಪ್ರಥಮ ಶ್ರೇಣಿ ಪ್ರಥಮ ಸ್ಥಾನ-ಅದಕ್ಕಾಗಿ ಸಿ.ಡಿ. ದೇಶಮುಖ ಅವಾರ್ಡ್, ಸಾಗರದ ಲಾಲಬಹದ್ದೂರ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ. ತಂದೆ ಕೃಷ್ಣಪ್ಪ ಹೆಗಡೆ, ಉಂಬಳೇಕೊಪ್ಪ, ಶಿರಸಿ. ತಾಯಿ ದಾಕ್ಷಾಯಿಣಿ. ಪತ್ನಿ ಸುಲೇಖಾ.

ಪ್ರಕಟಿತ ಕೃತಿಗಳು :

1. ಅಂತರಂಗದ ದರ್ಶನ 2009/148
2. ಅಪೂರ್ವ ಪೂರ್ವ-ಪ್ರವಾಸ ಕಥನ 2007/152
3. ಆಧ್ಯಾತ್ಮ ಶ್ರೀ ರಾಮ ಸ್ತೋತ್ರಂ (ಸಂಸ್ಕೃತ)-ಕನ್ನಡ ಅನುವಾದ ಸಹಿತ 1988/22
4. ಆಧ್ಯಾತ್ಮ ಸ್ತೋತ್ರ ಮಂತ್ರ ಭಾವಗೀತಾ (ಸಂಸ್ಕೃತ)........................... 1994/74
5. ಆಧ್ಯಾತ್ಮ ಸ್ತೋತ್ರ ಮಂತ್ರಗಳು 2011/132
6. ಕನ್ನಡ ವಾಙ್ಮಯ ವಿಕಾಸೇ ಸಂಸ್ಕೃತಸ್ಯ ಪ್ರಭಾವಃ (ಸಂಸ್ಕೃತ).............1999/82
7. ಕಾವ್ಯದಲ್ಲಿ ಧ್ವನಿ .... 1971, (3)1999/78
8. ಚಿತ್ರಕಾಶ-ಆಧ್ಯಾತ್ಮಿಕ ಪದ್ಯಗಳು 2011/109
9. ತೇಜಸ್ಸಂಕ್ರಮಃ (ಸಂಸ್ಕೃತ) 1999/38
10. ವಾಸ್ತವ-ಕವನ ಸಂಕಲನ 1982/54
11. ವೇದಾದಿಗಳಲ್ಲಿ ಶ್ಲೇಷಪ್ರಪಂಚ 1993/136
12. ಶ್ರೀಮಾತಾ ಲಲಿತಾ- 2010/498
ಶ್ರೀ ಲಲಿತಾಸಹಸ್ರನಾಮ ಸ್ತೋತ್ರಾರ್ಥ ವಿವರಗಳು
13. ಶ್ಲೇಷ ತತ್ವ : ವಿಶ್ವ ಸಾಹಿತ್ಯಮೆ ಏಕ ನಯಾ ಸಿದ್ಧಾಂತ (ಹಿಂದಿ) ... 2015/170
14. ಶ್ಲೇಷ ಸಿದ್ಧಾಂತ ಒಂದು ಹೊಸನೋಟ 2011/178
15. ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರ-
    ಅರ್ಥ ಏವಂ ವಿಸ್ತೃತ ವ್ಯಾಖ್ಯಾ (ಹಿಂದಿ) 2015/500
16. ಶ್ಲೇಷ ಸಿದ್ಧಾಂತಃ (ಸಂಸ್ಕೃತ) 1999/246
17. ಸಂಸ್ಕೃತ ವ್ಯಾಕರಣ ದೀಪಿಕಾ ....(1) 1976/765, (2)2002/400
18. Pun in Sanskrit Literature-A New Appraach 1982/252
19. Thoughts Enlightening 2008/88

ಅಧ್ಯಕ್ಷತೆಯಲ್ಲಿ ಸಂಪಾದಿಸಿದ ಕೃತಿಗಳು :

1. ಸಂಸ್ಕೃತ ಚಂದ್ರಿಕಾ 3 – ಎಸ್.ಎಸ್.ಎಲ್.ಸಿ. ಪಠ್ಯ 1994
2. ಸಂಸ್ಕೃತ ಮಯೂಖಮ್–ಕುವೆಂಪು ವಿ.ವಿ. ಪದವಿ ಪಠ್ಯ 1997
3. ಸಂಸ್ಕೃತ ವಾಣಿಜ್ಯ ಲಹರೀ–ಕುವೆಂಪು ವಿ.ವಿ. ಬಿ.ಕಾಂ. ಸಂಸ್ಕೃತ ಪಠ್ಯ 1997
4. ಸಂಸ್ಕೃತ ಸುದರ್ಶಿನೀ–ಕುವೆಂಪು ವಿ.ವಿ. ಪದವಿ–ಸಂಸ್ಕೃತ ಪಠ್ಯ 1998

ಪ್ರಶಸ್ತಿ/ಗೌರವ :

1. ಯು.ಜಿ .ಸಿ .ಯಲ್ಲಿ ಕಾಾ ಆಥೀಣಡಊಚಿಟ ಖುಖಾ ಉಣಾಜಜ 1971
2. ಪಂಡಿತ ನವೀನಂ ರಾಮಾನುಜಾಚಾರ್ಯ ಸಂಸ್ಕೃತ ಸಂಶೋಧನ ಪ್ರಶಸ್ತಿ– ಮೈಸೂರು ವಿ.ವಿ. ಯಿಂದ 1973
3. ಮೈಸೂರು ವಿ.ವಿ. ಸುವರ್ಣ ಮಹೋತ್ಸವ ಸಂಶೋಧನ ಪ್ರಶಸ್ತಿ 1980
4. 'ಸಂಸ್ಕೃತ ಕವಿ' ಪ್ರಶಸ್ತಿ ಮೈಸೂರು ದಸರಾ ಸಂದರ್ಭದಲ್ಲಿ 1983
5. ಪಂಡಿತ ಪರಿಷತ್ ಪ್ರಶಸ್ತಿ–ಅಖಿಲ ಭಾರತ ಪ್ರಾಚ್ಯಮಹಾಧಿವೇಶನ– ಪುಣೆಯಲ್ಲಿ 1993
6. 'ಸಿದ್ಧಾಂತಿ' ಬಿರುದು ಶ್ರೀವೀರಾಪುರದ ಹಿರೇಮಠದಿಂದ 2012
7. 'ಮಾನ್ಯತಾ ಪ್ರಶಸ್ತಿ' ಕರ್ನಾಟಕ ರಾಜ್ಯ ಸಂಸ್ಕೃತ ವಿ.ವಿ., ಉಡುಪಿ ಸಂಸ್ಕೃತ ಸ್ನಾತಕೋತ್ತರ ಕೇಂದ್ರ ಮತ್ತು ಶ್ರೀಕೃಷ್ಣಮಠ ಇವರಿಂದ ಸಂಯುಕ್ತವಾಗಿ 2012
8. 'ಶಾಸ್ತ್ರ ವಿದ್ಯಾನಿಧಿ' ಪುರಸ್ಕಾರ : ವೇದಶಾಸ್ತ್ರ ಪೋಷಿಣೀ ಸಭಾ ಮೈಸೂರು ಇವರಿಂದ 2014
9. 'ಜ್ಯೋತಿಃಶಾಸ್ತ್ರ ಮಹಾನಿಧಿ' ಪ್ರಶಸ್ತಿ : ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರ ಮೈಸೂರು ಇವರಿಂದ 2014

(955) **ಹೆಗಡೆ ಗೋ.ಗೋ. ಕೋಡಗದ್ದೆ, ಸಿದ್ದಾಪುರ** (ಜ: 27–6–1942) ಪಿ.ಯು.ಸಿ. ಶಿಕ್ಷಣ. ಕರಕುಶಲ ಕಲೆಗಾರ, ಕೃಷಿಕ. ಹೆಸರು ಗೋಪಾಲಕೃಷ್ಣ. ತಂದೆ ಗೋವಿಂದ ಹೆಗಡೆ, ತಾಯಿ ಅಹಲ್ಯಾ. ಪತ್ನಿ ಮಾಲಿನಿ.

ಪ್ರಕಟಿತ ಕೃತಿ : ಒಡಂಬಡಿಕೆ–ಕವನ ಸಂಗ್ರಹ 2004/60

(956) **ಹೆಗಡೆ ಗೋಪಾಲಕೃಷ್ಣ, ಕೇರಿಮನೆ, ಶಿರಸಿ** (ಜ: 20–6–1940) ಬಿ.ಎ., ಕನ್ನಡ ಜಾಣ, ಹಿಂದೀ ವಿಶಾರದ ಪದವೀಧರ. ಕೃಷಿಕ. ತಂದೆ ಸತ್ಯನಾರಾಯಣ ಹೆಗಡೆ, ಕೇರಿಮನೆ, ಅಗಸಾಲ, ಬೊಮ್ಮನಳ್ಳಿ, ಶಿರಸಿ. ತಾಯಿ ಬಂಗಾರಿ. ಪತ್ನಿ ಸೀತಾ.

ಪ್ರಕಟಿತ ಕೃತಿಗಳು :

1. ಅಘನಾಶಿನಿ–ಪರಿಚಯ 1984/42
2. ಚಿಗುರಡಿಕೆ–ಕವನ ಸಂಕಲನ 1983/60
3. ಚೈತ್ರ–ಕವನ ಸಂಕಲನ.. 1973/70
4. ತಿರುಮಲ ವೆಂಕಟೇಶ ಚರಿತೆ 2014/36
5. ದೊಡ್ನಳ್ಳಿ ಶಂಭುಲಿಂಗೇಶ್ವರ–ಚರಿತ್ರೆ.. 1982/18
6. ನವ್ಯ ಕತೆಗಳು 1965/110
7. ಭಾವಮಂದಿರ–ಕವನ ಸಂಕಲನ 2006/43
8. ವೈಜಯಂತಿ–ಕವನ ಸಂಕಲನ 1966/65
9. ಶಿರಸಿಯ ಶ್ರೀ ಮಾರಿಕಾಂಬೆ 1983/48

10.+ಶಿರಸಿಯ ಸಿರಿದೇವಿ ಶ್ರೀ ಮಾರಿಕಾಂಬೆ .... 2011 (2)2012/36
11. ಶ್ರವಣ ಮಂಗಲಮ್-ಭಕ್ತಿಗೀತೆಗಳು 2014/24
12. ಶ್ರೀ ವೆಂಕಟೇಶಾವತರಣ-ಸಂಗೀತರೂಪಕ 2014/24
13. ಸ್ವರ್ಣವಲ್ಲೀ ಪ್ರಕಾಶ-ಚರಿತ್ರೆ..................................... 1976(2), 1991/70
14. ಸ್ವಾದಿ-ಸಂಕ್ಷಿಪ್ತ ಇತಿಹಾಸ 1980/48
15. ಹಸೆಬಂಟನ ಹಾಡು-ಕವನ ಸಂಕಲನ...1996/52
16. ಹೊಂಬೆಳಕು-ಕಥಾ ಸಂಕಲನ..1972/64
+ ಈ ಕೃತಿಯ ಅಂಗ್ರೇಜೀ ಆವೃತ್ತಿ 2011ರಲ್ಲಿ ಪ್ರಕಟವಾಗಿದೆ.
ಟಿಪ್ಪಣಿ: ಶ್ರವಣ ಮಂಗಲಮ್, ಶ್ರೀ ಮಾರಿಕಾಂಬೆ ಮತ್ತು ಶ್ರುತಿಸಂಜೀವಿನಿ ಎಂಬ ಮೂರು ಭಕ್ತಿಗೀತೆಗಳ ಧ್ವನಿಸುರುಳಿ ಹೊರಬಂದಿದೆ.
ಪ್ರಶಸ್ತಿ/ಗೌರವ :
1. ಕಡೆಂಗೋಡ್ಲು ಕಾವ್ಯ ಪ್ರಶಸ್ತಿ 1996
2. ಶಿರಸಿಯ ಶ್ರೀಮಾರಿಕಾಂಬಾ ದೇವಾಲಯದಿಂದ ಸನ್ಮಾನ 2011

(957) ಹೆಗಡೆ ಗೋಪಾಲಕೃಷ್ಣ, ಹುಬ್ಬಳ್ಳಿ (ಜ: 21-4-1955) ಬಿ.ಕಾಂ. ಪದವೀಧರ. ಪತ್ರಿಕೋದ್ಯೋಗಿ-ಸಂಯುಕ್ತ ಕರ್ನಾಟಕದಲ್ಲಿ 10 ವರ್ಷ. ಪ್ರಜಾವಾಣಿಯಲ್ಲಿ 30 ವರ್ಷ ಪ್ರಜಾವಾಣಿ, ಹುಬ್ಬಳ್ಳಿ ಸ್ಥಾನಿಕ ಸಂಪಾದಕ. ತಂದೆ ಗಂಗಾಧರ ಹೆಗಡೆ, ಸುಳಗಾರ, ಯಲ್ಲಾಪುರ-ಗ್ರಂಥಕರ್ತ. ತಾಯಿ ಸರಸ್ವತಿ. ಪತ್ನಿ ರೋಹಿಣಿ.
ಪ್ರಕಟಿತ ಕೃತಿ : ಕ್ರೀಡಾ ಪತ್ರಿಕೋದ್ಯಮ 2004/88

(958) ಹೆಗಡೆ ಗೋಪಾಲಕೃಷ್ಣ, ಹೆಗಡೆ, ಕುಮಟಾ (ಜ: 10-5-1963) ಜ್ಯೋತಿಷ್ಯ ಮತ್ತು ಧರ್ಮಶಾಸ್ತ್ರದಲ್ಲಿ ವಿದ್ವದುತ್ತಮಾ (ಎಂ.ಎ.ಗೆ ಸಮಾನ) ಪದವೀಧರ. ಜ್ಯೋತಿಷಿ, ಅಧ್ಯಾಪಕ, ವೈದಿಕ, ಕೃಷಿಕ. ತಂದೆ ಗಣಪತಿ ಹೆಗಡೆ-ಗ್ರಂಥಕರ್ತ, ತಾಯಿ ಗೌರಿ. ಪತ್ನಿ ವಿಜಯಾ.
ಪ್ರಕಟಿತ ಕೃತಿಗಳು :
1. ದೇವ್ಯಪರಾಧ ಕ್ಷಮಾಪನ ಸ್ತೋತ್ರಂ-ಸಾನುವಾದ 2004/16
2. ಬೋಧಾಯನೀಯ ಪ್ರಯೋಗ ಮಾಲಾ ಭಾಗ 1 .... 2002/120
3. ಮಂಡಲ ದರ್ಶನಂ (ಸಂಸ್ಕೃತ-ಸಚಿತ್ರ) 2008/290
(ವೈದಿಕ ಕರ್ಮಾಂಗದಲ್ಲಿ ಹಾಕುವ ಮಂಡಲಗಳು)
4. ಲಲಿತೋಪಾಸನಂ 2005/84
5. ವಾಸ್ತು-ಲಘುಪ್ರಬಂಧ 2003/16
6. ಶ್ರೀ ದುರ್ಗಾಸಪ್ತಶತೀ .... (2)2001/272
7. ಶ್ರೀ ಲಕ್ಷ್ಮೀನಾರಾಯಣ ಹೃದಯಂ 1998/42
8. ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರಂ ಮತ್ತು
ಶ್ರೀ ಲಲಿತಾ ಅಷ್ಟೋತ್ತರ ಶತನಾಮ ಸ್ತೋತ್ರಂ................................ 2001/72
9. ಹೆಗಡೆ ಗ್ರಾಮದ ಶ್ರೀ ಶಾಂತಿಕಾಪರಮೇಶ್ವರೀ ದೇವಿಯ ಉತ್ಸವಗಳಲ್ಲಿ
ಪೈಕದಾರರ ಯೋಗದಾನ-ಒಂದು ಅಧ್ಯಯನ 2012/190
ಸಂಪಾದಿತ ಕೃತಿಗಳು:
Jaurnal of Veda Sanskrita Academy-A National Refereed Research Journal

Vol. I. Jan-June 2013/115
Vol. II July-Dec 2013/132
Vol. III Jan-June 2014/108
Vol. IV July-Dec 2014/137
ಟಿಪ್ಪಣಿ: ಡಾ. ಗೋಪಾಲಕೃಷ್ಣ ಹೆಗಡೆಯವರು "Veda Sanskrita Academy (R)", Hegde, Kumta-581330 ಇದರ ಸಂಸ್ಥಾಪಕ ನಿರ್ದೇಶಕರು.

(959) ಹೆಗಡೆ ಗೋವಿಂದ (ಡಾ।) ಹುಬ್ಬಳ್ಳಿ (ಜ: 30-10-1966) ಎಂ.ಬಿ.ಬಿ.ಎಸ್., ಡಿ.ಎ. ಪದವೀಧರ. ಅರಿವಳಿಕೆ ತಜ್ಞ. ತಂದೆ ಸುಬ್ರಾಯ ಹೆಗಡೆ, ಕನೇನಹಳ್ಳಿ, ಯಲ್ಲಾಪುರ. ತಾಯಿ ಭಾಗೀರಥಿ. ಪತ್ನಿ ಸುಮಾ.

ಪ್ರಕಟಿತ ಕೃತಿ : ಕನಸುಕೋಳಿಯ ಕತ್ತು-ಕವನ ಸಂಕಲನ..........................2000/56
ಗೌರವ : ಕನ್ನಡ ಪುಸ್ತಕ ಪ್ರಾಧಿಕಾರದಿಂದ 2000-99

(960) ಹೆಗಡೆ ಚೈತನ್ಯ, ಬೆಂಗಳೂರು (ಜ: 8-5-1986) ಎಂ.ಎ. (ಪತ್ರಿಕೋದ್ಯಮ) ಪದವೀಧರ. 'ವಿಜಯ ಕರ್ನಾಟಕ'ದಲ್ಲಿ ಉಪಸಂಪಾದಕ. ತಂದೆ ಚಿದಂಬರ ಹೆಗಡೆ, ಕೊಪ್ಪ, ಸಿದ್ದಾಪುರ. ತಾಯಿ ಪಾರ್ವತಿ.

ಪ್ರಕಟಿತ ಕೃತಿಗಳು :
1. ಓ ನನ್ನ ಭಾರತ-ಅನುವಾದಿತ
(ಮೂಲ: ತರುಣ ವಿಜಯರವರ ಅಂಗ್ರೇಜೀ ಲೇಖನಗಳು) 2010/152
2. ತೆರೆದ ಕಿಟಕಿ-ಅಂಕಣ ಬರಹ ಸಂಕಲನ 2015/185

(961) ಹೆಗಡೆ ಜನಾರ್ದನ, ಬೆಂಗಳೂರು (ಜ: 2-6-1955) ಅಲಂಕಾರ ವಿದ್ವಾನ್, ಶಿಕ್ಷಾಶಾಸ್ತ್ರೀ ಪದವೀಧರ. ಸಂಸ್ಕೃತ ಭಾರತಿಯ ಪೂರ್ಣಾವಧಿ ಕಾರ್ಯಕರ್ತ, ಬೆಂಗಳೂರಿನ ಗಿರಿನಗರದಲ್ಲಿರುವ 'ಅಕ್ಷರಂ'ನಲ್ಲಿ ಸೇವೆ. 'ಚಂದಮಾಮ' ಮತ್ತು 'ಸಂಭಾಷಣಾ ಸಂದೇಶ'- ಸಂಸ್ಕೃತ ಮಾಸಪತ್ರಿಕೆಗಳ ಸಂಪಾದಕ. ತಂದೆ ರಾಮಕೃಷ್ಣ ಹೆಗಡೆ, ದೇವದಕೇರಿ, ಶಿರಸಿ. ತಾಯಿ ಸತ್ಯಭಾಮಾ. ಪತ್ನಿ ಡಾ। ನಾಗರತ್ನಾ-ಗ್ರಂಥಕರ್ತೆ.

ಪ್ರಕಟಿತ ಕೃತಿಗಳು : (42 ಎಲ್ಲವೂ ಸಂಸ್ಕೃತದಲ್ಲಿ)
ಅ. ಸ್ವತಂತ್ರ ಕೃತಿಗಳು-ಸಂಸ್ಕೃತ ಕಲಿಕೆಗಾಗಿ

1. ಅಭ್ಯಾಸದರ್ಶಿನೀ .... (1)1993, (8)2013/155
2. ಇಡ್‌ವ್ಯವಸ್ಥಾ (ಕೃತ್ಸು) .... (1)2007, (2)2008/62
3. ಣತ್ವಣಿಜಂತಮ್ .... (1)1994, (3)2008/30
4. ಧಾತುರೂಪನಂದಿನೀ .... 2011 (2)2013/484
5. ಪ್ರಯೋಗವಿಸ್ತರಃ 2013/136
6. ಭಾಷಾಪಾಕಃ (ಪ್ರಥಮಃ ಭಾಗಃ) .... (1)2005,(3)2011/158
7. ಭಾಷಾಪಾಕಃ (ದ್ವಿತೀಯ ಭಾಗ) 2012/190
8. ರೂಪಶುದ್ಧಿಃ 2013/109
9. ವಿಭಕ್ತಿವಲ್ಲರೀ .... 1993 (14)2013/76
10. ಶತೃಶಾನಜಂತಮಂಜರೀ .... 1993 (6)2012/66
11. ಶುದ್ಧಿ ಕೌಮುದೀ .... (1)2004, (3)2012/314
12. ಸಂಭಾಷಣ ಸೋಪಾನಮ್ .... (1)1994, (7)2012/108
13. ಸಾಮಾನ್ಯ ದೋಷ ನಿರೂಪಣಮ್ 2004/78

ಆ. ಇತರರೊಂದಿಗೆ-ಸಂಸ್ಕೃತ ಕಲಿಕೆಗಾಗಿ

1. ಅನಾಹತಃ (ಕಥಾ ಸಂಗ್ರಹ) 2011/104
2. ಕನ್ನಡ-ಸಂಸ್ಕೃತ ಕ್ರಿಯಾಪದ ಕೋಷಃ .... 1987 (4)2007/108
3. ಕನ್ನಡ-ಸಂಸ್ಕೃತ ಶಬ್ದಕೋಷ..............................1983 (11)2013/108
4. ಗೀತ ಸಂಸ್ಕೃತಮ್ .... 1992 (13)2009/30
5. ಗೇಯ ಸಂಸ್ಕೃತಮ್ .... 1993 (9)2010/28
6. ನವರೂಪಕಂ.. 1990 (5)2010/83
7. ವದಾಮಿ ಕಿಂಚಿತ್...2011 (2)2013/192
8. ಶಿಶು ಸಂಸ್ಕೃತಂ .... 1993 (8)2011/40

ಇ. ಸಂಸ್ಕೃತಕ್ಕೆ ಅನುವಾದಿತ ಕೃತಿಗಳು

1. ಅಂಕುಶಃ-ಕಥಾಸಂಗ್ರಹ 2011/124
2. ದೃಷ್ಟಿದಾನಂ-ಕಾದಂಬರಿ .... 2007 (2)2013/152
(ಕನ್ನಡ ಮೂಲ: ಡಾ। ದೊಡ್ಡೇರಿ ವೆಂಕಟಗಿರಿರಾವ್)
3. ಧರ್ಮಶ್ರೀ-ಕಾದಂಬರಿ
(ಕನ್ನಡ ಮೂಲ: ಡಾ। ಎಸ್.ಎಲ್.ಭೈರಪ್ಪ) .... 2000 (2)2010/316
4. ವಂಶವೃಕ್ಷ-ಕಾದಂಬರಿ (ಕನ್ನಡ ಮೂಲ: ಡಾ.ಎಸ್.ಎಲ್. ಭೈರಪ್ಪ) 2012/374
5. ವ್ಯರ್ಥವಾಗದ ಬಲಿದಾನ (ಮೂಲ: ಹಿಂದಿ) 1994/32
6. ಸ್ತರಃ-ಕಥಾ ಸಂಗ್ರಹ...2011/105

ಟಿಪ್ಪಣಿ: ಡಾ.ಪಿ.ಎಸ್. ರಾಮಾನುಜಂ ಅವರ 'ಸಿಂಹಾವಲೋಕನ' ಕಾದಂಬರಿಯ ಅನುವಾದ 'ಸಂಭಾಷಣ ಸಂದೇಶ'ದಲ್ಲಿ ಧಾರವಾಹಿಯಾಗಿ ಮುದ್ರಿತ. ಕೆ.ಎನ್. ಗಣೇಶಯ್ಯನವರ 'ಕನಕಾವರಣ'ದ ಅನುವಾದ ಸಂಭಾಷಣ ಸಂದೇಶದಲ್ಲಿ ಧಾರವಾಹಿಯಾಗಿ ಬರುತ್ತಿದೆ.

ಈ. ಸಂಪಾದಿತ ಕೃತಿಗಳು-ಸಂಸ್ಕೃತ ಕಲಿಕೆಗಾಗಿ

1. ಏಹಿ ಹಸಾಮ .... 1998 (3)2009/48
2. ಜಾಗರೂಕೋ ಭವ .... 1999 (10)2013/20
3. ರಸಪ್ರಶ್ನಾಃ ....2000 (9)2009/32
4. ಸಂದೇಶ ಸಂಸ್ಕೃತಮ್ .... 1994 (7)2013/46
5. ಸಂಸ್ಕೃತ ಗುಣನ ಕೋಷ್ಟಕಮ್ ....1985 (4)2001/24
6. ಸಂಸ್ಕೃತ ವ್ಯವಹಾರ ಸಾಹಸ್ರೀ (ಕನ್ನಡ) ....1983 (10)2007/66
7. ಸಂಸ್ಕಾರಸುಧಾ .... 1992 (8)2011/48
8. ಸುಗಂಧಃ .... 1986 (8)2012/32
9. ಸುಭಾಷಿತರಸಃ... 2000 (4)2006/46

ಉ. ಸ್ವರಚಿತ ಸಂಸ್ಕೃತ ಕೃತಿಗಳು

1. ಅನುಬಂಧಃ-ಕಥಾಸಂಗ್ರಹ................................... 2011 (2)2011/122
2. ಆಶ್ರಮಂ ಪರಿತಃ-ಕಾದಂಬರಿ 2012/92
3. ಉತ್ಫುಲ್ಲಂ ಅಂತರಂಗಮ್-ಕಥಾಸಂಗ್ರಹ 2013/159
4. ಜೀವನದೃಷ್ಟಿಃ - ಕಥಾಸಂಗ್ರಹ 2012/140
5. ಬಾಲಕಥಾಸಪ್ತತಿಃ-ಬಾಲಕಥಾಸಂಗ್ರಹ 2013/118
6. ವ್ಯೂಹಭೇದಃ ಅನ್ಯಾಶ್ಚ ಕಥಾಃ - ಕಥಾ ಸಂಗ್ರಹ....... 2008 (2)2009/147

ಪ್ರಶಸ್ತಿ/ಗೌರವ :

1. ಗದಗ ಮುನಿಸಿಪಾಲಿಟಿಯಿಂದ 1984
2. ಅಖಿಲ ಕರ್ನಾಟಕ ಪಾಠಶಾಲಾ ಶಿಕ್ಷಕರ ಸಂಘದಿಂದ 1997
3. 'ಸಂಸ್ಕೃತ ಸೇವಾವತಂಸ' ಪ್ರಶಸ್ತಿ–
   ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ತಿರುಪತಿಯಿಂದ 2000
4. ಶ್ರೀ ಶೃಂಗೇರೀ ಪೀಠದಿಂದ ಸನ್ಮಾನ–ಸಂಸ್ಕೃತ ವರ್ಷಾಚರಣೆ ವರ್ಷದಲ್ಲಿ.. 2000
5. ಕೇಂದ್ರೀಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–ಧರ್ಮಶ್ರೀ ಅನುವಾದಕ್ಕಾಗಿ 2005
6. ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆಂಪೇಗೌಡ ಪ್ರಶಸ್ತಿ 2006
7. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ
   'ಪ್ರೊ. ಎಂ. ಹಿರಿಯಣ್ಣ ಗ್ರಂಥ ಪುರಸ್ಕಾರ' 2011
8. ಕುವೆಂಪು ಭಾಷಾ ಭಾರತಿ–ಪ್ರಾಧಿಕಾರದ ಗೌರವ ಪ್ರಶಸ್ತಿ................ 2011–12
9. ಕೇಂದ್ರೀಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 2015

(962) ಹೆಗಡೆ ಜಯರಾಮ, ಶಿರಸಿ (ಜ: 9–11–1942) ಎಂ.ಎ.(ಇಂಗ್ಲೀಷ್), ಎಂ.ಎ.(ಕನ್ನಡ) ಪದವೀಧರ. ಪತ್ರಿಕಾ ಸಹಸಂಪಾದಕ–ಜನತಾ ಮಾಧ್ಯಮ, ಹಾಸನ. ಪತ್ರಿಕೋದ್ಯಮಿ– 'ಜನಮಾಧ್ಯಮ' ದಿನಪತ್ರಿಕೆ, ಶಿರಸಿ, ಸಂಸ್ಥಾಪಕ, ಮಾಲಿಕ, ಸಂಪಾದಕ. ತಂದೆ ಪರಮಯ್ಯ ಹೆಗಡೆ ಭಾನ್ಕುಳಿ, ಸಿದ್ದಾಪುರ. ತಾಯಿ ಭಾಗೀರಥಿ. ಪತ್ನಿ ರೇವತಿ.

ಪ್ರಕಟಿತ ಕೃತಿಗಳು :

1. ತಿರುವುಗಳು–ಕಥಾ ಸಂಕಲನ 1983/72
2. ಮುಕ್ತ–ಕವನ ಸಂಕಲನ 1973/80
3. ಸಂಬಂಧಗಳು–ಕವನ ಸಂಕಲನ 1993/82
4. ಸಂಪಾದಕೀಯ–ಬರಹ ಸಂಕಲನ 2007/92
5. ನಾನು ನಿಮ್ಮೊಡನೆ
6. ಸಂಪಾದಕೀಯಗಳು
7. ಅಂತೂ ಇಂತು ಮಳೆ ಬಂತು
8. ಕಾಕನ ಕಿಂಡಿ

(963) ಹೆಗಡೆ ಜಿ.ಎ. (ಡಾ॥) ಸೋಂದಾ ಶಿರಸಿ (ಜ: 20–7–1961) ಎಂ.ಕಾಮ್., ಎಂ.ಬಿ.ಎ., ಪಿ.ಜಿ.ಡಿ.ಬಿ.ಎಂ., ಪಿಎಚ್.ಡಿ. ಪದವೀಧರ. ಗೋವಾದಲ್ಲಿ ಸರಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕ, ಪ್ರಾಚಾರ್ಯ. ಇಥಿಯೋಪಿಯಾದ ಅಬಾರಾಮಿಂಚ್ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ. ವಿಭಾಗದ ಡೀನ್. ಸಂಶೋಧಕ. ಎಚ್.ಆರ್. ತರಬೇತಿದಾರ, ಯಕ್ಷಗಾನ ತಾಳಮದ್ದಲೆ ಅರ್ಥಗಾರ. ಅಧ್ಯಕ್ಷ–ಯಕ್ಷ ಶುಭೋದಯ, ಅಧ್ಯಕ್ಷ–ಹೊಂಗಿರಣ ಫೌಂಡೇಶನ್ (ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮಿಕ ವಿಚಾರ ವೇದಿಕೆ) ಹೆಸರು ಗಜಾನನ, ತಂದೆ ಡಾ. ಅನಂತ ಹೆಗಡೆ ಕೋಣೇಸರ ಸೋಂದಾ. ತಾಯಿ ಮಹಾದೇವಿ. ಪತ್ನಿ ಅದಿತಿ.

ಪ್ರಕಟಿತ ಕೃತಿಗಳು:

1. ಅಡಿಕೆ–ಸಂಶೋಧನಾ ಗ್ರಂಥ 2011/96
2. ಕಾವ್ಯ ಶಾಲ್ಮಲಾ–ಕವನಗಳು 2013/155
3. ಮಹಾಭಾರತದಲ್ಲಿ ಶಾಪ ವೃತ್ತಾಂತ 2013/148
4. ವ್ಯಕ್ತಿತ್ವ ವಿಕಸನ ಏನಿದರ ಗುಟ್ಟು–ವೈಚಾರಿಕ 2008/104
5. ವ್ಯಕ್ತಿ ವಿಶೇಷ ವಿಕಸನ–ವೈಚಾರಿಕ 2011/232
6. Management for Managers

ಪ್ರಶಸ್ತಿ/ಗೌರವ:

1. ಸುವರ್ಣ ಕನ್ನಡಿಗ ರಾಜ್ಯ ಪ್ರಶಸ್ತಿ-ಜ್ಞಾನಮಂದಾರ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅಕಾಡೆಮಿ ಬೆಂಗಳೂರು (ಹೊರನಾಡು ಕನ್ನಡ ಸೇವೆಗಾಗಿ) ಇವರಿಂದ
2. ಸುವರ್ಣಸಿರಿ-ರಾಜ್ಯಮಟ್ಟದ ಪ್ರಶಸ್ತಿ-ಅಂಬಾ ಪ್ರಕಾಶನ ಯಳಂದೂರು ಚಾಮರಾಜನಗರದಿಂದ
3. ಕರ್ನಾಟಕ ಉದಯ ರತ್ನ ಪ್ರಶಸ್ತಿ-ಜನತಾ ಸಾಂಸ್ಕೃತಿಕ ಸೇವಾದಳ ಬೆಂಗಳೂರು ಇವರಿಂದ
4. ಸುವರ್ಣ ಕನ್ನಡಿಗ ಪ್ರಶಸ್ತಿ-ಜನತಾ ಸಾಂಸ್ಕೃತಿಕ ಸೇವಾದಳ ಬೆಂಗಳೂರು ಇವರಿಂದ

(964) **ಹೆಗಡೆ ಜಿ.ಎಲ್. (ಡಾ||) ಉಂಚಗಿ, ಕುಮಟಾ** (ಜ: 1-7-1959) ಎಂ.ಎ., ಪಿಎಚ್.ಡಿ.(ಕನ್ನಡ). ಕುಮಟಾದ ಡಾ| ಎ.ವಿ.ಬಾಳಿಗಾ ಕಾಲೇಜಿನಲ್ಲಿ ಪ್ರಾಧ್ಯಾಪಕ, ಯಕ್ಷಗಾನ ಕಲಾವಿದ, ಚಲನಚಿತ್ರ ನಟ. ಹೆಸರು ಗೋಪಾಲಕೃಷ್ಣ. ತಂದೆ ಲಕ್ಷ್ಮೀನಾರಾಯಣ. ಪತ್ನಿ ಮಾಯಾ.

ಪ್ರಕಟಿತ ಕೃತಿಗಳು :

1. ನಿಮ್ಮ ಚಿಟ್ಟಾಣಿ 2004/140
2. ಪ್ರಸಂಗದ ದರ್ಶನ-ಶೇಣಿ ರಾಮಾಯಣ 1993/262
3. ಯಕ್ಷಗಾನ ವರ್ಣ ವೈಭವ 1999/154
4. ಯೋಗೀಂದ್ರ ಪರಮಾನಂದ ಚರಿತೆ 2010/103
5. ಸಂಸ್ಕೃತ ಕಾವ್ಯ ವಿನೋದ... 1992/100
6. ಹಾಲಕ್ಕಿ ಸಮಾಜ-ಪಿಎಚ್.ಡಿ. ಪ್ರಬಂಧ 1989

(965) **ಹೆಗಡೆ ಜಿ.ಎಂ. (ಡಾ|) ಧಾರವಾಡ** (ಜ: 12-12-1952) ಎಂ.ಎ., ಪಿಎಚ್.ಡಿ. ಪದವೀಧರ. ಪ್ರಾಧ್ಯಾಪಕ ಮತ್ತು ಪ್ರಾಂಶುಪಾಲ-ಕಿಟ್ಟೆಲ್ ಕಲಾ ಕಾಲೇಜು, ಧಾರವಾಡ. ಹೆಸರು ಗುರುಪಾದ. ತಂದೆ ಮಹಾಬಲೇಶ್ವರ ಹೆಗಡೆ, ಮಸಗುತ್ತಿಮನೆ, ಶಿರಸಿ. ತಾಯಿ ವರಮಹಾಲಕ್ಷ್ಮಿ. ಪತ್ನಿ ಸರಸ್ವತಿ.

ಪ್ರಕಟಿತ ಕೃತಿಗಳು : (62)

1. ಉತ್ತರ ಕನ್ನಡದ ಯಕ್ಷಗಾನ ರಂಗಭೂಮಿ 1996/40
2. ಎಸ್.ಬಿ. ಶಾಪೇಟಿ-ಜೀವನ ಚರಿತ್ರೆ 2014/104
3. ಕವಿ ಕಣವಿ-ವ್ಯಕ್ತಿ ಅಭಿವ್ಯಕ್ತಿ ....(1)1996,(3)2005/138
4. ಕಿಟ್ಟೆಲ್ ಜೀವನ ಹಾಗೂ ಕೃತಿ ಸಮೀಕ್ಷೆ ....(3) 1994/44
5. ಜನಪ್ರಿಯ ಕನ್ನಡ ಛಂದಸ್ಸು 2011/70
6. ಪಾಪು ಜೀವನ ಹಾಗೂ ಸಾಹಿತ್ಯ 2003/56
7. ಪುಸ್ತಕ ಪ್ರಪಂಚ-151 ಕೃತಿಗಳ ವಿಮರ್ಶೆ 2006/252
8. ಪುಸ್ತಕಲೋಕ-ವಿಮರ್ಶೆ (114 ಲೇಖನಗಳು) 1996/222
9. ಬಸವಣ್ಣ ಮತ್ತು ಪರಮಹಂಸ-ತೌಲನಿಕ ಅಧ್ಯಯನ 2014/47
10. ಬಸವರಾಜ ರಾಜಗುರು-(ಭಾರತ ಭಾರತಿಯಲ್ಲಿ) 2013/48
11. ಮನು ಬಳಿಗಾರ-ಜೀವನ ಸಾಧನೆ 2010/128

12. ಮಾಸ್ತಿ ಕೃತಿ ಚಿಂತನ– 10 ವಿಮರ್ಶಾ ಲೇಖನಗಳು 2009/120
13. ಮಾಸ್ತಿಯವರ ವಿಮರ್ಶೆ–ಒಂದು ಅಧ್ಯಯನ 1991/360
14. ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಭಾರತ ಭಾರತೀಯಲ್ಲಿ) 2013/48
15. ವಿಮರ್ಶಾ ವಿವೇಕ–ವಿಮರ್ಶೆ (39 ಲೇಖನಗಳು) 2010/276
16. ವಿಮರ್ಶಾವಿಹಾರ–40 ವಿಮರ್ಶಾ ಲೇಖನಗಳು 2012/244
17. ವೀರಶೈವ ಅಧ್ಯಯನ ಸಂಸ್ಥೆ 1994/122
18. ಸಾಹಿತ್ಯ ಕೃತಿ ಸಂಚಯ–41 ಕೃತಿಗಳ ವಿಮರ್ಶೆ 2007/276
19. ಸಾಹಿತ್ಯ ಮತ್ತು ಸಂಸ್ಕೃತಿ ಸ್ಪಂದನ–26 ಲೇಖನಗಳು 1997/208
20. ಸಾಹಿತ್ಯ ಮತ್ತು ಸಹೃದಯತೆ–33 ಲೇಖನಗಳು 1996/340
21. ಸಾಹಿತ್ಯ ಸುರಭಿ–ಅಂಕಣ ಲೇಖನಗಳು 2008/250
22. ಸಿದ್ಧಿ ಜನರ ಸಂಸ್ಕೃತಿ ಮತ್ತು ಭಾಷೆ 1978/8
23. ಸೀಮಾ–ಕಾದಂಬರಿ (ಹಿಂದಿಯಿಂದ ಅನುವಾದಿತ) 1990/200
24. Masti's Works and Reviews : A Study.................................... 1994/216

ಸಂಪಾದಿತ ಕೃತಿಗಳು

25. ಕನಕ ಪುರಂದರ ಕೀರ್ತನ ಮಂಜರಿ 1994/70
26. ಕವಿ ಕಣವಿ ಸಂದರ್ಶನ 2003/205
27. ಕಿಟ್ಟೆಲ್ ಜೀವನ ಹಾಗೂ ಸಾಧನೆ 1994/84
28. ಕೆರೂರು ವಾಸುದೇವಾಚಾರ್ಯರ ಸಮಗ್ರ ಸಣ್ಣ ಕತೆಗಳು............................2008
29. ಗ್ರಂಥ ಸಂಗಾತಿ–150 ಪುಸ್ತಕಗಳ ವಿಮರ್ಶೆ 2004/460
30. ಗೋಕಾಕರ ಚಿತ್ರ ಸಂಪುಟ.. 2013/160
31. ಗೌರೀಶ ಕಾಯ್ಕಿಣಿ ಸ್ಮೃತಿ ಸಂಚಯ 2005/108
32. ಜಿ.ಎಸ್. ಆಮೂರರ ಕನ್ನಡ ವಿಮರ್ಶೆಯ ಸ್ವೀಕೃತಿ 2015/528
33. ನಮ್ಮ ಪ್ರೀತಿಯ ಸ್ವಾಮೀಜಿ 2002/150
34. ಬಸವರಾಜ ರಾಜಗುರು ಚಿತ್ರಸಂಪುಟ 2012/120
35. ಮಾಸ್ತೀಯವರ ಸುಬ್ಬಣ್ಣ–ಆಯ್ದ ವಿಮರ್ಶೆಗಳ ಸಂಕಲನ 2003/90
36. ವಚನ ವಾಹಿನಿ... 1999/104
37. ವಚನ ವಾಹಿನಿ–24 ವಚನಕಾರರ 327 ವಚನಗಳು 1999/114
38. ಶ್ರೀ ಶಂಕರಾಚಾರ್ಯರ ಅದ್ವೈತ ದರ್ಶನ ....(1)2001,(2)2003/260
39. ಸಾಹಿತ್ಯ ವಿಮರ್ಶೆ 1998 .... 1999/270

ಸಹ ಸಂಪಾದಿತ ಕೃತಿಗಳು

40. ಕಣವಿಯವರ ಕವಿತೆ : ಹೊಸ ಓದು 2008/724
41. ಕನ್ನಡ ಪ್ರಪಂಚ : ಪಾಪು ಅಭಿನಂದನ ಗ್ರಂಥ.......................... 2003/282
42. ಕಣವಿಯವರ ಆಯ್ದ ಕವಿತೆಗಳ ಅನುಸಂಧಾನ 2013/513
43. ಕಲಬುರ್ಗಿ: ಅರವತ್ತು ಲೇಖನಗಳು 1998/351
44. ಕಲ್ಲರಳಿ ಹೂವಾಗಿ 1995/50
45. ಗಂಧಕೊರಡು–ಲೇಖನಗಳು 1996/242
46. ತಲಸ್ಪರ್ಶಿ: ಗಿರಡ್ಡಿಯವರ ಕೃತಿಗಳ ವಿಮರ್ಶೆ
(ಅಭಿನಂದನ ಗ್ರಂಥ) 2001/312
47. ಧಾರಾನಗರಿ... 2010/202

47. ನಮ್ಮ ಕನ್ನಡಿಗರು-ಲೇಖನಗಳು 2010/100
48. ನರುಗಂಪು 1991/200
49 ಬರಹ ಬಾಗಿನ-ಲೇಖನಗಳು 1996/630
50. ಬೆಳಗಲಿ-ಲೇಖನಗಳು 1998/378
51 ಬಸವಣ್ಣನವರ ವಚನಗಳ ಸಮಾಲೋಕನ................................ 2003/480
52. ಬೆಳ್ಳಿ ತೇರಿನ ದಾರಿ (ಕಣವಿ ಕಾವ್ಯಾನುಸಂಧಾನ) 2003/656
53. ರೋಣ ಪ್ರಭೆ.. 1994/80
54. ವಚನ ಸಾಹಿತ್ಯ ದರ್ಶನ 2001/238
55. ವಜ್ರಸುಮ-ಲೇಖನಗಳು 1998/77
56. ಶಂಬಾ ಸ್ಮೃತಿ ಗಂಧ 1996/170
57. ಸಹಕಾರ ಶಿವ.. 2009/185
58. ಸಹೃದಯ ಸಂವಾದ: ಜಿ.ಎಸ್. ಆ ಮೂರ ಅಭಿನಂದನ ಗ್ರಂಥ . 2005/460
59. ಸುವರ್ಣ ಕರ್ನಾಟಕ ಸಮಾಜ ಮತ್ತು ಸಂಸ್ಕೃತಿ 2006/440
60. ಸಾರಂಗ ಪ್ರಭೆ: ಅಭಿನಂದನ ಗ್ರಂಥ 2002/466
61. ಸಾರ್ಥಕ ಶಿಕ್ಷಣ 1998/422
62. ಕರ್ನಾಟಕದ ರಾಜಕಾರಣಿಗಳು
63. ಆರ್ ಸಿ ಹಿರೇಮಠ ಜೀವನ ಚರಿತ್ರೆ
64. ಚೆಂಬೆಳಕಿನ ಕವಿ ಚೆನ್ನವೀರ ಕಣವಿ
65. ಚೆನ್ನವೀರ ಕಣವಿ ಸಂದರ್ಶನ
66. ಸಾಹಿತ್ಯ ರಶ್ಮಿ
67. ಶಂಕರ ಸೋಮಯಾಜಿ ಜೀವನ ಚರಿತ್ರೆ

ಪ್ರಶಸ್ತಿ/ಗೌರವ :
1) ಸ.ಸ. ಮಾಳವಾಡ ಪ್ರಶಸ್ತಿ-ಕ.ವಿ.ವಿ. ಧಾರವಾಡದಿಂದ 1996
2) ರಾಜ್ಯೋತ್ಸವ ಪ್ರಶಸ್ತಿ 2010

(966) ಹೆಗಡೆ ಜಿ.ಎಂ. ಭೈರುಂಬೆ, ಶಿರಸಿ (ಜ: 6-8-1950) ಬಿ.ಟೆಕ್., ಪಿ.ಜಿ.ಡಿ.ಎಂ. ಪದವೀಧರ. ಪ್ರಗತಿಪರ ಕೃಷಿಕ, ಕೃಷಿ ಸಲಹೆಗಾರ. ಹೆಸರು ಗಣಪತಿ. ತಂದೆ ಮಹಾಬಲೇಶ್ವರ, ತಾಯಿ ತ್ರಿವೇಣಿ. ಪತ್ನಿ ಶೋಭಾ. **ಪ್ರಕಟಿತ ಕೃತಿ** : ತೋಟಗಾರಿಕೆ ಮಾರ್ಗದರ್ಶಿ .... (1)2002, (2)2004/36

(967) ಹೆಗಡೆ ಜಿ.ಎಂ. ಹುಳಗೋಳ, ಶಿರಸಿ (ಜ: 21-4-1940) ಬಿ.ಎ. ಪದವೀಧರ. ಸಾಮಾಜಿಕ ಕಾರ್ಯಕರ್ತ, ಸಹಕಾರೀ ಧುರೀಣ. ಹೆಸರು ಗಜಾನನ. ತಂದೆ ಮಹಾಬಲೇಶ್ವರ ಹೆಗಡೆ, ತಾಯಿ ಭಾಗೀರಥಿ. ಪತ್ನಿ ರಾಧಾ.

ಪ್ರಕಟಿತ ಕೃತಿ : ಸಹಕಾರ-ಸಂಘಟನೆ-ಆಡಳಿತ..2006/75
ಗೌರವ : ಸಾರ್ಥಕ ಸಹಕಾರಿ-ಅಭಿನಂದನ ಗ್ರಂಥ ಸಂ। ಕೆ.ಎಂ. ಹೆಗಡೆ 2000/57

(968) ಹೆಗಡೆ ಜಿ.ಎಸ್. ಕಣ್ಣಿ, ಹೊನ್ನಾವರ (ಜ: 30-5-1960) ಬಿ.ಎಸ್ಸಿ. ಪದವೀಧರ. ಎಂ.ಎ. (ಇಂಗ್ಲೀಷ್). ಉಪನ್ಯಾಸಕ ಎಸ್.ಡಿ.ಎಂ. ಕಾಲೇಜ, ಹೊನ್ನಾವರ. ಹೆಸರು ಗಣೇಶ. ತಂದೆ ಸುಬ್ರಾಯ ಹೆಗಡೆ, ತನಮಡಗಿ, ಹೊನ್ನಾವರ.

ಪ್ರಕಟಿತ ಕೃತಿಗಳು :
1. ತಿರುವು-ಕಾದಂಬರಿ... 1981/243
2. ಬಿಲದೊಳಗಿನ ಬಲೆಯಲ್ಲಿ-ಕಾದಂಬರಿ 1979/167

(969) **ಹೆಗಡೆ ಜಿ.ಎಸ್. (ಡಾ|) ಹಡಿನಬಾಳ, ಹೊನ್ನಾವರ** (ಜ: 1-6-1966) ಎಂ.ಎ., ಬಿ.ಎಡ್., ಪಿಎಚ್.ಡಿ. ಪದವೀಧರ. ಕನ್ನಡ ಉಪನ್ಯಾಸಕ ಸರಕಾರಿ ಸಂಯುಕ್ತ ಪ.ಪೂ. ಕಾಲೇಜು. ಹೆಸರು ಗಜಾನನ. ತಂದೆ ಸತ್ಯನಾರಾಯಣ ಹೆಗಡೆ-ಯಕ್ಷಗಾನ ಕಲಾವಿದ, ತಾಯಿ ಭಾಗೀರಥಿ. ಪತ್ನಿ ವೃಂದಾ.

ಪ್ರಕಟಿತ ಕೃತಿಗಳು :

1. ಅವಧೂತ ಶ್ರೀರಾಮಾನಂದರು-ಜೀವನ ಚರಿತ್ರೆ 2012
2. ವಾಸ್ತವ-ಕಥಾ ಸಂಕಲನ 1989/48

ಟಿಪ್ಪಣಿ : ಇವರ **ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಜನಪದ ಸಂಸ್ಕೃತಿ** ಪ್ರಬಂಧಕ್ಕೆ ಕ.ವಿ.ವಿ.ಯಿಂದ ಪಿಎಚ್.ಡಿ. ದೊರಕಿದೆ.

(970) **ಹೆಗಡೆ ಜಿ.ಜಿ., ಕಡೇಕೋಡಿ, ಶಿರಸಿ** (ಜ: 4-6-1946) ಎಂ.ಎ., ಎಲ್.ಎಲ್.ಬಿ. ಪದವೀಧರ. ವ್ಯಾಪಾರಿ, ಅಜಾದಿ ಬಚಾವೋ ಆಂದೋಲನ ಕಾರ್ಯಕರ್ತ. ಹೆಸರು ಗಣೇಶ.ತಂದೆ ಗಣಪತಿ ಹೆಗಡೆ ಕಡೇಕೋಡಿ, ಕುಮಟಾ. ತಾಯಿ ವೆಂಕೂಬಾಯಿ. ಪತ್ನಿ ಲಲಿತಾ.

ಪ್ರಕಟಿತ ಕೃತಿಗಳು :

1. ಬಹುರಾಷ್ಟ್ರೀಯ ಕಂಪನಿಗಳ ಜೇಡರಬಲೆ .... (1)2001,(3)2003/92
2. ಸಾವಿನ ವ್ಯಾಪಾರ ಮಾಡುವ ಬಹುರಾಷ್ಟ್ರೀಯ ಕಂಪನಿಗಳು 2003/68

ಪ್ರಶಸ್ತಿ/ಗೌರವ :

1. ಆಜಾದೀ ಬಚಾವೋ ಆಂದೋಲನ ಸಂಸ್ಥೆಯಿಂದ 2003
2. ಉ.ಕ. ಜಿಲ್ಲಾ ವಾಣಿಜ್ಯೋದ್ಯಮ ಮತ್ತು ಕೃಷಿ ಸಂಘದ ಅಧ್ಯಕ್ಷ
3. ಕರ್ನಾಟಕ ವಾಣಿಜ್ಯೋದ್ಯಮ ಮಹಾಮಂಡಳದ ನಿರ್ದೇಶಕ

(971) **ಹೆಗಡೆ ಜಿ.ಜಿ., ಬಾಳಗೋಡ, ಸಿದ್ದಾಪುರ** (ಜ: 4-6-1953) ಎಂ.ಎ., ಬಿ.ಎಡ್. ರಾಷ್ಟ್ರಭಾಷಾ ಪ್ರವೀಣ ಪದವೀಧರ. ಹೈಸ್ಕೂಲು ಶಿಕ್ಷಕ, ತಾಲೂಕಾ ಹೈಸ್ಕೂಲು ಸಿಬ್ಬಂದಿ ಅಸೋಸಿಏಶನ್ ಅಧ್ಯಕ್ಷ, ಕರ್ನಾಟಕ ಹಿಂದಿ ಪ್ರಚಾರ ಸಮಿತಿಯ ಜಿಲ್ಲಾ ಸಂಘಟಕ. ಹೆಸರು ಗಜಾನನ. ತಂದೆ ಗಣಪತಿ ಹೆಗಡೆ, ತಾಯಿ ಸಾವಿತ್ರಿ. ಪತ್ನಿ ಸ್ವರ್ಣಲತಾ.

ಪ್ರಕಟಿತ ಕೃತಿಗಳು :

1. ಮಕ್ಕಳ ಕ್ವಿಜ್ 2013/70
2. ಮಕ್ಕಳ ಪ್ರಬಂಧ 2013/60
3. ಮನಸು ಮುಗಿಲು-ಲೇಖನಗಳು 2008/60
4. ಮುಗಿಲ ಧಾರೆ-ಕವನ ಸಂಕಲನ 2010/70

ಪ್ರಶಸ್ತಿ/ಗೌರವ: ರಾಷ್ಟ್ರಪ್ರಶಸ್ತಿ 2014

(972) **ಹೆಗಡೆ ಡಿ.ಎಂ., ಬೆಂಗಳೂರು** (ಜ: 1-4-1969) ಬಿ.ಎ., ಎಲ್.ಎಲ್.ಬಿ., ಪತ್ರಿಕೋದ್ಯಮ ಡಿಪ್ಲೋಮಾ ಪದವೀಧರ. ನ್ಯಾಯವಾದಿ, ಮಧ್ಯಸ್ಥಿಕೆಗಾರ. ಹೆಸರು ದತ್ತಾತ್ರಯ. ತಂದೆ ಮಹಾಬಲೇಶ್ವರ ಹೆಗಡೆ, ಯಲ್ಲಾಪುರ. ತಾಯಿ ಇಂದಿರಾ. ಪತ್ನಿ ಜಯಶ್ರೀ.

ಪ್ರಕಟಿತ ಕೃತಿಗಳು :

1. ಕಾಮಿ-ಸ್ವಾಮಿ (ನಿತ್ಯೋತ್ಸವದ ನಿತ್ಯಾನಂದರು) 2010/176
2. ಜೀವನ ಶಿಕ್ಷಣ 2009/74
3. ಪ್ರೀತಿಯೇ ಜೀವನ-ವ್ಯಕ್ತಿತ್ವ ವಿಕಸನಧಾರೆ 2010/64
4. ನಾನೂಂದ್ರೆ ನಂಗಿಷ್ಟ

(973) **ಹೆಗಡೆ ಡಿ.ವಿ. ಬೆಂಗಳೂರು** (ಜ: 25-2-1947) ಬಿ.ಎಸ್.ಸಿ., ಬಿ.ಎಡ್. P.G. D.P. R. ಪದವೀಧರ. ಹೈಸ್ಕೂಲು ಶಿಕ್ಷಕ, ಆಕಾಶವಾಣಿ ದೂರದರ್ಶನಗಳಲ್ಲಿ ಸುದ್ದಿಸಂಪಾದಕ, ಭಾರತ

ಸರಕಾರದ ಕ್ಷೇತ್ರ ಪ್ರಚಾರಾಧಿಕಾರಿ (ನಿವೃತ್ತ). ಹೆಸರು ದೇವರು. ತಂದೆ ವೆಂಕಟರಮಣ ಹೆಗಡೆ, ಬಾಳಗಾರು, ಶಿರಸಿ. ತಾಯಿ ಲೀಲಾವತಿ. ಪತ್ನಿ ಪದ್ಮ.

ಪ್ರಕಟಿತ ಕೃತಿಗಳು :

1. ನಂಬಿಕೆಯ ನೆರಳು–ಕಾದಂಬರಿ (ಹವ್ಯಕ ಪರಿಸರದ್ದು) 2007/208
2. ಬೆಂಗಾಡು ಭಯಂಕರ–ಪತ್ತೇದಾರಿ ಕಾದಂಬರಿ 2008/204
3. ಯಂತ್ರಮಾನವ 1984/24
4. ವಿಜ್ಞಾನದ ಕೌತುಕಗಳು 2005/80
5. ವಿಜ್ಞಾನ ವೈವಿಧ್ಯ (ವೈಜ್ಞಾನಿಕ ಲೇಖನಗಳು) 2010/158

(974) ಹೆಗಡೆ ದತ್ತಾತ್ರಯ ಕುಡೇಗೋಡ, ಸಿದ್ದಾಪುರ (ಜ: 21–7–1968) ಟಿ.ಸಿ.ಹೆಚ್., ಬಿ.ಎ., ಡಿ.ಎ.ಇ. ಪದವೀಧರ. ಪ್ರಾಥಮಿಕ ಶಾಲಾ ಶಿಕ್ಷಕ, ಸಂಪನ್ಮೂಲ ವ್ಯಕ್ತಿ. ತಂದೆ ಸುಬ್ರಾಯ ಹೆಗಡೆ, ತಾಯಿ ಸಾವಿತ್ರಿ. ಪತ್ನಿ ಮೇಧಾ.

ಪ್ರಕಟಿತ ಕೃತಿ : ಪ್ರತೀಕಾರದ ತಿರುವು–ಕಾದಂಬರಿ (ಶ್ರೀಧರ ಹೆಗಡೆ ಜೊತೆ) . 1989/68

(975) ಹೆಗಡೆ ದಿವಾಕರ ಧಾರವಾಡ (ಜ: 13–2–1964) ಬಿ.ಕಾಂ., ಎಲ್.ಎಲ್.ಬಿ. ಪದವೀಧರ. ಆಕಾಶವಾಣಿ ಧಾರವಾಡದಲ್ಲಿ ಉದ್ಯೋಗಿ, ಯಕ್ಷಗಾನ ಕಲಾವಿದ. ತಂದೆ ಗಣಪತಿ ಹೆಗಡೆ, ಕೆರೆಹೊಂಡ, ಸಿದ್ದಾಪುರ. ತಾಯಿ ಗಂಗಾ. ಪತ್ನಿ ಮಾಲತಿ.

ಪ್ರಕಟಿತ ಕೃತಿಗಳು :

1. ನಿರ್ಧಾರ ಮತ್ತು ಸಂತೆ–ನಾಟಕ 2010/115
2. ಯುದ್ಧ ಭಾರತ–ನಾಟಕ 2004/41
3. ಶೀಲ ಸಂಕ್ರಾಂತಿ–ಏಡ್ಸ್ ಕುರಿತ ಯಕ್ಷಗಾನ ಪ್ರಸಂಗ 2002/60
4. ಶ್ರೀಗಂಧ ಸಂಸಾರ–ಆತ್ಮ ವೃತ್ತಾಂತ 2000/104
5. ಮೋಹ ಮೇನಕೆ

(976) ಹೆಗಡೆ ನರಹರಿ ಶಿರಳಗಿ, ಸಿದ್ದಾಪುರ (ಜ: 12–2–1958) ಕೃಷಿಕ, ಜ್ಯೋತಿಷಿ. ತಂದೆ ಗಣೇಶ ಹೆಗಡೆ, ತಾಯಿ ರೇಣುಕಾ. ಪತ್ನಿ ವಿಜಯಲಕ್ಷ್ಮಿ. **ಪ್ರಕಟಿತ ಕೃತಿ** : ಸುಜ್ಞಾನ ಪಥ 1990/78

(977) ಹೆಗಡೆ ನರಸಿಂಹ ಶಿರಸಿ (ಜ: 18–11–1969) ಎಂ.ಎಸ್ಸಿ. Professional Masters (Netherlands) ಪದವೀಧರ. ಸಂಶೋಧಕ. ಕೃಷಿಕ. 'ಐಖಈಇ' ಶಿರಸಿ ರೂವಾರಿ. ತಂದೆ ರಾಮಚಂದ್ರ ಹೆಗಡೆ ಗೋಣ್ಸರ ಶಿರಸಿ. ತಾಯಿ ಸುಬ್ಬಿ. ಪತ್ನಿ ವೀಣಾ.

ಪ್ರಕಟಿತ ಕೃತಿಗಳು:

1. ಅಂಕಣ ಚಾಪೆ–ಅರಣ್ಯಪರಿಸರ ಕುರಿತಕೃತಿ 2010/130
2. ಅಂಟು ಮತ್ತು ರಾಳ–ನೈಸರ್ಗಿಕ ಸಂಪನ್ಮೂಲ ಕುರಿತ ಕೃತಿ 2009/40
3. ಅಡವಿ ಜೇನು : ಸ್ಥಿತಿ, ಸಂರಕ್ಷಣೆ ಮತ್ತು ಪಾರಿಸಾರಿಕ ಮಹತ್ವ . 2013/45
4. ದೇವರ ಕಾಡುಗಳು : ಪ್ರಾಚೀನ ಅರಣ್ಯ ಸಂರಕ್ಷಣ ಪರಂಪರೆ ... 2011/58
5. ರಾಮಪತ್ರೆ ಜಡ್ಡಿ ಕಾಡುಗಳು : ಮಹತ್ವ ಹಾಗೂ ಸಂರಕ್ಷಣೆ 2012/88
6. Women and Management of Non-Timber Forest Products : Central Western Ghats, India 2005/110

(978) ಹೆಗಡೆ ನರೇಂದ್ರ, ಹೊಂಡಗಾಶ್ಗಿ, ಸಿದ್ದಾಪುರ (ಜ: 19–2–1963) ಬಿ.ಎ.,ಎಲ್.ಎಲ್.ಬಿ. ಪದವೀಧರ. ಕೃಷಿಕ, ಪರಿಸರವಾದಿ, ಪ್ರೊಜೆಕ್ಟ್ ಮ್ಯಾನೇಜರ್–ಸಹ್ಯಾದ್ರಿ ಪರಿಸರ ವರ್ಧಿನಿ,

ಯಡಳ್ಳಿ. ತಂದೆ ಸೀತಾರಾಮ, ತಾಯಿ ಸುಮಿತ್ರಾ. ಪತ್ನಿ ರೇಖಾ. **ಪ್ರಕಟಿತ ಕೃತಿ** : ಸೊಪ್ಪಿನ ಬೆಟ್ಟಗಳ ಅಭಿವೃದ್ಧಿ ಹಾಗೂ ಸಂರಕ್ಷಣೆ 2010/65

(979) **ಹೆಗಡೆ ನಾಗರಾಜ ಅಪಗಾಲ, ಹೊನ್ನಾವರ** (ಜ: 27-7-1971) ಎಂ.ಎ. (ಕನ್ನಡ) ಬಿ.ಎಡ್., ಡಿಪ್ಲೋಮಾ ಇನ್ ಲಿಂಗ್ವಿಸ್ಟಿಕ್ಸ್ ಪದವೀಧರ. ಉಪನ್ಯಾಸಕ-ಎಸ್.ಡಿ.ಎಂ. ಕಾಲೇಜು, ಹೊನ್ನಾವರ. ತಂದೆ ಗಣೇಶ, ತಾಯಿ ಮಂಜುಳಾ. ಪತ್ನಿ ಕಾವ್ಯಾ.

ಪ್ರಕಟಿತ ಕೃತಿಗಳು :

1. ಕಣ್ಣಂಚಿನ ಕಡಲು-ಕವನಗಳು..2009/80
2. ದೀಪವಿಲ್ಲದ ಇರುಳಲ್ಲಿ-ಕವನಗಳು 1993/40

(980) **ಹೆಗಡೆ ನಾಗರಾಜ ಬೆಂಗಳೂರು** (ಜ: 30-8-1961) ಡಿಪ್ಲೋಮಾ ಇಲೆಕ್ಟ್ರಿಕಲ್ ಶಿಕ್ಷಣ. ಬಿ.ಎಚ್.ಇ.ಎಲ್.ನಲ್ಲಿ ಉದ್ಯೋಗಿ. ತಂದೆ ರಾಮ ಹೆಗಡೆ ಕಡ್ಲೆ-ಬಾಡ, ಕುಮಟಾ. ತಾಯಿ ರತ್ನಾವತಿ. ಪತ್ನಿ ನಾಗರತ್ನ.

ಪ್ರಕಟಿತ ಕೃತಿಗಳು :

1. ಎರಡು ಮುಖ-ಕಥೆಗಳು ಕವಿತೆಗಳು 1980/60
2. ಸ್ಪಂದನ-ಕವಿತೆಗಳು 1979/28

(981) **ಹೆಗಡೆ ನಾಗೇಶ, ಬೆಂಗಳೂರು** (ಜ: 14-2-1948) ಎಂ.ಎಸ್ಸಿ. (ಅನ್ವಯಿಕ ಭೂವಿಜ್ಞಾನ), ಎಂ.ಫಿಲ್ (ಪರಿಸರ ವಿಜ್ಞಾನ). ಪತ್ರಿಕೋದ್ಯೋಗಿ ಪ್ರಜಾವಾಣಿ, ಸುಧಾ ಪತ್ರಿಕಾ ಕಾರ್ಯಾಲಯಗಳಲ್ಲಿ ಸಹಾಯಕ ಸಂಪಾದಕ (ನಿವೃತ್ತ). ವಿಜ್ಞಾನ ಅಕಾಡೆಮಿ ಸದಸ್ಯ. ತಂದೆ ನಾರಾಯಣ ಹೆಗಡೆ, ಬಕ್ಕೆಮನೆ, ಸಿದ್ದಾಪುರ-ಸ್ವಾತಂತ್ರ್ಯ ಹೋರಾಟಗಾರ. ತಾಯಿ ಪಾರ್ವತಿ. ಪತ್ನಿ ರೇಖಾ.

ಪ್ರಕಟಿತ ಕೃತಿಗಳು :

1. ಅಂತರಿಕ್ಷದಲ್ಲಿ ಮಹಾಸಾಗರ 2002/132
2. ಅಕ್ಕರೆ ಅಕ್ಕ ಭಳಿರೆ ಭತ್ತ 2009/32
3. ಅಣು ಶಕ್ತಿ 1987/23
4. ಅದು ವಿಸ್ಮಯ ಇದು ವಿಷಮಯ 2002/60
5. ಅಭಿವೃದ್ಧಿಯ ಅಂಧಯುಗ 2010/160
6. ಅಳಿವಿನಂಚಿನಲ್ಲಿ ಜೀವಿಗಳು (ಅನುವಾದ) 1994/102
7. ಆಚಿನ ಲೋಕಕ್ಕೆ ಕಾಲಕೋಶ-
ಸಮಕಾಲೀನ ವಿಜ್ಞಾನ ವಿಷಯಗಳ ಸಂಕಲನ 2007/248
8. ಇರುವುದೊಂದೇ ಭೂಮಿ-ಪರಿಸರ ಲೇಖನಗಳು 1988/170
9. ಎಂಥದೋ ತುಂತುರು 2003/126
10. ಕರ್ನಾಟಕದ ಪರಿಸರ ಪರಿಸ್ಥಿತಿ ಸಂಪುಟ-1 .... 1985/223
11. ಕರ್ನಾಟಕದ ಪರಿಸರ ಪರಿಸ್ಥಿತಿ ಸಂಪುಟ-2 .... 1987/161
12. ಕರ್ನಾಟಕದ ಪರಿಸರ ಪರಿಸ್ಥಿತಿ ಸಂಪುಟ-3 .... 1987/172
13. ಕರ್ನಾಟಕದ ಪರಿಸರ ಪರಿಸ್ಥಿತಿ ಸಂಪುಟ-4 .... 1990/168
(ಇವು ನಾಲ್ಕೂ ಅನುವಾದಿತ ಸಂಪುಟಗಳು)
14. ಕೆರೆಯಲಿ ಚಿನ್ನ-ಕೆರೆಯೇ ಚಿನ್ನ-ಮಕ್ಕಳ ಪರಿಸರ ಕತೆ................. 1998/140
15. ಕೋಪೆನ್ ಹೇಗನ್ ಋತು ಸಂಹಾರ 2010/120

16. ಕ್ಯಾನ್ಸರ್ ಕ್ರೀಡೆ (ಅನುವಾದಿತ) 2004/220
17. ಕ್ಯಾಪ್ಸೂಲಗಿತ್ತಿ–ಸಂಪಾದಕೀಯ ಲಘುಬರಹಗಳು 1996/80
18. ಗಗನ ಸಖಿಯರ ಸೆರಗು ಹಿಡಿದು–ಪ್ರವಾಸ ಕಥನ...................... 1996/124
19. ಗಾಳಿಗೆ ವಿಷ–ನೀರಿಗೆ ವಿಷ–............................ (1)1995,(2)2000/108
ಪರಿಸರ ವಿಜ್ಞಾನ (ಅನುವಾದಿತ)
20. ಗುರುಗ್ರಹದಲ್ಲಿ ದೀಪಾವಳಿ–ವಿಜ್ಞಾನ ಲೇಖನಗಳು....................... 2001/192
21. ಗುಳಿಗೆ ಗುಮ್ಮ–ಮಕ್ಕಳಿಗಾಗಿ ಪರಿಸರ ಕಿರುನಾಟಕ 1998/32
22. ಗೋಹತ್ಯೆ ಒಂದು ಪರಾಮರ್ಶೆ 2010/16
23. ಟಿಪ್ಪೂ ಖಡ್ಗದ ನ್ಯಾನೋ ಕಾರ್ಬನ್ 2009/152
24. ನಮ್ಮ ಬೆಂಗಳೂರು 2005/60
25. ನರಮಂಡಲ ಬ್ರಹ್ಮಾಂಡ–ಮನೋವಿಜ್ಞಾನ 2014/138
26. ನಮ್ಮೊಳಗಿನ ದುಂದುಮಾರ–ವಿಜ್ಞಾನ ಚಿಂತನ............................ 2012/162
27. ನಮ್ಮೊಳಗಿನ ಬ್ರಹ್ಮಾಂಡ–ವಿಜ್ಞಾನ ಸಾಹಿತ್ಯ 1998/208
28. ನೀರಿದ್ದರೆ ನಾವು ಮತ್ತು ಮಳೆ ನೀರ ಕೊಯಿಲು 2004/162
29. ನೀರಿದ್ದರೆ ನಾವು–ಪರಿಸರ ಸಾಹಿತ್ಯ 1999/32
30. ನ್ಯಾನೋ ಹೇನು 2003/201
31. ಪರಿಸರ ಪ್ರಜ್ಞೆ ಮತ್ತು ನಗರ ನಿರ್ಮಾಣ (ಅನುವಾದ) 1993/80
32. ಪರಿಸರ ಮಾಲಿನ್ಯ (ಅನುವಾದ).. 2003/162
33. ಬರ್ಗರ್‌ಭಾರತ–ಕೃಷಿ ಮತ್ತು ಸಮಾಜ ಚಿಂತನ 2012/160
34. ಪ್ರತಿದಿನ ಪರಿಸರ ದಿನ .... (1)2000,(2)2010/104
35. ಮಂಗಳನಲ್ಲಿ ಜೀವಲೋಕ 1999/64
36. ಮಣ್ಣು ಅದೇ ಹೊನ್ನು–ಸಂಪಾದಿತ 2015/60
37. ಮನುಕುಲದ ಉಳಿವಿಗೆ ಮಹತ್ವದ ದಿನಗಳು–ಪರಿಸರ ಸಾಹಿತ್ಯ 2013/216
38. ಮಾಧ್ಯಮ ಕರ್ನಾಟಕ–ಸಂಪಾದಿತ 2012/384
39. ಮತ್ತೆ ಮತ್ತೆ ಕೂಗುಮಾರಿ (ವಿಜ್ಞಾನ ಸಾಹಿತ್ಯ) 2010/140
40. ಮಿನುಗುವ ಮೀನು ಕುಲಾಂತರಿ ಕೋತಿ 2002/172
41. ಮುಷ್ಟಿಯಲ್ಲಿ ಮಿಲೆನಿಯಂ ....(1)2000,(2)2008/168
42. ವಿಜ್ಞಾನ ಗಂಗೆಯ ಬಿಂದುಸಾರ (ಸಂಪಾದಿತ) 2006/226
43. ಶತಕಗಳ ಸರದಾರ : ಪ್ರೊ. ಸಿ.ಎನ್.ಆರ್. ರಾವ್–ಪರಿಚಯ 2013/40
44. ಶತಮಾನದ ಕುಸುಮ : ಸಂಕಲನ–ಜೀವನ ವೃತ್ತಾಂತ 1999/138
45. ಶತ್ರುವಿಲ್ಲದ ಸಮರ–ಸಮಕಾಲೀನ ವಿಜ್ಞಾನ ವಿಷಯಗಳ ಸಂಕಲನ2008/216
46. ಸುರಿಹೊಂಡ ಭರತಖಂಡ 2010/104
47. ಹಳ್ಳಿ ಮುಕ್ಕ ಎಲ್ಲೆಲ್ಲ್ ಹೊಕ್ಕ–ಲಲಿತ ಪ್ರಬಂಧಗಳು 2011/92
48. Namma Bangaluru 2005/60
49. ಆಸ್ಪತ್ರೆಗಳಲ್ಲಿ 7 ಎಚ್ಚರಿಕೆಗಳು
50. ಹಾರುವ ತಟ್ಟೆಗಳ ದಶಾವತಾರಗಳು
51. ಭೂಮಿಯೆಂಬ ಗಗನ ನೌಕೆ
52. ಭೋಗ ಪ್ರಳಯ
53. ನಾಳೆಗಳ ಹಿಂದಿಕ್ಕಿ ನಾಗಾಲೋಟ
54. ಸೈನ್ಸ್ ಮತ್ತು ಪರಿಸರ ಸಿಂಚನ

55. ಮೂಕ ಪೃಥ್ವಿಗೆ ಮಾತುಕೊಟ್ಟ ಕಿಶೋರಿ ಗ್ರೇತಾ ಥನ್ಬರ್ಗ್

ಪ್ರಶಸ್ತಿ/ಗೌರವ :

1. ಸಾಹಿತ್ಯ ಅಕಾಡೆಮಿ ಪ್ರಶಸ್ತಿ 'ಇರುವುದೊಂದೇ ಭೂಮಿ'ಗೆ 1988
2. ಅತ್ಯುತ್ತಮ ಮಾನವೀಯ ವರದಿ ಪ್ರಶಸ್ತಿ-ಕೆಯುಡಬ್ಲ್ಯೂಜೆ ಇಂದ 1992
3. ಅತ್ಯುತ್ತಮ ಗ್ರಾಮೀಣ ವರದಿ ಪ್ರಶಸ್ತಿ-ಕೆನರಾ ಬ್ಯಾಂಕ್‌ನಿಂದ 1992
4. ಶಾಮರಾವ್ ದತ್ತಿ ನಿಧಿ-ಪುರಸ್ಕಾರ 1995
5. ಸಾಹಿತ್ಯ ಅಕಾಡೆಮಿ ಪ್ರಶಸ್ತಿ 'ಕೆರೆಯಅ ಚಿನ್ನ ಕೆರೆಯೇ ಚಿನ್ನ'ಕ್ಕೆ 1996
6. ಆರ್ಯಭಟ ಪ್ರಶಸ್ತಿ-ಪ್ರವಾಸ ಕಥನಕ್ಕೆ 1997
7. ವಿಶ್ವೇಶ್ವರಯ್ಯ ಪ್ರಶಸ್ತಿ 1998
8. ಶಿವರಾಮ ಕಾರಂತ ಪ್ರಶಸ್ತಿ-'ನಮ್ಮೊಳಗಿನ ಬ್ರಹ್ಮಾಂಡ'ಕ್ಕೆ 2002
9. ಕೆಂಪೇಗೌಡ ಪ್ರಶಸ್ತಿ 1995
10. ಪಬ್ಲಿಕ್ ರಿಲೇಶನ್ ಸೊಸೈಟಿ ಆಫ್ ಇಂಡಿಯಾದಿಂದ 1999
11. ಅತ್ಯುತ್ತಮ ಪರಿಸರ ಪತ್ರಕರ್ತ-ಕರ್ನಾಟಕ ಸರಕಾರದಿಂದ 2001
12. ರಾಜ್ಯೋತ್ಸವ ಪ್ರಶಸ್ತಿ 2008
13. ಮಾಧ್ಯಮ ಎಕಾಡೆಮಿಯಿಂದ ಜೀವಮಾನ ಪ್ರಶಸ್ತಿ 2009
14. ನಾಗೇಶ ಹೆಗಡೆ ಅವರ ಆಯ್ದ ಬರಹಗಳು (ಅಕ್ಷರ ಪ್ರಕಾಶನ) 2009/108
15. ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ
    'ಆಚಿನ ಲೋಕಕ್ಕೆ ಕಾಲಕೋಶ' ಕೃತಿಗೆ 2009
16. ಬೆಂಗಳೂರು ಪ್ರೆಸ್‌ಕ್ಲಬ್‌ನ 'ಶ್ರೇಷ್ಠ ಪತ್ರಕರ್ತ ಪ್ರಶಸ್ತಿ' 2012
17. 'ಮಾಧ್ಯಮ ಕರ್ನಾಟಕ' ಕೃತಿಗೆ ವಿಶ್ವೇಶ್ವರಯ್ಯ ಪ್ರಶಸ್ತಿ................................2013
18. ಹಂಪಿ ಕನ್ನಡ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ 2013
19. ಹಂಪಿ ಕನ್ನಡ ವಿಶ್ವವಿದ್ಯಾಲಯದ ಅತಿಥಿ ಪ್ರಾಧ್ಯಾಪಕ ಸಂಮಾನ 2014
20. 'ನರಮಂಡಲ ಬ್ರಹ್ಮಾಂಡ' ಕೃತಿಗೆ ವಿಜ್ಞಾನ ಅಕಾಡೆಮಿ ಪ್ರಶಸ್ತಿ 2015

(982) **ಹೆಗಡೆ ನಾರಾಯಣ ದೊಡ್ಮನೆ (ಡಾ।) ಅಮೇರಿಕಾ** (ಜ: 26-3-1940) ಪಿ.ಹೆಚ್‌ಡಿ. ಪದವೀಧರ. Professor of English and Comparative Literature. Humanities and Languages Dept. State Univers ity of New York, USA. ತಂದೆ ವೆಂಕಟರಮಣ ಹೆಗಡೆ, ದೊಡ್ಮನೆ, ಸಿದ್ದಾಪುರ. ತಾಯಿ ಶಾರದಾ. ಪತ್ನಿ ರೀತಾ.

ಪ್ರಕಟಿತ ಕೃತಿಗಳು :

1. From Cauvery to Godavari-Modern Kannada Stories
   (3 Translated Stories) 1992
2. Katha Prize Stories-English Translation
   Kannada Short Story 'ಅಕ್ಕಯ್ಯ' by U R Ananthamurthy 1995
3. Stallion of the Sun and Other stories by
   U R Ananthamurthy-Edited and Translated into English 1999

ಟಿಪ್ಪಣಿ :'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ' ವನ್ನು ಅಂಗ್ರೇಜಿಗೆ ಅನುವಾದಿಸಿದ್ದು ಹಸ್ತಪ್ರತಿಯಲ್ಲಿದೆ.

ಪ್ರಶಸ್ತಿ/ಗೌರವ :

1. Senior Fellow, American Institute of Indian Studies
2. American Council of Learned Socities Award 1990
3. The Katha Award for Translation-New Delhi 1995

(983) **ಹೆಗಡೆ ನಾರಾಯಣ ಪೆರ್ನಾಜೆ, ಪುತ್ತೂರು** (ಜ: 28-8-1956) ಬಿ.ಎ., ಬಿ.ಎಡ್. ಪದವೀಧರ. ಅಧ್ಯಾಪಕ ಸೀತಾರಾಘವ ಪ.ಪೂ. ಕಾಲೇಜು, ಪೆರ್ನಾಜೆ, ಪುತ್ತೂರು. ತಂದೆ ರಾಮಚಂದ್ರ ಹೆಗಡೆ, ಖರ್ವಾ, ಹೊನ್ನಾವರ. ತಾಯಿ ಗಂಗಾ. ಪತ್ನಿ ಶೋಭಾ.

ಪ್ರಕಟಿತ ಕೃತಿ :ತಂಗಾಳಿ-ಕವನ ಸಂಕಲನ 2003/32

(984) **ಹೆಗಡೆ ನಾರಾಯಣ ಮಂಜುನಾಥ, ತಡಗುಣಿ, ಶಿರಸಿ** (ಜ: 16-5-1939) ಐದನೇ ತರಗತಿ ಶಿಕ್ಷಣ. ಕೃಷಿಕ. ತಂದೆ ಮಂಜುನಾಥ ಹೆಗಡೆ, ದೊಡ್ಮನೆ, ತಡಗುಣಿ, ಶಿರಸಿ. ತಾಯಿ ಸಾವಿತ್ರಿ. ಪತ್ನಿ ಪಾರ್ವತಿ.

ಪ್ರಕಟಿತ ಕೃತಿ :ಅಂಗಳದ ಮಲ್ಲಿಗೆ-ಭಕ್ತಿಗೀತೆ, ಭಾವಗೀತೆಗಳು 1989/24

(985) **ಹೆಗಡೆ ನಿತ್ಯಾನಂದ, ಮೂರೂರು, ಕುಮಟಾ** (ಜ: 10-9-1956) ಎಂ.ಎ.(ಕನ್ನಡ), ಎಂ.ಎ.(ಸಂಸ್ಕೃತ) ಪದವೀಧರ. ಪ್ರಾಂಶುಪಾಲ-ಸರಕಾರಿ ಪದವಿಪೂರ್ವ ಕಾಲೇಜು, ಯಕ್ಷಗಾನ ಕಲಾವಿದ. ತಂದೆ ವೆಂಕಟರಮಣ ಹೆಗಡೆ (ಮೂರೂರು ದೇವರು ಹೆಗಡೆ)-ಗ್ರಂಥಕರ್ತ.

ಪ್ರಕಟಿತ ಕೃತಿಗಳು :

1. ಮರಳಿಬಾರದ ಹರೆಯಗಳು-ಕವನ ಸಂಕಲನ 2007/32
2. ಸಂಸ್ಕೃತ ಕನ್ನಡ ಭಜನಾ ಸಂಗ್ರಹ 2002/70

(986) **ಹೆಗಡೆ ಪರಮೇಶ್ವರ ಎಸ್. ಬಸ್ರೂರು, ಕುಂದಾಪುರ** (ಜ: 21-7-1963) ಎಂ.ಎ., ಎಲ್.ಎಲ್.ಬಿ., ಪತ್ರಿಕೋದ್ಯಮ ಡಿಪ್ಲೋಮಾ, ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೋಮಾ ಪದವೀಧರ. ಯಕ್ಷಗಾನ ಕಲಾವಿದ, MESCOM ವಿಭಾಗೀಯ ಕಚೇರಿಯಲ್ಲಿ ಉದ್ಯೋಗಿ. ತಂದೆ ಶಿವರಾಮ ಹೆಗಡೆ, ಗುಣವಂತೆ, ಹೊನ್ನಾವರ. ತಾಯಿ ಭವಾನಿ. ಪತ್ನಿ ಮಹಾಲಕ್ಷ್ಮಿ.

ಪ್ರಕಟಿತ ಕೃತಿ : ಪ್ರತಿಫಲ-ಕಾದಂಬರಿ 1981/125

(987) **ಹೆಗಡೆ ಪರಮೇಶ್ವರ ಹನ್ಮಂತಿ, ಶಿರಸಿ** (ಜ: 22-12-1968) ಎಂ.ಎಸ್ಸಿ., ಎಂ.ಎ. ಪದವೀಧರ. 7ವರ್ಷ ಬೆಂಗಳೂರಿನ ಕಾಲೇಜಿನಲ್ಲಿ ಉಪನ್ಯಾಸಕ. ನಂತರ ಸ್ವಗ್ರಾಮದಲ್ಲಿ ಕೃಷಿಕ. ತಂದೆ ದತ್ತಾತ್ರಯ ಹೆಗಡೆ, ತಾಯಿ ತಾರಾ. ಪತ್ನಿ ವಿಮಲಾ-ಗ್ರಂಥಕರ್ತೆ.

ಪ್ರಕಟಿತ ಕೃತಿಗಳು :

1. ಅಕಬರ ಬೀರಬಲ್ಲರ ಕಥೆಗಳು ಭಾಗ-1 .... 2012/124
2. ಅಕಬರ ಬೀರಬಲ್ಲರ ಕಥೆಗಳು ಭಾಗ-2 .... 2012/122
3. ಉದ್ವೇಗ ಮತ್ತು ಚಿಂತೆಯಿಂದ ಮುಕ್ತಿ ಹೇಗೆ? 2010/267
4. ಕರ್ನಾಟಕದಲ್ಲಿ ಕೃಷಿ... 2010/324
5. ಕಥಾಲೋಕ 2010/930
6. ಗಣಿತ ಲೋಕ 2004/103
7. ಚಿಂತೆ : ಕಾರಣ-ಪರಿಹಾರ... 2005/101
8. ಜಗತ್ತನ್ನೇ ಬದಲಿಸಿದ ಸಂಶೋಧನೆಗಳು 2004/201
9. ಜೀವಿಗಳ ಸ್ವರ್ಗಭೂಮಿ-ಸಾಮಾನ್ಯ ಜ್ಞಾನ 2000/160
10. ಟೆನ್‌ಶನ್‌ಗೊಂದು ಫುಲ್‌ಸ್ಟಾಪ್ 2006/116
11. ನಮ್ಮ ಯೋಚನಾ ಶಕ್ತಿ 2009/136
12. ನಾಸ್ತಿಕ-ಕಾದಂಬರಿ.. 2002/202
13. ಪತಿವ್ರತೆಯರ ಕಥೆಗಳು 2012/115

14. ಪುಟ್ಟ ಹೂವಿನ ಡೈರಿ–ಕಾದಂಬರಿ 2003/193
15. ಮಹಾಭಾರತ 2005/102
16. ರಾಮಾಯಣ 2004/102
17. ಶ್ರೀಮದ್ಭಾಗವತ.. 2005/102
18. Addiction and Drugs 2010/296
19. Advanced Children Psychology 2009/447
20. Agriculture and Cash Crops 2009/240
21. Amazing Animals 2005/112
22. Amazing Science Projects 2006/64
23. Aurobindo Ghosh 2006/88
24. Bala Gangadhar Tilak 2006/64
25. Bhagat Singh 2006/80
26. Chandra Shekhar Azad 2006/80
27. Creativity 2010/228
28. Dairy Products 2010/226
29. Dr. Abdul Kalam 2006/94
30. Dr. Bhimrao Ambedkar 2006/64
31. Effective Time Management 2009/80
32. English Grammer 2010/716
33. Essay Writing 2010/264
34. Finding Happiness 2009/80
35. Floriculture 2010/174
36. Gardening 2010/100
37. Goutama Buddha 2006/72
38. History of Inventions 2005/176
39. How Develop Charactor..2009/80
40. Importance of Medicinal Plants 2009/220
41. Improve Self Image 2009/80
42. Indian Freedom Fighters 2010/220
43. Indira Gandhi 2006/64
44. Jagjivan Ram...2006/80
45. Jawaharlal Nehru 2006/64
46. Learning from Your Mistakes 2009/80
47. Learning Self Discipline 2009/80
48. Mahatma Gandhi 2006/64
49. Morality and Motivation 2010/236
50. Morarji Desai 2006/64
51. Mother Teresa 2006/62
52. Our Behaviour and Happiness 2010/228
53. Our Behaviour makes our personality 2006/94
54. Palmistry and Numerology...2006/88
55. Peace of Mind 2009/80
56. Plan for Personal Success 2009/80
57. Prostitution-The Curse 2010/241

58. Psychology of Internet and Cyberspace 2009/210
59. Raja Ram Mohan Roy 2006/72
60. Ramayana 2010/1184
61. Sarojini Naidu 2006/64
62. Secrets to getting the Job you really want 2009/80
63. Shree Ramakrishna Paramahamsa 2006/80
64. Subhas Chandra Bose 2006/80
65. Swami Dayananda Saraswati 2006/64
66. Swami Vivekananda 2006/64
67. Taking personal responsibility 2009/80
68. Text book of Agro Chemistry 2009/188
69. Text book of Bio Chemistry 2005/312
70. Text book of Marketing Management 2010/234
71. Text book of Modern Botany 2005/254
72. The Art of Business Communication 2010/224
73. The Art of Leaderhip 2010/246
74. The Art of Thought 2010/226
75. The Horrible Killer-Aids 2006/72
76. The Knowledge Book 2010/1290
77. The Secret of Education 2006/112
78. The Secret of Golden Life 2006/164
79. The Secret of Marketing... 2010/228
80. The Theory of Knowledge 2010/178
81. The War Against Terrorism 2010/326
82. Tippu Sultan 2006/64
83. Total Personality Development 2009/1415
84. Yoga and Meditation 2009/633
85. Yoga The Spirit of Life 2010/94

(೯೮೮) **ಹೆಗಡೆ ಪಿ.ಎಂ., ಶಿರಸಿ** (ಜ: 15-7-1938) ಎಂ.ಎ.(ಇಂಗ್ಲೀಷ್) ಪದವೀಧರ. ನಿವೃತ್ತ ಪ್ರಾಧ್ಯಾಪಕ. ಹೆಸರು ಪರಮೇಶ್ವರ. ತಂದೆ ಮಹಾಬಲೇಶ್ವರ ಹೆಗಡೆ, ಕಬ್ಬಿನಹಳ್ಳಿ, ಶಿರಸಿ. ತಾಯಿ ಮಹಾಲಕ್ಷ್ಮಿ. ಪತ್ನಿ ಪ್ರಭಾವತಿ.

ಪ್ರಕಟಿತ ಕೃತಿಗಳು :

1. ಆಲ್ಮನೆಯಿಂದ ಆ್ಯನ್ಬರ್ಗ-ಪ್ರವಾಸ ಕಥನ 2002/108
2. ನೂರಾರು ಚಿಂತನ-ಅಂಕಣ ಬರಹ ಸಂಕಲನ 2010/130
3. ನೂರೊಂದು ಚಿಂತನ-ಅಂಕಣ ಬರಹ ಸಂಕಲನ 2007/108
4. ನೂರೇಳು ಚಿಂತನ.. 2012/128
5. ಯಂಗ್ಝೂ ಪ್ಯಾಟಿಗೆ ಹೋಗಿದ್ಯ-ಹವಿಗನ್ನಡ ನಾಟಕ 1971/16

(989) ಹೆಗಡೆ ಪಿ.ಎನ್. ಕೊಪ್ಪ ಚಿಕ್ಕಮಗಳೂರು (ಜ: 24-11-1958) ಎಂ.ಎ. ಸಂಸ್ಕೃತ ಪದವೀಧರ. ಕೊಪ್ಪದ ಆಯುರ್ವೇದಿಕ್ ಕಾಲೇಜಿನಲ್ಲಿ ಪ್ರಾಧ್ಯಾಪಕ. ಕುಮಟಾ ತಾಲೂಕು ಕಲ್ಲಬ್ಬೆ ಗಾಳಮನೆಯವರು. ತಾಯಿ ಲಕ್ಷ್ಮಿ. ಪತ್ನಿ ಕವಿತಾ.

ಪ್ರಕಟಿತ ಕೃತಿ:

+ ಅಪರೀಕ್ಷಿತ ಕಾರಕಮ್-ಕನ್ನಡಾನುವಾದ 2012/115
(ಸಂಸ್ಕೃತ ಪಂಚತಂತ್ರದ ಭಾಗಶಃ ಅನುವಾದ)
+ ಬಿ.ಎ.ಎಂ.ಎಸ್. ಪ್ರಥಮ ವರ್ಷದ ಪಠ್ಯಕ್ಕೆ ಪೂರಕ ಕೃತಿ

(990) ಹೆಗಡೆ ಪಿ.ಎನ್. (ಶಂಭು), ಹೊನ್ನಾವರ (ಜ: 1-3-1946) ಬಿ.ಎಸ್ಸಿ., ಬಿ.ಎಡ್. ಪದವೀಧರ. ನಿವೃತ್ತ ಹೈಸ್ಕೂಲು ಮುಖ್ಯೋಪಾಧ್ಯಾಯ. ಹೆಸರು ಪರಮೇಶ್ವರ. ತಂದೆ ನಾಗಪ್ಪ ಹೆಗಡೆ, ವರ್ನಕೆರೆ. ತಾಯಿ ಗಣಪಿ. ಪತ್ನಿ ವಿಜಯಾ. **ಪ್ರಕಟಿತ ಕೃತಿ** : ಮಲೆನಾಡ ಮಲ್ಲಿಗೆ-ಕವನ ಸಂಕಲನ 1969/42

(991) ಹೆಗಡೆ ಪ್ರಕಾಶ, ಬೆಂಗಳೂರು (ಜ: 17-1-1965) ಸಿವಿಲ್ ಎಂಜಿನಿಯರಿಂಗ್ **ಡಿಪ್ಲೋಮಾ. ಎ.ಎಂ.ಆಯ್.ಈ. ಪದವೀಧರ. ಗುತ್ತಿಗೆದಾರ. ತಂದೆ ಗಣಪತಿ ಹೆಗಡೆ,** ದೇವಿಸರ, ಸಿದ್ದಾಪುರ. ತಾಯಿ ಸಾವಿತ್ರಿ. ಪತ್ನಿ ಆಶಾ.

ಪ್ರಕಟಿತ ಕೃತಿಗಳು :

1. ಇದರ ಹೆಸರು ಇದಲ್ಲ-ಲಲಿತ ಪ್ರಬಂಧ 2013/155
2. ಇದೇ ಇದರ ಹೆಸರು-ಲಲಿತ ಪ್ರಬಂಧ 2010/170
3. ಹೆಸರೇ ಬೇಡ-ಲಲಿತ ಪ್ರಬಂಧ 2009/176

(992) ಹೆಗಡೆ ಪ್ರಭಾಶಂಕರ (ಡಾ||) ಸಿದ್ದಾಪುರ (ಜ: 27-8-1946) ಎಂ.ಬಿ.ಬಿ.ಎಸ್. ಪದವೀಧರ. ನಿವೃತ್ತ ಸರಕಾರೀ ವೈದ್ಯ. ತಂದೆ ಗಣೇಶ ಹೆಗಡೆ ಕಿಲಾರ ಸಿದ್ದಾಪುರ (ಗ್ರಂಥಕರ್ತ). ತಾಯಿ ಗಣಪಿ. ಪತ್ನಿ ಸುನಂದಾ (ಗ್ರಂಥಕರ್ತೆ). **ಪ್ರಕಟಿತ ಕೃತಿ**: ಪದ್ಯ ವೈವಿಧ್ಯ-ಚುಟುಕು ಕವನಗಳು............................ 2012/100

(993) ಹೆಗಡೆ ಬುಳ್ಳಿ ಈಶ್ವರ, ಸಿದ್ದಾಪುರ (ಜ: 1-2-1926) ಡಿಪ್ಲೋಮಾ ಇನ್ ಕೆಮಿಕಲ್ ಸೈನ್ಸ್. ತಂದೆ ವೀರಪ್ಪ ಹೆಗಡೆ ಬುಳ್ಳಿ, ತ್ಯಾಗಲಿ, ಸಿದ್ದಾಪುರ. ತಾಯಿ ಸೀತಾ. ಪತ್ನಿ ಅನುಸೂಯಾ. **ಪ್ರಕಟಿತ ಕೃತಿ** :ಅನುಭವಾಮೃತ-ಕವನಗಳು 1999/23

(994) ಹೆಗಡೆ ಮಂಜುನಾಥ ಹೊಡ್ಲಮನೆ ಶಿರಸಿ (ಜ: 21-4-1958): ಪ್ರಾಥಮಿಕ ಶಿಕ್ಷಣ. ಕೃಷಿಕ. ದಾರುಶಿಲ್ಪಿ. ತಂದೆ ಶಾಂತಾರಾಮ. ತಾಯಿ ಶ್ರೀಮತಿ. ಪತ್ನಿ ಯಶೋದಾ. **ಪ್ರಕಟಿತ ಕೃತಿ:**

1. ಗೃಹಸಂಜೀವಿನಿ-ಮನೆಮದ್ದು 2015/105
2. ಗೋ ಸಂಜೀವಿನಿ
3. ಸಸ್ಯ ಸಂಜೀವಿನಿ
4. ಚರ್ಮ ಸಂಜೀವಿನಿ
5. ಮಕ್ಕಳಿಗೆ ಅಜ್ಜಿ ಹೇಳಿದ ಸಸ್ಯ ಸಂಜೀವಿನಿ

(995) ಹೆಗಡೆ ಮ.ಗ. ಪೇಟೇಸರ, ಸಿದ್ದಾಪುರ (ಜ: 13-5-1938) 4ನೇ ಇಯತ್ತೆ ಶಿಕ್ಷಣ. ಕೃಷಿಕ. ಹೆಸರು ಮಂಜುನಾಥ. ತಂದೆ ಗಣಪಯ್ಯ ಹೆಗಡೆ, ತಾಯಿ ಮೀನಾಕ್ಷಿ. ಪತ್ನಿ ಪಾರ್ವತಿ.

ಪ್ರಕಟಿತ ಕೃತಿಗಳು :

1. ಶ್ರೇಯೋಧರ್ಮ–ಮಕ್ಕಳಿಗಾಗಿ 2004/20
2. ಹಂಸವರ್ಣ ಧರ್ಮ.. 2004/38

(996) **ಹೆಗಡೆ ಮ.ಗೋ. ಬಂಕಿಕೊಡ್ಲು, ಕುಮಟಾ** (ಜ: 22–6–1948) ಬಿ.ಎಸ್ಸಿ., ಬಿ.ಎಡ್. ಪದವೀಧರ. ನಿವೃತ್ತ ಅಧ್ಯಾಪಕ ಆನಂದಾಶ್ರಮ ಪ್ರೌಢಶಾಲೆ, ಬಂಕಿಕೊಡ್ಲು. ತಂದೆ ಗೋವಿಂದ ಹೆಗಡೆ ಹೊಸಹೆರವಟ್ಟಾ, ಕುಮಟಾ. ತಾಯಿ ಲಕ್ಷ್ಮಿ. ಪತ್ನಿ ಸುಮತಿ. **ಪ್ರಕಟಿತ ಕೃತಿ** : ಜೀವನ ಕಲೆ–ಕವನಗಳು.. 1973/85

(997) **ಹೆಗಡೆ ಮಹಾದೇವ ಮತ್ತಳ್ಳಿ, ಕುಮಟಾ** (ಜ: 1–4–1939) ಏಳನೇ ಇಯತ್ತೆ ಶಿಕ್ಷಣ. ಕೃಷಿಕ. ತಂದೆ ತಿಮ್ಮಣ್ಣ ಹೆಗಡೆ, ಕೋಣಕೇರಿ, ಉಪ್ಪಿನಪಟ್ಟಣ, ಕುಮಟಾ. ತಾಯಿ ಪಾರ್ವತಿ. ಪತ್ನಿ ವತ್ಸಲಾ.

ಪ್ರಕಟಿತ ಕೃತಿಗಳು :

1. ಅಂಗಳ–ಕವನ ಸಂಕಲನ 1993/52
2. ಮನವೆನ್ನುವ ಹುಚ್ಚುಹೊಳೆ–ಕವನ ಸಂಕಲನ 2000/59
3. ಮಂಗಲ ಮಾಂಗಲ್ಯ–ಜಾನಪದ ಗೀತನಾಟಕ................................. 1988/84
4. ಯೋಚ್ನೆ–ಹವಿಗನ್ನಡ ಕವನ ಸಂಗ್ರಹ.. 1985/44
5. ರಂಗೋಲಿ–ಕವನಗಳು 1992/42
6. ಹೊತ್ಮೂಡ್ತು ಮೂಡ್ಲಲ್ಲಿ–ಹವಿಗನ್ನಡ ಕವನಗಳು.............................. 1987/54

(998) **ಹೆಗಡೆ ಮಹಾದೇವ ಹೊಲನಗದ್ದೆ ಕುಮಟಾ** (ಜ: 2–7–1934) ಎಂ.ಎ., ಬಿ.ಎಡ್. ಪದವೀಧರ. ನಿವೃತ್ತ ಮುಖ್ಯಾಧ್ಯಾಪಕ. ಕೃಷಿಕ. ತಂದೆ ಮಹಾಬಲೇಶ್ವರ ಹೆಗಡೆ ಹೊಲನಗದ್ದೆ. ತಾಯಿ ಪಾರ್ವತಿ. ಪತ್ನಿ ಲೀಲಾ.

ಪ್ರಕಟಿತ ಕೃತಿ:

ಶೇಕ್ಸ್‌ಪಿಯರನ 154 ಸುನೀತಗಳು ಪದ್ಯರೂಪದಲ್ಲಿ–ಅನುವಾದಿತ 2011/170

(999) **ಹೆಗಡೆ ಮೋಹನ ಗ. ಸಾಗರ** (ಜ: 2–3–1941) ಎಂ.ಎ., ಬಿ.ಎಡ್., ರಾಷ್ಟ್ರಭಾಷಾ ಪ್ರವೀಣ, ಡಿಪ್ಲೋಮಾ ಇನ್ ಇಂಡಾಲಜಿ ಪದವೀಧರ. ನಿವೃತ್ತ ಮುಖ್ಯೋಪಾಧ್ಯಾಯ–ಕೆಳದಿ ಪ್ರೌಢಶಾಲೆ. ನಾಣ್ಯ, ಅಂಚೆ ಚೀಟಿ, ಪತ್ರಿಕಾ ಸಂಗ್ರಹಕ. ತಂದೆ ಗಣಪತಿ ಹೆಗಡೆ ನೀಲೇಕಣಿ, ಶಿರಸಿ. ತಾಯಿ ಗೌರಿ (ಗ್ರಂಥಕರ್ತೆ) ಪತ್ನಿ ಇಂದಿರಾ.

ಪ್ರಕಟಿತ ಕೃತಿಗಳು :

1. ಕರ್ನಾಟಕ ಪತ್ರಿಕಾ ಇತಿಹಾಸ ಸಂಪುಟ 1 (ಸಹಕರ್ತೃ) 1999/60
2. ಕೆಳದಿಯ ಕತೆಗಳು .... (1)1996, (2)1998/50
3. ಸೂರಿ ಸೌರಭ (ಸಂಶೋಧನಾ ಗ್ರಂಥ) 2012/104
4. ಸಾಗರದಿಂದ ಕೇದಾರ–ಪ್ರವಾಸ ಕಥನ 2004/82

(1000) **ಹೆಗಡೆ ಮೋಹನ ಭಾಸ್ಕರ ಹೆರವಟ್ಟಾ ಕುಮಟಾ** (ಜ: 18–5–1967) ವಾಣಿಜ್ಯ ಪದವೀಧರ. ಸೆಲ್ಕೋ ಸೋಲಾರ ಕಂಪನಿಯ ಮುಖ್ಯಕಾರ್ಯ ನಿರ್ವಹಣಾಧಿಕಾರಿ. ಯಕ್ಷಗಾನ ಕಲಾವಿದ, ತಾಳಮದ್ದಲೆ ಅರ್ಥಗಾರ. ಸಾಂಸ್ಕೃತಿಕ, ಸಾಹಿತ್ಯಿಕ ಸಂಘಟಕ. ತಂದೆ ಭಾಸ್ಕರ ಹೆಗಡೆ ಕರ್ಕಿ, ಹೊನ್ನಾವರ. ತಾಯಿ ಪಾರ್ವತಿ. ಪತ್ನಿ ಉಷಾ.

ಪ್ರಕಟಿತ ಕೃತಿಗಳು:
1. ಇರುಳ ಬೆಡಗು–ಡಾ. ಹರೀಶ ಹಂದೆ ಪರಿಚಯ 2015/72
2. ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಶ್ರೀ ರಾಘವೇಶ್ವರ ಭಾರತೀಮಹಾಸ್ವಾಮಿಗಳವರು 2014/72

(1001) **ಹೆಗಡೆ ರಮೇಶ ಕೆರೆಕೋಣ ಹೊನ್ನಾವರ** (ಜ: 27–7–1966) ಎಂ.ಎ. ಪದವೀಧರ. ಪ್ರಾಥಮಿಕ ಶಾಲಾ ಶಿಕ್ಷಕ. ತಂದೆ ತಿಮ್ಮಣ್ಣ ಹೆಗಡೆ ಕೆರೆಕೋಣ. ತಾಯಿ ಸರಸ್ವತಿ. ಪತ್ನಿ ಶಾಂತಿ.
ಪ್ರಕಟಿತ ಕೃತಿಗಳು:
1. ಚಿಣ್ಣರ ಚಿತ್ತಾರ–ಮಕ್ಕಳ ಕವನಗಳು 2013/158
2. ಶೈಕ್ಷಣಿಕ ಚಿಂತನೆಗಳು–ವೈಚಾರಿಕ 2012/159

(1002) **ಹೆಗಡೆ ರಮೇಶ ಜಿ., ಶಿರಸಿ** (ಜ: 25–4–1978) ನಾಲ್ಕನೇ ಇಯತ್ತೆ ಶಿಕ್ಷಣ. ವಿಕಲ ಚೇತನ. ತಂದೆ ಜಿ.ಎಸ್. ಹೆಗಡೆ, ಗುಡೇಅಂಗಡಿ, ಕುಮಟಾ. ತಾಯಿ ಶಕುಂತಲಾ.
ಪ್ರಕಟಿತ ಕೃತಿಗಳು :
1. ಕಾವ್ಯಚಿಗುರು–ಕವನ ಸಂಕಲನ 2002/24
2. ಚಿಣ್ಣ–ಚಿಣ್ಣಾಟ–ಮಕ್ಕಳ ಕವನಗಳು 2006/64
3. ನೋವಿನಲಿ ನವಿಲುಗರಿ ಕನ್ನಡ ಗಝಲ್‌ಗಳು 2013/64
4. ಮನದಲ್ಲಿ ಮನೆಯ ಮಾಡಿ–ಕವನ ಸಂಕಲನ................................ 2004/50
5. ವಿವೇಚನೆ–ಕಾವ್ಯಾರ್ಥರೂಪ 2004/24
ಪ್ರಶಸ್ತಿ : ಶ್ರೀ ಶರಣ ಸುಹಾಸಿನಿಯರ ಬಳಗ ಹೊಸಪೇಟೆಯಿಂದ 2004

(1003) **ಹೆಗಡೆ ರಾಜಾರಾಮ (ಡಾ|) ಶಿವಮೊಗ್ಗ** (ಜ: 12–6–1958) ಎಂ.ಎ., ಪಿಎಚ್.ಡಿ. (ಪುರಾತತ್ವ ಶಾಸ್ತ್ರ). ಪ್ರಾಧ್ಯಾಪಕ ಮತ್ತು ಮುಖ್ಯಸ್ಥ–ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನ ಶಾಸ್ತ್ರ ವಿಭಾಗ, ಕುವೆಂಪು ವಿ.ವಿ. ತಂದೆ ರಾಮಪ್ಪ ಹೆಗಡೆ, ಐನಕೈ, ಕ್ಯಾದಗಿ, ಸಿದ್ದಾಪುರ. ಪತ್ನಿ ಡಾ| ಉಮಾ (ಗ್ರಂಥಕರ್ತೆ)
ಪ್ರಕಟಿತ ಕೃತಿಗಳು :
1. ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ (ಸಂಪಾದಿತ) 2002/180
2. ಗತಕಥನ (ಇತಿಹಾಸ ಕುರಿತು ಲೇಖನಗಳು) 2005/236
3. ಪೂರ್ವಾವಲೋಕನ : ಹೊಸಾಹಾತು ಪ್ರಜ್ಞೆ ಮತ್ತು ಸಾಂಸ್ಕೃತಿಕ ಅಧ್ಯಯನ
(ಅಂಗ್ರೇಜಿಯಿಂದ ಅನುವಾದ) ಸಹ ಅನುವಾದಕ
(ಇಂಗ್ಲಿಷ್ ಮೂಲ ಬಾಲಗಂಗಾಧರ) 2010/296
4. ಬಳ್ಳಿಗಾವೆ–ಸ್ಥಳಪರಿಚಯ 2012/50
5. ಬುದ್ಧಿ ಜೀವಿಗಳ ಮೂಢನಂಬಿಕೆಗಳು–ಕನ್ನಡ ನಿರೂಪಣೆ
(ಮೂಲ: ಪ್ರೊ. ಎಸ್.ಎನ್. ಬಾಲಗಂಗಾಧರ)........................... 2015/214
6. ಬೌದ್ಧಿಕ ದಾಸ್ಯದಲ್ಲಿ ಭಾರತ–ಕನ್ನಡ ನಿರೂಪಣೆ
(ಮೂಲ: ಪ್ರೊ. ಎಸ್.ಎನ್. ಬಾಲಗಂಗಾಧರ)........................... 2015/182
7. ಮಲೆ ಕರ್ನಾಟಕದ ಅರಸು ಮನೆತನಗಳು (ಸಂಪಾದಿತ) 2001/350
8. ರಾಜಪ್ರಭುತ್ವ ಮತ್ತು ಮತಧರ್ಮ.. 2001/50
9. ಲೌಕಿಕ ಅಲೌಕಿಕ (ಇತಿಹಾಸ ಕುರಿತ ಲೇಖನಗಳು) 2001/238

10. ಸ್ಮೃತಿ ವಿಸ್ಮೃತಿ–ಭಾರತೀಯ ಸಂಸ್ಕೃತಿ ಅನುವಾದಿತ 2010
(ಮೂಲ: Heathen in His Blindness by Balagangadhar)

11. Sunga Art-Cultural Reflection
(Research)................................2002/196

ಪ್ರಶಸ್ತಿ/ಗೌರವ :ಪುಸ್ತಕ ಬಹುಮಾನ–ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 2002

(1004) **ಹೆಗಡೆ ರಾಜು (ಡಾ|) ಶಿರಸಿ** (ಜ: 20–7–1964) ಎಂ.ಎ., ಪಿಎಚ್.ಡಿ. (ಕನ್ನಡ). ಉಪನ್ಯಾಸಕ–ಎಂ.ಎಂ. ಕಾಲೇಜು, ಶಿರಸಿ. ಹೆಸರು ರಾಜೇಂದ್ರ. ತಂದೆ ರಾಮ ಹೆಗಡೆ, ಮಾಗೋಡು, ಹೊನ್ನಾವರ. ತಾಯಿ ಮಹಾದೇವಿ. ಪತ್ನಿ ಸಂಗೀತಾ.

ಪ್ರಕಟಿತ ಕೃತಿಗಳು :

1. ಅಪ್ಪಚ್ಚಿ–ಕಥೆಗಳು 1998/100
2. ಗಿರೀಶ ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ.......................... 2007/236
3. ಪಾಯಸದ ಗಿಡ–ಕವನಗಳು.. 1993/52

(1005) **ಹೆಗಡೆ ರಾಜೇಂದ್ರ ಆರ್. ನೈಗಾರ, ಶಿರಸಿ** (ಜ: 2–7–1969) ಬಿ.ಎಸ್ಸಿ. (ಅರಣ್ಯಶಾಸ್ತ್ರ) ಪದವೀಧರ. ಕೃಷಿಕ, ಕೃಷಿ ಸಲಹೆಗಾರ. ತಂದೆ ರಾಮಚಂದ್ರ ಹೆಗಡೆ, ಮಗೆಗಾರ, ಸಿದ್ದಾಪುರ. ತಾಯಿ ಲೀಲಾವತಿ. ಪತ್ನಿ ಲತಾ.

ಪ್ರಕಟಿತ ಕೃತಿ :

ವೆನಿಲ್ಲಾ ಕೃಷಿ–ಒಂದು ದಾರಿದೀಪ (ಸಹಲೇಖಕ) .... (1)2001,(2)2004/30

ಪ್ರಶಸ್ತಿ/ಗೌರವ :

ಬಂಗಾರದ ಪದಕ–ಕೃಷಿ ವಿ.ವಿ.ಯಿಂದ–ಪದವಿಯಲ್ಲಿ ಪ್ರಥಮ ಸ್ಥಾನಕ್ಕಾಗಿ 1990

(1006) **ಹೆಗಡೆ ರಾಮಚಂದ್ರ, ತಂಗಾರಮನೆ, ಸಿದ್ದಾಪುರ** (ಜ: 17–6–1967) ಎಸ್.ಎಸ್.ಎಲ್.ಸಿ. ಮತ್ತು ಸಂಗೀತ ವಿದ್ವಾನ್. ಕೃಷಿಕ, ಸಂಗೀತ ಶಿಕ್ಷಕ. ತಂದೆ ಉಮಾಕಾಂತ ಹೆಗಡೆ, ತಾಯಿ ಭಾಗೀರಥಿ. ಪತ್ನಿ ರಾಜೇಶ್ವರಿ.

ಪ್ರಕಟಿತ ಕೃತಿಗಳು :

1. ಸದ್ಗುರು ಭಜನಗಂಗಾ ಭಾಗ 1.. 1993/85
2. ಸದ್ಗುರು ಭಜನಗಂಗಾ ಭಾಗ 2 ....2004/96

(1007) **ಹೆಗಡೆ ರಾಮಚಂದ್ರ ನಾರಾಯಣ, ಬೆಂಗಳೂರು** (ಜ: 24–5–1960) ಬ್ಯಾಂಕಿಂಗ್‌ನಲ್ಲಿ ಡಿಪ್ಲೋಮಾ ಪದವೀಧರ. ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗಿ. ತಂದೆ ನಾರಾಯಣ ಹೆಗಡೆ, ಜಮ್ಮನಕೊಡ್ಲು, ಹಡಿನಬಾಳ, ಹೊನ್ನಾವರ. ತಾಯಿ ಅಹಲ್ಯಾ. ಪತ್ನಿ ಅನ್ನಪೂರ್ಣಾ.

ಪ್ರಕಟಿತ ಕೃತಿಗಳು :

1. ಶ್ರೀ ರಾಮಾನಂದ ಅಷ್ಟೋತ್ತರ ....
2. ಸದ್ಗುರು ಶ್ರೀ ರಾಮಾನಂದ ಸಹಸ್ರನಾಮ ಸ್ತೋತ್ರಂ 2003/37

(1008) **ಹೆಗಡೆ ಲಕ್ಷ್ಮೀಕಾಂತ, ಬೆಂಗಳೂರು** (ಜ: 10–2–944) ಬಿ.ಇ. ಪದವೀಧರ. ನಿವೃತ್ತ ಎಂಜಿನಿಯರ–ಮೈಕೋ ಕಂಪನಿ. ತಂದೆ ಶಂಕರ ಹೆಗಡೆ, ಹಸರಗೋಡ, ಸಿದ್ದಾಪುರ. ತಾಯಿ ಸರ್ವೇಶ್ವರಿ. ಪತ್ನಿ ಗಂಗಾ.

ಪ್ರಕಟಿತ ಕೃತಿಗಳು : ಅ. ಅಂಗ್ರೇಜಿಯಿಂದ ಕನ್ನಡಕ್ಕೆ ಅನುವಾದಿತ

1.+ ಅಥರ್ವವೇದ ಕಾಂಡ 1 ರಿಂದ 4 .... 2015/305
2.+ ಅಥರ್ವವೇದ ಕಾಂಡ 5 ರಿಂದ 7 .... 2015/355
3.+ ಅಥರ್ವವೇದ ಕಾಂಡ 8 ರಿಂದ 10 .... 2015/300
4.+ ಅಥರ್ವವೇದ ಕಾಂಡ 11 ರಿಂದ 14 .... 2015/332
5.+ ಅಥರ್ವವೇದ ಕಾಂಡ 15 ರಿಂದ 19 .... 2015/325
6.+ ಅಥರ್ವವೇದ ಕಾಂಡ 20 .... 2015/335
7. ಅಧ್ಯಾತ್ಮ ಜೀವನಕ್ಕೆ ದಾರಿ (ಮೂಲ: ಶ್ರೀ ಅರವಿಂದರು) 2010/57
8. ಅಧ್ಯಾತ್ಮ ಜೀವನ ಮಾರ್ಗದರ್ಶನ (ಮೂಲ: ಶ್ರೀ ಅರವಿಂದರು) 2011/57
9.+ ಋಗ್ವೇದ ಮಂಡಲ 1 ಭಾಗ-2 .... 2011/396
10.+ಋಗ್ವೇದ ಮಂಡಲ 6 .... 2015/340
11.+ಋಗ್ವೇದ ಮಂಡಲ 8 ಭಾಗ-1 ....2012/396
12.+ಋಗ್ವೇದ ಮಂಡಲ 8 ಭಾಗ-2 .... 2012/262
13.+ಋಗ್ವೇದ ಮಂಡಲ 10 ಭಾಗ-1 .... 2015/444
14.+ಋಗ್ವೇದ ಮಂಡಲ 10 ಭಾಗ-2 .... 2015/300
15.+ಋಗ್ವೇದ ಶಬ್ದಾರ್ಥ ವಿಚಾರ.. 2013/218
16. ಏಕಾಗ್ರತೆಯ ಸಾಧನೆ (ಮೂಲ: ಶ್ರೀಮಾತಾ) 2010/60
17. ಓದಿನಲ್ಲಿ ಮಿಂಚಿರಿ (ಮೂಲ: ಡಾ.ಜೆ.ಎನ್. ರೆಡ್ಡಿ) 2011/191
18. ಜಪ (ಮೂಲ: ಎಂ.ಪಿ. ಪಂಡಿತ) 2012/45
19. ಜೀವನ ರಹಸ್ಯ (ಮೂಲ: ಶ್ರೀ ಅರವಿಂದರು)............................... 2014/58
20. ತಂತ್ರದೀಪಿಕೆ (ಮೂಲ: ಎಂ.ಪಿ. ಪಂಡಿತ) 2011/96
21. ತಂತ್ರ ಸಾಧನೆಯ ಸೂತ್ರಗಳು (ಮೂಲ: ಎಂ.ಪಿ. ಪಂಡಿತ) 2012/50
22. ದೇವಮಾನವರು (ಮೂಲ: ಕಪಾಲಿ ಶಾಸ್ತ್ರಿ) 2010/64
23. ಧ್ಯಾನ (ಮೂಲ: ಎಂ.ಪಿ. ಪಂಡಿತ) 2012/75
24. ಪತ್ರದೀಪ್ತಿ (ಮೂಲ: ಶ್ರೀರಾಮಚಂದ್ರಜಿ) 2014/174
25. ಪುನರ್ಜನ್ಮ (ಮೂಲ: ಶ್ರೀ ಅರವಿಂದರು) 2010/60
26. ಭಾರತದಲ್ಲಿ ವಿಜ್ಞಾನ (ಮೂಲ: ಬಿ.ವಿ. ಸುಬ್ಬರಾಯಪ್ಪ) 2015/550
27. ಭಾರತ ಭಂಜನ
(ಮೂಲ: ರಾಜೀವ ಮಲ್ಹೋತ್ರಾ ಮತ್ತು ನೀಲಗಂಡನ್) 2014/705
28. ಮಧುಗೀತೆ-ಉಮರಖಯ್ಯಾಮರ ರುಬಾಯಿಯಾತ್‌ಗಳ
ಕಾವ್ಯಾನುವಾದ (ಮೂಲ: ಫ್ರಿಟ್ಸ್‌ಜಿರಾಲ್ಡ) 2010/136
29. ಯೋಗಪರಂಪರೆಗಳು (ಮೂಲ: ಎಂ.ಪಿ. ಪಂಡಿತ) 2012/171
30. ವಿಭಿನ್ನತೆ-ಸಂಕ್ಷಿಪ್ತರೂಪ (ಮೂಲ: ರಾಜೀವ ಮಲ್ಹೋತ್ರಾ) 2014/48
31. ವೇದಗಣಿತ (ಮೂಲ: ವಿ.ಜಿ. ಉಣಕಲ್‌ಕರ) 2013/167
32. ಶ್ರೀವಿದ್ಯಾ ಉಪಾಸನೆ (ಮೂಲ: ಎಸ್.ಕೆ. ರಾಮಚಂದ್ರರಾವ್) 2010/145
33. ಶ್ರೀ ಶಂಕರರು ಮತ್ತು ಅಧ್ಯಾಸಭಾಷ್ಯ
(ಮೂಲ: ಎಸ್.ಕೆ. ರಾಮಚಂದ್ರರಾವ್)...................................... 2014/130
34. ಸಹಜಮಾರ್ಗ ದರ್ಶನ (ಮೂಲ: ಶ್ರೀ ರಾಮಚಂದ್ರಜಿ) 2012/70
35.+ಸೃಷ್ಟಿಸೂಕ್ತಗಳು 2012/107

ಟಿಪ್ಪಣಿ: + ಈ 14 ಕೃತಿಗಳ ಮೂಲ ಡಾ. ಆರ್.ಎಲ್. ಕಶ್ಯಪ.
ಬ. ಇತರ ಅನುವಾದಗಳು
36. ಅನಂತಯಾತ್ರೆ – (ಹಿಂದಿ ಮೂಲ: ಶ್ರೀರಾಮಚಂದ್ರಜಿ) 2015/300
37. ಭಗವಂತನ ಕಲ್ಪನೆ ಮತ್ತು ಆತ್ಮಸಾಕ್ಷಾತ್ಕಾರ
(ಹಿಂದಿ ಮತ್ತು ಅಂಗ್ರೇಜೀ ಮೂಲ: ಶ್ರೀಪತಿ ಸರ್ನಾಡ್) 2013/398
38. Thus spake Ramchandraji (ಕನ್ನಡ ಮೂಲ: ಎಸ್.ಎ. ಸರ್ನಾಡ್) .... /75.
39. ಸಂದೇಶಗಳು (ಆಧ್ಯಾತ್ಮಿಕ, ರಾಜ ಯೋಗ)
40. ಸಹಜಮಾರ್ಗದೊಳಗೊಂದು ಇಣುಕುನೋಟ (ಆಧ್ಯಾತ್ಮಿಕ)
41. ತೈತ್ತಿರೀಯ ಆರಣ್ಯಕ,ಭಾಗ ೧
42. ಋಗ್ವೇದ ಮಂಡಲ೧೦,ಭಾಗ೩, (ಧಾರ್ಮಿಕ)
43. ಋಷಿಗಳು:ವೇದ ಮತ್ತು ಉಪನಿತ್ತುಗಳಲ್ಲಿ.
44. ಯಜ್ಞ (ಆಧ್ಯಾತ್ಮಿಕ)
45. ತೈತ್ತಿರೀಯ ಆರಣ್ಯಕ-ಭಾ.೨
46. Indian religious and philosophical literature:a classified prsentation
47. ಶ್ರೀಅರೋಬಿಂದೊ ಶತಮಾನದ ದಾಖಲೆ(ಆಧ್ಯಾತ್ಮಿಕ)
48. Chando Darshana: Life of Brahmarshi Daivarata
49. ಹಿಂದುತ್ವ-ಒಂದು ಗತಿಶೀಲ ಪ್ರತಿಕ್ರಿಯೆ
50. ಸಾಮ ವೇದ
51. Gitantaranga -part one. (philosophical)
52. Gtantaranga-Part -2
53. Gitantaranga-part-3
54. ತೈತ್ತಿರೀಯ ಬ್ರಾಹ್ಮಣ-ಭಾಗ.೧
55. ಭಾರತದ ಸಂವಿಧಾನ ರಚನಾ ಸಭೆಯ ಚರ್ಚೆಗಳು
56. ಆಧುನಿಕ ವಿಜ್ಞಾನ : ಸಮೀಕ್ಷೆ
57. ದಿವ್ಯಆದೇಶಗಳು ,ಸಂ-೨, ಭಾಗ-೧
58. ದಿವ್ಯಆದೇಶಗಳು, ಸಂ-೨ , ಭಾಗ -೨
59. ದಿವ್ಯ ಆದೇಶಗಳು,ಸಂ-೨, ಭಾ-೩
60. ಪತ್ರ-ಪ್ರಸಾದ, ಭಾಗ-೧
61. ಪತ್ರ-ಪ್ರಸಾದ,ಭಾಗ-೨
ಪ್ರಶಸ್ತಿ/ಗೌರವ:
ಶ್ರೀ ಟಿ.ವಿ. ಕಪಾಲಿಶಾಸ್ತ್ರಿ ಪ್ರಶಸ್ತಿ (From Sri Aurobindo Kapali Shastri Vedic Institute of Culture) 2012

(1009) **ಹೆಗಡೆ ಲಕ್ಷ್ಮೀಶ, ಬೆಂಗಳೂರು** (ಜ: 15–3–1966) ಬಿ.ಎ., ಸಿ.ಪಿ.ಎಡ್. ಡ್ರಾಯಿಂಗ್ ಆರ್ಟ್ ಮಾಸ್ಟರ್, ಯೋಗ ಡಿಪ್ಲೋಮಾ. ಹೈಸ್ಕೂಲು ಶಿಕ್ಷಕ. ತಂದೆ ತಿಮ್ಮಣ್ಣ ಹೆಗಡೆ ಹೊಸಾಕುಳ, ಹೊನ್ನಾವರ. ತಾಯಿ ಸೌಭದ್ರೆ. ಪತ್ನಿ ಲತಾ.
ಪ್ರಕಟಿತ ಕೃತಿ : ಶ್ರೀ ರಾಘವ ಹೃದಯ–ಭಕ್ತಿ ಕುಸುಮಾಂಜಲಿ
(ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳ ಕುರಿತು)...................................... 2000/44

(1010) **ಹೆಗಡೆ ಲಕ್ಷ್ಮೀಶ, ಸೋಂದಾ, ಶಿರಸಿ** (ಜ: 18–2–1984) ಎಂ.ಎ.(ಇತಿಹಾಸ), ಡಿಪ್ಲೋಮಾ ಇನ್ ಎಪಿಗ್ರಾಫಿ ಪದವೀಧರ. ಸ್ವರ್ಣವಲ್ಲಿ ಸಂಸ್ಥಾನದ ಶಿಕ್ಷಣ ಸಂಸ್ಥೆಗಳ ನಿರ್ದೇಶಕ. ತಂದೆ ರಾಮಚಂದ್ರ ಹೆಗಡೆ, ತಾಯಿ ಮಮತಾ, ಪತ್ನಿ ದಿವ್ಯಾ.
ಪ್ರಕಟಿತ ಕೃತಿಗಳು :
1. ಆ ಹೊತ್ತು ಈ ಹೊತ್ತಿಗೆ–ಉತ್ತರ ಕನ್ನಡ ಜಿಲ್ಲೆಯ ಚರಿತ್ರೆ 2013/215
2. ಯಕ್ಷಪರಂಪರೆ–ಉ.ಕ. ಜಿಲ್ಲೆಯ ಪ್ರಮುಖ ವೇಷಧಾರಿಗಳ
ಸಂಕ್ಷಿಪ್ತ ಪರಿಚಯ 2013/128
3. ಶಿರಸಿ ಶ್ರೀ ಮಹಾಗಣಪತಿ ದೇವಾಲಯದ ಚರಿತ್ರೆ 2014/35
4. ಶ್ರೀಕ್ಷೇತ್ರ ಪಂಚಲಿಂಗ ಚರಿತ್ರೆ 2013/22
5. ಶ್ರೀಕ್ಷೇತ್ರ ಮಂಜಗುಣಿ ಚರಿತ್ರೆ 2014/40
6. ಶ್ರೀಕ್ಷೇತ್ರ ಹೇರೂರು ಸಿದ್ಧಿವಿನಾಯಕ ದೇವಾಲಯದ ಚರಿತ್ರೆ 2014/30
7. ಸತ್ಯಸಾಧಕ–ದಿ. ಲಕ್ಷ್ಮಣ ಹೆಗಡೆ ಬಾಡಲಕೊಪ್ಪ ಸಂಸ್ಮರಣ ಕೃತಿ 2011/26
8. ಸೋಂದೆ–ಇತಿಹಾಸದ ಗುರುತು... 2008/40
9. Sonda-The Land of Monastery 10. ಸತ್ಯ ಸಾಧಕ 11. ಸುವಿಚಾರ (ಸಂಪಾದನೆ) 12. ಸೋಂದಾ ಇತಿಹಾಸ
13. ಯಕ್ಷಗಾನದಲ್ಲಿ ಪ್ರಾಂತೀಯ ಪ್ರಭೇದಗಳು 14. ಶಾಸನ ಲೋಕ 15. ನಮ್ಮ ನೆಲದ ಕಥೆ
ಪ್ರಶಸ್ತಿ/ಗೌರವ: ಬಸವರಾಜ ಕಟ್ಟಿಮನಿ ರಾಜ್ಯ ಯುವ ಪ್ರಶಸ್ತಿ 2013

(1011) **ಹೆಗಡೆ ವಿ.ಎನ್. (ಡಾ|) ಗೋಕರ್ಣ** (ಜ: 17–5–1952) ಎಂ.ಎ., ಪಿಎಚ್.ಡಿ., ಪದವೀಧರ. ಪ್ರಾಂಶುಪಾಲ–ಭದ್ರಕಾಳಿ ಸಂ.ಪ.ಪೂ. ಕಾಲೇಜು, ಗೋಕರ್ಣ. ಹೆಸರು

ವೆಂಕಟರಮಣ. ತಂದೆ ನರಸಿಂಹ ಹೆಗಡೆ, ಹಳವಳ್ಳಿ, ಅಂಕೋಲಾ. ತಾಯಿ ಯಮುನಾ. ಪತ್ನಿ ಗಂಗಾ.

ಪ್ರಕಟಿತ ಕೃತಿಗಳು :

1. ನೆಲಚಕ್ರ-ಕಥಾ ಸಂಗ್ರಹ 2005/112
2. ಬವಣೆಯ ಬದುಕು-ಜೀವನ ಚರಿತ್ರೆ 2004/72
3. ಮಹಾಮಹೋಪಾಧ್ಯಾಯ ಗೋಪಿನಾಥ ಕವಿರಾಜ-ಜೀವನ, ಸಾಧನೆ 2006

(1012) **ಹೆಗಡೆ ವಿ.ಎಸ್. ತಾರಖಂಡ ಸಿದ್ದಾಪುರ** (ಜ: 17-6-1966) ಹೈಸ್ಕೂಲು ಶಿಕ್ಷಣ. ಕೃಷಿಕ. ಹೆಸರು ವೆಂಕಟರಮಣ. ತಂದೆ ಶ್ರೀಪತಿ ಹೆಗಡೆ ತಾರಖಂಡ. ತಾಯಿ ಮಾದೇವಿ. ಪತ್ನಿ ವೀಣಾ.

ಪ್ರಕಟಿತ ಕೃತಿ: ಜ್ಞಾನ ಕಿರಣ-ಕವನ ಸಂಕಲನ....................................... 2013/48

(1013) **ಹೆಗಡೆ ವಿ. ಎಸ್. (ಡಾ|) ಧಾರವಾಡ** (ಜ: 28-7-1943) M.A. (Philosophy), Ph .D. ಪದವೀಧರ. ಕ.ವಿ.ವಿ.ಯಲ್ಲಿ ಗಾಂಧಿ ಅಧ್ಯಯನ ವಿಭಾಗದ ಮುಖ್ಯಸ್ಥ (ನಿವೃತ್ತ). ಹೆಸರು ವೆಂಕಟರಮಣ ಸುಬ್ರಾಯ ಹೆಗಡೆ, ಮುರೇಗಾರು, ಶಿರಸಿ. ತಾಯಿ ಪಾರ್ವತಿ. ಪತ್ನಿ ಅರುಂಧತಿ.

ಪ್ರಕಟಿತ ಕೃತಿಗಳು :

1. ಸ್ವಾವಲಂಬಿ ಹಳ್ಳಿಗಳು (ಪ್ರಚಾರೋಪನ್ಯಾಸಮಾಲೆ ಕೃತಿ) 1995/30
2. Gandhi's Philosophy of Law...1983/120

(1014) **ಹೆಗಡೆ ವಿ.ಎಸ್. ಶಿರಸಿ** (ಜ: 10-6-1943) ಬಿ.ಎಸ್ಸಿ., ಬಿ.ಎಡ್., ಬಿ.ಪಿ.ಎಡ್. **ಪದವೀಧರ. ನಿವೃತ್ತ ಉಪಪ್ರಾಂಶುಪಾಲ-ಸರಕಾರಿ ಮಾರಿಕಾಂಬಾ ಪ.ಪೂ. ಕಾಲೇಜು,** ಶಿರಸಿ. ಹೆಸರು ವೆಂಕಟರಮಣ. ತಂದೆ ಸುಬ್ರಾಯ ಹೆಗಡೆ, ಬೊಪ್ಪನ ಕೇರಿ, ಕ್ಯಾದಗಿ, ಸಿದ್ದಾಪುರ. ತಾಯಿ ಗಣಪಮ್ಮ. ಪತ್ನಿ ಗೌರಿ.

ಪ್ರಕಟಿತ ಕೃತಿ:ಸ್ವಾತಂತ್ರ್ಯ ಚಳವಳಿಯ ಕರಪತ್ರಗಳು-ಸಂಗ್ರಹಿತ 2005/371

(1015) **ಹೆಗಡೆ ವಿಜಯೇಂದ್ರ ಎಂ. ಶಿರಸಿ** (ಜ: 21-2-1965) ಎಂ.ಎಸ್ಸಿ.(ಕೃಷಿ) ಶಿರಸಿಯ ಡಾ| ಆರ್. ಕೆ. ಹೆಗಡೆ, ಸ್ಮರಣಾರ್ಥ ಕೃಷಿ ಸಂಶೋಧನಾ ಕೇಂದ್ರದಲ್ಲಿ ವಿಜ್ಞಾನಿ. ತಂದೆ ಮಹಾಬಲೇಶ್ವರ ಹೆಗಡೆ, ಸಿಂಗನಮನೆ, ಶಿರಸಿ. ತಾಯಿ ಸುಲೋಚನಾ. ಪತ್ನಿ ಭಾರತಿ.

ಪ್ರಕಟಿತ ಕೃತಿಗಳು :

1. ತೋಟಗಾರಿಕೆ ಮಾರ್ಗದರ್ಶಿ (ಸಹಲೇಖಕ)............................. (3)2002/32
2. ವೆನಿಲ್ಲಾ ಕೃಷಿ-ಒಂದು ದಾರಿದೀಪ... 2004/30

(1016) **ಹೆಗಡೆ ವಿ.ಟಿ. ದೇವಗುಡಿ ಶಿರಸಿ** (ಜ: 11-12-1951): ಹೈಸ್ಕೂಲು ಶಿಕ್ಷಣ. ಕೃಷಿಕ. ಹೆಸರು ವಿಶ್ವೇಶ್ವರ. ತಂದೆ ತಿಮ್ಮಯ್ಯ ಹೆಗಡೆ ದೇವಗುಡಿ. ತಾಯಿ ಗಂಗಾ. ಪತ್ನಿ ಅನ್ನಪೂರ್ಣಾ.

ಪ್ರಕಟಿತ ಕೃತಿ: ಚುಟುಕು-ಚುರಮುರಿ : ಚುಟುಕುಗಳು......................... 2013/200

(1017) **ಹೆಗಡೆ ವಿ.ಡಿ. (ಡಾ|) ಮೈಸೂರು** (ಜ: 1-6-1948) ಪಿಎಚ್.ಡಿ. (ಹಿಂದಿ), ಸಂಸ್ಕೃತ ವಿದ್ವಾನ್ ಪದವೀಧರ. ನಿವೃತ್ತ ಪ್ರಾಧ್ಯಾಪಕ ಮತ್ತು ಅಧ್ಯಕ್ಷ ಹಿಂದೀ ವಿಭಾಗ ಮೈಸೂರು ವಿ.ವಿ. ತಂದೆ ದೇವರು ಹೆಗಡೆ, ಆಲ್ಮನೆ, ಶಿರಸಿ. ತಾಯಿ ಕಾವೇರಿ. ಪತ್ನಿ ಸವಿತಾ.

ಪ್ರಕಟಿತ ಕೃತಿಗಳು :

1. ಆಸ್ಥಾ ಔರ ಅಲೋಚನಾ-ವಿಮರ್ಶೆ .... (1)1995,(2)1997/128
2. ಕಾವ್ಯಶಾಸ್ತ್ರ ವಿನೋದ : (ಸಂಸ್ಕೃತ-ವಿಮರ್ಶೆ) 1998/100
3. ಗುರುನಾನಕ (ಕನ್ನಡ) 1984/20
4. ಜಿಜ್ಞಾಸಾ ಕೆ ಕ್ಷಣ-ಸಂಶೋಧನೆ 2002/80
5. ಭಾರತೀಯ ಸಂಸ್ಕೃತಿ 2002/16
6. ಮನುವಿನ ಕತೆ 1986/20
7. ಮಹಾಕವಿ ಕಾಳಿದಾಸ ಮತ್ತು ಅವನ ಕೃತಿಗಳು 1986/30
8. ಯಶವಂತ ಚಿತ್ತಾಲ 2007/56

9. ಸಮೀಪ–ಸಾಹಿತ್ಯ ವಿಮರ್ಶೆ 1998/120
10. ಹಿಂದೀ ಲಿಂಗಾನುಶಾಸನ–ಸಂಶೋಧನೆ 1989/500
11. ಹಿಂದೀಕೀ ಲಿಂಗ ಪ್ರಕ್ರಿಯಾ–ವ್ಯಾಕರಣ 2001/176
12. Grammarians' view of perception
and other issues-Research..2002/80

ಪ್ರಶಸ್ತಿ/ಗೌರವ :

1. Computer Society of Indiaದಲ್ಲಿ ಸಂಪನ್ಮೂಲ ವ್ಯಕ್ತಿ 1986
2. ರಾಷ್ಟ್ರ ಪ್ರಶಸ್ತಿ–ಹಿಂದಿಯೇತರ ಭಾಷಿಕ ಹಿಂದೀ ಲೇಖಕರಾಗಿದ್ದರಿಂದ 1996
3. ಹಿಂದೀ ಭವನ ಮೈಸೂರಿನಿಂದ ಸನ್ಮಾನ 1998
4. ಉತ್ತರ ಪ್ರದೇಶದ ಅವಧ ಸಾಹಿತ್ಯ ಸಮಿತಿಯಿಂದ
'ಹಿಂದೀ ಗೌರವ ಸಮ್ಮಾನ್' 2007
5. ಉತ್ತರ ಪ್ರದೇಶದ ಹಿಂದೀ ಸಂಸ್ಥಾನದ ಪ್ರತಿಷ್ಠಿತ ರಾಷ್ಟ್ರಪ್ರಶಸ್ತಿ
'ಸೌಹಾರ್ದ ಸಮ್ಮಾನ್' 2008
6. ಸೋಂದಾ ಸ್ವರ್ಣವಲ್ಲೀ ಸಂಸ್ಥಾನದಿಂದ
'ವಿವಿಧ ವಾಣೀ ವಿಶಾರದ' ಬಿರುದು 2008
7. ಭಾರತ ಸರಕಾರದ ಕೇಂದ್ರೀಯ ಹಿಂದೀ
ಸಂಸ್ಥಾನದಿಂದ 'ಗಂಗಾಶರಣ ಸಿಂಹ ಪುರಸ್ಕಾರ' 2014

(1018) **ಹೆಗಡೆ ವಿನಾಯಕ ನೆಬ್ಬೂರು, ಶಿರಸಿ** (ಜ: 29–10–1970) ಕೃಷಿಕ. ತಾಳಮದ್ದಲೆ ಅರ್ಥಗಾರ. ತಂದೆ ವೆಂಕಟರಮಣ, ತಾಯಿ ಗೌರಿ. ಪತ್ನಿ ಸುವರ್ಣಾ.
ಪ್ರಕಟಿತ ಕೃತಿ : ಗಪ್ಪಜ್ಜನ ಪ್ರಲಾಪ–ಯಕ್ಷಗಾನ ಪ್ರಸಂಗ..................................1999/9

(1019) **ಹೆಗಡೆ ವೆಂಕಟರಮಣ ಕೃಷ್ಣಯ್ಯ, ಗೋಳಗೋಡು, ಸಿದ್ದಾಪುರ** (ಜ: 10–12–1930) ಏಳನೇ ಇಯತ್ತೆ ಶಿಕ್ಷಣ ಕೃಷಿಕ. ತಂದೆ ಕೃಷ್ಣಯ್ಯ ಹೆಗಡೆ.

ಪ್ರಕಟಿತ ಕೃತಿಗಳು :

1. ಗಜಾನನ ಅವತಾರ–ನಾಟಕ 1951/55
2. ಚುಟುಕು ಚಮ್ಮಟಗೆ 2004/68
3. ಚುಟುಕು ಚಿಂತನ 2002/72
4. ಪ್ರಾರ್ಥನೆಗಳು ಹಾಗೂ ದಿವ್ಯಕುಸುಮಗಳು 2008/22

(1020) **ಹೆಗಡೆ ವೆಂಕಟರಮಣ (ಡಾ।), ಶಿರಸಿ** (ಜ: 6–5–1977) ಃಓಜಖ-ಪ್ರಕೃತಿ ಮತ್ತು ಯೋಗ ಚಿಕಿತ್ಸಾ ಪದ್ಧತಿಯಲ್ಲಿ ಪದವೀಧರ. ಶಿರಸಿಯ ನಿಸರ್ಗ ಚಿಕಿತ್ಸಾಲಯ ಸಂಸ್ಥಾಪಕ, ವೃತ್ತಿಪರ ವೈದ್ಯ. ತಂದೆ ನಾರಾಯಣ ಹೆಗಡೆ, ಧೋರಣಗಿರಿ, ಶಿರಸಿ. ತಾಯಿ ಭವಾನಿ. ಪತ್ನಿ ಸಂಗೀತಾ.

ಪ್ರಕಟಿತ ಕೃತಿಗಳು :

1. ಏನಿದು ಪ್ರಕೃತಿ ಚಿಕಿತ್ಸೆ .... (1)2005,(4)2008/102
2. ನಿಸರ್ಗ ಚಿಕಿತ್ಸೆಯಿಂದ ಪರಿಪೂರ್ಣ ಆರೋಗ್ಯ ......(1)2008,(2)2010/56
3. ಮಹಿಳೆಯರಿಗಾಗಿ ನಿಸರ್ಗ ಚಿಕಿತ್ಸೆ ಮತ್ತು ಯೋಗ (ಸಹಲೇಖಕ) . 2010/100
4. ಶಾಲಾಮಕ್ಕಳಗಾಗಿ ಯೋಗ ಹಾಗೂ ಪ್ರಕೃತಿ ಚಿಕಿತ್ಸೆಗಳು (ಸಹಲೇಖಕ) 2009/72

ಟಿಪ್ಪಣಿ : ಆರೋಗ್ಯಕ್ಕಾಗಿ ಪಂಚತಂತ್ರಗಳು, ನಿತ್ಯ ಜೀವನದಲ್ಲಿ ಯೋಗ, ಮರಳಿ

ಪ್ರಕೃತಿಗೆ, ಶಾಲಾ ಮಕ್ಕಳಿಗಾಗಿ ಯೋಗ (ಕನ್ನಡ/ಅಂಗ್ರೇಜೀ), ಮಧುಮೇಹ ಹೀಗೆ 5 ಸಿ.ಡಿ. ಗಳನ್ನು ಹೊರತಂದಿದ್ದಾರೆ.

ಪ್ರಶಸ್ತಿ/ಗೌರವ :

1. 'Noble Man' ಪ್ರಶಸ್ತಿ 2008
2. 'ಆರ್ಯಭಟ' ಪ್ರಶಸ್ತಿ 2009

(1021) **ಹೆಗಡೆ ವೆಂಕಟಾಚಲ (ಡಾ.) ದೆಹಲಿ** (ಜ: 31-1-1960) ಬಿ.ಕಾಂ., ಎಲ್.ಎಲ್.ಎಂ., ಪಿಎಚ್.ಡಿ. ಪದವೀಧರ. ದೆಹಲಿ ಜವಾಹರಲಾಲ ನೆಹರು ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಕಾನೂನು-ಸಹಪ್ರಾಧ್ಯಾಪಕ. ತಂದೆ ಗಜಾನನ ಹೆಗಡೆ, ಹುಳಗೋಳ, ಶಿರಸಿ-ಗ್ರಂಥಕರ್ತ. ತಾಯಿ ರಾಧಾ. ಪತ್ನಿ ರೂಪಾ.

ಪ್ರಕಟಿತ ಕೃತಿ : ದೌಲ ಧಾರ-ಪ್ರವಾಸ ಸಾಹಿತ್ಯ 2003/100

(1022) **ಹೆಗಡೆ ಶಂಕರ ಜಿ., ಬೆಂಗಳೂರು** (ಜ: 23-7-1977) ಬಿ.ಎಸ್ಸಿ. ಪದವೀಧರ. ಜ್ಯೋತಿಷಿ. ತಂದೆ ಗಣೇಶ ಹೆಗಡೆ, ಗುಮ್ಮೇಕೇರಿ, ಹೊನ್ನಾವರ. ತಾಯಿ ಪಾರ್ವತಿ. ಪತ್ನಿ ರಂಜನಾ.

ಪ್ರಕಟಿತ ಕೃತಿಗಳು :

1. ಜೈಮಿನಿ ಚರದಶ-ಜ್ಯೋತಿಷ್ಯ ಶಾಸ್ತ್ರ ಅನುವಾದ
   (ಮೂಲ: ಕೆ.ಎನ್. ರಾವ್) .... (1)2008, (2)2010/120
2. ಲಕ್ಷ್ಮೀಕುಬೇರ ಆರಾಧನೆ 2001/40

(1023) **ಹೆಗಡೆ ಶಾಂತಾರಾಮ, ಬೆಳಗಾವಿ** (ಜ: 1-6-1952) ಎಂ.ಎಸ್ಸಿ.(ಎ.ಎಂ), ಎಂ.ಎಸ್ಸಿ.(ಐ.ಎಂ) ಪದವೀಧರ. ಗಣಿತ ಉಪನ್ಯಾಸಕ-ಜೆ.ಎಸ್.ಎಸ್. ಕಾಲೇಜು, ಬೆಳಗಾವಿ. ತಂದೆ ಸೂರ್ಯನಾರಾಯಣ ಹೆಗಡೆ, ದೇವರಕೇರಿ, ಶಿರಸಿ. ತಾಯಿ ಸರಸ್ವತಿ. ಪತ್ನಿ ವೀಣಾ.

ಪ್ರಕಟಿತ ಕೃತಿಗಳು :

1. ಅಂತರಾಳ-ಕವನ ಸಂಕಲನ 1982/70
2. ದಿಬ್ಬ-ಕವನ ಸಂಕಲನ.. 2007/70
3. Mathematical Modelling

ಪ್ರಶಸ್ತಿ/ಗೌರವ : ಎಂ.ಎಂ. ಮಮದಾಪುರ ಪ್ರಶಸ್ತಿ 2007

(1024) **ಹೆಗಡೆ ಶಿವರಾಮ, ಕುಮಟಾ** (ಜ: 6-12-1973) ಪಿ.ಯು.ಸಿ. ಶಿಕ್ಷಣ. ವ್ಯಾಪಾರಿ. ತಂದೆ ಗಣಪತಿ ಹೆಗಡೆ, ಕುಮಟಾ. ತಾಯಿ ಲಕ್ಷ್ಮಿ.

ಪ್ರಕಟಿತ ಕೃತಿ : ಯಕ್ಷನಟ ಸಾಮ್ರಾಟ ಚಿಟ್ಟಾಣಿ ರಾಮಚಂದ್ರ ಹೆಗಡೆ 1995/70

(1025) **ಹೆಗಡೆ ಶ್ರೀಧರ ಆರ್. ಮಡಿಕೇರಿ** (ಜ: 4-3-1970) ಎಂ.ಎ., ಪಿಎಚ್.ಡಿ., ಅನುವಾದ ಡಿಪ್ಲೋಮಾ ಪದವೀಧರ. ಮುಖ್ಯಸ್ಥ-ಹಿಂದೀ ವಿಭಾಗ ಫೀಲ್ಡ್ ಮಾರ್ಶಲ್ ಜನರಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ. ತಂದೆ ರಮಾಕಾಂತ ಹೆಗಡೆ, ಗುಡೇಅಂಗಡಿ, ಕುಮಟಾ. ತಾಯಿ ಸಾವಿತ್ರಿ. ಪತ್ನಿ ನೀತಾ.

ಪ್ರಕಟಿತ ಕೃತಿಗಳು : (43)

1. ಎಸಳುಗಳು : ಕೊಡಗು ಜಿಲ್ಲೆಯ ಲೇಖಕರ ಕಥಾ ಸಂಕಲನ
   (ಸಂಪಾದಿತ) 2010/76

2. ಕನ್ನಡ ಮತ್ತು ಹಿಂದಿ ಭಕ್ತಿ ಪರಂಪರೆ 2008/76
3. ಕನ್ನಡದಲ್ಲಿ ಸಾಮಾಜಿಕ ನಾಟಕಗಳು..2010/96
4. ಕನ್ನಡ ರಂಗಭೂಮಿ 2011/58
5. ಕಾಲಪುರುಷ-ವ್ಯಕ್ತಿಚಿತ್ರಗಳು 2012/150
6. ಕುವೆಂಪು : ಬದುಕು ಬರಹ 2006/56
7. ಕೊಡಗಿನಲ್ಲಿ ಸ್ವಾತಂತ್ರ್ಯ ಸಂಗ್ರಾಮ 2014/160
8. ಗಿರಿಚಂದನ-ಲೇಖನ ಸಂಗ್ರಹ (ಸಂಪಾದಿತ) 2011/80
9. ಗಿರಿಚಂದನ (ಸಂಪಾದಿತ) 2010/66
10. ದ.ರಾ. ಬೇಂದ್ರೆ : ಬದುಕು ಬರಹ..2006/56
11. ನಿರಂಜನ : ಬದುಕು ಬರಹ 2007/80
12. ನಿರಂಜನ-ಮಕ್ಕಳಿಗಾಗಿ 2013/64
13. ಪಂಜೆ ಮಂಗೇಶರಾಯರ ಸಮಗ್ರ ಕೃತಿಗಳು (ಸಂಪಾದಿತ) 2013/360
14. ನಿರೀಕ್ಷೆಯಲ್ಲಿ-ಕವನ ಸಂಗ್ರಹ 1998/96
15. ಪ್ರತೀಕಾರದ ತಿರುವು-ಕಾದಂಬರಿ 1989/90
16. ಭಾವಚಿತ್ತಾರ-ಕವನಸಂಕಲನ (ಸಂಪಾದಿತ) 2011/100
17. ಭಾವಚಿತ್ತಾರ (ಸಂಪಾದಿತ ಕವನ ಸಂಕಲನ) 2010/66
18. ಯಕ್ಷಗಾನ .... /24
19. ಯಶಪಾಲ : ಬದುಕು ಬರಹ 2007/74
20. 'ರಾಜಶೇಖರ ದೀಪ್ತಿ-ತುಲನಾತ್ಮಕ ಅಧ್ಯಯನ' ಅನುವಾದಿತ 2013/100
21. ರಾಷ್ಟ್ರಭಾಷೆ .... /24
22. ವ್ಯಾಸರಾಯ ಬಲ್ಲಾಳ-ಪರಿಚಯ 2012/50
23. ಶೇಣಿ ಗೋಪಾಲಕೃಷ್ಣ ಭಟ್ಟ-ಪರಿಚಯ 2012/50
24. ಸುಡುತ್ತಿರುವ ಬೇಸ್‌ಮೆಂಟ್‌ನಲ್ಲಿ-ಅನುವಾದಿತ ನಾಟಕ
(ಹಿಂದಿ ಮೂಲ: ವಿನೋದ ಕುಮಾರ) 2013/100

ಹಿಂದಿಯಲ್ಲಿ

1. 21 ವೀಂ ಸದೀಕಾ ಕಥಾ ಸಾಹಿತ್ಯ-ಸಂಪಾದಿತ 2014/260
2. ಅಕಾಲ ಉತ್ಸವ (ಸಂಪಾದಿತ) 2006/84
3. ಗವರ್ಮೆಂಟ್ ಬ್ರಾಹ್ಮಣ-ಅನುವಾದಿತ
(ಕನ್ನಡ ಮೂಲ: ಅರವಿಂದ ಮಾಲಗತ್ತಿ ಆತ್ಮಕಥೆ) 2015/160
4. ಚಂದ್ರಹಾಸ-ಅನುವಾದಿತ ನಾಟಕ (ಕನ್ನಡ ಮೂಲ-ಕುವೆಂಪು) ... 2015/100
5. ಜೀವನ ಔರ ಶಿಕ್ಷಣ (ಸಂಪಾದಿತ) 2006/122
6. ತಟೀಯ ಸಾಗರಕೆ ಭಾರ್ಗವ ಡಾ। ಶಿವರಾಮ ಕಾರಂತ-
ಜೀವನ ಏವಂ ಸಾಧನಾ (ರಾಷ್ಟ್ರಪ್ರಶಸ್ತಿ ಪುರಸ್ಕೃತ ಕೃತಿ) 2005/148
7. ನಂಗಾ ಸತ್ಯ-ನಾಟಕ ವಿಮರ್ಶೆ 2014/90
8. ನಾಟಕ : ಆಜ ತಕ (ಸಂಪಾದಿತ) 2005/122
9. ನಾಟಕ ಬಹುರಂಗಿ (ಸಂಪಾದಿತ) 2005/129
10. ಬಲಿದಾನ-ಅನುವಾದಿತ ನಾಟಕ (ಕನ್ನಡ ಮೂಲ-ಕುವೆಂಪು) 2015/50
11. ಭಾರತೀಯ ಕಾವ್ಯಮೀಮಾಂಸಾ 2001/150
12. ಭಾಷಾಕಾ ಇತಿಹಾಸ 2015/120

13. ಭಾಷಾ : ಲೋಕೋಪಯೋಗೀ ಔರ ಭಾವೋಪಯೋಗಿ-ಅನುವಾದಿತ
(ಮೂಲ: ಕುವೆಂಪು) 2015/50
14. ಭಾಷಾ ವಿಜ್ಞಾನ 2015/120
15. ಯಶಪಾಲ ಔರ ನಿರಂಜನಕಾ ಉಪನ್ಯಾಸ ಸಾಹಿತ್ಯ 2003/246
16. ರಸೋ ವೈ ಸಃ – ಅನುವಾದಿತ (ಮೂಲ: ಕುವೆಂಪು) 2015/70
17. ಲಹರೋಂಕೆ ರಾಜಹಂಸ – ನಾಟಕ ವಿಮರ್ಶೆ 2014/90
18. ವಿಜ್ಞಾನ ಔರ ಯುಗ (ಸಂಪಾದಿತ) 2006/92
19. ಸಾಮಯಿಕ ಏಕಾಂಕಿ (ಸಂಪಾದಿತ) 2005/122
ಟಿಪ್ಪಣಿ: ಕರ್ಣಾಟ ಭಾರತ ಕಥಾಮಂಜರಿ (ಕುಮಾರ ವ್ಯಾಸ ಭಾರತದ ಅನುವಾದ) ಕೃತಿಯಲ್ಲಿ ಕರ್ಣಪರ್ವದ ಅನುವಾದಕ.
ಪ್ರಶಸ್ತಿ/ಗೌರವ :
1. ಹಿಂದೀ ಮಾರ್ತಾಂಡ-ರಾಷ್ಟ್ರೀಯ ಪುರಸ್ಕಾರ
2. 'ಯಕ್ಷಗಾನ'ಕ್ಕೆ ರಾಜ್ಯ ಮಟ್ಟದ ಪುರಸ್ಕಾರ
3. ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿ.

(1026) **ಹೆಗಡೆ ಶ್ರೀಧರ ಗಣೇಶ ಕಿಲಾರ ಸಿದ್ದಾಪುರ** (ಜ: 30-1-1930) ಪ್ರಾಥಮಿಕ ಶಿಕ್ಷಣ. ಕೃಷಿಕ. ಸಂಶೋಧಕ. ಸಮಾಜ ಸೇವಕ. ತಂದೆ ಗಣೇಶ ಹೆಗಡೆ ಕಿಲಾರ (ಗ್ರಂಥಕರ್ತ). ತಾಯಿ ಗಣಪಮ್ಮ. ಪತ್ನಿ ಶಾಂತಾ.
ಪ್ರಕಟಿತ ಕೃತಿ:
ಕರ್ಮಭೂಮಿ-ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವಿಮರ್ಶೆ 2013/106
ಪ್ರಶಸ್ತಿ/ಗೌರವ: ಹೊಸದಿಗಂತ ಪತ್ರಿಕೆಯಿಂದ ಸಾಮಾಜಿಕ ಪ್ರಜ್ಞಾಪರ ಅಂಕಣ ಬರಹಗಳಿಗಾಗಿ ಸನ್ಮಾನ 2013

(1027) **ಹೆಗಡೆ ಶ್ರೀಧರ ಬಾಳೆಕುಳ, ಸಿದ್ದಾಪುರ** (ಜ: 29-1-1952) ಬಿ.ಕಾಂ. ಪದವೀಧರ. ಕರ್ನಾಟಕ ವಿದ್ಯುನ್ನಿಗಮದಲ್ಲಿ ಉದ್ಯೋಗಿ. ತಂದೆ ನಾರಾಯಣ ಹೆಗಡೆ, ಬಾಳೆಕುಳ, ಸಿದ್ದಾಪುರ. ತಾಯಿ ಪಾರ್ವತಿ. ಪತ್ನಿ ಸಾವಿತ್ರಿ. **ಪ್ರಕಟಿತ ಕೃತಿ** : ಅಪೂರ್ಣ-ಕವನಗಳು 1989/40

(1028) **ಹೆಗಡೆ ಶ್ರೀಧರ ಭದ್ರನ್ (ಡಾ।) ಧಾರವಾಡ** (ಜ: 1-11-1972) ಎಂ.ಎ., ಪಿಎಚ್.ಡಿ. (ಕನ್ನಡ) ಜೈನಶಾಸ್ತ್ರ, ಪ್ರಾಚ್ಯಲೇಖನ, ಬಸವ ಹಾಗೂ ಭಾಷಾಂತರ ಅಧ್ಯಯನಗಳಲ್ಲಿ ಸ್ನಾತಕೋತ್ತರ ಡಿಪ್ಲೋಮಾ ಪದವೀಧರ. ಉಪನ್ಯಾಸಕ ಸ.ಪ.ಪೂ. ಕಾಲೇಜು, ಮೊರಬ, ನವಲಗುಂದ ತಾಲೂಕು. ತಂದೆ ವೆಂಕಟರಮಣ ಹೆಗಡೆ ಭದ್ರನ್, ಮೂರೂರು, ಕುಮಟಾ. ತಾಯಿ ಭಾಗೀರಥಿ. ಪತ್ನಿ ಪುಷ್ಪಾ.
ಪ್ರಕಟಿತ ಕೃತಿಗಳು :
1. ಅನುಕ್ರಮ-ಸಾಂಸ್ಕೃತಿಕ ಜಗತ್ತು: ಕೆಲ ವಿಮರ್ಶಾತ್ಮಕ ಪ್ರತಿಸ್ಪಂದನೆಗಳು2014/16
2. ಅನುರೂಪ-ಸಾಹಿತ್ಯ ವಿಮರ್ಶೆ 2015/180
3. ಅವಿರತ-ಸಾಹಿತ್ಯ ವಿಮರ್ಶಾ ಲೇಖನಗಳು 2009/180
4. ಆಧುನಿಕ ಕನ್ನಡ ಮಹಾಕಾವ್ಯಗಳು
(ಪಿಎಚ್.ಡಿ. ಪ್ರಬಂಧ) .... (1)2007,(2)2008/352

5. ಕಾವ್ಯದರ್ಶನ–ಆಧುನಿಕ ಕನ್ನಡ ಮಹಾಕಾವ್ಯಗಳ ಕುರಿತು ಬರಹಗಳು .... 2005 (2)2011/150
6. ಡಿ.ಆರ್. ನಾಗರಾಜ–ಜೀವನ ಚರಿತ್ರೆ 2015/120
7. ಲಿಖಿತ ಅಲಿಖಿತ–ಲೇಖನ ಸಂಗ್ರಹ .... 2006 (2)2011/120
8. ವಿಸ್ತರಣೆ–ವಿಮರ್ಶಾತ್ಮಕ ಲೇಖನಗಳು.. 2009/180
9. ಶತಮಾನ ಕಂಡ ಸಾಹಿತಿ–ಸ.ಸ. ಮಾಳವಾಡ (ಜೀವನ ಚರಿತ್ರೆ) ... 2012/120
10. ಸಾರೂಪ್ಯ–ಜೈನ ಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸ ಪ್ರಬಂಧಗಳು...2011/150

ಸಂಪಾದಿತ

1. ಮನೋಹರ ಗ್ರಂಥಮಾಲೆ ಪರಿಚಯ 2008/68
2. ಮಿಂಚಿನ ಬಳ್ಳಿ ಗ್ರಂಥಮಾಲೆ ಪರಿಚಯ 2008/50
3. ಸಂಪತ್ತಿನೊಳಗೊಬ್ಬ ಸಂತ–ಎಂ.ವೈ. ಘೋರ್ಪಡೆ ಜೀವನ ಸಾಧನೆ 2014
4. ಸಂಸ್ಕಾರ–ಅನಂತಮೂರ್ತಿಯವರ ಕಾದಂಬರಿಗೆ 50 ವರ್ಷ 2015/300

ಸಹಸಂಪಾದಿತ ಕೃತಿಗಳು

1. ಚೆನ್ನುಡಿ–ಡಿ.ವೀರೇಂದ್ರ ಹೆಗ್ಗಡೆಯವರ ಬರಹಗಳು 2009/300
2. ಜಿನವಾಣಿ–ಜೈನಸಾಹಿತ್ಯ, ಸಂಸ್ಕೃತಿ ಪ್ರಬಂಧಗಳು 2005/150
3. ಜಿನದೃಷ್ಟಿ : ಜೈನಧರ್ಮ ಸಂಸ್ಕೃತಿ ಬರಹ ಸಂಕಲನ 2004/128
4. ಜಿನವಾಣಿ–ಜೈನಸಾಹಿತ್ಯ, ಸಂಸ್ಕೃತಿ ಪ್ರಬಂಧಗಳು 2007/150
5. ವೀರೇಂದ್ರ ಹೆಗ್ಗಡೆ ಅರುವತ್ತರ ಸಂಭ್ರಮ–ನಡವಳಿ ಸಂಪುಟ........ 2010/120
6. ಸಾಹಿತ್ಯಿಕವಾದಗಳು–ಚಳವಳಿಗಳು 2006/260

ಪ್ರಶಸ್ತಿ/ಗೌರವ:

1. ಕರ್ನಾಟಕ ವಿಶ್ವವಿದ್ಯಾಲಯದಿಂದ 4 ಬಂಗಾರದ ಪದಕಗಳು– ಎಂ.ಎ.ದಲ್ಲಿ ಪ್ರಥಮ ಸ್ಥಾನಕ್ಕಾಗಿ
2. ದ.ರಾ. ಬೇಂದ್ರೆ ಸ್ಮಾರಕ ರಾಷ್ಟ್ರೀಯ ಟ್ರಸ್ಟ್‌ನಿಂದ 'ವಿಸ್ತರಣೆ' ಗೆ ಅತ್ಯುತ್ತಮ ವಿಮರ್ಶಾ ಕೃತಿ ಪುರಸ್ಕಾರ 2009
3. 'ಸಂಪತ್ತಿನೊಳಗೊಬ್ಬ ಸಂತ' ಕೃತಿಗೆ ಸಿದ್ದವನಹಳ್ಳಿ ಕೃಷ್ಣಶರ್ಮ ಪ್ರಶಸ್ತಿ 2015

(1029) **ಹೆಗಡೆ ಶ್ರೀಪತಿ ಸೀತಾರಾಮ ತಾರಖಂಡ, ಸಿದ್ದಾಪುರ** (ಜ: ಜನವರಿ 1930) ಹೈಸ್ಕೂಲು ವಿದ್ಯಾಭ್ಯಾಸ. ಕೃಷಿಕ. ತಂದೆ ಸೀತಾರಾಮ ಹೆಗಡೆ–ಗ್ರಂಥಕರ್ತ. ತಾಯಿ ಮಹಾದೇವಿ. ಪತ್ನಿ ಮಾದೇವಿ.

ಪ್ರಕಟಿತ ಕೃತಿಗಳು :

1. ಆದರ್ಶ ಶಿಕ್ಷಕ–ನಾಟಕ 1967/121
2. ಮಲತಾಯಿ ಅಥವಾ ಮೂರನೇ ಹೆಂಡತಿ–ನಾಟಕ .... /98

(1030) **ಹೆಗಡೆ ಶ್ರೀಪಾದ ಬೆಂಗಳೂರು** (ಜ: 27–8–1954) ಬಿ.ಕಾಂ., ಪಿ.ಜಿ.ಡಿ.ಎಚ್.ಆರ್.ಎಂ. ಪದವೀಧರ. ಕರ್ನಾಟಕ ವಿದ್ಯುತ್ ನಿಗಮದ ನಿವೃತ್ತ ಉದ್ಯೋಗಿ. ಸಾಮಾಜಿಕ ಸಂಘಟಕ. ತಂದೆ ಈಶ್ವರ ಹೆಗಡೆ ಗುಮ್ಮೆಕೇರಿ ಸಾಲಕೋಡ. ತಾಯಿ ಗೋಪಿ. ಪತ್ನಿ ಶಾಂತಾ.

ಪ್ರಕಟಿತ ಕೃತಿ: ಬೆಕ್ಕಿನ ಮೀಸೆ–ಕಥೆಗಳು 2014/120

ಪ್ರಶಸ್ತಿ/ಗೌರವ: 'ತಿಂಗಳು' ಮಾಸಪತ್ರಿಕೆ ಕಥಾಸ್ಪರ್ಧೆ ಬಹುಮಾನ 2011

(1031) **ಹೆಗಡೆ ಶ್ರೀಪಾದ ವಿ. ಮಗೇಗಾರು, ಸಿದ್ದಾಪುರ** (ಜ: 29-6-1952) ಬಿ.ಎ., ಬಿ.ಎಡ್. ಪದವೀಧರ. ಬಿದ್ರಕಾನ ಹೈಸ್ಕೂಲು ಮುಖ್ಯಾಧ್ಯಾಪಕ, ರಂಗಕರ್ಮಿ. ತಂದೆ ವಿಶ್ವೇಶ್ವರ ಹೆಗಡೆ, ಮಗೇಗಾರು ಸಿದ್ದಾಪುರ. ತಾಯಿ ಪಾರ್ವತಿ. ಪತ್ನಿ ರತ್ನಾ.

ಪ್ರಕಟಿತ ಕೃತಿಗಳು :

1. ಕಂಗಿನಂಗಳದಲ್ಲಿ-ನಾಟಕ... 2010/32
2. ಕಳೆದು ಹೋಗುವವರು-ನಾಟಕ 2013/48
3. ಕ್ರಾಂತಿಯ ಕಿಡಿ-ನಾಟಕ 2008/40
4. ದೇವಿಯ ದೀವಿಗೆ-ನಾಟಕ (ಭಾಗಶಃ ಹವಿಗನ್ನಡದಲ್ಲಿ) 1998/92
5. ಪುರ್‌ಪುರ್ ಗಿಡ್ಡ-ಮಕ್ಕಳ ನಾಟಕ 2010/40
6. ಸ್ವಾತಂತ್ರ್ಯ ಸಮರ ಸಾವಿರದ ಹವ್ಯಕರು (ಸಹಲೇಖಕ) 2009/258

ಟಿಪ್ಪಣಿ:ಮೂರೂ ನಾಟಕಗಳು ಸಿದ್ದಾಪುರ ತಾಲೂಕಿನಲ್ಲಿ ನಡೆದ ಸ್ವಾತಂತ್ರ ಹೋರಾಟಕ್ಕೆ ಸಂಬಂಧಿಸಿವೆ.

ಪ್ರಶಸ್ತಿ/ಗೌರವ : ಅಖಿಲ ಕರ್ನಾಟಕ ನಾಟಕ ರಚನಾ ಸ್ಪರ್ಧೆಯಲ್ಲಿ ಬಹುಮಾನಿತ ನಾಟಕ- 'ದೇವಿಯ ದೀವಿಗೆ'...1998

(1032) **ಹೆಗಡೆ ಶ್ರೀರಂಗ ಮಹಾಬಲೇಶ್ವರ, ಪಾದುಕಾಶ್ರಮ, ಶಿರಸಿ** (ಜ: 7-7-1962) ಬಿ.ಕಾಂ. ಪದವೀಧರ. ಸಂಪಾದಕ-'ಶ್ರೀಧರ ಪ್ರಭಾ' ಮಾಸಪತ್ರಿಕೆ ಶಿರಸಿ. ಶಿರಸಿಯ ಶ್ರೀಧರ ಪಾದುಕಾಶ್ರಮದ ವ್ಯವಸ್ಥಾಪಕ. ತಂದೆ ಮಹಾಬಲೇಶ್ವರ ಹೆಗಡೆ, ಹೀನಗಾರ, ಶಿರಸಿ. ತಾಯಿ ಲಕ್ಷ್ಮಿ. ಪತ್ನಿ ಗೀತಾ.

ಪ್ರಕಟಿತ ಕೃತಿಗಳು :

1. ಅಗ್ನಿಪುರಾಣ ಭಾಗ-1 .... 2012/218
2. ಆಶ್ರಮೋದಯ-ಇತಿಹಾಸ 1995/164
3. ನವನಾಥ ಭಕ್ತಿಸಾರ 2010/816
4. ಮಹಾಭಕ್ತಿ ವಿಜಯ 2010/900
5. ಶ್ರೀ ಗುರುದಾಸ ದರ್ಶನ-ಚರಿತ್ರೆ 2001/72
6. ಶ್ರೀ ಗುರುಮೌನ-ಚರಿತ್ರೆ..1991/67
7. ಶ್ರೀ ಗುರು ಸಂಸರ್ಗ 1992/154
8. ಶ್ರೀದತ್ತಮಹಾತ್ಮೆ 2010/660
9. ಶ್ರೀಧರ ವಿಜಯ-ಚರಿತ್ರೆ 1994/162
10. ಶ್ರೀ ಶ್ರೀಧರ ದರ್ಶನ 1990/72

(1033) **ಹೆಗಡೆ ಸಚ್ಚಿದಾನಂದ, ಬೆಂಗಳೂರು** (ಜ: 22-7-1976) ಪ್ರೊಡಕ್ಷನ್ ಡಿಸೈನ್‌ನಲ್ಲಿ ಸ್ನಾತಕೋತ್ತರ ಪದವಿ. ಬೆಂಗಳೂರಿನಲ್ಲಿ ಉದ್ಯೋಗಿ. ತಂದೆ ರಾಮ ಹೆಗಡೆ, ಕೋಣಾರ, ಭಟ್ಕಳ. ತಾಯಿ ಅನುಸೂಯ. ಪತ್ನಿ ವಂದನಾ.
ಪ್ರಕಟಿತ ಕೃತಿ :ಕಾರಂತಜ್ಜನಿಗೊಂದು ಪತ್ರ-ಕತೆಗಳು 2008/114

(1034) **ಹೆಗಡೆ ಸತೀಶ (ಡಾ.) ಬೆಂಗಳೂರು** (ಜ: 26-7-1968) ಸಂಸ್ಕೃತ ವಿದ್ವಾನ್, ಎಂ.ಎ., ಪಿಎಚ್.ಡಿ., ಡಿ.ಬಿ.ಎಡ್. ಪದವೀಧರ. ಅಧ್ಯಾಪಕ-ಆರ್.ವಿ. ಬಾಲಕಿಯರ ಪ್ರೌಢಶಾಲೆ, ಜಯನಗರ, ಬೆಂಗಳೂರು. ಸಾಂಸ್ಕೃತಿಕ ಸಂಘಟಕ. ತಂದೆ ದೇವರು ಹೆಗಡೆ, ಗೋಳಿಕೈ, ಹೆಗ್ಗರಣಿ, ಸಿದ್ದಾಪುರ. ತಾಯಿ ಅರುಂಧತಿ. ಪತ್ನಿ ಸುಮಾ.

ಪ್ರಕಟಿತ ಕೃತಿಗಳು :

1. ಅಮೃತ ಬಿಂದು 2000/48
2. ಜ್ಞಾನ ಕುಸುಮ–ಭಾರತೀಯ ಪರಂಪರೆ ರಸಪ್ರಶ್ನೆ 2003/48
3. ಶಿಬಿರ ಸುಗಂಧ–ಲೇಖನಗಳು 2003/48
4. ಸಂಸ್ಕೃತ ವ್ಯಾಕರಣ ಪ್ರಭಾ–ಸರಳ ಸಂಸ್ಕೃತ ವ್ಯಾಕರಣ 2010/172

(1035) **ಹೆಗಡೆ ಸತೀಶ, ಶಿರಸಿ** (ಜ: 22–2–1971) ಎಂ.ಎಸ್ಸಿ. (ತೋಟಗಾರಿಕೆ) ಪದವೀಧರ. ತೋಟಗಾರಿಕಾ ಕಛೇರಿ–ಶಿರಸಿಯಲ್ಲಿ ಉದ್ಯೋಗಿ. ತಂದೆ ಶಿವರಾಮ ಹೆಗಡೆ, ಅನಿಲಗೋಡ, ಹೊನ್ನಾವರ. ತಾಯಿ ಮಂಕಾಳಿ. ಪತ್ನಿ ಸೌಮ್ಯ.

ಪ್ರಕಟಿತ ಕೃತಿ: ಕುಸುಮಾಲೆ–ಕವನ ಸಂಕಲನ 2009/47

(1036) **ಹೆಗಡೆ ಸತ್ಯನಾರಾಯಣ ಗೋಪಾಲ ಆಶಿಮನೆ ಶಿರಸಿ** (ಜ: 1–6–1949) 8ನೇ ತರಗತಿ ಶಿಕ್ಷಣ. ಕೃಷಿಕ. ರಂಗನಿರ್ದೇಶಕ. ತಂದೆ ಗೋಪಾಲ ಹೆಗಡೆ ಆಶಿಮನೆ. ತಾಯಿ ಗೋದಾವರಿ. ಪತ್ನಿ ದಾಕ್ಷಾಯಿಣಿ.

ಪ್ರಕಟಿತ ಕೃತಿಗಳು: ಎಲ್ಲವೂ ನಾಟಕಗಳು.

1. ಆೂ ನಿಮ್ಮನೆ ಮೆಟ್ಲ ಹತ್ತ್ನಿಲ್ಲೆ–ಹವಿಗನ್ನಡ ನಾಟಕ 2001/70
2. ಗುರುದಕ್ಷಿಣೆ–ಪೌರಾಣಿಕ.. 2006/60
3. ಚಮೂಪತಿ ಭೀಷ್ಮ–ಪೌರಾಣಿಕ 2003/100
4. ಛಲದಂಕ ಮಲ್ಲ–ಪೌರಾಣಿಕ 1999/120
5. ರಾಣಿ ರೂಪಮತಿ–ಐತಿಹಾಸಿಕ 2000/150
6. ಲಕ್ಷ್ಮಣ ರೇಖೆ–ಐತಿಹಾಸಿಕ 1999/100
7. ವಿಶೆ ಪರಿಣಯ–ಪೌರಾಣಿಕ 2007/110
8. ಶಿಲಾ ತಪಸ್ವಿನಿ–ಪೌರಾಣಿಕ 2007/100
9. ಹೆಣ್ಣು ಸಮಾಜದ ಕಣ್ಣು–ಸಾಮಾಜಿಕ 1995/100

(1037) **ಹೆಗಡೆ ಸತ್ಯ ಹಡಿನಬಾಳ ಹೊನ್ನಾವರ** (ಜ: 1928) 2ನೇ ತರಗತಿ ಶಿಕ್ಷಣ. ಯಕ್ಷಗಾನ ಕಲಾವಿದ. ಹೆಸರು ಸತ್ಯನಾರಾಯಣ. ತಂದೆ ರಾಮ ಹೆಗಡೆ ಹಡಿನಬಾಳ. ತಾಯಿ ಸಾವಿತ್ರಿ. ಪತ್ನಿ ಭಾಗೀರಥಿ.

ಪ್ರಕಟಿತ ಕೃತಿ: ಸಮರ್ಪಣೆ–ಆತ್ಮಕಥೆ 2014/126

(1038) **ಹೆಗಡೆ ಸಂದೀಪ ಶಿರಸಿ** (ಜ: 1–7–1993) ಮೆಕಾನಿಕಲ್ ಎಂಜಿನಿಯರಿಂಗ್ ಪದವೀಧರ. ತಂದೆ ಪರಮೇಶ್ವರ ಹೆಗಡೆ ತ್ಯಾಗಲಿ ಸಿದ್ದಾಪುರ. ತಾಯಿ ಶಾರದಾ.

ಪ್ರಕಟಿತ ಕೃತಿಗಳು:

1. ಬಿಡುಗಡೆ–ಕಾದಂಬರಿ.. 2015/300
2. ಸತ್ಯಗ್ರಹಣ–ಕಾದಂಬರಿ 2011/135

ಪ್ರಶಸ್ತಿ/ಗೌರವ:

ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಯುವ ಬರಹಗಾರ' ಪುರಸ್ಕಾರ 2011

(1039) **ಹೆಗಡೆ ಸದಾನಂದ ಎನ್. (ಡಾ.) ಬೆಂಗಳೂರು (ಜ: 28–3–1947) ಎಂ.ಎಸ್ಸಿ.** ಪಿಎಚ್.ಡಿ. ಪದವೀಧರ. ನಿವೃತ್ತ ಡೈರೆಕ್ಟರ್–ರಾಜ್ಯ ಅರಣ್ಯ ಸಂಶೋಧನಾ ಕೇಂದ್ರ

(SFRI) ಇಟಾನಗರ, ಅರುಣಾಚಲ ಪ್ರದೇಶ. ಸಂಶೋಧಕ. ತಂದೆ ನಾಗೇಶ ಹೆಗಡೆ ಮುತ್ತುಮುರುಡು, ಸಿದ್ದಾಪುರ. ತಾಯಿ ಭಾಗೀರಥಿ. ಪತ್ನಿ ಚಮೇಲಿ.

ಪ್ರಕಟಿತ ಕೃತಿಗಳು :

1. Arunachal Pradesh State Biodiversity Strategy and Action Plan 2002
2. Cymbidiums-Cultivation Technique and Trade 1999/21
3. Field Manual for Propagation of Bamboo in North East India 2002
4. Field Manual for Propagation and Plantation of Medicinal Plants 2003/57
5. Orchids of Arunachala Pradesh 1984/101
6. Orchids-Conservation, Culture, Farming and Trade 2001/243

ಪ್ರಶಸ್ತಿ/ಗೌರವ :

1. 'ರೆನೇಡಿಸ್' ಎಂಬ ಹೊಸಪುಷ್ಪ ತಳಿಯ ಹುಟ್ಟಿಗೆ ಕಾರಣರೆಂಬ ಖ್ಯಾತಿ
2. ಆರ್ಕಿಡ್ ಸೊಸೈಟಿ ಆಫ್ ಇಂಡಿಯಾದಿಂದ ದಶಕದ ಶ್ರೇಷ್ಠ ಆರ್ಕಿಡ್ ವಿಜ್ಞಾನಿ ಪ್ರಶಸ್ತಿ 1994
3. ವರ್ಷದ ಶ್ರೇಷ್ಠ ವ್ಯಕ್ತಿಯೆಂದು ಅಮೇರಿಕದ ಬಾಯೋಗ್ರಾಫಿಕ್ ಸೊಸೈಟಿಯಿಂದ ಗೌರವ 1998
4. ವೆರಿಯರ್ ಎಲ್ವಿನ್ ಅವಾರ್ಡ್-ಅರುಣಾಚಲ ಪ್ರದೇಶ ಸರಕಾರದಿಂದ 2003

(1040) **ಹೆಗಡೆ ಸದಾನಂದ ಕೃಷ್ಣ, ಬೆಂಗಳೂರು** (ಜ: 21-5-1956) ಬಿ.ಎ. ಪದವೀಧರ. ನ್ಯಾಯಾಲಯದಲ್ಲಿ ಶೀಘ್ರಲಿಪಿಕಾರ. (ಕಾವ್ಯನಾಮ-ಪರಮೇಶ್ವರೀ ತನಯ) ತಂದೆ ಕೃಷ್ಣ ಹೆಗಡೆ, ಕೋಣಾರೆ, ಮೂರೂರು, ಕುಮಟಾ. ತಾಯಿ ಪರಮೇಶ್ವರಿ. ಪತ್ನಿ ಸಾವಿತ್ರಿ.

ಪ್ರಕಟಿತ ಕೃತಿಗಳು :

1. ಅತೀತಲ್ಲೊಂದು ಪಯಣ-ಮೂರೂರಿನ ಇತಿಹಾಸ...................... 2010/180
2. ಗಣಪ ಗಣಪ-ಷಟ್ಪದಿ ಕಾವ್ಯ 2001/49
3. ತಾಮ್ರಗೌರಿಕ್ಷೇತ್ರಪುರಾಣ 2015/71
4. ದೀವಿಗೆ-ಕವನ ಸಂಕಲನ 2010/26
5. ಮೂರೂರು ಕಲ್ಲಬ್ಬೆ ದೇವಾಲಯಗಳ ಶಿಲ್ಪ ಕಲಾವೈಭವ 2012/20
6. ರಾಮತೀರ್ಥಕ್ಷೇತ್ರಪುರಾಣ 2015/48
7. ಶ್ರೀಗುರು ಚರಿತಾಮೃತ-ಷಟ್ಪದಿ ಕಾವ್ಯ 2003/164
8. ಹಂಸಕೀರ್ತನೆ ಭಾಗ-1 (ಸದಾಶಿವ ಬ್ರಹ್ಮೇಂದ್ರ, ಚಿದಾನಂದಾವಧೂತ, ವಿಮಲಾನಂದರ ಕೀರ್ತನೆಗಳು-ಸಂಗ್ರಹಿತ) 2015/80
9. ಹಂಸಕೀರ್ತನೆ ಭಾಗ-2 (ಪರಮದೇವ ಕವಿಯ ತತ್ವಚ್ಚೌಪದನಗಳು-ಸಂಗ್ರಹಿತ) 2015/96

(1041) **ಹೆಗಡೆ ಸೀತಾರಾಮ ಮಣಿಪಾಲ, ಉಡುಪಿ** (ಜ: 13-1-1951) ಬಿ.ಎಸ್ಸಿ., ಬಿ.ಎಡ್. ಪದವೀಧರ. ಅಧ್ಯಾಪಕ-ಮಣಿಪಾಲ ಪ.ಪೂ. ಕಾಲೇಜು, ಮಣಿಪಾಲ. ತಂದೆ ಗಣಪ ಹೆಗಡೆ, ಮಣ್ಣಿಗೆ, ಹೊನ್ನಾವರ. ತಾಯಿ ಪಾರ್ವತಿ. ಪತ್ನಿ ಅಹಲ್ಯಾ.

ಪ್ರಕಟಿತ ಕೃತಿ : ಸೌರವಿದ್ಯುತ್-ವೈಜ್ಞಾನಿಕ ಸಾಹಿತ್ಯ ....(1)1998,(2)1998/150

ಪ್ರಶಸ್ತಿ/ಗೌರವ :

1. ಜಿಲ್ಲಾ ವಿಜ್ಞಾನ ಶಿಕ್ಷಕ ಪ್ರಶಸ್ತಿ 1997

2. ಶಿಕ್ಷಕರ ಕಲ್ಯಾಣ ನಿಧಿಯಿಂದ ರಾಜ್ಯಮಟ್ಟದ ಪ್ರಶಸ್ತಿ 1998
3. 'ರಾಜೀವ ಗಾಂಧಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ'-ಶಿಕ್ಷಣ ಇಲಾಖೆಯಿಂದ 1999

(1042) **ಹೆಗಡೆ ಸೀತಾರಾಮ ಶಿವರಾಮ, ಯಲ್ಲಾಪುರ** (ಜ: 1927) ಆರನೇ ಇಯತ್ತೆ ಶಿಕ್ಷಣ. ಅರ್ಚಕ-ದತ್ತ ಮಂದಿರ, ನಾಯಕನ ಕೆರೆ, ಯಲ್ಲಾಪುರ. ತಂದೆ ಶಿವಾನಂದ ಸ್ವಾಮಿ, ಬಪ್ಪನಕೊಡ್ಲು, ಶಿರಸಿ-ಗ್ರಂಥಕರ್ತ. ತಾಯಿ ಪಾರ್ವತಿ. ಪತ್ನಿ ಸೀತಾ.

ಪ್ರಕಟಿತ ಕೃತಿಗಳು :

1. ಅಮರ ಸಾಧನೆ-ನಾಟಕ 2003/47
2. ಪತಿವ್ರತಾ ಮಹಿಮೆ 2013/40
3. ಶಾಲಿನಿ ಮದ್ವೆ-ಹವಿಗನ್ನಡ ಯಕ್ಷಗಾನ ಪ್ರಸಂಗ.................................... 2007

(ಹವಿಗನ್ನಡ ನವಪ್ರಸಂಗಗಳು 2007/120 ಇದರಲ್ಲಿ ಅಡಕಗೊಂಡಿದೆ)

(1043) **ಹೆಗಡೆ ಸೂರ್ಯನಾರಾಯಣ ತುಪ್ಪದ, ಬಿದ್ರಕಾನ, ಸಿದ್ದಾಪುರ** (ಜ: 8-2-1930) ಪ್ರಾಥಮಿಕ ಶಿಕ್ಷಣ. ಕೃಷಿಕ. ತಂದೆ ರಾಮಯ್ಯ ಹೆಗಡೆ, ತಾಯಿ ಸರಸ್ವತಿ. ಪತ್ನಿ ರತ್ನಾವತಿ.

ಪ್ರಕಟಿತ ಕೃತಿ: ಮಕರಂದ-ಕವನ ಸಂಕಲನ 2003/42

(1044) **ಹೆಗಡೆ ಹುಳಗೋಳ ನಾಗಪತಿ, ಅಂಕೋಲಾ** (ಜ: 19-3-1971) ಎಂ.ಎ., ಬಿ.ಎಡ್. ಪದವೀಧರ. ಶಿಕ್ಷಕ-ಪಿ.ಎಂ. ಹೈಸ್ಕೂಲು, ಅಂಕೋಲಾ, ನಾಟಕರಂಗ ನಿರ್ದೇಶಕ. ತಂದೆ ವೆಂಕಟರಮಣ ಹೆಗಡೆ, ಹುಳಗೋಳ, ಶಿರಸಿ. ತಾಯಿ ರಾಧಾ. ಪತ್ನಿ ಸುಜಾತಾ.

ಪ್ರಕಟಿತ ಕೃತಿಗಳು :

1. ಅಭಿನವ ಸರ್ವಜ್ಞ ಡಾ। ದಿನಕರ ದೇಸಾಯಿ 2009/72
2. ಉತ್ತರಾರ್ಧ-ಕಥಾ ಸಂಕಲನ 2004/108
3. ಗುರುವಂದನಾ-ಶ್ರೀ ಗಂಗಾಧರೇಂದ್ರ ಸುಪ್ರಭಾತ ಹಾಗೂ ಭಕ್ತಿಗೀತೆಗಳು 2006/16
4. ವೀರಪುಲಿಕೇಶಿ ಮತ್ತು ಇತರ ನಾಟಕಗಳು 2006/78
5. ಸಂಕೀರ್ಣ-ಪ್ರಬಂಧ ಸಂಕಲನ 2015/150
6. ಸಮಾಜ ವಿಜ್ಞಾನ ಕೈಪಿಡಿ .... 2011, (2)2013/218

ಪ್ರಶಸ್ತಿ/ಗೌರವ :

1. ಅತ್ತಿಮಬ್ಬೆ ಪ್ರಶಸ್ತಿ 1999
2. 'ಉತ್ತಮ ಸಮಾಜ ಸೇವಕ' ಇನ್‌ಫೋಸಿಸ್ ಪ್ರತಿಷ್ಠಾನದಿಂದ.................. 2006
3. ಜಿಲ್ಲಾಮಟ್ಟದ ಅತ್ಯುತ್ತಮ ಶಿಕ್ಷಕ-ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 2006
4. ರಾಷ್ಟ್ರೀಯ ಯುವ ಪ್ರಶಸ್ತಿ-ಭಾರತೀಯ ಭಾಷಾ ಪರಿಷತ್ತು-
ಕೋಲ್ಕತ್ತಾ ಇವರಿಂದ 2006

(1045) **ಹೆಗಡೆಕಟ್ಟೆ ಕಾರ್ತೀಕ (ಡಾ॥) ಬೆಂಗಳೂರು** (ಜ: 8-5-1987) ಎಂ.ಬಿ.ಬಿ.ಎಸ್. ಪದವಿಯಲ್ಲಿ ಬಂಗಾರ ಪದಕ ಪುರಸ್ಕೃತ. ಆಯ್.ಆರ್.ಟಿ.ಎಸ್. (ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ) ಪದವೀಧರ. ಬೆಂಗಳೂರಿನಲ್ಲಿ ರೇಲ್ವೆ ಖಾತೆಯಲ್ಲಿ ಹಿರಿಯ ಉದ್ಯೋಗಿ. ತಂದೆ ಡಾ॥ ವಸಂತಮಾಧವ ಹೆಗಡೆಕಟ್ಟೆ ಕಾರವಾರ (ಗ್ರಂಥಕರ್ತ). ತಾಯಿ ಸರಸ್ವತಿ. ಪತ್ನಿ ಅಶ್ವಿನಿ.

ಪ್ರಕಟಿತ ಕೃತಿಗಳು:

1. 501 QUIZ-Questions and Answers 2014/Ebook
2. FUTURE TRACK INDIA 2014/200
3. HOW TO WIN QUIZ AND SUCCEED IN IAS 2013/200

(1046) **ಹೆಗಡೆಕಟ್ಟೆ ವಸಂತಮಾಧವ (ಡಾ||) ಕಾರವಾರ** (ಜ: 9-11-1951) ಎಂ.ಡಿ., ಎಫ್.ಸಿ.ಸಿ.ಪಿ. ಪದವೀಧರ. ಹೃದ್ರೋಗ ತಜ್ಞ. ವೃತ್ತಿನಿರತ ವೈದ್ಯ. ತಂದೆ ಪ್ರಭಾಕರ ಹೆಗಡೆಕಟ್ಟೆ ಹೆಗಡೆ ಕುಮಟಾ. ತಾಯಿ ರಾಧಾ. ಪತ್ನಿ ಸರಸ್ವತಿ.
ಪ್ರಕಟಿತ ಕೃತಿ: ಬಯಲು-ಕಥಾಸಂಕಲನ...2009/90

(1047) **ಹೆಗಡೆಕಟ್ಟೆ ಸದಾನಂದ ಮೂಡಬಿದ್ರೆ** (ಜ: 6-3-1937) ಎಂ.ಎ., ಗ್ರಂಥಾಲಯ ವಿಜ್ಞಾನದಲ್ಲಿ ಪದವೀಧರ. ನಿವೃತ್ತ ಗ್ರಂಥಪಾಲಕ. ತಂದೆ ವಿಠ್ಠಲ ಹೆಗಡೆಕಟ್ಟೆ, ಹೆಗಡೆ, ಕುಮಟಾ. ತಾಯಿ ಶಾರದಾ. ಪತ್ನಿ ಪ್ರೇಮಾ.

ಪ್ರಕಟಿತ ಕೃತಿಗಳು :

1. ಇತಿ ಮಿ(ಮ)ತಿ-ವಿಚಾರ ವಾಹಿನಿ 2004/68
2. ಕಳಕಳಿ 2015
3. ನಗೆಯಾಡಿ ನಿರೋಗಿಯಾಗಿ-ಲೇಖನಗಳು 2013/84
4. ಮಾತನಾಡುವ ಚಿರತೆ ಮತ್ತು ಇತರ ಕಥೆಗಳು 2011/62
5. ಮಾತನಾಡುವ ಮಾವಿನಮರ ಮತ್ತು ಇತರ ಕಥೆಗಳು 2015
6. ಮುಂಬೈಯಿಂದ ಮೂಡಬಿದಿರೆಗೆ ಮತ್ತು ಇತರ ಲೇಖನಗಳು 2009/72
7. ಹುಲಿ ಶಾಮಣ್ಣ ಮತ್ತು ಇತರ ಕಥೆಗಳು 1977/36

ಪ್ರಶಸ್ತಿ/ಗೌರವ:

1. 'ಹಿರಿಯ ಅಂಕಣಕಾರ', ದ.ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ 2011
2. ನಾಡಿಗೇರ ಕೃಷ್ಣರಾವ್ ರಾಜ್ಯಪ್ರಶಸ್ತಿ 2011

(1048) **ಹೆಬ್ಬಾರ ಕೃಷ್ಣಮೂರ್ತಿ, ಕರ್ಕಿ, ಹೊನ್ನಾವರ** (ಜ: 2-9-1963) ಎಂ.ಎ. (ಇಂಗ್ಲೀಷ್ ಸಾಹಿತ್ಯ), ಎಲ್.ಎಲ್.ಬಿ. ಪದವೀಧರ. ಕರ್ನಾಟಕ ಸರಕಾರದ ಸ್ಕಾಲರ್‌ಶಿಪ್ ಪಡೆದು ಅಮೇರಿಕಾದಲ್ಲಿ ಪತ್ರಿಕೋದ್ಯಮದಲ್ಲಿ ವಿಶೇಷ ಅಭ್ಯಾಸ. ಸಂಪಾದಕ-ನಾಗರಿಕ ವಾರಪತ್ರಿಕೆ ಹೊನ್ನಾವರ. ತಂದೆ ನಾರಾಯಣ, ತಾಯಿ ಸರಸ್ವತಿ. ಪತ್ನಿ ರೇಖಾ.

ಪ್ರಕಟಿತ ಕೃತಿಗಳು :

1. ಅಪ್ಪನೆಂಬ ಇಬ್ಬನಿ ಆಯಿ ಎಂಬ ಕಂಬನಿ 2013/158
2. ಕೃಷ್ಣನ ಕೈಫಿಯತ್ತು ಸಂಪುಟ 1-ವ್ಯಕ್ತಿ ಚಿತ್ರಗಳು
   ಅಂಕಣ ಬರಹಗಳು 2015/210
3. ದರ್ಶನ-ಸಂದರ್ಶನ: ಪತ್ರಿಕಾ ಸಂದರ್ಶನಗಳ ಸಂಗ್ರಹ 2015/200
4. ನಾಣಿ ಮಾಣಿ ಕತೆಗಳು 2015/100
5. ನೆರೆಹಾವಳಿ-ನಾಟಕ 1983/28
6. ಪ್ರೀತಿಯ ಪಾರಿವಾಳಕ್ಕೆ-ಪ್ರೇಮಪತ್ರಗಳ ಸಂಕಲನ 2014/140
7. ಬೆಳಕಿನ ಬೀಜ ಬಾಬಾ ಸಾಹೇಬ: ಮಾಜಿ ಸಂಸದ
   ಬಿ.ವಿ. ನಾಯಕರ ಬದುಕು ಬರಹ... 2011/128
8. ಸುಳ್ಳು ಸುದ್ದಿ-ಅಂಕಣ ಬರಹಗಳು 2015/150

9. ಸೂರಿಶಾಸ್ತ್ರಿ ತೆರೆದ ದಾರಿ-ಪರಿಚಯ 2015/100
10. ಹನಿ ಹರೆಯ-ಕವನಗಳು 2000/38
11. ಹೀಗಿದ್ದರು ನಮ್ಮ ಆರ್.ಜಿ. ಶಾನಭಾಗರು-ಪರಿಚಯ 2008/60

ಪ್ರಶಸ್ತಿ/ಗೌರವ :

1. ರಾಜ್ಯ ಯುವಜನ ಮೇಳದಲ್ಲಿ ಪ್ರಶಸ್ತಿ-ನಾಟಕಕ್ಕಾಗಿ................................1984
2. ರಾಜ್ಯಮಟ್ಟದ ಪ್ರೇಮ ಪತ್ರ ಸ್ಪರ್ಧೆಯಲ್ಲಿ ಪ್ರಥಮ 1993
3. ಕವನ ಸಂಗ್ರಹಕ್ಕಾಗಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪುಸ್ತಕ ಪ್ರಶಸ್ತಿ 1999
4. 'ಕೆ. ಶಾಮರಾವ್ ದತ್ತಿನಿಧಿ ಪ್ರಶಸ್ತಿ' ಉ.ಕ. ಜಿಲ್ಲಾ ಪತ್ರಕರ್ತರ ಸಂಘದಿಂದ2015
5. ಜಿ.ಆರ್. ಪಾಂಡೇಶ್ವರ ಪ್ರಶಸ್ತಿ 2015

(1049) **ಹೆಬ್ಬಾರ ಪ್ರಕಾಶ, ಬೆಂಗಳೂರು** (ಜ: 5-5-1977) ಎಂ.ಎ. (ಪತ್ರಿಕೋದ್ಯಮ) ಪದವೀಧರ. ವಿಜಯ ಕರ್ನಾಟಕದಲ್ಲಿ ಉದ್ಯೋಗಿ. ತಂದೆ ಸುಬ್ರಾಯ ಹೆಬ್ಬಾರ ಹಳವಳ್ಳಿ, ಅಂಕೋಲಾ. ತಾಯಿ ಸೀತಾ. ಪತ್ನಿ ಕಾವ್ಯಾ.

ಪ್ರಕಟಿತ ಕೃತಿಗಳು :

1. ಹಲವು ಕಾಯಿಲೆ ಹತ್ತಾರು ದಾರಿ 2009/124
2. ಹೆಲ್ತ ಕೇರ್ 2008/130

(1050) **ಹೆಬ್ಬಾರ ರಾಜಶೇಖರ ಶಿರಸಿ** (ಜ: 1-8-1955) ಬಿ.ಎಸ್ಸಿ. ಪದವೀಧರ. ಬ್ಯಾಂಕ್ ಉದ್ಯೋಗಿ 1990 ರಿಂದ. ದಿ.ಬಿ.ಎಚ್. ಶ್ರೀಧರ ಸಾಹಿತ್ಯ ಪ್ರಶಸ್ತಿ ವ್ಯವಸ್ಥೆಯ ಕಾರ್ಯಾಧ್ಯಕ್ಷ. ತಂದೆ ಬಿ.ಎಚ್. ಶ್ರೀಧರ (ಗ್ರಂಥಕರ್ತ). ತಾಯಿ ರಮಾದೇವಿ. ಪತ್ನಿ ಸಾವಿತ್ರಿ.

ಪ್ರಕಟಿತ ಕೃತಿ: ಪ್ರೊ. ಬಿ.ಎಚ್. ಶ್ರೀಧರ-ಪರಿಚಯ................................ 2007/90

(1051) **ಹೊನ್ನಪ್ಪ ಭಾವಿಕೇರಿ ಅಂಕೋಲಾ** (ಜ: 1-4-1937): S.S.C. ಶಿಕ್ಷಣ. ನಟ, ಜಾನಪದ ಮತ್ತು ಸುಗಮ ಸಂಗೀತ ಗಾಯಕ. ಗಮಕಿ. ಅಂಕೋಲಾದಲ್ಲಿ ನಾಟ್ಯಕೇಂದ್ರ ಸ್ಥಾಪಕ. 'ನುಡಿಜೇನು' ಸಾಪ್ತಾಹಿಕ ಪತ್ರಿಕೆ ಸಂಸ್ಥಾಪಕ (1970) ಸಂಪಾದಕ (ಪತ್ರಿಕೆ ಈಗಲೂ ನಡೆಯುತ್ತಿದೆ) ಜಾನಪದ, ಸಾಂಸ್ಕೃತಿಕ ಸಂಘಟಕ. **ಬಿ. ಹೊನ್ನಪ್ಪ** ಎಂದೇ ಪ್ರಸಿದ್ಧ. ತಂದೆ-ವೆಂಕಪ್ಪ ನಾಯಕ ಭಾವಿಕೇರಿ. ತಾಯಿ-ಸಾತಮ್ಮ. ಪತ್ನಿ-ವೀಣಾ.

ಪ್ರಕಟಿತ ಕೃತಿ: ಕೇದಗೆ-ಕವನ ಸಂಕಲನ........................1968 (2)1992/100

ಪ್ರಶಸ್ತಿ/ಗೌರವ:

1. ಶೃಂಗಾರನಟ, ಗಾನಸುಂದರ, ಜಾನಪದ ರತ್ನ. ಉತ್ತರ ಕನ್ನಡದ ಕೋಗಿಲೆ, ಕಲಾಭೂಷಣ ಇತ್ಯಾದಿ ಬಿರುದುಗಳು
2. ಕೆ. ಶ್ಯಾಮರಾವ್ ದತ್ತಿನಿಧಿ ಪತ್ರಿಕಾ ಪ್ರಶಸ್ತಿ
3. ಶ್ರೀ ವೀರಾಂಜನೇಯ ಜಾನಪದ ಪ್ರಶಸ್ತಿ
4. ಡಾ. ಕೆ. ಶಿವರಾಮ ಕಾರಂತ ಸದ್ಭಾವನಾ ರಾಜ್ಯ ಪ್ರಶಸ್ತಿ
5. ಬಸವಜ್ಯೋತಿ ರಾಜ್ಯ ಪ್ರಶಸ್ತಿ
6. ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ
7. ವಿಶ್ವೇಶ್ವರಯ್ಯ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ...................................... 2011
8. ಅಂಕೋಲಾ ತಾಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ2011
9. ಅನೇಕ ಸ್ಥಳೀಯ ಸಂಘ ಸಂಸ್ಥೆಗಳಿಂದ ಸಮ್ಮಾನಿತ.
10. ಕುವೆಂಪು ರಾಷ್ಟ್ರೀಯ ಪ್ರಶಸ್ತಿ

11. 'ಕಂಡವರಿಗೆಲ್ಲಾ ಕಣ್ಣ ಹೊಡೆಯತಿ' ಧ್ವನಿಸುರಳಿಯಲ್ಲಿ ಇವರ ಹಾಡುಗಳೂ ಇವೆ.

(1052) **ಹೊನ್ನೆಗುಂಡಿ ಆರ್.ಕೆ. ಸಿದ್ದಾಪುರ** (ಜ: 2-4-1940): M.A., B.Ed. ರಾಷ್ಟ್ರಭಾಷಾ ವಿಶಾರದ ಪದವೀಧರ. ಹೈಸ್ಕೂಲು ಶಿಕ್ಷಕ. ರಂಗಕರ್ಮಿ. ಹೆಸರು- ರಾಮಚಂದ್ರ. ತಂದೆ-ಕಾಳಾ ಹೊನ್ನೆಗುಂಡಿ. ತಾಯಿ-ಕನ್ನಮ್ಮ.

ಪ್ರಕಟಿತ ಕೃತಿ:

1. ಅಮರ ಅ.ನ.ಕೃ.-ಪರಿಚಯ 2012/64
2. ಕರ್ನಾಟಕದ ಗಾಂಧಿ-ತಿಮ್ಮಪ್ಪ ನಾಯಕ 2014/64
3. ದಿನಕರ ದೇಸಾಯಿ-ಪರಿಚಯ 2012/64
4. ನಾಟ್ಯ ವೈಭವ-6 ನೃತ್ಯನಾಟಕಗಳು... 2009/160

[ಮೋಹಿನಿ ಭಸ್ಮಾಸುರ, ದಕ್ಷಯಜ್ಞ, ಕುಮಾರ ಸಂಭವ, ಯುಗಾವತಾರಿ, ಚನ್ನವೀರ ಶರಣ ಚರಿತಾಮೃತ ಮತ್ತು ಭಗವಾನ್ ಏಸೂ]

ಬ. ಮಹಿಳೆಯರು

(1053) **ಅಕ್ಷತಾ ಕೃಷ್ಣಮೂರ್ತಿ ಬೇಲೇಕೇರಿ ಅಂಕೋಲಾ** (ಜ: 2-11-1981) B.A., M.A., D.Ed. ಪದವೀಧರೆ. ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿ. ತಂದೆ-ಅನಿಲ. ತಾಯಿ-ಮಾಲಿನಿ. ಪತಿ ಕೃಷ್ಣಮೂರ್ತಿ ಬೇಲೇಕೇರಿ.

ಪ್ರಕಟಿತ ಕೃತಿಗಳು:

1. ಮಧುರ ಚೆನ್ನ-ಪರಿಚಯ... 2014/64
2. ಹನ್ನೆರಡು ದಡೆ ಬೆಲ್ಲ-ಕವನ ಸಂಕಲನ 2013/61
3. ಹಾಲಕ್ಕಿ ಒಕ್ಕಲಿಗರು-ಪರಿಚಯ 2014/64

ಪ್ರಶಸ್ತಿ/ಗೌರವ: ಸಂಕ್ರಮಣ ಕಾವ್ಯ ಪುರಸ್ಕಾರ 2011

(1054) **ಅಂಜನಾ ಹೆಗಡೆ, ಬೆಂಗಳೂರು** (ಜ: 5-2-1981) ಬಿ.ಕಾಂ., ಎಲ್.ಎಲ್.ಬಿ. ಪದವೀಧರೆ. ಗೃಹಿಣಿ. ತಂದೆ ಗಂಗಾಧರ ಹೆಗಡೆ, ದೊಡ್ಡಮನೆ, ಶಿರಸಿ. ತಾಯಿ ಅನ್ನಪೂರ್ಣ. ಪತಿ ತ್ರಯಂಬಕ ಹೆಗಡೆ, ಕುಂದರಗಿ, ಯಲ್ಲಾಪುರ.

ಪ್ರಕಟಿತ ಕೃತಿ : ಕಾಡ ಕತ್ತಲೆಯ ಮೌನ ಮಾತುಗಳು-ಕವನ ಸಂಕಲನ........2003/73

(1055) **ಅನುರಾಧಾ ಕೆ.ವಿ., ಯಲ್ಲಾಪುರ** (ಜ: 19-9-1969) ಎಸ್.ಎಸ್.ಎಲ್.ಸಿ. ತನಕ ವಿದ್ಯಾಭ್ಯಾಸ. ರಾಗಸಂಗಮ ಮತ್ತು ಇತರ ನಿಯತಕಾಲಿಕಗಳಲ್ಲಿ ಹತ್ತಕ್ಕೂ ಹೆಚ್ಚು ಕಾದಂಬರಿಗಳು ಪ್ರಕಟವಾಗಿವೆ. 17ನೇ ವಯಸ್ಸಿನಲ್ಲಿ ಪ್ರಥಮ ಕಾದಂಬರಿ ಪ್ರಕಟವಾಗಿದೆ. ಅವಿವಾಹಿತೆ. ತಂದೆ ವೆಂಕಟರಮಣ ಭಟ್ಟ, ತೋಟದ ಕಲ್ಲಳ್ಳಿ, ಕುಂದರಗಿ, ಯಲ್ಲಾಪುರ. ತಾಯಿ ಶ್ರೀಕಾಶಿ.

ಪ್ರಕಟಿತ ಕೃತಿಗಳು :

1. ನೀನಡೆವ ಹಾದಿಯಲ್ಲಿ-ಕಾದಂಬರಿ 2009/250
2. ಪರಿವರ್ತನೆ-ಕಾದಂಬರಿ 1989/113
3. ರುದ್ರವೀಣೆ-ಕಾದಂಬರಿ 1986/248
4. ಹೃದಯ ಸಂದೇಶ-ಕಾದಂಬರಿ... 1991/114

(1056) **ಅಮೃತಾ ಮೆಹೆಂದಳೆ ಕೈಗಾ ಕಾರವಾರ** (ಜ: 1-10-1972) ವಾಣಿಜ್ಯ ಶಾಸ್ತ್ರ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರೆ. ಎನ್.ಟಿ.ಟಿ. ಶಿಕ್ಷಣ. ಶಾಲಾ ಶಿಕ್ಷಕಿ. ತಂದೆ ರಾಮಚಂದ್ರ ಮೆಹೆಂದಳೆ ಬೆಂಗಳೂರು. ತಾಯಿ ವಸುಂಧರಾ. ಪತಿ ಸಂತೋಷಕುಮಾರ ಮೆಹೆಂದಳೆ (ಗ್ರಂಥಕರ್ತ)

ಪ್ರಕಟಿತ ಕೃತಿ: ಮೌನದ ಮಾತುಗಳು-ಕವನ ಸಂಕಲನ 2007/100

(1057) **ಅಲಕಾ ಕಟ್ಟೀಮನೆ**(ಜ: 23-11-1979)ಪತ್ರಿಕೋದ್ಯಮದಲ್ಲಿ ಎಂ.ಎ. ಪದವೀಧರೆ. 5 ವರ್ಷ ವಿಜಯಕರ್ನಾಟಕದಲ್ಲಿ ಉದ್ಯೋಗಿ.ಮೈಸೂರು ಆಕಾಶವಾಣಿಯಲ್ಲಿ ಮಹಿಳೆಮತ್ತು ಮಕ್ಕಳು ಕಾರ್ಯಕ್ರಮ ಸಂಯೋಜಕಿ. ತಂದೆ ಡಾ. ರಾಮಕೃಷ್ಣ ಜೋಶಿ ಮೈಸೂರು. ತಾಯಿ ಡಾ. ಚಂದ್ರಮತಿ ಸೋಂದಾ(ಇಬ್ಬರೂಗ್ರಂಥಕರ್ತರು) ಪತಿ ಶ್ರೀಹರ್ಷ ಹೆಗಡೆ ಹೆಗಡೆಕಟ್ಟಾ ಶಿರಸಿ.

ಪ್ರಕಟಿತ ಕೃತಿ: ಶಾಲ್ಮಲೆಯ ಹೊನಲಲ್ಲಿ-ಕಥಾ ಸಂಕಲನ 2013/108

ಪ್ರಶಸ್ತಿ/ಗೌರವ:

1. ಸುಧಾಮೂರ್ತಿ ದತ್ತಿನಿಧಿಯ ತ್ರಿವೇಣಿ ಕಥಾ ಸಾಹಿತ್ಯ ಪ್ರಶಸ್ತಿ 2013
2. ಬಿ.ಎಂ.ಶ್ರೀ ಪ್ರತಿಷ್ಠಾನದ ಬಾ.ಶಾಲೂರಾವ್ ಸಾಹಿತ್ಯ ಪ್ರಶಸ್ತಿ 2014

(1058) **ಆಶಾ ಹೆಗಡೆ, ಬೆಂಗಳೂರು** (ಜ: 4-10-1968) ಬಿ.ಕಾಂ. ಪದವೀಧರೆ. ಗೃಹಿಣಿ. ತಂದೆ ಬಿ.ಎಸ್. ಗೋಪಾಲಕೃಷ್ಣ ಮಡಿಕೇರಿ, ತಾಯಿ ರಾಜಲಕ್ಷ್ಮಿ. ಪತಿ ಸಿದ್ದಾಪುರ ತಾಲೂಕಿನ ಇಟಗುಳಿ ನರಸಿಂಹ ಹೆಗಡೆ.

ಪ್ರಕಟಿತ ಕೃತಿಗಳು :

1. ಆರೋಗ್ಯ ಅದುವೇ ಭಾಗ್ಯ 1992/50
2. ಈ ನೆಲದ ಕಥೆ-ಕಥಾ ಸಂಕಲನ 2005/112
3. ಸಮಾಜ ಸೇವೆಯೇ ಉಸಿರು-ನಾ ಕಂಡ ಪೇಜಾವರ ಸ್ವಾಮಿಗಳು ... 1992/48

(1059) **ಇಂದು ಭಾಗವತ, ಬೆಂಗಳೂರು** (ಜ: 22-11-1927) ಇಂಟರ್‌ಮೀಡಿಯೇಟ್ ಶಿಕ್ಷಣ. ಗೃಹಿಣಿ. ತಂದೆ ಸೀತಾರಾಮ ಭಾಗವತ, ಕುಮಟಾ, ತಾಯಿ ಕಮಲಾ. ಪತಿ ಎಸ್.ಆರ್. ಭಾಗವತ, ಕರ್ಕಿ.

ಪ್ರಕಟಿತ ಕೃತಿ : ಆನಂದಮಯ ಜೀವನ ಸಾಧನೆ 2005/60

(1060) **ಉಮಾ ರಾಜಾರಾಮ ಹೆಗಡೆ, ಶಿವಮೊಗ್ಗ** (ಜ: 1-6-1958) ಎಂ.ಎ., ಎಂ.ಫಿಲ್., ಪಿ.ಎಚ್.ಡಿ. (ಹಿಂದಿ) ಪ್ರಾಧ್ಯಾಪಕಿ ಸ್ನಾತಕೋತ್ತರ ಹಿಂದೀ ವಿಭಾಗ ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ. ತಂದೆ ಪುರುಷೋತ್ತಮ ಹೆಗಡೆ-ಮತ್ತಿಘಟ್ಟ, ಶಿರಸಿ. ತಾಯಿ ಗಂಗಾ. ಪತಿ ಡಾ॥ ರಾಜಾರಾಮ ಹೆಗಡೆ, ಐನಕೈ, ಸಿದ್ದಾಪುರ. ಕುವೆಂಪು ವಿ.ವಿ.ಯಲ್ಲಿ ಪ್ರಾಧ್ಯಾಪಕ.

ಪ್ರಕಟಿತ ಕೃತಿಗಳು :

1. ಆಧುನಿಕ ಹಿಂದೀ ನಾಟಕ 2015/170
2. ಕೆಳದಿ ನೃಪ ವಿಜಯ-ಕಾವ್ಯ (ಕನ್ನಡದಿಂದ ಹಿಂದಿಗೆ ಅನುವಾದಿತ)2003/135
3. ಪಾತಿ ದೋಣಿ-ಸಣ್ಣ ಕತೆಗಳು 1998/74

(1061) **ಉಷಾ ಉಲ್ಲಾಸ ರಾಣೆ ಸದಾಶಿವಗಡ ಕಾರವಾರ** (ಜ: 23-12-1953): M.A. ಪದವೀಧರೆ. ಶಿಕ್ಷಕಿ. ತಂದೆ-ಸುಬ್ಬಾ ಮಾಜಾಳಿ. ತಾಯಿ-ಸಂಜೀವನಿ. ಪತಿ-ಉಲ್ಲಾಸರಾಣೆ ಸದಾಶಿವಗಡ.

ಪ್ರಕಟಿತ ಕೃತಿಗಳು:

1. ಕಾರವಾರ-ಪರಿಚಯ (ಅನುವಾದಿತ) : ಕೊಂಕಣಿ ಭಾಷೆ ದೇವನಾಗರಿ ಲಿಪಿಯಲ್ಲಿ (ಮರಾಠಿ ಮೂಲ: ನಾಡಕರ್ಣಿ) 2014
2. ಕಾರವಾರಚೋ ಲೋಕವೇದ-ಸಂಶೋಧನ ಕೃತಿ 2000/50
3. Learn Konkani in 30 days (ಕನ್ನಡ, ಹಿಂದಿ, ಅಂಗ್ರೇಜಿಯಲ್ಲಿ) 2006/100

(1062) **ಉಷಾ ಹೆಗಡೆ ಹೊಸಳ್ಳಿ ಶಿರಸಿ** (ಜ: 30-3-1978) ಕಾಲೇಜು ಶಿಕ್ಷಣ. ತಂದೆ ಉಮಾಪತಿ ಹೆಗಡೆ ಇಳ್ಳುಮನೆ ಶಿರಸಿ. ತಾಯಿ ಭಾಗೀರಥಿ. ಪತಿ ನಾರಾಯಣ ಹೆಗಡೆ ಹೊಸಳ್ಳಿ ಶಿರಸಿ.

ಪ್ರಕಟಿತ ಕೃತಿ: ನವಿಲುಗರಿ-ಕವನ ಸಂಗ್ರಹ 2012/134

ಪ್ರಶಸ್ತಿ/ಗೌರವ:

1. ಕೊಡಗಿನ ಗೌರಮ್ಮ ಕಥಾ ಸ್ಪರ್ಧೆಯಲ್ಲಿ ಬಹುಮಾನ.......................... 2013
2. ಉತ್ಥಾನ ಕಥಾ ಸ್ಪರ್ಧೆ ಹಾಗೂ ಒಪ್ಪಣ್ಣ ಕಥಾ ಸ್ಪರ್ಧೆಗಳಲ್ಲಿ ಬಹುಮಾನ.

(1063) **ಕನ್ನಿಕಾ ಹೆಗಡೆ, ಹೊನ್ನಾವರ**(ಜ: 18-1-1951)ಬಿ.ಎ.ಪದವೀಧರೆ. ಗೃಹಿಣಿ. ತಂದೆಗಣೇಶ ಹೆಗಡೆ, ಶಿರಸಿ. ತಾಯಿ ಸಾವಿತ್ರಿ. ಪತಿ ಪ್ರಭಾಕರ ಹೆಗಡೆ, ಹೈಗುಂದ, ಹೊನ್ನಾವರ.
ಪ್ರಕಟಿತ ಕೃತಿ: ಕನ್ನಿಕಾ ಹೆಗಡೆ ಕವಿತೆಗಳು-ಕವನ ಸಂಕಲನ 1978/38

(1064) **ಕಮಲಾ ಕೊಂಡದಕುಳಿ, ಕಲ್ಲಬ್ಬೆ, ಕುಮಟಾ** (ಜ: 21-5-1966) ಎಸ್.ಎಸ್.ಎಲ್.ಸಿ. ಶಿಕ್ಷಣ. ಗೃಹಿಣಿ. ತಂದೆ ಅಂಗಪ್ಪ ಹೆಗಡೆ, ತಾಯಿ ಪ್ರೇಮಾ. ಪತಿ ಗಣಪತಿ ಹೆಗಡೆ ಕೊಂಡದಕುಳಿ.

ಪ್ರಕಟಿತ ಕೃತಿಗಳು :

1. ಅಂತರಾಳ-ಕವನಗಳು 2010
2.# ಕೊಂಡದಕುಳಿ ರಾಮಹೆಗಡೆ, ಲಕ್ಷ್ಮಣ ಹೆಗಡೆ 2014/60
3. ತಾರೆಗಳ ತೋಟ-ಮಕ್ಕಳ ಕವನಗಳು 2012/80
4. ಪ್ರತೀಕ್ಷೆ-ಕವನಗಳು 2008/32
5. ಮುಗುಳು-ಮಕ್ಕಳ ಕವನಗಳು...2008/68
6.+ ಶುಂಠಿ ಪೆಪ್ಪರಮಿಂಟ್-ಮಕ್ಕಳ ಕವನಗಳು 2013/128

ಪ್ರಶಸ್ತಿ: + ಸದ್ರಿ ಕೃತಿಗೆ ದಿ.ಎಚ್. ಕರಿಯಣ್ಣ ದತ್ತಿನಿಧಿ ಪ್ರಶಸ್ತಿ 2014
ಸದ್ರಿ ಕೃತಿಗೆ ಕಸಾಪದ "ಗಿರಿಗೌಡ ರುದ್ರಪ್ಪ" ಪ್ರಶಸ್ತಿ 2015

(1065) **ಕಮಲಾಕ್ಷಿ ಹೆಗಡೆ ಬೆಂಗಳೂರು** (ಜ: 19-6-1954): ಎಂ.ಎ., ಬಿ.ಎಡ್. ಪದವೀಧರೆ. ಮಲ್ಲೇಶ್ವರದ ಕ್ಲೂನಿ ಕಾನ್ವೆಂಟ್‌ನಲ್ಲಿ ಶಿಕ್ಷಕಿ. (ನಿವೃತ್ತ). Scouts and Guides ನಲ್ಲಿ 30 ವರ್ಷ ಸೇವೆ-ದಳನಾಯಕಿ. ತಂದೆ ಎಸ್.ಪಿ. ಹೇರಂಬರಾವ್ ಶೆಡ್ತಿಕೆರೆ ಸಾಗರ. ತಾಯಿ ಪಾರ್ವತಿ. ಪತಿ ಎನ್.ಆರ್. ಹೆಗಡೆ ದುಗ್ಗೂರು ಹೊನ್ನಾವರ.

ಪ್ರಕಟಿತ ಕೃತಿಗಳು: (32 ಎಲ್ಲಾ ಕೃತಿಗಳಿಗೆ ಸಹಲೇಖಕಿ)

1. ಕನ್ನಡ ರತ್ನ-0 2010

ಕನ್ನಡ ರತ್ನ-1 ರಿಂದ 8(ISCE ಪಠ್ಯಕ್ರಮದಂತೆ ಎಲ್.ಕೆ.ಜಿ. ಯಿಂದ 8ನೇ ತರಗತಿ ತನಕ 9 ಕನ್ನಡ ಪಠ್ಯಪುಸ್ತಕಗಳು. ಪ್ರತಿಪುಸ್ತಕ 100 ರಿಂದ 170 ಪುಟಗಳು

2. ಕನ್ನಡ ರತ್ನಕ್ಕೆ ಶಿಕ್ಷಕರ ದರ್ಶನ 0 ರಿಂದ 8-9 ಪುಸ್ತಕಗಳು 2010
3. ಕನ್ನಡ ರತ್ನಕ್ಕೆ ಮಕ್ಕಳಿಗಾಗಿ ವರ್ಕ್‌ಬುಕ್ 0ರಿಂದ 8-9 ಪುಸ್ತಕಗಳು 2010
4. ICSE 8, 9, 10ನೇ ತರಗತಿಯ ನಾಲ್ಕು ಕನ್ನಡ ಪುಸ್ತಕಗಳಿಗೆ ಗೈಡು 2015/350
5. ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಪೂರ್ವಸಿದ್ಧತಾ ಮಾರ್ಗದರ್ಶಿ 2014/174

ಪ್ರಶಸ್ತಿ/ಗೌರವ:

1. Scouts and Guides ನಲ್ಲಿನ ದೀರ್ಘ, ಸಾರ್ಥಕ ಸೇವೆಗಾಗಿ International Asia Pacific Award ಹಾಗೂ 2007ರಲ್ಲಿ ಇಂಗ್ಲೆಂಡ್ ಮತ್ತು 2009ರಲ್ಲಿ ಜಪಾನಿನಲ್ಲಿ ನಡೆದ Scouts and Guides ಸಮ್ಮೇಳನದಲ್ಲಿ ಭಾಗವಹಿಸುವ ವಿಶೇಷ ಅವಕಾಶ.
2. ವಿಶ್ವಗೋಸಮ್ಮೇಳನದಲ್ಲಿ ಗೋವಿನ ಕುರಿತು ಕವನಕ್ಕೆ ಬಹುಮಾನ.

(1066) **ಕಲ್ಪನಾ ಅರುಣ, ಬೆಂಗಳೂರು** (ಜ: 24-4-1969) ಎಂ.ಎ., ಬಿ.ಎಡ್. ಪದವೀಧರೆ. ಸರಕಾರಿ ಪದವಿಪೂರ್ವ ವಿದ್ಯಾಲಯದಲ್ಲಿ ಶಿಕ್ಷಕಿ. ತಂದೆ ಶಂಕರ ಭಟ್ಟ, ಕರ್ಕಿ. ತಾಯಿ ಗಿರಿಜಾ. ಪತಿ ಅರುಣ ಹೆಗಡೆ, ಕಡತೋಕ.

ಪ್ರಕಟಿತ ಕೃತಿಗಳು :

1. ಗೃಹ ಸಂಜೀವಿನಿ 2005/72
2. ಪರಿಪೂರ್ಣ ಸಸ್ಯಾಹಾರಿ ಅಡುಗೆಗಳು 2007/144
3. ಮಕ್ಕಳ ಹಾಡು 2008/64
4. ರುಚಿ ರುಚಿಯಾದ ಕರಿದ ತಿಂಡಿಗಳು 2004/48
5. ವಸಂತ ಲಾಸ್ಯ-ಹನಿಗವನ ಸಂಕಲನ... 2005/72
6. ಹಪ್ಪಳ ಸಂಡಿಗೆ ಚಕ್ಕುಲಿಗಳು 2004/48
7. ಹೊಸ್ತಿಲು-ಕವನ ಸಂಕಲನ 2001/48

ಪ್ರಶಸ್ತಿ/ಗೌರವ:

1. ಭಾರತೀಯ ಕರ್ನಾಟಕ ಸಂಘದಿಂದ ಬಹುಮಾನ 2010,2011,2014
2. 'ಹೃದಯ' ಭಾವಗೀತೆಗಳು-8 ಹಾಡುಗಳ ಧ್ವನಿಸುರುಳಿ ಬಿಡುಗಡೆ ಜುಲೈ 2013

(1067) **ಕಲ್ಪನಾ ಪ್ರಭಾಕರ ಸೋಮನಳ್ಳಿ ಶಿರಸಿ** (ಜ: 15-5-1975) ಕಮರ್ಶಿಯಲ್ ಪ್ರಾಕ್ಟೀಸ್ ಮತ್ತು ಕಂಪ್ಯೂಟರ್‌ಗಳ ಡಿಪ್ಲೋಮಾ ಪದವೀಧರೆ. ಕೆಲಕಾಲ ಹುಬ್ಬಳ್ಳಿ ಶಿರಸಿಯಲ್ಲಿ ಉದ್ಯೋಗಿ. ತಂದೆ ವೆಂಕಟರಮಣ ಭಟ್ಟ ಬೆಳೆನಳ್ಳಿ ಶಿರಸಿ. ತಾಯಿ ದಾಕ್ಷಾಯಿಣಿ. ಪತಿ ಪ್ರಭಾಕರ ಹೆಗಡೆ ಸೋಮನಳ್ಳಿ.

ಪ್ರಕಟಿತ ಕೃತಿಗಳು:

1. ನಕ್ಷತ್ರ ಮೀನು-ಮಕ್ಕಳ ಕಥೆಗಳು 2015/150
2. ಮರಳಿ ಮಣ್ಣಿಗೆ-ಕಥಾ ಸಂಕಲನ 2015/200
3. ಹಳ್ಳಿಮನೆ-ಕಥಾ ಸಂಕಲನ 2012/180
4. ಕಪ್ಪೆ ಜಿಗಿತ ಮಕ್ಕಳ ಕಥಾಸಂಕಲನ
5. ಪುಟ್ಟನ ಪ್ರಪಂಚ ಮಕ್ಕಳ ಕವನ ಸಂಕಲನ

ಪ್ರಶಸ್ತಿ/ಗೌರವ:

1. 'ಹಳ್ಳಿಮನೆ' ಕಥೆಗೆ ಉ.ಕ. ಜಿಲ್ಲಾ ಕಥಾಸ್ಪರ್ಧೆಯಲ್ಲಿ ಪ್ರಶಸ್ತಿ 2012
2. ಮರಳಿ ಮಣ್ಣಿಗೆ ಉ.ಕ. ಜಿಲ್ಲಾ ಕಥಾಸ್ಪರ್ಧೆಯಲ್ಲಿ ಪ್ರಶಸ್ತಿ 2013
3. 'ಹಳ್ಳಿ ಮಲಗಿದೆ' ಕವನಕ್ಕೆ ಬೆಳಗಾವಿ ಜಿಲ್ಲೆಯ ಸಿರಿಗನ್ನಡ ವೇದಿಕೆಯಿಂದ 'ಕಾವ್ಯಶ್ರೀ' ರಾಜ್ಯಮಟ್ಟದ ಪ್ರಶಸ್ತಿ 2014

(1068) **ಕಾವೇರಿ ವೆಂಕಟರಮಣ ಭಟ್ಟ, ಶಿರಸಿ** (ಜ: 18-7-1941) 4ನೇ ವರ್ಗದ ತನಕ ಶಿಕ್ಷಣ. ಗೃಹಿಣಿ. ತಂದೆ ಶಿರಸಿ ತಾಲೂಕಿನ ಓಣಿ ವಿಘ್ನೇಶ್ವರದ ಗೋವಿಂದ ಹೆಗಡೆ. ತಾಯಿ ಮಾದೇವಿ. ಪತಿ ಅದೇ ಊರಿನ ವೆಂಕಟರಮಣ ಭಟ್ಟ.

ಪ್ರಕಟಿತ ಕೃತಿಗಳು :

1. ಕಾವ್ಯ ಸಂಗಮ-ಭಕ್ತಿ ಗೀತೆಗಳು 2000/56
2. ಪುಣ್ಯ ಸಂಚಯನಕ್ಕೆ ಭಕ್ತಿ ಕಾವ್ಯ ....(1)1997, (2)2000/41

(1069) **ಕಾವ್ಯಾ ಕಡಮೆ ನ್ಯೂಜೆರ್ಸಿ ಅಮೇರಿಕಾ** (ಜ: 12-11-1988): B.Sc., M.A. ಪತ್ರಿಕೋದ್ಯಮ (6 ಚಿನ್ನದ ಪದಕಗಳೊಂದಿಗೆ) ಪದವೀಧರೆ. ತಂದೆ-ಪ್ರಕಾಶ ಕಡಮೆ, ಕುಮಟಾ (ಗ್ರಂಥಕರ್ತ) ತಾಯಿ-ಸುನಂದಾ ಕಡಮೆ (ಗ್ರಂಥಕರ್ತೆ) ಪತಿ-ಸಂತೋಷ ನಾಗರಕಟ್ಟೆ ಅಂಕೋಲಾ.

ಪ್ರಕಟಿತ ಕೃತಿ: ಧ್ಯಾನಕೆ ತಾರೀಕಿನ ಹಂಗಿಲ್ಲ-ಕಾವ್ಯಸಂಕಲನ 2013/72

ಪ್ರಶಸ್ತಿ: ಕೇಂದ್ರ ಸಾಹಿತ್ಯ ಎಕಾಡೆಮಿ ಯುವ ಪುರಸ್ಕಾರ 2014

(1070) **Kunda Desai Mumbai** (BOD: 12-9-1937): M.A., B.Ed. ूड्ढक्ष्वपड्ढेड्ढड्ढ ड्डड्ढषड्ढड्ढ़ शड्ढड्ढेै.रिड्ढ ुड्ढ मड्ढस्ड्ढड्ढकड्ढ़ड्ढ | ं?ड्ढसड्ढरूेड्ढश्ं?ड्ढ मड्ढश्वकरड्ढड्ढमड्ढड्ढं? | ड्डमड्ढड्ढिड्ढषड्ढरूेड्ढड्ढाड्ढड्ढ़ लड्ढड्ढ८.ं?ड्ढहड्ढस्र शड्ढस्ड्ढड्ढषड्ढड्ढाड्ढ८. ं?ड्ढड्ढ़ | थड्ढड्ढिड्ढ-षड्ढड्ढञ्जिड्ढ | मड्ढड्ढिड्ढिबड्ढत्तुड्ढड्ढ़ स्रूशड्ढड्ढड्ढरड्ढ ै.ड्ढरूञ्८.स्ं?सड्ढ श्त?थड्ढौ.ड्ढ | मड्ढश्वं?ड्डौ.ढि ग्द्ध?ड्डिरड्ढड्ढञ्जरूथड्ढड्ढप.ड्वथड्ढरू

1. ग्हड्ढड्ढलड्ढत्तेड्ढञ्जकड्ढ।न.ड्ढरूप.ड्व ं?ै.ड्ढड्डलड्ढरड्ढड्ढञ्ज 2003/114

2. मड्ढड्ढड्ढत्तसड्ढड्ढड्ढौ.।न.ड्ढरूप.ड्व ं?ै.ड्ढड्डलड्ढरड्ढड्ढञ्ज 2007/210

3. शड्ढड्ढस्स्रूड्ढिड्व ड्डै.थड्ढ ड्ढषड्ढष्ड्ढ़रू।मड्ढश्वुड्ढड्ढशड्ढ शड्ढड्ढेै.रिड्ढ 2012/87

मड्ढश्वषड्ढड्ढशड्ढिधाड्ढड्ढलुड्ढ। लड्ढड्ढड्ढशड्ढं?ं?ड्ढ ुड्ढड्ढत्तरड्ढ शड्ढरूुड्ढड्ढ मड्ढश्वड्डड्ढिक्रड्ढलड्ढशड्ढरू मड्ढश्वषड्ढड्ढशड्ढि

(1071) **ಕುಮುದಾ ಜಿ.ಎಂ., ಶಿರಸಿ** (ಜ: 4-3-1958) ಎಂ.ಎ., ಪಿ.ಹೆಚ್.ಡಿ. ಪದವೀಧರೆ. ಶಿರಸಿಯ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕಿ. ತಂದೆ ಶಿರಸಿಯ ಗಜಾನನ ಶರ್ಮ. ತಾಯಿ ಮಾಜಿ ಶಾಸಕಿ ಅನಸೂಯಾ ಶರ್ಮಾ. ಪತಿ ಶಿರಸಿಯ ವೈದ್ಯ ಡಾ॥ ಜಿ.ಎಂ. ಹೆಗಡೆ.

ಪ್ರಕಟಿತ ಕೃತಿಗಳು :

1.+ ಪ್ರಸೂತಿ ಗೃಹದಸ್ಮರಣೀಯ ಪ್ರಸಂಗಗಳು-ಅನುಭವ ಕಥನ 2007/66

2. ವಿ.ಜಿ. ಭಟ್ಟರ ಆಯ್ದ ಕವನಗಳು (ಸಂಪಾದಿತ) 2013/312

+ ಕೃತಿಯ 1 ಪ್ರಸಂಗ 2010-11, 11-12 ಈ 2 ವರ್ಷ ಕ.ವಿ.ವಿ.ಯ ಬಿ.ಎ.-3 ಕನ್ನಡ ಪಠ್ಯದಲ್ಲಿ ಅಳವಡಿಕೆಯಾಗಿತ್ತು.

(1072) **ಕೃತ್ತಿಕಾರಾಣಿ ಟಿ.ಎಸ್. ಯಲ್ಲಾಪುರ** (ಜ: 27-7-2000) ಹೈಸ್ಕೂಲು ವಿದ್ಯಾರ್ಥಿನಿ. ತಂದೆ ಶಂಕರ ಭಟ್ಟ ತಾರಿಮಕ್ಕಿ ಯಲ್ಲಾಪುರ. ತಾಯಿ ಮುಕ್ತಾ. **ಪ್ರಕಟಿತ ಕೃತಿ**: ಇನಿದನಿ-ಕವನ ಸಂಕಲನ (ಸಹಲೇಖಕಿ) 2012/60

(1073) **ಕೋಮಲಾ ಭಟ್ಟ (ಡಾ॥) ಶಿರಸಿ** (ಜ: 16-2-1962) ಎಂ.ಎ., ಎಂ.ಫಿಲ್., ಪಿಎಚ್.ಡಿ. (ಭೂಗೋಳಶಾಸ್ತ್ರ). ಶಿರಸಿ ಎಂ.ಎಂ. ಕಾಲೇಜಿನಲ್ಲಿ ಸಹಪ್ರಾಧ್ಯಾಪಕಿ. ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರಸಂಕಿರಣಗಳಲ್ಲಿ ಹಲವಾರು ಪ್ರಬಂಧ ಮಂಡನೆ. ತಂದೆ ಮಹಾಬಲೇಶ್ವರ ಭಟ್ಟ ಗಾಣಗೆರೆ ಹೊನ್ನಾವರ. ತಾಯಿ ಮಹಾದೇವಿ. ಪತಿ ಗಣಪತಿ ಹೆಗಡೆ ಯಡಳ್ಳಿ ಶಿರಸಿ (ಗ್ರಂಥಕರ್ತ)

ಪ್ರಕಟಿತ ಕೃತಿ: ಸಾಮಾಜಿಕ ಬದಲಾವಣೆಗಳು ಮತ್ತು ಪರಿಣಾಮ 2009/88

(1074) **ಗಂಗಾ ಗಣಪತಿ ಹೆಗಡೆ, ಶಿರಸಿ** (ಜ: 19-7-1947) ನಾಲ್ಕನೇ ತರಗತಿ ಶಿಕ್ಷಣ. ಗೃಹಿಣಿ. ತಂದೆ ಮಧುಕೇಶ್ವರ ಭಟ್ಟ, ಮತ್ತಿಗಾರ. ತಾಯಿ ಪಾರ್ವತಿ. ಪತಿ ಗಣಪತಿ ಹೆಗಡೆ ಮಕ್ಕಳ ತಾಯ್ಮನೆ, ಶಿರಸಿ.

ಪ್ರಕಟಿತ ಕೃತಿಗಳು :

1. ಶ್ರೀ ಗುರುಕೃಪಾ ಕಾವ್ಯಶೃತಿ-ಮಂಗಲ ಕಾರ್ಯದ ಹಾಡುಗಳು................2006/32

2. ಶ್ರೀ ಸದ್ಗುರು ಸ್ಫೂರ್ತಿ ಕವನ ಮಾಲಿಕಾ-ಹಾಡುಗಳು(1)2005,(3)2008/64

(1075) **ಗಣಪಿ ಕೇಶವ ಹೆಗಡೆ, ಯಲ್ಲಾಪುರ** (ಜ: 16-7-1937) ಅಲ್ಪ ಶಿಕ್ಷಣ. ಗೃಹಿಣಿ. ತಂದೆ ಗಣಪತಿ ಹೆಗಡೆ ಹಿತ್ಲಳ್ಳಿ. ತಾಯಿ ಶಶಿಕಲಾ. ಪತಿ ಕೇಶವ ಹೆಗಡೆ,ಕನೇನಹಳ್ಳಿ, ಯಲ್ಲಾಪುರ.

ಪ್ರಕಟಿತ ಕೃತಿ :

ಚರಿತಾ ಸಂಗಮ-ಸಂಪ್ರದಾಯದ ಹಾಡುಗಳು (ಸಂಪಾದಿತ) 2003/127

(1076) **ಗಣಪಿ ವೆಂಕಟರಮಣ ಭಟ್ಟ, ತಟ್ಟಿಕೈ, ಸಿದ್ದಾಪುರ** (ಜ: 1926) ತಂದೆ ಮಂಜಪ್ಪ ಹೆಗಡೆ, ತಾಯಿ ಗೌರಿ. ಶಾಲಾ ವಿದ್ಯಾಭ್ಯಾಸವಿಲ್ಲ. ತಮ್ಮಂದಿರು ಬರೆಯುವುದನ್ನು ನೋಡಿ
ಕಲಿತದ್ದು. ಗೃಹಿಣಿ. 'ಕಲಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬುದಕ್ಕೊಂದು ನಿದರ್ಶನ. ಪತಿ ವೆಂಕಟರಮಣ ಭಟ್ಟ, ತಟ್ಟಿಕೈ. ಸರಕುಳ ಸಿದ್ದಾಪುರ.

ಪ್ರಕಟಿತ ಕೃತಿಗಳು :

1. ಕನ್ನಡದ ಮಕ್ಕಳಿಗೆ ಕಿರುಕಾಣಿಕೆ 2014/55
2. ಕಾಲದೊಂದಿಗೆ ಪಯಣ-ಒಂದು ಜನ ಪುರಾಣ ಕಾದಂಬರಿ 2009/183
3. ಕೈ ದೀವಿಗೆ-ಸಂಪ್ರದಾಯದ ಹಾಡುಗಳು 2002/90
4. ಗೊಂಬೆಮನೆ-ಮಕ್ಕಳ ಕತೆಗಳು 2012/141
5. ಭಾವ ದೀಪ್ತಿ-ಸಂಪ್ರದಾಯದ ಹಾಡುಗಳು 2000/50
6. ಮರಳಿ ಬಂದ ಸಿರಿ-ಕತೆಗಳು 2011/190
7. ಮುದ್ದು ಮಕ್ಕಳಿಗಾಗಿ ಮೂವತ್ಮೂರು ಕಥೆಗಳು 2007/120
8. ಹವ್ಯಕ ಪಾಕ ವಿಧಾನ .... 2007 (2)2013/86
9. ಹೊಂಗಿರಣ-ಗುರುಸ್ತುತಿ ಭಜನೆ ಹಾಡುಗಳು 2004/100

ಪ್ರಶಸ್ತಿ/ಗೌರವ:

1. ಕೃಷಿ ಪರಿಣತಿಗಾಗಿ ತಾಲೂಕಾ ಮಟ್ಟದ ಬಹುಮಾನ
2. 'ಶಿರಸಿ ಸಮಾಚಾರ' ಪತ್ರಿಕೆ ಕಥಾ ಸ್ಪರ್ಧೆಯಲ್ಲಿ ಬಹುಮಾನ 2004
3 ವಿಶ್ವ ಹವ್ಯಕ ಮಹಿಳಾ ಸಮಾವೇಶದಲ್ಲಿ ಸನ್ಮಾನ-ಶಿರಸಿ 2007

(1077) **ಗಣಪಿ ಹೆಗಡೆ, ಹೊನ್ನಾವರ** (ಜ: 1952) ತಂದೆ ಸತ್ಯನಾರಾಯಣ ಭಟ್ಟ, ಉಂಜಟ್ಟೆ. ತಾಯಿ ಸಾವಿತ್ರಿ. ಪತಿ ಗಣಪತಿ ರಾಮ ಹೆಗಡೆ, ನಗರೆ, ಹೊನ್ನಾವರ
ಪ್ರಕಟಿತ ಕೃತಿ : ಶ್ರೀ ಭಜನಾಮೃತ ಸಂಗ್ರಹ... 1988/16

(1078) **ಗಾಯತ್ರಿ ರಾಘವೇಂದ್ರ ಬೆಟ್ಟಕೊಪ್ಪ ಶಿರಸಿ** (ಜ: 26-2-1987) ಬಿ.ಎ. ಪದವೀಧರೆ. ಗೃಹಿಣಿ. ತಂದೆ ನರಸಿಂಹ ಹೆಗಡೆ ಶಿಂಗನಮನೆ, ಶಿರಸಿ. ತಾಯಿ ಪದ್ಮಾವತಿ. ಪತಿ ರಾಘವೇಂದ್ರ ಬೆಟ್ಟಕೊಪ್ಪ. (ಗ್ರಂಥಕರ್ತ)
ಪ್ರಕಟಿತ ಕೃತಿಗಳು:

1. ಕನವರಿಕೆ-ಕವನ ಸಂಕಲನ 2013/96
2. ಮಣ್ಣ ನೆನಪು-ಕವನ ಸಂಕಲನ.. 2012/88

(1079) **ಗಾಯತ್ರಿ ಹೆಗಡೆ ಗಡಿಗೆಹೊಳೆ ಶಿರಸಿ** (ಜ: 15-1-2002): ವಿದ್ಯಾರ್ಥಿನಿ. ತಂದೆ ದತ್ತಾತ್ರಯ ಹೆಗಡೆ ಗಡಿಗೆಹೊಳೆ. ತಾಯಿ ಸರೋಜಾ.
ಪ್ರಕಟಿತ ಕೃತಿ: ಬೆಳ್ಳಿಯ ಚಂದ್ರ-ಕವನ ಸಂಕಲನ
(11 ವರ್ಷದ ವಿದ್ಯಾರ್ಥಿನಿಯ ಕವನ ಸಂಕಲನ) 2013/54

(1080) **ಗಿರಿಜಾ ಗಾಂವ್ಕರ, ಮೂಲ್ಕಿ** (ಜ: 6-12-1975) ಎಂ.ಎ. ಪದವೀಧರೆ. ಸುರತ್ಕಲ್ಲಿನ ಗೋವಿಂದದಾಸ ಕಾಲೇಜಿನಲ್ಲಿ ಉಪನ್ಯಾಸಕಿ. ತಂದೆ ಗಣಪತಿ ಹೆಗಡೆ ಹಳೇ ಕಾನಗೋಡ ಶಿರಸಿ. ತಾಯಿ ಸುಶೀಲಾ. ಪತಿ ಡಾ|| ಗೋಪಾಲಕೃಷ್ಣ ಗಾಂವ್ಕರ, ಯಲ್ಲಾಪುರ. ಮೂಲ್ಕಿಯ ಗೇರುಕಟ್ಟೆ ನಿವಾಸಿ.

ಪ್ರಕಟಿತ ಕೃತಿಗಳು :

1. ಅನಾವರಣ–ಕವನ ಸಂಕಲನ 1997/48
2. ಅಗಸೆ ಬಾಗಿಲು–ಕವನ ಸಂಕಲನ 2011/68

ಪ್ರಶಸ್ತಿ :

ಮುಂಬೈ ಕನ್ನಡ ಸಂಘದ 'ಕಾರ್ನಾಡು ಸದಾಶಿವರಾವ್' ಪ್ರಶಸ್ತಿ 1998

(1081) **ಗೀತಾ ಮನೋಹರ ಅಂಕೋಲಾ** (ಜ: 7–9–1948): B.A. ಪಾರ್ಟ–1 ಶಿಕ್ಷಣ. (ಮದುವೆಯ ಮೊದಲಿನ ಹೆಸರು ಕುಸುಮಾ ಕೇಣಿಕರ) ಗೃಹಿಣಿ. ತಂದೆ–ಮಂಜುನಾಥ ಕೇಣಿಕರ ಅಂಕೋಲಾ. ತಾಯಿ–ಗೌರೀಬಾಯಿ. ಪತಿ ಮನೋಹರ ತೊಡೂರು ಕಾರವಾರ.

ಪ್ರಕಟಿತ ಕೃತಿಗಳು:

1. ಕವನಕುಸುಮ–ಶಿಶುಸಾಹಿತ್ಯ 1979/68
2. ಕಾವ್ಯಲತಾ–ಶಿಶುಸಾಹಿತ್ಯ 1980/60
3. ದಿಟ್ಟಪತ್ರಕರ್ತ ಪಾಟೀಲ ಪುಟ್ಟಪ್ಪನವರು–ಪರಿಚಯ 1982/90
4. ನಿಷ್ಕಾಮಕರ್ಮಿ ವೆಂಕಟಾಚಲಪತಿಯವರು–ಪರಿಚಯ 1981/58

5 . + ಮಕ್ಕಳ ಕತೆಗಳು–ಖ 1973/68

6 . + ಮಕ್ಕಳ ಕತೆಗಳು–ಖಖ 1974/90

ಟಿಪ್ಪಣಿ: + ಈ ಕೃತಿಗಳು ಕುಸುಮಾ ಕೇಣೀಕರ ಹೆಸರಿನಲ್ಲಿವೆ.

(1082) **ಡಾ॥ ಗೀತಾ ವಸಂತ ಭಟ್ಟ, ಯಲ್ಲಾಪುರ** (ಜ: 20–4–1976) ಎಂ.ಎ., ಪಿಎಚ್.ಡಿ., ಡಿ.ಲಿಟ್. (ಕನ್ನಡ) ಪದವೀಧರೆ. 'ಸ್ವಾತಂತ್ರ್ಯೋತ್ತರ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು' ವಿಷಯದಲ್ಲಿ ಡಾಕ್ಟರೇಟ್. ತುಮಕೂರು ವಿ.ವಿ.ಯ ಡಾ. ಡಿ.ವಿ.ಜಿ. ಕನ್ನಡ ಅಧ್ಯಯನ ಕೇಂದ್ರದಲ್ಲಿ ಸಹಾಯಕ ಪ್ರಾಧ್ಯಾಪಕಿ. ತಂದೆ ಶಿರಸಿ ತಾಲೂಕಿನ ಹೂತನ ಜಾನ್ಮನೆಯ ಎಸ್.ಜಿ. ಹೆಗಡೆ. ತಾಯಿ ಶರಾವತಿ. ಪತಿ ವಸಂತ ಭಟ್ಟ, ಹಾಸಣಗಿ–ಗ್ರಂಥಕರ್ತ.

ಪ್ರಕಟಿತ ಕೃತಿಗಳು :

1. ಕನ್ನಡಕ್ಕೊಬ್ಬರೇ ಗೋಕಾಕರು–ಸಂಪಾದಿತ... 2011
2. ಚೌಕಟ್ಟಿನಾಚೆಯವರು–ಕಥಾ ಸಂಕಲನ 2012/120
3. ತುಮಕೂರು ಜಿಲ್ಲೆಯ ಮಹಿಳಾ ಲೇಖಲೋಕ 2011/256
4. ಪರಿಮಳದ ಬೀಜ–ಕವನ ಸಂಕಲನ 2010/80
5. ಬೆಳಕಿನ ಬೀಜ–ವಿಮರ್ಶೆ... 2004/100
6. ಬೇಂದ್ರೆ ಕಾವ್ಯ : ಅವಧೂತ ಪ್ರಜ್ಞೆ 2010/150
7. ಹೊಸ ದಿಗಂತ ಹೊಸದಾರಿ (ಪಿಎಚ್.ಡಿ. ಪ್ರಬಂಧ).................... 2010/288
8. ಹೊಸಿಲಾಚೆ ಹೊಸಹೆಜ್ಜೆ–ಕವನ ಸಂಕಲನ 1999/60

ಪ್ರಶಸ್ತಿ/ಗೌರವ:

1. ಕರ್ನಾಟಕ ವಿದ್ಯಾವರ್ಧಕ ಸಂಘದ ರತ್ನಮ್ಮ ಹೆಗ್ಗಡೆ ಪ್ರಶಸ್ತಿ 'ಬೆಳಕಿನ ಬೀಜ'ಕ್ಕೆ...2005
2. 'ಚೌಕಟ್ಟಿನಾಚೆಯವರು' ಕಥಾ ಸಂಕಲನದ ಹಸ್ತಪ್ರತಿಗೆ ಪಾಟೀಲ ಪುಟ್ಟಪ್ಪ ಕಥಾ ಪ್ರಶಸ್ತಿ, ದೇವಾಂಗನಾ ಶಾಸ್ತ್ರೀ ಸಾಹಿತ್ಯ ಪುರಸ್ಕಾರ 2010
3. ಕಡೆಂಗೋಡ್ಲು ಕಾವ್ಯ ಪ್ರಶಸ್ತಿ ಮತ್ತು ಬೇಂದ್ರೆ ಸಾಹಿತ್ಯ ಪ್ರಶಸ್ತಿ

'ಪರಿಮಳದ ಬೀಜ'ಕ್ಕೆ 2010

4. 'ಚೌಕಟ್ಟಿನಾಚೆಯವರು' ಕಥಾಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ವರ್ಷದ ಶ್ರೇಷ್ಠ ಕಥಾಸಂಕಲನ' ಪುರಸ್ಕಾರ 2011
5. ಬೇಂದ್ರೆ ಕಾವ್ಯ ಕುರಿತು 'ಬೇಂದ್ರೆ ಕಾವ್ಯದ ವಿರಾಟ ಸ್ವರೂಪ' ಎಂಬ ಮಹಾಪ್ರಬಂಧಕ್ಕೆ ತುಮಕೂರು ವಿ.ವಿ.ಯಿಂದ ಡಿ.ಲಿಟ್. ಪದವಿ 2014

(1083) **ಗೀತಾ ಹೆಗಡೆ, ಸಿದ್ದಾಪುರ** (ಜ: 9-6-1958) ಬಿ.ಎ. ಪದವೀಧರೆ. ಅವಿವಾಹಿತೆ. ತಂದೆ ಗಣೇಶ ಹೆಗಡೆ. ತಾಯಿ ಗಣಪಮ್ಮ.

ಪ್ರಕಟಿತ ಕೃತಿಗಳು :

1. ಅಕ್ಷರ ಚೈತನ್ಯ-ಕವನ ಸಂಕಲನ 1998/37
2. ಗೋಮಹತಿ-ಕಿರುನಾಟಕ 2015/18

ಪ್ರಶಸ್ತಿ :

1. ಬೇಂದ್ರೆ ಅಡಿಗ ಕಾವ್ಯ ಪ್ರಶಸ್ತಿ-ಹಸ್ತ ಪ್ರತಿಗಾಗಿ 1999
2. ಅಣ್ಣಾರಾವ್ ಪ್ರತಿಷ್ಠಾನ ಪ್ರಶಸ್ತಿ 2002

(1084) **ಗೋದಾವರಿ ಭಟ್ಟ, ಶಿರಸಿ** (ಜ: 30-8-1954) ಎಸ್.ಎಸ್.ಸಿ. ಶಿಕ್ಷಣ. ಗೃಹಿಣಿ. ತಂದೆ ಗಣಪತಿ. ತಾಯಿ ಗಣಪಿ. ಪತಿ ಪರಮೇಶ್ವರ ಭಟ್ಟ, ಬಿಸಲಕೊಪ್ಪ, ಶಿರಸಿ.

ಪ್ರಕಟಿತ ಕೃತಿಗಳು :

1. ಕಾರ್ಯ ಸುಧಾ-ಸಂಪ್ರದಾಯದ ಹಾಡುಗಳು....... (1)2001, (2)2004/101
2. ಗುರು ಭಜನ ಚಂದ್ರಿಕೆ-ಭಜನೆಗಳು 2000/54

(1085) **ಗೌರಮ್ಮ ಜಿ. ನಾಯಕ ನಾಡುಮಾಸ್ಕೇರಿ ಕುಮಟಾ** (ಜ: 2-6-1943):B.A.B.Ed. ಪದವೀಧರೆ. ನಿವೃತ್ತ ಪ್ರೌಢಶಾಲಾ ಶಿಕ್ಷಕಿ. ಯಕ್ಷಗಾನ ಕಲಾವಿದೆ. ಗ್ರಾಮೀಣ ಕರಕುಶಲ ಕೈಗಾರಿಕೆ. ತಂದೆ-ತಿಮ್ಮಣ್ಣ ಗಾಂವಕರ ನಾಡು ಮಾಸ್ಕೇರಿ(ಯಕ್ಷಗಾನ ಕಲಾವಿದ. ಗ್ರಂಥಕರ್ತ)ತಾಯಿ-ಜನಾಬಾಯಿ.ಪತಿ-ಗೋವಿಂದ ನಾಯಕ ನಾಡುಮಾಸ್ಕೇರಿ (ತೊರ್ಕೆ)

ಪ್ರಕಟಿತ ಕೃತಿಗಳು:

1. ಅಮೇರಿಕಾ ಪ್ರಸಾಸ ಕಥನ 2012/55
2. ಬೇಲಿಯಾ ಹೂ-ಕವನಗಳು 2013/62

(1086) **ಚಂದ್ರಮತಿ ಸೋಂದಾ (ಡಾ|| ಕೆ.ಎಸ್. ಚಂದ್ರಮತಿ) ಮೈಸೂರು** (ಜ: 6-8-1954)ಎಂ.ಎ., ಪಿಎಚ್.ಡಿ. ಪದವೀಧರೆ. ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನ ಸಹಯೋಜಕಿ. ಮೈಸೂರು ವಿ.ವಿ. ಮಹಿಳಾ ಅಧ್ಯಯನ ಕೇಂದ್ರ ಹಾಗೂ ಹಾಸನ ಮತ್ತು ಮಂಡ್ಯದ ಸ್ನಾತಕೋತ್ತರ ಅಧ್ಯಯನ ಕೇಂದ್ರಗಳಲ್ಲಿ ತಾತ್ಕಾಲಿಕ ಅಧ್ಯಾಪಕಿ. ತಂದೆ ಸೊರಬ ತಾಲೂಕಿನ ಕಂತನಹಳ್ಳಿ ಶ್ರೀಪತಿ ಹೆಗಡೆ, ತಾಯಿ ಲಕ್ಷ್ಮಮ್ಮ. ಪತಿ ಡಾ|| ರಾಮಕೃಷ್ಣ ಜೋಶಿ, ಸೋಂದಾ, ಶಿರಸಿ ಗ್ರಂಥಕರ್ತ.

ಪ್ರಕಟಿತ ಕೃತಿಗಳು :

1. ಅಂತರಂಗದ ಅನಾವರಣ-ಅಂಕಣ ಬರಹಗಳು 2007/192
2. ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು-ಅಂಕಣ ಬರಹ ಸಂಕಲನ ... 2012/168
3. ಕರ್ನಾಟಕದಲ್ಲಿ ಮಹಿಳಾ ಚಳವಳಿಗಳು 2011/88
4. ಬಿಪ್ಪೊಡೆದ ಮೌನ-ಸ್ತ್ರೀವಾದಿ ವಿಮರ್ಶೆಗಳು.............................. 2004/200

5. ಜಯಲಕ್ಷ್ಮಿದೇವಿ–ವ್ಯಕ್ತಿ ಅಭಿವ್ಯಕ್ತಿ (ಸಂಪಾದಿತ)................................ 1996/68
6. ನಾರೀಭಾವ–ಅಂಕಣ ಬರಹಗಳು 2009/160
7. ನಾರೀ ಮಿಡಿತ–ಸ್ತ್ರೀವಾದಿ ಚಿಂತನೆಗಳು–ಅಂಕಣ ಬರಹಗಳು 2005/190
8. ನೆರಳು ಬೆಳಕು ಚಿತ್ರಗಳು (ಅನುವಾದಿತ ಕಥೆಗಳು)...................... 2000/136
9. ಮಹಿಳಾ ಸಾಂಸ್ಕೃತಿಕ ಪದಕೋಶ–ಪಶುಸಂಗೋಪನೆ (ಸಂಪಾದಿತ)
10. ಮಾನಸಿ–ಮಾನಸ–ಮಹಿಳಾ ಸಾಹಿತ್ಯ ವಿಮರ್ಶೆ 1997/130
11. ಶಬ್ದದೊಳಗಣ ನಿಶ್ಶಬ್ದ–ಅಂಕಣ ಬರಹ ಸಂಕಲನ 2010/200
12. ಹೆಣ್ಣಲ್ಲ ನಮಗ ರವಿ ಚಿನ್ನ 2006/184

ಪ್ರಶಸ್ತಿ/ಗೌರವ:

1. ಲಲಿತಮ್ಮ ಗುರುಸಿದ್ದಪ್ಪ ಸಿಂಧೂರ ಪ್ರಶಸ್ತಿ–ಮಾನಸಿ ಮಾನಸ ಕೃತಿಗಾಗಿ 1998
2. ಗುಡಿಬಂಡೆ ಪೂರ್ಣಿಮಾ ದತ್ತಿನಿಧಿ ಬಹುಮಾನ 2000
3. ಸಿಂಧೂರ ಪ್ರಶಸ್ತಿ.

(1087) **ಡಾ। ಚಂದ್ರಿಕಾ ಹೆಗಡೆ, ಬೆಂಗಳೂರು** (ಜ: 27–12–1979) ಎಂ.ಎ., ಪಿಎಚ್.ಡಿ. (ಕನ್ನಡ), **ಆಊಟಡಆಚಿ ಋ ಎಚಿಟಿಡಿಣಚಿಥಿ, ಆಊಟಡಆಚಿ ಋ ಃಚಿಚಿತಚಿ ಖಾಣಜುಝ** ಪದವೀಧರೆ. ಎಂ.ಎ.ಯಲ್ಲಿ ನಾಲ್ಕು ಮತ್ತು ಜೈನೊಲಾಜಿ ಡಿಪ್ಲೊಮಾದಲ್ಲಿ ಒಂದು ಬಂಗಾರದ ಪದಕ ಪುರಸ್ಕೃತೆ. ಬೆಂಗಳೂರಿನ ಎ.ಪಿ.ಎಸ್. ವಾಣಿಜ್ಯ ಕಾಲೇಜಿನಲ್ಲಿ ಉಪನ್ಯಾಸಕಿ. ತಂದೆ ಗಜಾನನ ಹೆಗಡೆ ಯಲ್ಲಾಪುರ, ತಾಯಿ ಪಿ. ವೆಂಕಟೇಶ್ವರಿ. ಪತಿ ಉದಯರವಿ ಹೆಗಡೆ, ಬೆಂಗಳೂರು.

ಪ್ರಕಟಿತ ಕೃತಿ:ಕನ್ನಡ ನವೋದಯ ಕವಿಗಳ ಕಾವ್ಯಮೀಮಾಂಸೆ............2010/410 (ಪಿಎಚ್.ಡಿ. ಪ್ರಬಂಧ)

(1088) **ಚಂಪಕಾ ಭಟ್ಟ ಬೆಂಗಳೂರು** (ಜ: 16–3–1982): ಬಿ.ಕಾಂ. ಪದವೀಧರೆ. ಗೃಹಿಣಿ. ತಂದೆ ನಾರಾಯಣ ಭಟ್ಟ ಸಾಗರ. ತಾಯಿ ರತ್ನಾವತಿ. ಪತಿ ನರಸಿಂಹ ಭಟ್ಟ ಬಡಗು, ಮುಸ್ಕಿ, ಶಿರಸಿ. ಬೆಂಗಳೂರು ನಿವಾಸಿ. (ಗ್ರಂಥಕರ್ತ)

ಪ್ರಕಟಿತ ಕೃತಿಗಳು:

1. ಪಕ್ಷಿರಾಜ ಗರುಡ 2015/60
2. ಶ್ರೀ ರಮಣ ಮಹರ್ಷಿ 2014/72
3. Garuda.. 2015/60

(1089) **ಚೈತ್ರಾ ಕೆ.ಎಸ್. (ಡಾ।), ಬೆಂಗಳೂರು** (ಜ: 27–6–1973) ಬಿ.ಡಿ.ಎಸ್., ಡಿ.ಡಿ.ಎ. ಪದವೀಧರೆ. ದಂತವೈದ್ಯೆ. ದೂರದರ್ಶನದಲ್ಲಿ ನಿರೂಪಕಿ, ವಾರ್ತಾವಾಚಕಿ. ಭರತನಾಟ್ಯ ಕಲಾವಿದೆ. ತಂದೆ ಡಾ॥ ಕೆ.ಆರ್. ಶ್ರೀಧರ, ಶಿವಮೊಗ್ಗ. ತಾಯಿ ವಿಜಯಾ ಶ್ರೀಧರ– ಇಬ್ಬರೂ ಗ್ರಂಥಕಾರರು. ಪತಿ ಸಂತೋಷ ಸಿದ್ಧೇಶ್ವರ. ಬೆಂಗಳೂರು ನಿವಾಸಿ.

ಪ್ರಕಟಿತ ಕೃತಿಗಳು :

1. ಆರೋಗ್ಯದ ನಗುವಿಗಾಗಿ–ಲೇಖನಗಳು 2005/70
2. ಆಸೆ ಮತ್ತು ಅಗತ್ಯಗಳು–ವ್ಯಕ್ತಿತ್ವ ವಿಕಸನ 2014/112
3. ಕುಶಲವೇ ಕ್ಷೇಮವೇ?–ಲೇಖನಗಳು 2007/76
4. ಕೋತಪ್ಪ ನಾಯಕನ ಯಜಮಾನಿಕೆ–ಮಕ್ಕಳ ಕಥೆಗಳು 2014/156
5. ಗರಾಜ್ ಸೇಲ್–ಕಥಾ ಸಂಕಲನ 2012/100

6. ಪರಿಪೂರ್ಣ ವ್ಯಕ್ತಿತ್ವ-ಲೇಖನಗಳು (ಸಹಲೇಖಕಿ) 2008/112
7. ಬಳೆಗಳ ಭಾರಹೊತ್ತು-ಅಂಕಣಬರಹ ಸಂಕಲನ 2015/104
8. ಮನದೊಳಗಿನ ಮಾತು-ಮಥನ: ಅಂಕಣ ಬರಹಗಳು 2011/180
9. ಯೋಗಕ್ಷೇಮ 2010/68

ಪ್ರಶಸ್ತಿ/ಗೌರವ :

1. ಅಂತಾರಾಷ್ಟ್ರೀಯ ಅತ್ಯುತ್ತಮ ವಿದ್ಯಾರ್ಥಿನಿ-ಇಂಟರ್ ನ್ಯಾಶನಲ್ ಸೊಸೈಟಿ ಆಫ್ ಡೆಂಟಿಸ್ಟ್ ಇವರಿಂದ 1996
2. ಉತ್ತಮ ಯುವ ಬರಹಗಾರ ಪ್ರಶಸ್ತಿ 2004
3. ಕಥಾರಂಗಂ ಪ್ರಶಸ್ತಿ 2008
4. ಉತ್ತಮ ವಾರ್ತಾ ವಾಚಕಿ-ದೂರದರ್ಶನ, ಬೆಂಗಳೂರು ಇವರಿಂದ 2008
5. ಕ.ಸಾ.ಪ. ದಿಂದ 2010ನೇ ಸಾಲಿನ ಮಹಿಳಾ ವರ್ಷದ ಪಶಸ್ತಿ............2010
6. ಶಿವಮೊಗ್ಗೆಯ ಕರ್ನಾಟಕ ಸಂಘದ ಡಾ.ಹಾ.ಮಾ. ನಾಯಕ ಪುಸ್ತಕ ಬಹುಮಾನ 2011
7. ಧಾರವಾಡದ ಬೇಂದ್ರೆ ಗ್ರಂಥ ಬಹುಮಾನ... 2012'
8. ಕನ್ನಡ ಪ್ರಭ ದೀಪಾವಳಿ ಲಲಿತ ಪ್ರಬಂಧ ಸ್ಪರ್ಧೆ-ಪ್ರಥಮ ಬಹುಮಾನ .. 2014
9. 'ಆಸೆ ಮತ್ತು ಅಗತ್ಯಗಳು' ಕೃತಿಗೆ ಭಾರತೀಯ ಮನೋವೈದ್ಯ ಸಂಘದ ಕರ್ನಾಟಕ ಶಾಖೆಯಿಂದ ಡಾ. ಎಸ್.ಎಸ್. ಜೈರಾಮ ಪ್ರಶಸ್ತಿ 2014

(1090) **ಜಯಶ್ರೀ ಕಣ್ಣಿ, ಹೊನ್ನಾವರ** (ಜ: 1957) ಎಂ.ಎ. (ಕನ್ನಡ) ಪದವೀಧರೆ. ಗೃಹಿಣಿ. ಕಾಸರಗೋಡಿನ ಕುಸುಮ ಕುಂಜದ ಕನ್ನಡ ತ್ರೈಮಾಸಿಕ "ತುಳಸಿ" ಪತ್ರಿಕೆ ಸಂಪಾದಕಿ. ತಂದೆ ಹನುಮಂತಾಚಾರ್ಯ ಕೆರೂರು. ತಾಯಿ ಕಮಲಾ, ಪತಿ ಶ್ರೀಪಾದ ಹೆಗಡೆ ಕಣ್ಣಿ, ಹೊನ್ನಾವರ-ಗ್ರಂಥಕರ್ತ.

ಪ್ರಕಟಿತ ಕೃತಿಗಳು :

1. ಅಭಿನವ ಶಾಕುಂತಲ-ನಾಟಕ 2010/104
2. ಆಕಾಶ ಕಳೆದಿದೆ-ಕವನ ಸಂಕಲನ 1999

(1091) **ಜಯಶ್ರೀ ನಾರಾಯಣ ನಾಯಕ ಎಕ್ಕಂಬಿ ಶಿರಸಿ** (ಜ: 1-3-1946): ಖಖಐ.ಅ. ಶಿಕ್ಷಣ. ಗೃಹಿಣಿ. ಆಕಾಶವಾಣಿ ಕಲಾವಿದೆ. ತಂದೆ-ವಿಠ್ಠಲ ಆಚಾರ್ಯ ಶಿರಸಿ (ಗ್ರಂಥಕರ್ತ). ತಾಯಿ-ವನಮಾಲಾ. ಪತಿ-ನಾರಾಯಣ ನಾಯಕ ಎಕ್ಕಂಬಿ.

ಪ್ರಕಟಿತ ಕೃತಿಗಳು: ಎಲ್ಲವೂ ಕೊಂಕಣಿಯಲ್ಲಿ

1. ಕೊಂಕಣಿ ಜಾನಪದ-ಪದ್ಯಸಂಗ್ರಹ 2009/82
2. ಕೊಂಕಣಿ ಬಾಲಗೀತಾ-ಪದ್ಯಗಳು.. 1996/61
3. ಮಂಗಳಗೌರಿ ವ್ರತಕಥಾ-ಗದ್ಯಪದ್ಯ 2005/20
4. ಶ್ರೀ ಪದ್ಮಾವತಿ ಶ್ರೀನಿವಾಸ ಕಲ್ಯಾಣ ಮತ್ತು ಕೊಂಕಣಿ ಕಾವ್ಯಮಾಲಾ-ಗದ್ಯಪದ್ಯ... 2013/100
5. ಶ್ರೀ ಶನಿದೇವಾಲೆ ಮಹಿಮಾ-ಗದ್ಯಪದ್ಯ 2006/20
6. ಶ್ರೀ ಸತ್ಯನಾರಾಯಣ ವ್ರತಕಥಾ-ಗದ್ಯಪದ್ಯ 2004/16

ಗೌರವ:ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಲನಗಳಲ್ಲಿ ಕವಿಗೋಷ್ಠಿಯಲ್ಲಿ ಕವಿತಾ ವಾಚನ.

(1092) **ಜಯಾ ಯಾಜಿ, ಶಿರಾಲಿ** (ಜ: 25-4-1953) ಎಸ್.ಎಸ್.ಸಿ. ವಿದ್ಯಾಭ್ಯಾಸ. ಗೃಹಿಣಿ. ತಂದೆ ಕುಮಟಾ ತಾಲೂಕಿನ ಮೂರೂರಿನ ಗಣೇಶ ಭಟ್ಟ. ತಾಯಿ ತಾರಾ. ಪತಿ ಭಟ್ಕಳ ತಾಲೂಕಿನ ಶಿರಾಲಿಯ ನಾರಾಯಣ ಯಾಜಿ-ಗ್ರಂಥಕಾರ.

ಪ್ರಕಟಿತ ಕೃತಿಗಳು :

1. ಅವಲೋಕನ-ಸಣ್ಣ ಕಥಾ ಸಂಕಲನ.. 2011/87
2. ಗಿಣಿಮರಿ-ಮಕ್ಕಳ ಕವನಗಳು... 2007/52
3. ಗುಟ್ಟು ಗುಟ್ಟೇ-ಹಾಸ್ಯ ಲೇಖನಗಳು 2000/72
4. ಜಾಜಿ ಗಿಡದ ಗುಬ್ಬಿಗಳು: ಪ್ರಬಂಧ ಸಂಕಲನ 2003/107
5. ಮಂದಹಾಸ-ನಗೆಬರಹಗಳು 2011/116
6. ಶಂಕ್ರಿ-ಕಥಾ ಸಂಕಲನ 2000/108

ಪ್ರಶಸ್ತಿ/ಗೌರವ :

1. ಕೊಡಗಿನ ಗೌರಮ್ಮ ಪ್ರಶಸ್ತಿ 1998
2. ಗೋರೂರು ಪ್ರತಿಷ್ಠಾನದ ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ 2000
3. 'ಎತ್ತಿರೆ ಮುತ್ತಿನಾರತಿಯಾ' ಕಥೆ ಆಧಾರಿತ ನಾಟಕಕ್ಕೆ ಹೊಸಪೇಟೆ ಆಕಾಶವಾಣಿಯಿಂದ ರಾಜ್ಯಮಟ್ಟದ ಬಹುಮಾನ-ಉದಯೋನ್ಮುಖ ವರ್ಧಮಾನ ಪ್ರಶಸ್ತಿ 2000
4. ಭಟ್ಕಳ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆ 2013

(1093) **ಜಾಹ್ನವಿ ಎಸ್. ಹೆಗಡೆ, ಕುಮಟಾ** (ಜ: 10-2-1966) ಬಿ.ಎ., ಬಿ.ಎಡ್. ಪದವೀಧರೆ. ಶಾಲಾ ಶಿಕ್ಷಕಿ, ಯಕ್ಷಗಾನ ಕಲಾವಿದೆ, ಸಂಘಟಕಿ. ತಂದೆ ಸೀತಾರಾಮ ಹೆಗಡೆ, ದುಂಡಕುಳಿ. ತಾಯಿ ರುಕ್ಮಿಣಿ. ಪತಿ ಕಾಮೇಶ್ವರ ಭಟ್ಟ, ಗುಡೇ ಅಂಗಡಿ, ಕುಮಟಾ.

ಪ್ರಕಟಿತ ಕೃತಿಗಳು :

1. ಅಕ್ಷರ ಮಾಲಿಕೆ-ಪದ್ಯಗಳು 2006/52
2. ಜಾನಪದ ಕಲಾಕ್ಷೇತ್ರ-ಪರಿಚಯ 2003/84

ಪ್ರಶಸ್ತಿ/ಗೌರವ : ಕನ್ನಡ ಸಂಸ್ಕೃತಿ ಇಲಾಖೆಯಿಂದ 'ಜಾನಪದ ಕಲಾಕ್ಷೇತ್ರ' ಕೃತಿಗಾಗಿ ರೂ.5000/- ಪುರಸ್ಕಾರ 2004

(1094) **ಜ್ಯೋತಿ ಎಂ. ನಾಯಕ (ಡಾ.) ಅಂಕೋಲಾ** (ಜ: 23-9-1983) ಓ.ಂ., ಖ.ಆ. ಪದವೀಧರೆ. ಕಾಲೇಜಿನಲ್ಲಿ ಉಪನ್ಯಾಸಕಿ. ತಂದೆ ಮನೋಹರ ನಾಯಕ ಶಿಂಗನಮಕ್ಕಿ ಅಂಕೋಲಾ. ತಾಯಿ ಸೀಮಾ. ಪತಿ ಮನೋಜಕುಮಾರ ಮಲ್ಗೇರಿ ಅಂಕೋಲಾ. **ಪ್ರಕಟಿತ ಕೃತಿ**: ಎನ್.ಆರ್. ನಾಯಕ: ಬದುಕು ಬರಹ 2012/460

(1095) **ಜ್ಯೋತಿ ಶಾನಭಾಗ ಹೊನ್ನಾವರ** (ಜ: 8-11-1976): ಬಿ.ಎ., ಕಂಪ್ಯೂಟರ್ ಡಿಪ್ಲೋಮಾ ಪದವೀಧರೆ. ತಾಲೂಕಾ ಪಂಚಾಯತ ಕಚೇರಿ ಉದ್ಯೋಗಿ. ತಂದೆ ಶ್ರೀಪಾದ ಹೆಬ್ಬಾರ. ತಾಯಿ ಸರಸ್ವತಿ. ಪತಿ ರವೀಂದ್ರ ಶಾನಭಾಗ ಮಾಳಕೋಡ ಹೊನ್ನಾವರ. **ಪ್ರಕಟಿತ ಕೃತಿ**:ಹಸಿರು ತೋರಣ-ಕವನ ಸಂಕಲನ (ಇತರ ಮೂವರೊಂದಿಗೆ) 2014/148

(1096) **ಜ್ಯೋತ್ಸ್ನಾ ಕೃಷ್ಣಾನಂದ ಕಾಮತ (ಡಾ॥) ಬೆಂಗಳೂರು** ಜ: 24-1-1937):M.A., Ph .D., D.E.D. ಪದವೀಧರೆ. ಆಕಾಶವಾಣಿ ನಿರ್ದೇಶಕಿ (ನಿವೃತ್ತ).ತಂದೆ-ಗಣೇಶ ಬುರ್ಡೆಕುಮಟಾ. ತಾಯಿ-ಶಾರದಾಬಾಯಿ. ಪತಿ-ಡಾ. ಕೃಷ್ಣಾನಂದ ಕಾಮತ ಹೊನ್ನಾವರ (ಗ್ರಂಥಕರ್ತ)

ಪ್ರಕಟಿತ ಕೃತಿಗಳು:

1.+ ಕರ್ನಾಟಕದ ಶಿಕ್ಷಣ ಪರಂಪರೆ–ಸಂಶೋಧನ ಗ್ರಂಥ 1988/128
2. ಕರುನಾಡಿನ ಜನಜೀವನ–ಸಂಶೋಧನ ಗ್ರಂಥ 2007/142
3. ಕೈಗನ್ನಡಿಯಲ್ಲಿ ಕನ್ನಡಿತಿ–ಮಹಿಳಾ ಅಧ್ಯಯನ 2008/150
4. ನಗೆ ಕೇದಿಗೆ–ಲಘುಹಾಸ್ಯ 1999/134
5. ನಗೆ ನವಿಲು–ವಿನೋದ... 2013/88
6. ನೆನಪಿನಲಿ ನಿಂದವರು–ಸಾಧಕಿಯರ ಪರಿಚಯ......................... 2000/166
7. ಮಹಿಳೆ ಅಂದು ಇಂದು–ತೌಲನಿಕ ಅಧ್ಯಯನ 2001/130
8. ಮಹಿಳೆ ಒಂದು ಅಧ್ಯಯನ 1999/102
9. ಸಂಸಾರದಲ್ಲಿ ಸ್ವಾರಸ್ಯ–ತಿಳಿಹಾಸ್ಯ .... (1)1987 (2)1992/182
10. ಹೀಗಿದ್ದೇವೆ ನಾವು–ವಿನೋದ 1980/142
11.* ಕಮಲಾದೇವಿ ಚಟ್ಟೋಪಾಧ್ಯಾಯ (ಕೊಂಕಣಿಯಲ್ಲಿ) 2009/152
12. ಸುರಗ್ಯಾಸರ (ಕೊಂಕಣಿ ಸಾಂಪ್ರದಾಯಿಕ ಗೀತೆಗಳ ಸಂಗ್ರಹ–ಅಧ್ಯಯನ)–ಸಚಿತ್ರ ದೇವನಾಗರಿ ಮತ್ತು ಕನ್ನಡ ಲಿಪಿ. 2005/220
13. Education in Karnataka Through the Ages-Research 2009/148
14. Social Life in Medivial Karnataka -10th to 14th century (Ph.D. Thesis) 1980/142

* ಈ ಕೃತಿ ಅದೇ ಹೆಸರಿನಲ್ಲಿ ಕನ್ನಡದಲ್ಲಿ ಡಾ.ಗೀತಾ ಶೆಣೈರಿಂದ ಅನುವಾದಗೊಂಡಿದೆ.

ಪ್ರಶಸ್ತಿ/ಗೌರವ:

1.+ ಶ್ರೇಷ್ಠ ಸೃಜನೇತರ ಕೃತಿ ಪ್ರಶಸ್ತಿ–ರಾಜ್ಯ ಸಾಹಿತ್ಯ ಅಕಾಡೆಮಿಯಿಂದ 1988
2. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 1991
3. ಕೆ. ಶಾಮರಾವ್ ಪ್ರಶಸ್ತಿ–ಉ.ಕ. ಜಿಲ್ಲಾದಿಂದ 2000
4. ಸದೋದಿತಾ ಪ್ರಶಸ್ತಿ–ಓಒಏಖಗಿ ಸಂಸ್ಥೆಯಿಂದ 2000
5. ರೆ. ಕಿಟ್ಟೆಲ್ ಪ್ರಶಸ್ತಿ–ಒಖಅಔ ಕನ್ನಡ ಬಳಗದಿಂದ 2001

(1097) **ತಾರಾ ಹೆಗಡೆ ಮಾರಿಕಾಂಬಾನಗರ ಶಿರಸಿ** (ಜ: 5–6–1957) ಪದವಿಪೂರ್ವ ಶಿಕ್ಷಣ. ಸಮಾಜ ಸೇವಕಿ. ತಂದೆ ವಿಘ್ನೇಶ್ವರ ಶರ್ಮಾ ತದ್ದಲಸೆ, ಶಿರಸಿ. ತಾಯಿ ದೇವಕಿ. ಪತಿ ನಾರಾಯಣ ಹೆಗಡೆ ಮಾರಿಕಾಂಬಾನಗರ, ಶಿರಸಿ.

ಪ್ರಕಟಿತ ಕೃತಿ: ಗುಚ್ಛ–ಲೇಖನ ಸಂಗ್ರಹ 2010/144

ಪ್ರಶಸ್ತಿ/ಗೌರವ: ಅತ್ಯುತ್ತಮ ಚಿತ್ರಲೇಖನಕ್ಕಾಗಿ ಕರ್ನಾಟಕ ಪತ್ರಕರ್ತರ ಸಂಘದಿಂದ ಮಹಿಳಾ ವರ್ಗೀಸ್ ಪ್ರಶಸ್ತಿ 1995

(1098) **ತೇಜಸ್ವಿನಿ ಹೆಗಡೆ, ಬೆಂಗಳೂರು** (ಜ: 5–11–1979) ಬಿ.ಎಸ್ಸಿ., ಎಂ.ಎ. (ಕನ್ನಡ) ಪದವೀಧರೆ. ಗೃಹಿಣಿ. ತಂದೆ ಡಾ॥ ಜಿ.ಎನ್. ಭಟ್ಟ, ಹರಿಗಾರ, ಮಂಗಳೂರಿನ ಕೆನರಾ ಕಾಲೇಜಿನಲ್ಲಿ ಪ್ರಾಧ್ಯಾಪಕ. ತಾಯಿ ಜಯಲಕ್ಷ್ಮಿ. ಪತಿ ರಾಮಕೃಷ್ಣ ಹೆಗಡೆ, ವಾನಳ್ಳಿ, ಶಿರಸಿ.

ಪ್ರಕಟಿತ ಕೃತಿಗಳು :

1. ಅಬ್ರಹಾಂ ಲಿಂಕನ್ 2011/75
2. ಕಾಣ್ಕೆ–ಕಥಾ ಸಂಕಲನ 2008/30
3. ಚಿಗುರು–ಕವನ ಸಂಕಲನ 1995/28

4. ಪ್ರತಿಬಿಂಬ–ಕವನ ಸಂಕಲನ.. 2008/30
5. ಸಂಹಿತಾ–ಕಥಾ ಸಂಕಲನ (ಭಾಗಶಃ ಹವಿಗನ್ನಡದಲ್ಲಿ) 2015/222
6. ತನ್ನ ತಾನ
7. ಹೊರಳುದಾರಿ

(1099) **ತ್ರಿವೇಣಿ ಹೆಗಡೆ, ಸಿದ್ದಾಪುರ** (ಜ: 8–9–1951) ಬಿ.ಎಸ್ಸಿ., ಬಿ.ಎಡ್. ಪದವೀಧರೆ. ಸಾಗರದ ಸರಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕಿ. ತಂದೆ ಸೀತಾರಾಮ ಹೆಗಡೆ, ಮೂಲೆ ಮನೆ, ಶಿರಸಿ. ತಾಯಿ ಶಾರದಾ. ಪತಿ ನಾರಾಯಣ ಸುಬ್ರಾಯ ಹೆಗಡೆ, ದೊಡ್ಮನೆ, ಸಿದ್ದಾಪುರ.

ಪ್ರಕಟಿತ ಕೃತಿ : ಗೀತ ಕುಸುಮ–ಹಾಡುಗಳ ಸಂಗ್ರಹ 1974/50

ಪ್ರಶಸ್ತಿ:'ಚುಟುಕುಶ್ರೀ' ರಾಜ್ಯಮಟ್ಟದ ಚುಟುಕು ಸಮ್ಮೇಳನದಲ್ಲಿ........................2003

(1100) **ದಾಕ್ಷಾಯಿಣಿ ಹೆಗಡೆ, ಶಿರಸಿ** (ಜ: 6–5–1955) ಪ್ರಾಥಮಿಕ ಶಿಕ್ಷಣ. ಗೃಹಿಣಿ. ತಂದೆ ಶಿವರಾಮ ಹೆಗಡೆ, ಬಪ್ಪನಕೊಡ್ಲು, ಶಿರಸಿ–ಗ್ರಂಥಕರ್ತ. ತಾಯಿ ಪಾರ್ವತಿ. ಪತಿ ವಿಶ್ವನಾಥ ಹೆಗಡೆ, ಸೋಮನ ಮನೆ, ಶಿರಸಿ.

ಪ್ರಕಟಿತ ಕೃತಿಗಳು :

1. ಕವನ ಕುಂಕುಮಾರ್ಚನೆ ಭಾಗ–1 ಸಂಪ್ರದಾಯದ ಹಾಡು 1979/54
2. ಕವನ ಕುಂಕುಮಾರ್ಚನೆ ಭಾಗ–2 ಸಂಪ್ರದಾಯದ ಹಾಡು.............1997/48

(1101) **ನಯನಾ ಹೆಗಡೆ, ಬೆಂಗಳೂರು** (ಜ: 17–8–1988) ಬಿ.ಕಾಂ. ಪದವೀಧರೆ ವಿದ್ಯಾರ್ಥಿನಿ. ತಂದೆ ನರಸಿಂಹ ಹೆಗಡೆ, ಬನಗೆರೆ ಮೆಣಸಿ, ಶಿರಸಿ. ತಾಯಿ ಗೌರಿ. ಪತಿ ವಿಜಯ ಹೆಗಡೆ, ಬಿಸಲಕೊಪ್ಪ, ಶಿರಸಿ (ಬೆಂಗಳೂರು ವಾಸಿ)

ಪ್ರಕಟಿತ ಕೃತಿ : ಕಾವ್ಯ ಕನ್ನಿಕಾ–ಕವನಗಳು 2008/44

(1102) **Nalini Sanzagiri Mumbai** (BOD: 27-1-1927): B.Sc. (Hons). मढ्ढस्ढ्ढ्ढकढ्ढ ढ्ढमढ्ढिढ्ढ। मढ्ढढ्ढ्ढथ्त्त.ढ्ढाढ म्त?थढ्ढौ.ढ | थढ्ढढिढ्ढ।थढ्ढढ | मढ्ढढिढ्ढशढ्ढस्ढलढ्ढस शढ्ढढ्ढफढ्ढढ्ढाढ्ढ ।ढ्ढढ्ढ्ढढाढरूढ्ढ थढ्ढढेढ्ढढ्ढ०. म?ढ्ढढ्ढ मढ्ढश्म?ढ्ढौ.ढि म्ढ्ढ?ढ्ढि : थढ्ढढ्ढप.ढ्ढथढ्ढरू मढ्ढश्म?ढ्ढषढ त्त?सढ्ढरू।अढ्ढथिढ्ढचढ्ढ्ढढ 2014/76

(1103) **ನಾಗಮಣಿ ನಾಯಕ ಬೇಲೇಕೇರಿ ಅಂಕೋಲಾ** (ಜ: 1–8–1948): S.S.L.C., T.C.H. ಶಿಕ್ಷಣ. ನಿವೃತ್ತ ಶಿಕ್ಷಕಿ. ತಂದೆ–ಮಾಣಿ ನಾಯಕ ಭಾವಿಕೇರಿ ಅಂಕೋಲಾ. ತಾಯಿ–ಪಾರ್ವತಿ. ಪತಿ–ಗೋವಿಂದ ನಾಯಕ ಬೇಲೇಕೇರಿ.

ಪ್ರಕಟಿತ ಕೃತಿಗಳು:

1. ಚದುರಿದ ಚಿತ್ರಗಳು–ಕಿರುಕಾದಂಬರಿ.. 2010/105
2. ಪಯಣ–ಪ್ರವಾಸ ಕಥನ 2012/100
3. ಮಕ್ಕಳ 3 ಕಿರುನಾಟಕಗಳು (ಬಾಲಕೃಷ್ಣ, ಪೆದ್ದ, ಸರಳ) 2014/50
4. ಹಾಸ್ಯ ಚಟಾಕಿ–ನಾಟಕ
   (ಕುವೆಂಪುರವರ ಮಲೆನಾಡಿನ ಚಿತ್ರಗಳು ಆಧಾರಿತ) 2013/68

(1104) **ನಾಗರತ್ನಾ ಹೆಗಡೆ, ಬೆಂಗಳೂರು** (ಜ: 20–6–1965) ಸಂಸ್ಕೃತ ವಿದುಷಿ (ಅಲಂಕಾರ), ಎಂ.ಎ., ಪಿಎಚ್.ಡಿ. (ಸಂಸ್ಕೃತ) ಪದವೀಧರೆ. ಬೆಂಗಳೂರಿನ ಸುರಾನಾ ಕಾಲೇಜಿನಲ್ಲಿ

ಸಂಸ್ಕೃತ ಪ್ರಾಧ್ಯಾಪಕಿ. ತಂದೆ ಈಶ್ವರ ಹೆಗಡೆ ಓಣಿಕೇರಿ, ಶಿರಸಿ. ತಾಯಿ ಜಾನಕಿ. ಪತಿ ಜನಾರ್ದನ ಹೆಗಡೆ, ದೇವದಕೇರಿ, ಶಿರಸಿ. (ಗ್ರಂಥಕರ್ತ)

ಪ್ರಕಟಿತ ಕೃತಿಗಳು :

1. ಉತ್ತಿಷ್ಠತ-ಜಾಗೃತ-ಅನುವಾದಿತ 2003/204
2. ಗೋಮಂತಕಮ್ 2006/
3.+ ಮನಃ ತತ್ವಪ್ರಶಮನಂ ಚ 2011/
4. ಜ್ಞಾನ ದೀಪ್ತಿ-ಅನುವಾದಿತ 2001/151

(ನಾಲ್ಕು ಕೃತಿಗಳು ಕನ್ನಡದಿಂದ ಸಂಸ್ಕೃತಕ್ಕೆ ಅನುವಾದಿತ)

(1105) **ನಾಗರೇಖಾ ಗಾಂವಕರ ದಾಂಡೇಲಿ** (ಜ: 28-4-1974) M.A., B.Ed.ಪದವೀಧರೆ. ಸ್ಥಳೀಯ ಸ.ಪ.ಪೂ. ಕಾಲೇಜಿನಲ್ಲಿ ಉಪನ್ಯಾಸಕಿ. ತಂದೆ ಪಾಂಡುರಂಗ ಗಾಂವಕರ ಅಗಸೂರ ಅಂಕೋಲಾ. ತಾಯಿ ಲಕ್ಷ್ಮಿ. ಪತಿ ಪ್ರವೀಣ ನಾಯ್ಕ ಹಿಚ್ಕಡಅಂಕೋಲಾ. **ಪ್ರಕಟಿತ ಕೃತಿ**: ಏಣಿ-ಕವನ ಸಂಕಲನ 2015/56

ಪ್ರಶಸ್ತಿ/ಗೌರವ:

1. ಭಾರತಿ ಸಾಹಿತ್ಯಾರಾಧನ ವೇದಿಕೆಯಿಂದ ಕಾರುಣ್ಯಪ್ರಶಸ್ತಿ 2015
2. ಹಳಿಯಾಳ ತಾಲೂಕಾ 7ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ...2015

(1106) **ನಾಗವೇಣಿ ಹೆಗಡೆ, ಬೆಂಗಳೂರು** (ಜ: 21-7-1964) ಎಂ.ಎ.(ರಾಜ್ಯಶಾಸ್ತ್ರ), ಎಂ.ಎಸ್.(ಕೌನ್ಸೆಲಿಂಗ್ ಹಾಗೂ ಸೈಕೋಥೆರಪಿ). ರಾಜ್ಯಕಾರ್ಮಿಕ ವಿಮಾ ಇಲಾಖೆ ಉದ್ಯೋಗಿ. ತಂದೆ ತಿಮ್ಮಣ್ಣ ಭಟ್ಟ, ಹೊಲನಗದ್ದೆ. ತಾಯಿ ಅನುಸೂಯಾ. ಪತಿ ವೆಂಕಟರಮಣ ಹೆಗಡೆ, ಹೊಲನಗದ್ದೆ, ಕುಮಟಾ.

ಪ್ರಕಟಿತ ಕೃತಿಗಳು :

1. ವಾಣಿ-ವ್ಯಕ್ತಿ ಚಿತ್ರ-ಪರಿಚಯ...2006/42
2. ಸರಸ್ವತಿಬಾಯಿ ರಾಜವಾಡೆ-ಪರಿಚಯ 2006/42

(1107) **ನಿರ್ಮಲಾ ಭಟ್ಟ, ಶಿವಮೊಗ್ಗ** (ಜ: 29-11-1953) ಎಂ.ಎ., ಜಿ.ಡಿ.ಸಿ., ಡಿ.ಎಂ.ಆರ್. ಪದವೀಧರೆ. ವಿಶೇಷ ಶಿಕ್ಷಣ ತಜ್ಞೆ. ಸಮಾಜಸೇವಕಿ. ತಂದೆ ವಿಶ್ವನಾಥ ಹೆಗಡೆ, ಶಿರಸಿ. ತಾಯಿ ಗಿರಿಜಾ. ಪತಿ ಪ್ರೊ. ವಿದ್ವಾನ್ ವಿ.ಎನ್. ಭಟ್ಟ, ಶಿವಮೊಗ್ಗ-ಗ್ರಂಥಕರ್ತ.

ಪ್ರಕಟಿತ ಕೃತಿಗಳು :

1. ಬುದ್ಧಿ ಮಾಂದ್ಯತೆ ಮತ್ತು ವಿಶೇಷ ಶಿಕ್ಷಣ...1994/60
2. ಬುದ್ಧಿ ಮಾಂದ್ಯತೆ-ತಂದೆ ತಾಯಿಯರಿಗೆ ಮಾರ್ಗದರ್ಶನ 1991/40

ಪ್ರಶಸ್ತಿ :

1. ಲಲಿತಾಂಬ ವೃಷಭೇಂದ್ರ ಸ್ವಾಮಿ ಪ್ರಶಸ್ತಿ 1996
2. ಅಂಗವಿಕಲ ಕಲ್ಯಾಣ ಇಲಾಖೆಯಿಂದ ರಾಜ್ಯಪ್ರಶಸ್ತಿ 2004
3. ಮಕ್ಕಳ ಕಲ್ಯಾಣ ಕ್ಷೇತ್ರದ ಸೇವೆಗಾಗಿ ರಾಜ್ಯ ಪ್ರಶಸ್ತಿ 2007

(1108) **Neelima Nadkarni Mumbai** (BOD: 1-9-1938): B.A. मठस्ुठड्वकदूठ । ड्डमठढ्ढिढ्ढूठथठचठ्ञस्ष्ट म्ञ?ौ.म? म?स्ष्टठ म?ढ्ढठढू । थठठढ्ढिढ्ढाशठड्वढ्ढिठ । मठड्डढ्ढिाषठड्ढषठम?ठ्ञढ्ढि लठठ्ट.म?ड्ढहठस्र म?स्ष्टठ म?ढ्ढठढू । मठश्वम?ड्डौ.ढ्ढि म्द्ध?ड्डढ्ढिरठठ्ञरु थढूठप.ड्वथठरूरु

1. ढ्ढ्ञाढ्ढान.ठरूप.ड्व म?ै.ढ्डलठरठठ्ञ 2005/160
2 . + शमठ्ञस्लठरुान.ठरूप.ड्व म?ै.ढ्डलठरठठ्ञ 2013/107

६ ड्डौ.ममठड्ढहठरु चशठथठरु ाढ्ढश्वञजठम?ढ्ढिठस्नम?ठ .शढ्ढिठऊढूम?ठ म्त?न. मठत्तौ.पठड्वलञ.

(1109) **ನೂತನ ದೋಶೆಟ್ಟಿ ಬೆಂಗಳೂರು** (ಜ: 6-9-1968): M.A.(ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ) ಪದವೀಧರೆ. ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕಿ. ತಂದೆ-ಮೃತ್ಯುಂಜಯ ದೋಶೆಟ್ಟಿ ಸಿದ್ದಾಪುರ. ತಾಯಿ-ಪ್ರೇಮಾ. ಪತಿ-ಶ್ಯಾಮಸುಂದರ ಸದಾಶಿವಗಡ ಕಾರವಾರ.

ಪ್ರಕಟಿತ ಕೃತಿಗಳು:

1. ಅಂತರಂಗದ ಅಳಲು-ಸ್ತ್ರೀ ಸಮಸ್ಯೆಗಳ ಸಂದರ್ಶನ 2014/100
2. ಅಂತಃಸ್ಫುರಣ-ಬಿಡಿ ಲೇಖನ ಸಂಗ್ರಹ 2010/112
3. ಆಕಾಶವಾಣಿಯ ಅಂತರಾಳ-ಆಕಾಶವಾಣಿ ಕುರಿತ ಪುಸ್ತಕ......... 2014/200
4. ಕಾಲವೆಂಬ ಮಹಾಮನೆ-ಕವನ ಸಂಕಲನ.................................... 2009/69
5. ಭಾಗೀರಥಿ ಉಳಿಸಿದ ಪ್ರಶ್ನೆಗಳು-ಕವನ ಸಂಕಲನ 2010/60
6. ಯಾವ ವೆಬ್‌ಸೈಟಿನಲ್ಲೂ ಉತ್ತರವಿಲ್ಲ-ಕಥಾ ಸಂಕಲನ 2010/110

ಪ್ರಶಸ್ತಿ/ಗೌರವ: ಒಂದು ಕವಿತೆ ಬೆಂಗಳೂರು ವಿ.ವಿ. ಪಠ್ಯಪುಸ್ತಕದಲ್ಲಿ ಸೇರ್ಪಡೆಗೊಂಡಿದೆ.

(1110) **ನೇತ್ರಾವತಿ ಆಚಾರ್ಯ ಮುರ್ಡೇಶ್ವರ** (ಜ: 17-12-1975): ಹತ್ತನೇ ತರಗತಿ ಶಿಕ್ಷಣ. ಗೃಹಿಣಿ. ತಂದೆ-ಗಜಾನನ ಮುಗ್ವೆಖಾನವಾಡಿ ಕುಮಟಾ. ತಾಯಿ-ಸರಸ್ವತಿ. ಪತಿ-ಮೋಹನ
ಆಚಾರ್ಯ ಮಾವಳ್ಳಿ ಮುರ್ಡೇಶ್ವರ.

ಪ್ರಕಟಿತ ಕೃತಿಗಳು:

1. ಭಾವಸಂಗಮ-ಕವನ ಸಂಕಲನ.. 2006/34
2. ಮಹಾರಾಜ ತೇಜೋಮಯನ ಚರಿತ್ರೆ-ಕಾಲ್ಪನಿಕ ಪುರಾಣ 2011/164
3. ಹರಸು ತಾಯೆ ಕಾಳಕಾಂಬೆ-ಭಕ್ತಿಗೀತೆಗಳು 2013/21

(1111) **ನೇತ್ರಾವತಿ ಭಟ್ಟ (ಕಪ್ಪೆ ನೇತ್ರಕ್ಕ), ಶಿರಸಿ** (ಜ: 22-1-1927) ಶಾಲೆಗೆ ಹೋಗಿ ಶಿಕ್ಷಣ ಪಡೆದಿಲ್ಲ. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ಎಂಬುದಕ್ಕೆ ಜೀವಂತ ನಿದರ್ಶನ. ಶ್ರೀಧರ ಸ್ವಾಮಿಗಳಿಂದ ಪ್ರಭಾವಿತರು. ವಿವಾಹದ ನಂತರ ಸಂಸಾರ ತ್ಯಜಿಸಿ ಶೀಗೇಹಳ್ಳಿ ಮಠಕ್ಕೆ ಬಂದು. ವಿರಾಗಿಯಂತೆ ಅಲ್ಲಿಯೇ ವಾಸ. ಕನ್ನಡ ಹಿಂದೀ, ಮರಾಠಿ ಅಲ್ಲದೇ ಸಂಸ್ಕೃತಾಭ್ಯಾಸ. ತಂದೆ ದೇವರು ಭಟ್ಟ, ಕಪ್ಪೆ ಮತ್ತಿಗಾರು, ಶಿರಸಿ. ತಾಯಿ ಗೌರಕ್ಕ.

ಪ್ರಕಟಿತ ಕೃತಿಗಳು :

1. ಕೀರ್ತನ ಮಾಧವಿ-ಕೀರ್ತನೆಗಳು 1957/32
2. ತೇರಾ ಶ್ಲೋಕ ಮಂಜರಿ-ಶ್ಲೋಕಗಳು .... /12
3. ಪರಿಸರ ರಂಜನಿ-ಶ್ಲೋಕ ರಾಜಾವಳಿ .... /8
4. ಶ್ರೀ ಗುರುಪಾದ ರೂಪಸ್ತವ ಸಂಸ್ಕೃತ .... /8
5. ಶ್ರೀ ಗುರುದಾಸ ಸುಪ್ರಭಾತಂ ಸಂಸ್ಕೃತ .... /10
6. ಶ್ರೀ ದತ್ತಾವತಾರ ರಹಸ್ಯ .... /26

ಅಪ್ರಕಟಿತ ಕೃತಿಗಳು : 300ಕ್ಕೂ ಹೆಚ್ಚು ಭಜನೆಗಳು, 15ಕ್ಕೂ ಹೆಚ್ಚು ಸಂತರ ಕತೆಗಳು, ಭಗವಾನ್ ಶ್ರೀಧರರ ಬಗ್ಗೆ ಜೋಗುಳ ರಾಗದಲ್ಲಿ 435 ಪದ್ಯಗಳು, ಮರಾಠಿ, ಕನ್ನಡ, ಸಂಸ್ಕೃತದಲ್ಲಿ 25ಕ್ಕೂ ಹೆಚ್ಚು ಅಷ್ಟಕಗಳು, ಸಂಸ್ಕೃತದಲ್ಲಿ ಕೀರ್ತನೆಗಳು, ಭಗವದ್ಗೀತೆ, ಭಾರತೀಯ ಸಂಸ್ಕೃತಿ, ಧಾರ್ಮಿಕ ಕ್ಷೇತ್ರಗಳ ಬಗ್ಗೆ ಅನೇಕ ಲೇಖನಗಳು. ಕಳೆದ 60 ವರ್ಷಗಳಿಂದಲೂ ಬರೆಯುತ್ತಲೇ ಇದ್ದಾರೆ. ಅವುಗಳನ್ನು ಉಳಿಸಿ, ರಕ್ಷಿಸಿ, ಪ್ರಕಟಿಸುವ ಪ್ರಯತ್ನ ನಡೆಯಬೇಕಾಗಿದೆ.

(1112) **ನೇತ್ರಾವತಿ ಹೆಗಡೆ** (ಜ: 9-11-1966) ಗೃಹಿಣಿ. ತಂದೆ ಶ್ರೀಪತಿ ಭಟ್ಟ, ಅರಸನಗೋಡು, ಶಿರಸಿ. ತಾಯಿ ಪಾರ್ವತಿ. ಪತಿ ವೆಂಕಟರಮಣ ಹೆಗಡೆ, ಕೆಂಚಗದ್ದೆ ಕ್ಯಾದಗಿಮನೆ, ಶಿರಸಿ.
ಪ್ರಕಟಿತ ಕೃತಿ :ಗುರುಗೀತಮಾಲಾ-ಹಳೇ ಮತ್ತು ಹೊಸ ಹಬ್ಬದ ಹಾಡುಗಳು 1998/142

(1113) **ನೈದಿಲಾ ನಾರಾಯಣ ಗಾಂವಕರ ಭಾವಿಕೇರಿ** (ಜ: 10-12-1951): B.A. ಪದವೀಧರೆ. ವಿಕಲ ಚೇತನೆ. ತಾಯಿ-ಸೀತಾ.
ಪ್ರಕಟಿತ ಕೃತಿ:ಸಹೋದರ ದರ್ಶನ 2000/34

(1114) **ಪದ್ಮಾ ಜಿ. ಹೆಗಡೆ, ಸಿದ್ದಾಪುರ** (ಜ: 1969) ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ. ಗೃಹಿಣಿ. ಧಾರವಾಡ ಆಕಾಶವಾಣಿಯಿಂದ ಕವಿತೆ, ಕಿರುಗಥೆಗಳು ಪ್ರಸಾರವಾಗಿವೆ. ತಂದೆ ನರಸಿಂಹ ಹೆಗಡೆ, ಹಿರೇಸರ, ಯಲ್ಲಾಪುರ. ತಾಯಿ ಪಾರ್ವತಿ. ಪತಿ ಗಣಪತಿ ಹೆಗಡೆ, ಮಗೆಗಾರು, ಸಿದ್ದಾಪುರ.
ಪ್ರಕಟಿತ ಕೃತಿ :ಮತ್ತೆ ಹಾಡಿತು-ಕವನ ಸಂಕಲನ 1999/21

(1115) **ಪದ್ಮಾವತಿ ರಾಮಚಂದ್ರ ಹೆಗಡೆ** (ಜ: 15-6-1960) ಎಸ್.ಎಸ್.ಎಲ್.ಸಿ. ತನಕ ಓದು. ಗೃಹಿಣಿ. ತಂದೆ ಸುಬ್ರಾಯ ಹೆಗಡೆ, ಬಕ್ಕಳ. ತಾಯಿ ಸರಸ್ವತಿ. ಪತಿ ರಾಮಚಂದ್ರ ಹೆಗಡೆ, ಬಕ್ಕಳ.
ಪ್ರಕಟಿತ ಕೃತಿಗಳು :
1. ಸಂಗಮ-ಭಜನೆ ಹಾಡುಗಳು 1999/24
2. ಸಂಗಮ-ಭಾಗ-2 ....2007/22
3. ಸಂಯಕ್ತ-ಹಬ್ಬದ ಹಾಡುಗಳು 2000/15

(1116) **ಪರಮೇಶ್ವರಿ ಲೋಕೇಶ್ವರ ಮಂಗಳೂರು** (ಜ: 27-5-1938) ಎಸ್.ಎಸ್.ಎಲ್.ಸಿ. ಮತ್ತು ಟಿ.ಸಿ.ಎಚ್. ಶಿಕ್ಷಣ. ನಿವೃತ್ತ ಶಿಕ್ಷಕಿ. ತಂದೆ ನಾರಾಯಣ, ತಾಯಿ ಭಾಗೀರಥಿ. ಪತಿಲೋಕನಾಥ ಲೋಕೇಶ್ವರ ಗೋಕರ್ಣ.
ಪ್ರಕಟಿತ ಕೃತಿಗಳು:
1. ಅಮೇರಿಕಾದಲ್ಲಿ ಅರವತ್ತು ದಿನಗಳು-ಪ್ರವಾಸ ಕಥನ 1994(2)2003/100
2. ಗುರುಕುಲ-ಮಕ್ಕಳ ನಾಟಕ .... 2006 (2)2001/24
3. ದತ್ತ ಸಂಭವ-ಪೌರಾಣಿಕ ನಾಟಕ 2010/60
4. ಪರಿಕಲ್ಪನೆಯ ಅನಾವರಣ-ವೈಚಾರಿಕ ಲೇಖನಗಳು 2012/112
5. ಬಹುಧಾನ್ಯದಿಂದ ಬಹುಧಾನ್ಯಕ್ಕೆ-ಆತ್ಮಕಥನ 2003/132
6. ಲೋಕಗಾನ-ಕವನ ಸಂಕಲನ 2011/108
ಪ್ರಶಸ್ತಿ/ಗೌರವ:
1. ಬಹುಧಾನ್ಯದಿಂದ ಬಹುಧಾನ್ಯಕ್ಕೆ-ಕಸಾಪ ದತ್ತಿ ಪ್ರಶಸ್ತಿ 2004
2. ಬಹುಧಾನ್ಯದಿಂದ ಬಹುಧಾನ್ಯಕ್ಕೆ-ಉದಯವಾಣಿ ಪ್ರಶಸ್ತಿ 2004

(1117) **ಪಾರ್ವತಿ ಮಂ. ಭಟ್ಟ, ಶಿರಸಿ** (ಜ: 5-5-1946) ಏಳನೇ ಇಯತ್ತೆ ಶಿಕ್ಷಣ. ಗೃಹಿಣಿ. ತಂದೆ ವಿಶ್ವೇಶ್ವರ ಭಟ್ಟ ವರ್ಗಾಸರ. ತಾಯಿ ರಾಧಾ. ಪತಿ ಮಂಜುನಾಥ ಭಟ್ಟ, ನೀರಕೋಣೆಮನೆ, ವರ್ಗಾಸರ, ಶಿರಸಿ.

ಪ್ರಕಟಿತ ಕೃತಿ : ಮಾತಾ ಸ್ಫೂರ್ತಿ–ದೈವಿಕೃಪಾ–ಹಾಡುಗಳು 2003/76
(ಸಹಲೇಖಕಿ–ಸುಮಂಗಲಾ ಸು. ಜೋಶಿ)

(1118) **ಪಾರ್ವತಿ ಹೆಗಡೆ, ಶಿರಸಿ** (ಜ: 1947) ಗೃಹಿಣಿ. ತಂದೆ ವೆಂಕಟರಮಣ ಸೀತಾರಾಮ ಹೆಗಡೆ, ತಾರಗೋಡ. ತಾಯಿ ಲಕ್ಷ್ಮಿ. ಪತಿ ಗಣಪತಿ ರಾಮಕೃಷ್ಣ ಹೆಗಡೆ, ಅಗಸಾಲ, ಬೊಮ್ನಳ್ಳಿ, ಶಿರಸಿ.

ಪ್ರಕಟಿತ ಕೃತಿ : ಕವನ ಕುಸುಮ–ಹಾಡುಗಳು ಭಾಗ 1..............................1972/50
(ಯಮುನಾ ಹೆಗಡೆ ಜೊತೆ ಸಹಲೇಖಕಿ)

(1119) **ಪುಷ್ಪಾ ನಾಯ್ಕ ಬಬ್ರುವಾಡಾ ಅಂಕೋಲಾ** (ಜ: 10–7–1978): ಒ.ಂ., ಒ.ಇಜ. ಪದವೀಧರೆ. ಶಿಕ್ಷಣ ವಿದ್ಯಾಲಯದಲ್ಲಿ ಉಪನ್ಯಾಸಕಿ. ಸಾಮಾಜಿಕ, ಧಾರ್ಮಿಕ ಕಾರ್ಯಕರ್ತೆ. ತಂದೆ–ಆನಂದ ನಾಯ್ಕ ಶಿರಸಿ. ತಾಯಿ–ಲಕ್ಷ್ಮಿ. ಪತಿ–ಪ್ರಭಾಕರ ನಾಯ್ಕ ಅಂಕೋಲಾ.

ಪ್ರಕಟಿತ ಕೃತಿ: ಬೊಬ್ರುವಾಡದ ಶ್ರೀ ಬೊಬ್ರುದೇವ 2012/48

(1120) **ಪ್ರಜ್ಞಾ ಮತ್ತಿಹಳ್ಳಿ (ಪ್ರಜ್ಞಾ ಶಶಿಧರ), ಧಾರವಾಡ** (ಜ: 2–4–1969) ಎಂ.ಕಾಂ., ಎಂ.ಫಿಲ್., ಪಿಎಚ್.ಡಿ. ಪದವೀಧರೆ. ಯಕ್ಷಗಾನ ಕಲಾವಿದೆ. ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕಿ. ತಂದೆ ರಮೇಶ ಹೆಗಡೆ, ಶಿರಸಿ. ತಾಯಿ ವಿಜಯ ನಳಿನಿ ರಮೇಶ (ಗ್ರಂಥಕರ್ತೆ). ಪತಿ ಶಶಿಧರ ಭಟ್ಟ, ಧಾರವಾಡ.

1. ಗಂಧಗಾಳಿ–ಅಂಕಣ ಬರಹಗಳು 2012/80
2. ದೊನ್ನೆ ದೀಪಸಾಲು–ಕವನ ಸಂಕಲನ 2013/108
3. ಮಿನುಗೆಲೆ ನಕ್ಷತ್ರ–ಪ್ರಬಂಧ ಸಂಕಲನ 2013/103
4. ಹುಡುಗಿ ನಕ್ಕಾಗ–ಕವನ ಸಂಕಲನ 1994/43
5. ಗಂಧಗಾಳಿ (ಅಂಕಣ ಬರಹ 2012)
6. ದೊನ್ನೆ ದೀಪ ಸಾಲು (ಕವನ ಸಂಕಲನ) 2013
7. ಮಿನುಗೆಲೆ ನಕ್ಷತ್ರ (ಹಾಸ್ಯ ಪ್ರಬಂಧ) 2013
8. ದೇವರ ಸ್ವಂತ ನಾಡಿನಲ್ಲಿ (ಪ್ರವಾಸ ಕಥನ) 2015
9. ಕಾಲನ ಕಾಲಂದುಗೆ (ಕವನ ಸಂಕಲನ)
10. ವಿಚಾರಣಾಧೀನ ಮಹಿಳಾ ಕೈದಿಗಳು
11. ಬಣ್ಣಪೊರೆಸುವ ಎಣ್ಣೆಗನ್ನಡಿ (ಪ್ರಬಂಧಗಳು) 2017
12. ಅನುರಾಧಾ ಧಾರೇಶ್ವರ (ವ್ಯಕ್ತಿ ಚಿತ್ರ)) 2019

(1121) **ಪ್ರತಿಭಾ ಸುರೇಶ, ಕುಮಟಾ** (ಜ: 9–1–1977) ಎಂ.ಎ. (ಕನ್ನಡ), ಎಂ.ಎ. (ಅಂಗ್ರೇಜೀ) ಪದವೀಧರೆ. ಕುಮಟಾದ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕಿ. ನಿಯತ ಕಾಲಿಕಗಳಲ್ಲಿ ಸುಮಾರು 50 ಕಾದಂಬರಿ, 100 ಕಥೆ, 150 ಕವನಗಳು ಪ್ರಕಟವಾಗಿವೆ. ತಂದೆ ನಾರಾಯಣ ಭಟ್ಟ, ಕೂಜಳ್ಳಿ, ಕುಮಟಾ. ತಾಯಿ ಶರಾವತಿ. ಪತಿ ಸುರೇಶ ಹೆಗಡೆ,ಹರನೀರು,ಕುಮಟಾ.

1. ಅಮೃತಧಾರೆ–ಕಾದಂಬರಿ 2007/158
2. ರೋಷ ತಪ್ತೆ–ಕಾದಂಬರಿ 2007/127
3. ಸ್ತಬ್ಧ–ಕಾದಂಬರಿ 2005/214

(1122) **ಪ್ರಭಾ ಭಟ್ಟ ಪುಣೆ** (ಜ: 8–2–1953) ಪದವಿಪೂರ್ವ ಶಿಕ್ಷಣ. ತಂದೆ ಡಾ. ಮಹಾಬಲೇಶ್ವರ ಭಟ್ಟ ಹಡಿನಬಾಳ ಹೊನ್ನಾವರ. ತಾಯಿ ಗಣಪಿ. ಪತಿ ವೆಂಕಟರಮಣ

ಭಟ್ಟ ಕೆಕ್ಕಾರ. (ಪುಣೆ ವಾಸಿ)
ಪ್ರಕಟಿತ ಕೃತಿ: ನಾ ಕಂಡಂತೆ ಶ್ರೀಧರಾನುಗ್ರಹ 2011/68

(1123) **ಪ್ರಭಾ ವಿಠ್ಠಲ ಕೇಣಿಕರ ಅಂಕೋಲಾ** (ಜ: 8–10–1958): ಶಿ.ಂ. ಪದವೀಧರೆ. ಗೃಹಿಣಿ. ತಂದೆ–ವಿಠ್ಠಲ ಕೇಣಿಕರ ಅಂಕೋಲಾ. ತಾಯಿ–ರಮಾಬಾಯಿ. ಪತಿ–ಸುರೇಂದ್ರ ಶೆಟ್ಟಿ ಅಂಕೋಲಾ.
ಪ್ರಕಟಿತ ಕೃತಿ: ನಂದಗೋಕುಲ–ಮಕ್ಕಳ ಕತೆಗಳು 1975/80

(1124) **ಪ್ರಿಯದರ್ಶಿನಿ ಭಟ್ಟ, ಕಲ್ಲಬ್ಬೆ, ಕುಮಟಾ** (ಜ: 17–1–1976) ಎಂ.ಎ. ಕನ್ನಡ ಪದವೀಧರೆ. ಜೀವವಿಮಾ ಪ್ರತಿನಿಧಿ. ತಂದೆ ನರಸಿಂಹ ಭಟ್ಟ, ಹಳವಳ್ಳಿ ಅಂಕೋಲಾ. ತಾಯಿ ಸರಸ್ವತಿ. ಪತಿ ಮಹಾಬಲೇಶ್ವರ ಭಟ್ಟ ಕಲ್ಲಬ್ಬೆ.
ಪ್ರಕಟಿತ ಕೃತಿಗಳು :
1. ಜೀವನ್ಮುಖಿ–ಕವನ ಸಂಕಲನ 2010/48
2. ಮನನ–ಬ್ಲಾಗ್ ಬರಹಗಳ ಸಂಕಲನ... 2013/64
ಪ್ರಶಸ್ತಿ : ಸಂಸ್ಕಾರ ಭಾರತಿ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ 2005

(1125) **ಪ್ರೀತಿ ಭಂಡಾರಕರ (ಡಾ||) ಕುಮಟಾ** (ಜ: 18–11–1966): M.A., B.Ed., Ph .D. ಪದವೀಧರೆ. ಶಿಕ್ಷಣ ಕಾಲೇಜು ಉಪನ್ಯಾಸಕಿ. ಮಾಹಿತಿ ಸಂಪನ್ಮೂಲ ವ್ಯಕ್ತಿ. ತಂದೆ–ವೆಂಕಟೇಶ ಶಾನಭಾಗ ಕುಮಟಾ. ತಾಯಿ–ಜಾನಕಿ. ಪತಿ–ಪ್ರಕಾಶ ಭಂಡಾರಕರ ಬಳ್ಕೂರು ಹೊನ್ನಾವರ.
ಪ್ರಕಟಿತ ಕೃತಿ:
ಪ್ರಾಚೀನ ಭಾರತದಲ್ಲಿ ಸ್ತ್ರೀಶಿಕ್ಷಣದ ಬೆಳವಣಿಗೆ ಮತ್ತು ವಿಕಾಸ 2008/223
(ಪಿಎಚ್.ಡಿ. ಪ್ರಬಂಧ ಸಹಲೇಖಕಿ)
ಟಿಪ್ಪಣಿ:ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶ ಸಂಪುಟ–1 ಇದರಲ್ಲಿ ಇವರ 'ಧಾರ್ಮಿಕ ಶಿಕ್ಷಣ' ಎಂಬ ಲೇಖನ ಅಳವಡಿಸಲ್ಪಟ್ಟಿದೆ.

(1126) **ಭವ್ಯಾ ಹಳೆಯೂರು ಶಿರಸಿ** (ಜ: 5–11–1987) ಎಂ.ಎ. (ಕನ್ನಡ) ಪದವೀಧರೆ. ಸ್ವಲ್ಪಕಾಲ ಶಿಕ್ಷಕಿ. ಗೃಹಿಣಿ. ಹವ್ಯಾಸಿ ಅಂಕಣಗಾರ್ತಿ. ತಂದೆ ಸತ್ಯನಾರಾಯಣ ಹೆಗಡೆ ಹಳೆಯೂರು ಸೋಂದಾ. ತಾಯಿ ಚಂದ್ರಕಲಾ. ಪತಿ ವಿನಾಯಕ ಭಟ್ಟ ಕಿಬ್ಬಿಕೇರಿ ಸಿದ್ದಾಪುರ (ಶಿರಸಿ ವಾಸಿ)
ಪ್ರಕಟಿತ ಕೃತಿಗಳು:
1.+ ಮತ್ತೆ ನೆನಪಾಗುತ್ತಾಳೆ ರಾಧೆ–ಕವನಗಳು 2014/65
2. ಮೊಗ್ಗಿನ ಮನಸು–ಅಂಕಣ ಬರಹಗಳು 2012/214
+ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಸಹಾಯ ಪಡೆದ ಕೃತಿ

(1127) **ಭಾಗೀರಥಿ ಹೆಗಡೆ, ಶಿರಸಿ** (ಜ: 25–7–1948) ಎಸ್.ಎಸ್.ಸಿ., ಹಿಂದೀ ಪ್ರವೇಶಿಕಾ. ಗೃಹಿಣಿ. ತಂದೆ ವೆಂಕಟರಮಣ ಭಟ್ಟ, ತಟ್ಟಿಕೈ, ಸಿದ್ದಾಪುರ. ತಾಯಿ ಗಣಪಿ. ಪತಿ ರಾಮಚಂದ್ರ ಹೆಗಡೆ, ಶಿರಸಿ.
ಪ್ರಕಟಿತ ಕೃತಿಗಳು :
1. ಅರ್ಥ–ಕಥಾ ಸಂಕಲನ 1991/160

2. ಆಳ–ಕಥಾ ಸಂಕಲನ 2011/131
3. ಇಂದಿರಾಗಾಂಧಿ–ಜೀವನ ಚರಿತ್ರೆ. 1994/26
4. ಒಂದು ದಿನ–ಕವನ ಸಂಕಲನ 2013/80
5. ಕನ್ನಡ ಶಾಲೆಯ ಹುಡುಗ–ಮಕ್ಕಳ ಪದ್ಯಗಳು 2012/67
6. ಗಿಳಿ ಪದ್ಮ–ಕಥಾ ಸಂಕಲನ 2006/106
7. ಗುಬ್ಬಿಯ ಸ್ವರ್ಗ–ಮಕ್ಕಳಿಗಾಗಿ ಪದ್ಯಗಳು 2006/64
8. ಚಂದ್ರಗಾವಿ–ಕವನ ಸಂಕಲನ 1998/56
9. ಪ್ರತಿಮೆ–ಕಥಾ ಸಂಕಲನ 2011/167
10. ಪ್ರಭಾವತಿ–ನಾಟಕ 2000/58
11. ಬೇಟೆ–ಕಥಾ ಸಂಕಲನ 2008/152
12. ಪ್ರವಾಹ–ಕಥಾ ಸಂಕಲನ... 1995/142
13. ಸ್ವೀಕಾರ–ಕಥಾ ಸಂಕಲನ 1986/124
14. ಹೊಳೆಯ ಹಾದಿ–ಕಾದಂಬರಿ 2008/144
15. ಹಿಮ ನದಿ–ಕಥಾಸಂಕಲನ
16. ಬಾರಲೆ ಹಕ್ಕಿ ಪ್ರಬಂಧ

ಪ್ರಶಸ್ತಿ/ಗೌರವ :

1. 'ಅರ್ಥ' ಕಥಾ ಸಂಕಲನಕ್ಕೆ 'ಮಾಸ್ತಿ ಕನ್ನಡ ಸೇವಾನಿಧಿ ಪುರಸ್ಕಾರ' 1993
ಮತ್ತು 'ಮಾತೋಶ್ರೀ ರತ್ನಮ್ಮ ಹೆಗ್ಗಡೆ ಗ್ರಂಥ ಪುರಸ್ಕಾರ' 1993
2. 'ಪ್ರವಾಹ' ಕಥಾ ಸಂಕಲನಕ್ಕೆ 'ಎಚ್.ವಿ.ಸಾವಿತ್ರಮ್ಮ ದತ್ತಿನಿಧಿ ಪುರಸ್ಕಾರ' 1996
3. 'ಪ್ರಭಾವತಿ' ನಾಟಕಕ್ಕೆ ಕಸಾಪದ 'ಮಹಿಳಾ ವರ್ಷದ ದತ್ತಿ ನಿಧಿ ಬಹುಮಾನ'2002
4. ಕರ್ನಾಟಕ ಸರಕಾರದಿಂದ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ 2002
5. ಸಾಹಿತ್ಯ ಸಾಧನೆಗಾಗಿ ಕೆ. ಶಾಮರಾವ್ ದತ್ತಿನಿಧಿ ಪ್ರಶಸ್ತಿ 2002
6. 'ಹೊಳೆಯ ಹಾದಿ' ಕಾದಂಬರಿಗೆ ಮುಂಬೈ ಸದಾನಂದ ಸುವರ್ಣ ಪ್ರತಿಷ್ಠಾನದ
ಕಾರಂತ ಕಾದಂಬರಿ ಸ್ಪರ್ಧೆ ಬಹುಮಾನ 2003
7. ಉ.ಕ. ಜಿಲ್ಲಾ ಪ್ರಪ್ರಥಮ ಮಹಿಳಾ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ 2006
8. ಸ್ವರ್ಣವಲ್ಲಿ ಶ್ರೀಗಳಿಂದ 'ಸಾಹಿತ್ಯ ಸರಸ್ವತಿ ಬಿರುದು' ಹಾಗೂ ಸನ್ಮಾನ 2006
9. 'ಗಿಳಿ ಪದ್ಮ' ಕಥಾ ಸಂಕಲನಕ್ಕೆ ಕ.ಸಾ.ಪ.ದ 'ಲಕ್ಷ್ಮೀದೇವಿ ಶಾಂತರಸ
ದತ್ತಿನಿಧಿ ಪ್ರಶಸ್ತಿ' 2007
10. 'ಗುಬ್ಬಿಯ ಸ್ವರ್ಗ' ಕೃತಿಗೆ ಕರ್ನಾಟಕ ಲೇಖಕಿಯರ ಸಂಘದ
'ಗುಣಸಾಗರಿ ನಾಗರಾಜು ಮಕ್ಕಳ ಸಾಹಿತ್ಯ ಪ್ರಶಸ್ತಿ'................................ 2007
11. ಬೆಂಗಳೂರಿನ ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ 2009
12. ಯಳಂದೂರಿನ ಸಂಚಿಹೊನ್ನಮ್ಮ ಪ್ರಶಸ್ತಿ 2011
13. ಶಿರಸಿ ತಾಲೂಕಾ ಸಾಹಿತ್ಯ ಸಮ್ಮೇಲನ ಸರ್ವಾಧ್ಯಕ್ಷತೆ 2011
